ವಿಶ್ವವಾಣಿ
ವಿಶ್ವಾಸವೇ ವಿಶ್ವ

ಯುಎಫ್‌ಸಿ ಗೆದ್ದ ಫೈಟರ್ ಪೂಜಾ

ಲೂಯಿಸ್ ವಿಲ್ಲೆ: ಯುಎಫ್‌ಸಿ (ಅಲ್ಟಿಮೇಟ್ ಫೈಟಿಂಗ್ ಚಾಂಪಿಯನ್ ಶಿಪ್)ನಲ್ಲಿ ಬ್ರೆಝಿಲ್‌ನ ರಯನ್ನೆ ದಾಸ್ ಸ್ಯಾಂಟೋಸ್ ಅವರನ್ನು ಭಾರತದ ಪೂಜಾ ತೋಮರ್ ಮಣಿಸುವ ಮೂಲಕ ಈ ಸಾಧನೆ ಮಾಡಿದ ಪ್ರಥಮ ಭಾರತೀಯ ಮಹಿಳಾ ಕ್ರೀಡಾಪಟುವಾಗಿ ಇತಿಹಾಸ ನಿರ್ಮಿಸಿದ್ದಾರೆ. ಲೂಯಿಸ್ ವಿಲ್ಲೆನಲ್ಲಿ ನಡೆದ ಫೈಟ್‌ನ ಮಹಿಳೆಯರ ಸ್ಟ್ರಾವೇಟ್ ವಿಭಾಗದಲ್ಲಿ 30-27, 27-30 ಹಾಗೂ 29-28 ಅಂತರದಲ್ಲಿ ಬ್ರೆಝಿಲ್ ಆಟಗಾರ್ತಿಯನ್ನು ಮಣಿಸುವ ಮೂಲಕ ಗೆಲುವನ್ನು ಮುಡಿಗೇರಿಸಿಕೊಂಡರು. ಈ ನಿಕಟ ಸ್ಪರ್ಧೆಯ ಪಂದ್ಯದಲ್ಲಿ ಇಬ್ಬರೂ ಕ್ರೀಡಾಪಟಗಳು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದರು.

ಸತತ ಮೂರನೇ ಬಾರಿಗೆ ಪ್ರಧಾನಿಯಾಗಿ ನಮೋ ಪ್ರಮಾಣವಚನ ಸ್ವೀಕಾರ
ರಾಜ್ಯದ ಐವರು ಸೇರಿದಂತೆ ನೂತನ ಕೇಂದ್ರ ಸಂಪುಟ ಸೇರಿದ 72 ಸಂಸದರು

ಮೋದಿ 3.0 ಯುಗಾರಂಭ

ದೆಹಲಿ: ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು ಸ್ಪಷ್ಟ ಬಹುಮತ ಪಡೆದ ಬೆನ್ನಲ್ಲೇ ನರೇಂದ್ರ ಮೋದಿ ಅವರು ಸತತ ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ದೆಹಲಿಯಲ್ಲಿರುವ ರಾಷ್ಟ್ರಪತಿ ಭವನದಲ್ಲಿ ನರೇಂದ್ರ ಮೋದಿ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಮಾಣವಚನ ಬೋಧಿಸಿದರು. ಮೋದಿ ಅವರು ಈಶ್ವರನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ನರೇಂದ್ರ ಮೋದಿ ಅವರ ಜತೆಗೆ 72 ಸಂಸದರು ಕೂಡ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ನರೇಂದ್ರ ಮೋದಿ ಅವರು ಪ್ರಮಾಣ ವಚನ ಸ್ವೀಕರಿಸುವ ಕಾರ್ಯಕ್ರಮದ ಲೈವ್ ವೀಕ್ಷಣೆಗೆ ದೇಶಾದ್ಯಂತ ಬಿಜೆಪಿ ಕಾರ್ಯಕರ್ತರು ಎಲ್‌ಇಡಿ ಪರದೆ, ಟಿವಿಗಳ ವ್ಯವಸ್ಥೆ ಮಾಡಿದ್ದರು. ನರೇಂದ್ರ ಮೋದಿ ಅವರು ಪ್ರಮಾಣವಚನ ಸ್ವೀಕರಿಸುತ್ತಲೇ ಭಾರತ್ ಮಾತಾ ಕೀ ಜೈ, ಮೋದಿ ಮೋದಿ ಎಂಬ ಘೋಷಣೆಗಳು ಮೊಳಗಿದವು.

ವಿದೇಶಿ ನಾಯಕರು ಭಾಗಿ: ಭಾರತದ ಸಾವಿರಾರು ಗಣ್ಯರ ಜತೆಗೆ ನೆರೆ ರಾಷ್ಟ್ರಗಳ ನಾಯಕರು ಕೂಡ ಭಾಗವಹಿಸಿದ್ದರು. ಶ್ರೀಲಂಕಾ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ, ಮಾಲ್ಡೀವ್ಸ್ ಅಧ್ಯಕ್ಷ ಮೊಹಮದ್ ಮುಯಿಝು, ಸೇಶೆಲ್ಸ್‌ನ ಉಪಾಧ್ಯಕ್ಷ ಅಹ್ಮದ್ ಅಫೀಫ್, ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ, ಮಾರಿಷಸ್‌ನ ಪ್ರಧಾನ ಮಂತ್ರಿ, ಪ್ರವಿಂದ್ ಕುಮಾರ್ ಜುಗ್ನೌತ್, ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಲ್ ಪ್ರಚಂಡ, ಭೂತಾನ್ ಪ್ರಧಾನಿ, ತ್ಶೆರಿಂಗ್ ಟೊಬ್ಗೇ ಸೇರಿದಂತೆ ಹಲವು ವಿದೇಶಿ ಗಣ್ಯರು ಉಪಸ್ಥಿತರಿದ್ದರು. ಅದಾನಿ ಗ್ರೂಪ್ ಚೇರ್ಮನ್ ಗೌತಮ್ ಅದಾನಿ, ನಟರಾದ ಶಾರುಖ್ ಖಾನ್, ಅಕ್ಷಯ್ ಕುಮಾರ್, ರಜನಿಕಾಂತ್ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಸಂಪುಟ ದರ್ಜೆಗೆ ಅಜಿತ್ ಪವಾರ್ ಆಗ್ರಹ

ಬಿಜೆಪಿ ಮಿತ್ರಪಕ್ಷ ಎನ್‌ಸಿಪಿ ಸಚಿವ ಸ್ಥಾನದ ವಿಷಯದಲ್ಲಿ ಅಸಮಾಧಾನ ಹೊರಹಾಕಿದೆ. ನಮ್ಮ ಪಕ್ಷದ ಪ್ರಫುಲ್ ಪಟೇಲ್ ಅವರು ಕ್ಯಾಬಿನೆಟ್ ದರ್ಜೆ ಸಚಿವರಾಗಿ ಕೆಲಸ ಮಾಡಿದ್ದಾರೆ. ಈಗ ಸ್ವತಂತ್ರ ಖಾತೆ ರಾಜ್ಯ ಸಚಿವ ಸ್ಥಾನ ನೀಡುವುದಾಗಿ ಹೇಳುತ್ತಿದ್ದಾರೆ. ಇದುಸೂಕ್ತವಲ್ಲ. ಹಾಗಾಗಿ, ಕೆಲ ದಿನಗಳ ಕಾಲ ನಾವು ಕಾಯಲು ಸಿದ್ಧವಿದ್ದೇವೆ. ನಮಗೆ ಸಂಪುಟ ದರ್ಜೆಯೇ ಬೇಕು ಎಂದು ಎನ್‌ಸಿಪಿ ಅಧ್ಯಕ್ಷ, ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಹೇಳಿದ್ದಾರೆ. ಸದ್ಯ ನಾವು ಒಂದು ಲೋಕಸಭಾ ಮತ್ತು ಒಂದು ರಾಜ್ಯಸಭಾ ಸ್ಥಾನ ಹೊಂದಿದ್ದೇವೆ. ಮುಂದಿನ 2-3 ತಿಂಗಳಲ್ಲಿ ರಾಜ್ಯಸಭೆಯಲ್ಲಿ ನಮ್ಮ ಸಂಖ್ಯೆ 3ಕ್ಕೆ ಏರಲಿದೆ. ಒಟ್ಟಾರೆ ನಮ್ಮ ಪಕ್ಷದ ಸಂಸತ್ ಸದಸ್ಯರ ಸಂಖ್ಯೆ 4ಕ್ಕೆ ಏರಲಿದೆ. ಹಾಗಾಗಿ, ನಮಗೆ ಸಂಪುಟ ದರ್ಜೆ ಸಚಿವ ಸ್ಥಾನ ನೀಡಬೇಕು. ಮೈತ್ರಿ ಮೂಲಕ ಸರಕಾರ ರಚಿಸಿದಾಗ ಕೆಲವು ಮಾನದಂಡಗಳನ್ನು ನಿರ್ಧರಿಸಬೇಕು. ಏಕೆಂದರೆ, ಹಲವು ಪಕ್ಷಗಳು ಒಟ್ಟಿಗೆ ಸೇರಿರುತ್ತವೆ. ಒಂದು ಪಕ್ಷದ ಕಾರಣಕ್ಕೆ ಮಾನದಂಡ ವನ್ನು ತಿರುಚಬಾರದು ಎಂದು ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಸಂಪುಟದಲ್ಲಿ ಏಳು ಮಹಿಳೆಯರಿಗೆ ಅವಕಾಶ

ನರೇಂದ್ರ ಮೋದಿ ಸಂಪುಟದಲ್ಲಿ ಏಳು ಮಹಿಳಾ ಸಂಸದರಿಗೆ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ರಾಜ್ಯಸಭಾ ಸದಸ್ಯೆ ನಿರ್ಮಲಾ ಸೀತಾರಾಮನ್, ಕೊಡರ್ಮಾ ಸಂಸದೆ ಅನ್ನಪೂರ್ಣಾ ದೇವಿ, ಮಿರ್ಜಾಪುರ ಸಂಸದೆ ಅನುಪ್ರಿಯಾ ಸಿಂಗ್ ಪಟೇಲ್, ಬೆಂಗಳೂರು ಉತ್ತರ ಸಂಸದೆ ಶೋಭಾ ಕರಂದ್ಲಾಜೆ, ರವೆಲ್ ಕ್ಷೇತ್ರದ ಸಂಸದೆ ರಕ್ಷಾ ಖಡ್ಸೆ, ಧಾರ್ ಕ್ಷೇತ್ರದ ಸಂಸದೆ ಸಾವಿತ್ರಿ ಠಾಕೂರ್, ಭಾವನಗರ್ ಸಂಸದೆ ಮುಬೆನ್ ಬಂಭಾನಿಯಾ ಮೋದಿ ಸಂಪುಟ ಸೇರಿದ್ದಾರೆ.

ರಾಜ್ಯದ ಐವರು ಪ್ರಮಾಣ ವಚನ

ಕೇಂದ್ರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಎಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ ಪ್ರಲ್ಹಾದ್ ಜೋಶಿ, ಶೋಭಾ ಕರಂದ್ಲಾಜೆ, ನಿರ್ಮಲಾ ಸೀತಾರಾಮನ್

ಸಂಪುಟ ದರ್ಜೆ ಸಚಿವರು

- ಅಮಿತ್ ಶಾ (ಬಿಜೆಪಿ-ಗುಜರಾತ್)
- ರಾಜನಾಥ್ ಸಿಂಗ್ (ಬಿಜೆಪಿ-ಉತ್ತರ ಪ್ರದೇಶ)
- ನಿತಿನ್ ಗಡ್ಕರಿ (ಬಿಜೆಪಿ-ಮಹಾರಾಷ್ಟ್ರ)
- ಜೆ.ಪಿ.ನಡ್ಡಾ (ಬಿಜೆಪಿ-ಹಿಮಾಚಲ ಪ್ರದೇಶ)
- ಶಿವರಾಜ್ ಸಿಂಗ್ ಚೌಹಾಣ್ (ಬಿಜೆಪಿ-ಮಧ್ಯಪ್ರದೇಶ)
- ನಿರ್ಮಲಾ ಸೀತಾರಾಮನ್ (ರಾಜ್ಯಸಭೆ ಬಿಜೆಪಿ ಸದಸ್ಯೆ)
- ಎಸ್.ಜೈಶಂಕರ್ (ರಾಜ್ಯಸಭೆ ಬಿಜೆಪಿ ಸದಸ್ಯ)
- ಮನೋಹರ ಲಾಲ್ ಖಟ್ಟರ್ (ಬಿಜೆಪಿ-ಹರಿಯಾಣ)
- ಎಚ್.ಡಿ.ಕುಮಾರಸ್ವಾಮಿ (ಜೆಡಿಎಸ್-ಕರ್ನಾಟಕ)
- ಪಿಯೂಷ್ ಗೋಯಲ್ (ಬಿಜೆಪಿ-ಮಹಾರಾಷ್ಟ್ರ)
- ಧರ್ಮೇಂದ್ರ ಪ್ರಧಾನ್ (ಬಿಜೆಪಿ-ಒಡಿಶಾ)
- ಜಿತನ್ ರಾಮ್ ಮಾಂಝಿ (ಎಚ್‌ಎಎಂ-ಬಿಹಾರ)
- ರಾಜೀವ್ ರಂಜನ್ ಸಿಂಗ್ (ಜೆಡಿಯು-ಬಿಹಾರ)
- ಸರ್ಬಾನಂದ ಸೋನೊವಾಲ್ (ಬಿಜೆಪಿ-ಅಸ್ಸಾಂ)
- ರಾಮ್ ಮೋಹನ್ ನಾಯ್ಡು (ಟಿಡಿಪಿ-ಆಂಧ್ರಪ್ರದೇಶ)
- ಪ್ರಲ್ಹಾದ್ ಜೋಶಿ (ಬಿಜೆಪಿ-ಕರ್ನಾಟಕ)
- ಡಾ.ವೀರೇಂದ್ರ ಕುಮಾರ್ (ಬಿಜೆಪಿ-ಮಧ್ಯಪ್ರದೇಶ)
- ಜುವೆಲ್ ಒರಾಮ್ (ಬಿಜೆಪಿ-ಒಡಿಶಾ)
- ಗಿರಿರಾಜ್ ಸಿಂಗ್ (ಬಿಜೆಪಿ-ಬಿಹಾರ)
- ಅಶ್ವಿನಿ ವೈಷ್ಣವ್ (ಬಿಜೆಪಿ-ರಾಜಸ್ಥಾನ ರಾಜ್ಯಸಭೆ ಸದಸ್ಯ)
- ಜ್ಯೋತಿರಾದಿತ್ಯ ಸಿಂಧಿಯಾ (ಬಿಜೆಪಿ-ಮಧ್ಯಪ್ರದೇಶ)
- ಭೂಪೇಂದ್ರ ಯಾದವ್ (ಬಿಜೆಪಿ-ರಾಜಸ್ಥಾನ)
- ಗಜೇಂದ್ರ ಸಿಂಗ್ ಶೇಖಾವತ್ (ಬಿಜೆಪಿ-ರಾಜಸ್ಥಾನ)
- ಅನ್ನಪೂರ್ಣ ದೇವಿ (ಬಿಜೆಪಿ-ಜಾರ್ಖಂಡ್)
- ಕಿರಣ್ ರಿಜಿಜು (ಬಿಜೆಪಿ- ಅರುಣಾಚಲ ಪ್ರದೇಶ)
- ಹರ್ದೀಪ್ ಸಿಂಗ್ ಪುರಿ (ರಾಜ್ಯಸಭೆ ಬಿಜೆಪಿ-ಪಂಜಾಬ್)
- ಡಾ.ಮನ್ಸುಖ್ ಮಂಡಾವೀಯ (ಬಿಜೆಪಿ-ಗುಜರಾತ್)
- ಜಿ.ಕಿಶನ್ ರೆಡ್ಡಿ (ಬಿಜೆಪಿ-ತೆಲಂಗಾಣ)
- ಚಿರಾಗ್ ಪಾಸ್ವಾನ್ (ಎಲ್‌ಜೆಪಿ-ಬಿಹಾರ)
- ಸಿ.ಆರ್.ಪಾಟೀಲ್ (ಬಿಜೆಪಿ-ಗುಜರಾತ್)

ಸ್ವತಂತ್ರ ನಿರ್ವಹಣೆ

- ಇಂದ್ರಜೀತ್ ಸಿಂಗ್ (ಬಿಜೆಪಿ-ಹರಿಯಾಣ)
- ಡಾ.ಜಿತೇಂದ್ರ ಸಿಂಗ್ (ಬಿಜೆಪಿ-ಜಮ್ಮು)
- ಅರ್ಜುನ್ ರಾಮ್ ಮೇಘ್ವಾಲ್ (ಬಿಜೆಪಿ-ರಾಜಸ್ಥಾನ)
- ಪ್ರತಾಪ್ ರಾವ್ ಗಣಪತ್ ರಾವ್ ಜಾಧವ್ (ಶಿವಸೇನೆ ಏಕನಾಥ್ ಶಿಂಧೆ ಬಣದ ಸಂಸದ-ಮಹಾರಾಷ್ಟ್ರ)
- ಜಯಂತ್ ಚೌಧರಿ (ಆರ್‌ಎಲ್‌ಡಿ-ಉತ್ತರ ಪ್ರದೇಶ)

→ 4

7 ಮಾಜಿ ಸಿಎಂಗಳಿಗೆ ಮಂತ್ರಿಗಿರಿ

ಕೇಂದ್ರದ ನೂತನ ಸಂಪುಟದಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಒಟ್ಟು ಏಳು ರಾಜ್ಯಗಳ ಮಾಜಿ ಮುಖ್ಯಮಂತ್ರಿಗಳು ಸ್ಥಾನ ಪಡೆದಿದ್ದಾರೆ. ಮೋದಿ ಅವರು 2014ರಲ್ಲಿ ಮೊದಲ ಸಲ ಪ್ರಧಾನಿಯಾಗುವುದಕ್ಕೂ ಮುನ್ನ ಗುಜರಾತ್ ಮುಖ್ಯಮಂತ್ರಿಯಾಗಿ 15 ವರ್ಷ ಸರಕಾರ ನಡೆಸಿದ್ದರು. ಉಳಿದಂತೆ, ಶಿವರಾಜ್ ಸಿಂಗ್ ಚೌಹಾಣ್ (ಮಧ್ಯಪ್ರದೇಶ), ರಾಜನಾಥ್ ಸಿಂಗ್ (ಉತ್ತರ ಪ್ರದೇಶ), ಮನೋಹರ್ ಲಾಲ್ ಖಟ್ಟರ್ (ಹರಿಯಾಣ), ಸರ್ಬಾನಂದ ಸೋನೊವಾಲ್ (ಅಸ್ಸಾಂ), ಎಚ್.ಡಿ.ಕುಮಾರಸ್ವಾಮಿ (ಕರ್ನಾಟಕ), ಜೀತನ್ ರಾಮ್ ಮಾಂಝಿ (ಬಿಹಾರ) ಅವರು ಸಂಪುಟ ಸೇರಿದ್ದಾರೆ. ಇದರಲ್ಲಿ ಕುಮಾರಸ್ವಾಮಿ ಅವರು ಜೆಡಿಎಸ್ ಹಾಗೂ ಮಾಂಝಿ ಅವರು ಹಿಂದೂಸ್ತಾನಿ ಅವಂ ಮೋರ್ಚಾ ಪಕ್ಷದವರು. ಮಿಕ್ಕವರೆಲ್ಲ ಬಿಜೆಪಿಯವರು.

ರಾಜ್ಯದ ಐವರಿಗೆ ಸಚಿವ ಸ್ಥಾನ

ನರೇಂದ್ರ ಮೋದಿ ಅವರ ಸಚಿವ ಸಂಪುಟದಲ್ಲಿ ರಾಜ್ಯದ ಐವರಿಗೆ ಸಚಿವ ಸ್ಥಾನ ಲಭಿಸಿದೆ. ರಾಜ್ಯಸಭೆಯಲ್ಲಿ ರಾಜ್ಯವನ್ನು ಪ್ರತಿನಿಧಿಸುವ ನಿರ್ಮಲಾ ಸೀತಾರಾಮನ್, ಧಾರವಾಡ ಸಂಸದ ಪಲ್ಹಾದ ಜೋಶಿ, ತುಮಕೂರು ಸಂಸದ ವಿ.ಸೋಮಣ್ಣ, ಬೆಂಗಳೂರು ಉತ್ತರ ಸಂಸದೆ ಶೋಭಾ ಕರಂದ್ಲಾಜೆ ಹಾಗೂ ಮಿತ್ರ ಪಕ್ಷವಾಗಿರುವ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಮೋದಿ ಸಂಪುಟದಲ್ಲಿ ಸ್ಥಾನ ಕಲ್ಪಿಸಲಾಗಿದೆ. ನಿರ್ಮಲಾ ಸೀತಾರಾಮನ್ ಹಾಗೂ ಪ್ರಹ್ಲಾದ್ ಜೋಶಿ ಬ್ರಾಹ್ಮಣ, ಎಚ್.ಡಿ.ಕುಮಾರಸ್ವಾಮಿ ಹಾಗೂ ಶೋಭಾ ಕರಂದ್ಲಾಜೆ ಒಕ್ಕಲಿಗ ಮತ್ತು ಸೋಮಣ್ಣ ಲಿಂಗಾಯತ ಸಮುದಾಯದವರು.

ಸಚಿವ ಸಂಪುಟ ಸೇರುತ್ತಿದ್ದೇನೆ, ನಮ್ಮ ಪಕ್ಷದ ಹಿರಿಯ ನಾಯಕರ ನಿರೀಕ್ಷೆಯಂತೆ ಉತ್ತಮವಾಗಿ, ಅತ್ಯಂತ ಪ್ರಮಾಣಿಕವಾಗಿ ಕೆಲಸ ಮಾಡುತ್ತೇನೆ. 45 ವರ್ಷಗಳ ರಾಜಕೀಯ ಅನುಭವಿದೆ. ಅದನ್ನು ಬಳಸಿಕೊಂಡು ನನಗೆ ನೀಡಿರುವ ಜವಾಬ್ದಾರಿ ನಿಭಾಯಿಸುತ್ತೇನೆ. ಜನಪರ ಕಾರ್ಯಕ್ರಮಗಳನ್ನು ದೇಶದ ಜನರಿಗೆ ತಲುಪಿಸುತ್ತೇನೆ.

- ವಿ.ಸೋಮಣ್ಣ ಕೇಂದ್ರ ಸಚಿವ

ನರೇಂದ್ರ ಮೋದಿಯವರ ನೇತೃತ್ವದ ಸರಕಾರದಲ್ಲಿ ಎರಡನೇ ಬಾರಿ ಕೇಂದ್ರ ಸಚಿವನಾಗುತ್ತಿರುವುದು ಬಹಳ ಹೆಮ್ಮೆ ಹಾಗೂ ಸಂತಸ ತಂದಿದೆ. ವಿಕಸಿತ ಭಾರತ ನಿರ್ಮಾಣದಲ್ಲಿ ಕೇಂದ್ರ ಸಚಿವನಾಗಿ ಸೇವೆ ಸಲ್ಲಿಸಲು ಮತ್ತೆ ಅವಕಾಶ ನೀಡಿದ ಪಕ್ಷಕ್ಕೆ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹಾಗೂ ಪಕ್ಷದ ವರಿಷ್ಠರಿಗೆ, ಕಾರ್ಯಕರ್ತರಿಗೆ ಹಾಗೂ ಚುನಾಯಿಸಿದ ಮತದಾರ ಬಾಂಧವರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಪ್ರಹ್ಲಾದ್ ಜೋಶಿ, ಕೇಂದ್ರ ಸಚಿವ

ನಾನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ ಸರಕಾರದಲ್ಲಿ ಸಂಪುಟ ಸಚಿವನಾಗಿ ಪ್ರಮಾಣ ವಚನ ಸ್ವೀಕರಿಸಿದ್ದೇನೆ. ಪ್ರಮಾಣ ವಚನ ಬೋಧಿಸಿದ ಗೌರವಾನ್ವಿತ ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮು ಅವರಿಗೆ ನನ್ನ ಗೌರವಪೂರ್ವಕ ಧನ್ಯವಾದಗಳು. ದೇಶ ಸೇವೆ ಮಾಡಲು ಅವಕಾಶ ನೀಡಿದ ಮಂಡ್ಯ ಲೋಕಸಭಾ ಕ್ಷೇತ್ರದ ನಾಗರಿಕರಿಗೆ, ಕರ್ನಾಟಕದ ಜನತೆಗೆ ಹಾಗೂ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

- ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ಗೌಡರು ಗೈರು

ಪ್ರಧಾನಿ ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಹಾಗೂ ಪುತ್ರ ಎಚ್.ಡಿ. ಕುಮಾರಸ್ವಾಮಿ ಮೊದಲ ಬಾರಿಗೆ ಕೇಂದ್ರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವ ಕಾರ್ಯಕ್ರಮಕ್ಕೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಗೈರುಹಾಜರಾಗಿದ್ದರು. ಅನಾರೋಗ್ಯದ ಕಾರಣ ದೇವೇಗೌಡರು, ದೆಹಲಿಗೆ ತೆರಳದೆ ಬೆಂಗಳೂರಿನಲ್ಲಿಯೇ ಉಳಿದುಕೊಂಡಿದ್ದಾರೆ. ಆದರೆ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೂ ಮೊದಲು ನರೇಂದ್ರ ಮೋದಿಗೆ ಸುದೀರ್ಘ ಪತ್ರ ಬರೆದು ಅಭಿನಂದಿಸಿದ್ದಾರೆ.

ದಾರಿದೀಪೋಕ್ತಿ

ನೀವು ಇಲ್ಲಿತನಕ ನಡೆಸಿದ ಹೋರಾಟ ಮತ್ತು ಎದುರಿಸಿದ ಸವಾಲುಗಳನ್ನಷ್ಟೇ ನೋಡಬೇಡಿ. ಆ ಹೋರಾಟ ಮತ್ತು ಸವಾಲುಗಳಿಂದ ಏನು ಕಲಿತಿರಿ, ಎಷ್ಟು ಗಟ್ಟಿಯಾದಿರಿ, ಅವುಗಳಿಂದ ಎಷ್ಟು ಲಾಭವಾಯಿತು ಎಂಬುದನ್ನು ಲೆಕ್ಕ ಹಾಕಿ. ಆಗ ಅವು ನೀಡಿದ ನೋವಿಗಿಂತ ಕಲಿತ ಪಾಠಗಳು ನೆಮ್ಮದಿ ನೀಡುತ್ತವೆ.

ವಕ್ರತುಂಡೋಕ್ತಿ

ದೃಷ್ಟಿ ಇಲ್ಲದವನಿಗೆ ಏಕಾಏಕಿ ದೃಷ್ಟಿ ಬಂದರೆ, ಆತ ತಕ್ಷಣ ಮಾಡುವುದು, ತನಗೆ ಇಷ್ಟು ದಿನ ಆಶ್ರಯ ನೀಡಿದ ಕೋಲನ್ನು ಬಿಸಾಡುವುದು.

ಫನ್‌ತರಂಗ

- ರಘುಪತಿ ಶೃಂಗೇರಿ -

ಪಕ್ಷದಲ್ಲಿ ತಾರಕಕ್ಕೇರುತ್ತಿರುತ್ತಿದೆ ರಿಪೋರ್ಟ್ ಕಾರ್ಡ್ ಗಲಾಟೆ



ವಾಲ್ಮೀಕಿ ಹಗರಣ; ಸಿಬಿಐನಿಂದ ಪತ್ರ ಬಂದಿಲ್ಲ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ಸಿಬಿಐನಿಂದ ಅಧಿಕೃತ ಪತ್ರವ್ಯವಹಾರ ನಡೆದಿಲ್ಲ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಅಭಿವೃದ್ಧಿ ನಿಗಮದ ಅವ್ಯವಹಾರ ಕುರಿತು ತನಿಖೆ ನಡೆಸುತ್ತಿರುವ ಸಿಬಿಐ ಅಧಿಕಾರಿಗಳು ರಾಜ್ಯ ಸರಕಾರಕ್ಕೆ ಅಧಿಕೃತವಾಗಿ ಇನ್ನೂ ಪತ್ರ ಬರೆದಿಲ್ಲ. ಆದರೆ ಸಹಪಾಠಿ ಅಧಿಕಾರಿಗಳ ಬಳಿ ಮಾಹಿತಿ ನೀಡುವಂತೆ ಕೇಳಿದ್ದಾರೆ. ಬಿಜೆಪಿ ಹೇಳಿದಾಕ್ಷಣ ಸಚಿವರು, ಸಿಎಂ ರಾಜೀನಾಮೆ ನೀಡಲು ಸಾಧ್ಯವಿಲ್ಲ. ಈಗಾಗಲೇ ತನಿಖೆ ನಡೆಯುತ್ತಿದೆ. ಎಸ್‌ಐಟಿಗಾಗಲೀ, ಸಿಬಿಐಗಾಗಲೀ ಸಮಯಾವಕಾಶ ನೀಡಬೇಕಾಗುತ್ತದೆ. ಕಾಲಮಿತಿ ನಿಗದಿ ಮಾಡುವುದು ಸೂಕ್ತವಲ್ಲ ಎಂದರು.

ಪೋನಿ ಪ್ರದೇಶದ ತೆರ್ಯಾತ್ ಹಳ್ಳಿ ಬಳಿ ಘಟನೆ
ಬಸ್ ಮೇಲೆ ಉಗ್ರರ ದಾಳಿ; 10 ಸಾವು

ಕಾಶ್ಮೀರ: ಜಮ್ಮು ಮತ್ತು ಕಾಶ್ಮೀರದ ರಿಯಾಸಿಯಲ್ಲಿರುವ ಶಿವಖೋರಿ ದೇವಸ್ಥಾನಕ್ಕೆ ಯಾತ್ರಾರ್ಥಿಗಳನ್ನು ಕರೆದುಕೊಂಡು ಹೋಗುತ್ತಿದ್ದ ಬಸ್ ಮೇಲೆ ಭಯೋತ್ಪಾದಕರು ಭಾನುವಾರ ಗುಂಡಿನ ದಾಳಿ ನಡೆಸಿದ್ದು, ಬಸ್ ಕಂದಕಕ್ಕೆ ಉರುಳಿ ಬಿದ್ದಿದೆ. ಇದರಿಂದ ಹತ್ತು ಮಂದಿ ಹಿಂದೂ ಯಾತ್ರಿಕರು ಸಾವನ್ನಪ್ಪಿದ್ದಾರೆ.

ಹಲವಾರು ಮಂದಿ ಗಾಯ ಗೊಂಡಿದ್ದಾರೆ. ಭಯೋತ್ಪಾದಕರ ಗುಂಡಿನ ದಾಳಿಯಲ್ಲಿ ಮೊದಲು ಮೂವರು ಯಾತ್ರಾರ್ಥಿ ಗಳು ಸಾವನ್ನಪ್ಪಿದ್ದಾರೆ. ದಾಳಿ ನಡೆಯುತ್ತಿದ್ದಂತೆ ಬಸ್ ಆಳವಾದ ಕಮರಿಗೆ ಉರುಳಿ ಬಿದ್ದಿದೆ. ಇದರಿಂದಾಗಿ ಏಳು ಮಂದಿ ಮೃತ ಪಟ್ಟಿದ್ದು, ಒಟ್ಟು ಹತ್ತು ಮಂದಿ ಸಾವನ್ನಪ್ಪಿದ್ದಾರೆ. ಘಟನೆಯ ಮಾಹಿತಿ ತಿಳಿದ ತಕ್ಷಣ ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಲಾಯಿತು.

ಇನ್ನೆರೆಡು ವರ್ಷ ಪರಿಷತ್‌ನಲ್ಲಿ ಮೈತ್ರಿಗೆ ಬಹುಮತ | ಸಭಾಪತಿ, ಉಪಸಭಾಪತಿ ಸ್ಥಾನಗಳಿಗೂ ಇಲ್ಲ ಕುತ್ತು
ಮೇಲ್ಮನೆಯಲ್ಲಿ ಮೈತ್ರಿಗೆ ಮೇಲುಗೈ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಬಹುಮತದ ಲೆಕ್ಕಾಚಾರದ ಲ್ಲಿದ್ದ ಕಾಂಗ್ರೆಸ್‌ಗೆ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದ ಚುನಾ ವಣೆಯು ಹಿನ್ನಡೆ ಉಂಟು ಮಾಡಿದ್ದು, ಈ ಮೂಲಕ ಸಭಾಪತಿ- ಉಪಸಭಾಪತಿ ಸ್ಥಾನಕ್ಕೆ ಸದ್ಯಕ್ಕೆ ಯಾವುದೇ ಕುತ್ತು ಇಲ್ಲದಂತಾಗಿದೆ.

ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ 11 ಕ್ಷೇತ್ರಗಳು, ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರಗಳ 6 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅತ್ಯಧಿಕ ಸ್ಥಾನ ಗಳು ಅಂದರೆ ಒಟ್ಟು 17 ರಲ್ಲಿ 10 ಸ್ಥಾನ ಗಳನ್ನು ತನ್ನದಾಗಿಸಿ ಕೊಂಡಿದೆ. ಬಿಜೆಪಿಗೆ ನಾಲ್ಕು ಮತ್ತು ಜೆಡಿಎಸ್‌ಗೆ 3 ಸ್ಥಾನಗಳು ಸಿಕ್ಕಿವೆ. ಇದರಿಂದಾಗಿ ಕಾಂಗ್ರೆಸ್ ಬಲ 34ಕ್ಕೆ ಏರಿದೆ. ಬಿಜೆಪಿ ಸಂಖ್ಯೆ 30ಕ್ಕೆ ಇಳಿದಿದೆ. ಜೆಡಿಎಸ್ 8, ಸಭಾಪತಿ 1, ಪಕ್ಷೇತರ 1 ಇದೆ. ಈ ಮೂಲಕ 75ರ ಸಂಖ್ಯಾಬಲದ ಮೇಲ್ಮನೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಒಟ್ಟು 38 ಸದಸ್ಯ ಬಲ ದೊಂದಿಗೆ ಬಹುಮತ ಹೊಂದಿವೆ. ಹೀಗಾಗಿ, ದೋಸ್ತಿಗಳು ತಮ್ಮ ಪಾರುಪತ್ಯ ಮುಂದುವರಿಸಿದ್ದಾರೆ. ಹೀಗಾಗಿ, ಮೇಲ್ಮನೆಯಲ್ಲಿನ ಪ್ರಮುಖ ಬಿಲ್‌ಗಳ ಅಂಗೀಕಾರಕ್ಕೆ ಕಾಂಗ್ರೆಸ್‌ಗೆ ಸಂಖ್ಯಾಬಲದ ಕೊರತೆ ಎದುರಾಗಲಿದೆ.

→ 4

- ಜಗದೀಶ್ ಶೆಟ್ಟರ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆದ ಬಳಿಕ ಕಾಂಗ್ರೆಸ್ 35ಕ್ಕೆ ಏರಿಕೆ
- ಜನವರಿ 2025ರಲ್ಲಿ ಜೆಡಿಎಸ್ ನಾಮನಿರ್ದೇಶಿತ ಕೆ.ಎ.ತಿಪ್ಪೇಸ್ವಾಮಿ ನಿವೃತ್ತಿ ಬಳಿಕ ಮತ್ತೊಂದು ಸ್ಥಾನ ಕಾಂಗ್ರೆಸ್‌ಗೆ
- ಕೋಟ ಶ್ರೀನಿವಾಸ್ ಪೂಜಾರಿಯಿಂದ ತೆರವಾದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಸಂಖ್ಯೆ 37ಕ್ಕೆ ಏರಿಕೆ

ಬಲಾಬಲ

ಕಾಂಗ್ರೆಸ್	34
ಬಿಜೆಪಿ	30
ಜೆಡಿಎಸ್	8
ಸಭಾಪತಿ	1
ಪಕ್ಷೇತರ	1
ಒಟ್ಟು	75

ಸಭಾಪತಿ ಸ್ಥಾನ ಸೇಫ್

ಒಂದು ವೇಳೆ ಕಾಂಗ್ರೆಸ್‌ಗೆ ಭರ್ಜರಿ ಬಹುಮತ ಬಂದಿದ್ದರೆ, ಮುಂದಿನ ಅಧಿವೇಶನದ ವೇಳೆ ಸಭಾಪತಿಗಳ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿ, ಸಭಾಪತಿಗಳನ್ನು ಬದಲಾಯಿಸುವ ಲೆಕ್ಕಾಚಾರದಲ್ಲಿತ್ತು. ಆದರೆ ಈಗ ಕಾಂಗ್ರೆಸ್‌ಗೆ ಬಹುಮತವಿಲ್ಲದೇ ಇರುವುದರಿಂದ ಬಸವರಾಜ ಹೊರಟ್ಟಿ ಅವರ ಸ್ಥಾನಕ್ಕೆ ಮುಂದಿನ ಎರಡು ವರ್ಷಗಳ ಕಾಲ ಯಾವುದೇ ಕುತ್ತು ಇಲ್ಲ ಎನ್ನುವುದು ಸ್ಪಷ್ಟವಾಗಿದೆ.

ಇಸ್ರೇಲ್ ದಾಳಿಯಲ್ಲಿ 274 ಮಂದಿ ಸಾವು

ದುಬೈ: ಗಾಜಾದ ಕೇಂದ್ರ ಭಾಗದಲ್ಲಿರುವ ಅಲ್-ನುಸೇರಿಯಾತ್ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ಶನಿವಾರ ನಡೆಸಿದ ವಾಯುದಾಳಿಯಲ್ಲಿ ಕನಿಷ್ಠ 274 ಮಂದಿ ಮೃತಪಟ್ಟಿದ್ದು, 698 ಮಂದಿ ಗಾಯಗೊಂಡಿದ್ದಾರೆ ಎಂದು ಗಾಜಾದ ಆರೋಗ್ಯ ಇಲಾಖೆ ತಿಳಿಸಿದೆ. ಗಾಜಾದ ಮೇಲೆ 2023ರ ಅಕ್ಟೋಬರ್ 7ರಿಂದ ಇದುವರೆಗೆ ಇಸ್ರೇಲ್ ನಡೆಸಿದ ದಾಳಿಯಲ್ಲಿ 37,084 ಪ್ಯಾಲೆಸ್ಟೀನಿಯರು ಮೃತಪಟ್ಟು, 84,494 ಮಂದಿ ಗಾಯಗೊಂಡಿದ್ದಾರೆ ಎಂದೂ ಹೇಳಿದೆ.

ತ.ನಾಡು ರಾಜ್ಯಾಧ್ಯಕ್ಷರಾಗಿ ಅಣ್ಣಾಮಲೈ ಮುಂದುವರಿಕೆ



ದೆಹಲಿ: ಬಿಜೆಪಿಯ ತಮಿಳುನಾಡು ರಾಜ್ಯಾಧ್ಯಕ್ಷ ಅಣ್ಣಾಮಲೈ ಅವರಿಗೆ ಮೋದಿ ಅವರ ನೇತೃತ್ವದ 3ನೇ ಅವಧಿಯ ಸರಕಾರದಲ್ಲಿ ಸಚಿವ ಸ್ಥಾನಕ್ಕೆ ಅವಕಾಶವಾಗಿಲ್ಲ. ಬದಲಾಗಿ ಪಕ್ಷದ ತಮಿಳುನಾಡು ರಾಜ್ಯ ಘಟಕ ಅಧ್ಯಕ್ಷರಾಗಿಯೇ ಹೆಚ್ಚಿನ ಅವಧಿ ತೊಡಗಿಸಿಕೊಂಡು ಪಕ್ಷ ಸಂಘಟನೆಗೆ ಸೂಚನೆ ನೀಡಲಾಗಿದೆ. 2026ರಲ್ಲಿ ತಮಿಳುನಾಡು ವಿಧಾನಸಭಾ ಚುನಾವಣೆ ನಡೆಯಲಿರುವ ಹಿನ್ನೆಲೆ ಅಣ್ಣಾಮಲೈ ಅವರಿಗೆ ಪಕ್ಷ ಸಂಘಟಿಸುವ ಹೊಣೆ ನೀಡಲಾಗಿದೆ.

ರಾಮೋಜಿ ರಾವ್ ಪಂಚಭೂತಗಳಲ್ಲಿ ಲೀನ

ಹೈದರಾಬಾದ್: ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಮಾಧ್ಯಮ ಲೋಕದ ದಿಗ್ಗಜ, ರಾಮೋಜಿ ಸಮೂಹ ಕಂಪನಿಗಳ ಅಧ್ಯಕ್ಷರಾಗಿದ್ದ ರಾಮೋಜಿ ರಾವ್(87) ಅವರ ಅಂತ್ಯಕ್ರಿಯೆ ಭಾನುವಾರ ಹೈದರಾಬಾದ್ ಹೊರವಲಯದಲ್ಲಿ ಅವರೇ ಕಟ್ಟಿ ಬೆಳೆಸಿದ ರಾಮೋಜಿ ಫಿಲಂ ಸಿಟಿಯ ಅಂಗಳದಲ್ಲಿ ಸಕಲ ವಿಧಿ ವಿಧಾನ ಹಾಗೂ ಸರಕಾರಿ ಗೌರವಗಳೊಂದಿಗೆ ಭಾವಪೂರ್ಣವಾಗಿ ನೆರವೇರಿತು.

ಸಿಎಂಗೆ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪತ್ರ
ಗ್ಯಾರಂಟಿಗಳ ವಿರುದ್ಧದ ಹೇಳಿಕೆಗೆ ಕಡಿವಾಣ ಹಾಕಿ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಹಿನ್ನಡೆ ಯಾಗುತ್ತಿದ್ದಂತೆ ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸಬೇಕೆಂಬ ಆಗ್ರಹಕ್ಕೆ ಪಕ್ಷದಲ್ಲಿಯೇ ವಿರೋಧ ವ್ಯಕ್ತವಾಗಿದೆ.

ಗ್ಯಾರಂಟಿ ಯೋಜನೆಗಳ ಆಧಾರದಲ್ಲಿಯೇ ಅಧಿಕಾರದ ಗದ್ದುಗೆ ಏರಿದ ಕಾಂಗ್ರೆಸ್, ಚುನಾವಣೆ ಮುಗಿಯುತ್ತಿದ್ದಂತೆ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಿದೆ ಎನ್ನುವ ಆರೋಪವನ್ನು ಬಿಜೆಪಿ, ಜೆಡಿಎಸ್ ಮಾಡಿಕೊಂಡು ಬಂದಿದೆ. ಇದೀಗ ಕಾಂಗ್ರೆಸ್ ನಾಯಕರೇ, ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸ ಬೇಕು ಎಂದರೆ ಪಕ್ಷಕ್ಕೆ ಬಹುದೊಡ್ಡ ಡ್ಯಾಮೇಜ್ ಆಗಲಿದೆ. ಆದ್ದರಿಂದ ಈ ರೀತಿಯ ಹೇಳಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ಹಲವು ನಾಯಕರು ಆಗ್ರಹಿಸಿದ್ದಾರೆ.

ಕಳೆದ ಲೋಕಸಭಾ ಚುನಾವಣೆಗೆ ಹೋಲಿಸಿದರೆ, ಈ ಬಾರಿ ಎಂಟು ಸೀಟುಗಳು ಹೆಚ್ಚುವರಿಯಾಗಿ ಬರುವುದಕ್ಕೆ ಗ್ಯಾರಂಟಿ ಯೋಜನೆಗಳೇ ಪ್ರಮುಖ ಕಾರಣ. ಆದರೆ ಈ ಹಂತದಲ್ಲಿ ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸಬೇಕು ಎನ್ನುವ ಮಾತುಗಳನ್ನು ಆಡಿದರೆ, ಜನರಿಗೆ ಕೊಟ್ಟ ಮಾತು ಮೀರಿದಂತಾಗುತ್ತದೆ. ಇದರೊಂದಿಗೆ ಕೆಲವೇ ತಿಂಗಳಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ ಎದುರಾಗುವುದರಿಂದ, ಈ ಹಂತದಲ್ಲಿ ಗ್ಯಾರಂಟಿ ನಿಲ್ಲಿಸಬೇಕು ಎನ್ನುವ ಮಾತುಗಳು ಪಕ್ಷಕ್ಕೆ ದೊಡ್ಡ ಹೊಡೆತ ಬೀಳಲಿದೆ ಎನ್ನುವ ಮಾತುಗಳು ಶುರುವಾಗಿದೆ.

→ 4

- ಕಳೆದ ಲೋಕಸಭಾ ಚುನಾವಣೆಗೆ ಹೋಲಿಸಿದರೆ, ಈ ಬಾರಿ ಎಂಟು ಸೀಟುಗಳು ಹೆಚ್ಚುವರಿಯಾಗಿ ಬರುವುದಕ್ಕೆ ಗ್ಯಾರಂಟಿ ಯೋಜನೆಗಳೇ ಪ್ರಮುಖ ಕಾರಣ.
- ಈ ಹಂತದಲ್ಲಿ ಗ್ಯಾರಂಟಿ ಯೋಜನೆ ಗಳನ್ನು ಸ್ಥಗಿತಗೊಳಿಸಬೇಕು ಎನ್ನುವ ಮಾತುಗಳನ್ನು ಆಡಿದರೆ, ರಾಜ್ಯದ ಜನರಿಗೆ ಕೊಟ್ಟ ಮಾತು ಮೀರಿದಂತಾಗುತ್ತದೆ.
- ಕೆಲವೇ ತಿಂಗಳಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ ಎದುರಾಗುವುದರಿಂದ, ಈ ಹಂತದಲ್ಲಿ ಗ್ಯಾರಂಟಿ ನಿಲ್ಲಿಸಬೇಕು ಎನ್ನುವ ಮಾತುಗಳು ಪಕ್ಷಕ್ಕೆ ದೊಡ್ಡ ಹೊಡೆತ ಬೀಳಲಿದೆ

ಐದು ದಿನ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂದಿನ ಐದು ದಿನ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಹವಾಮಾನ ಇಲಾಖೆಯು ಬೆಳಗಾವಿ, ಉತ್ತರ ಕನ್ನಡ, ಧಾರವಾಡ, ಗದಗ ಹಾಗೂ ಕೊಪ್ಪಳ ಜಿಲ್ಲೆಗೆ ಸೋಮವಾರ ರೆಡ್ ಅಲರ್ಟ್ ಘೋಷಿಸಿದೆ. ವಿಜಯಪುರ, ಬಾಗಲಕೋಟೆ, ಬಳ್ಳಾರಿ, ಹಾವೇರಿ, ಶಿವಮೊಗ್ಗ ಹಾಗೂ ಉಡುಪಿ ಜಿಲ್ಲೆಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದ್ದು, ರಾಯಚೂರು, ದಾವಣಗೆರೆ, ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ಯೆಲ್ಲೊ ಅಲರ್ಟ್ ನೀಡಲಾಗಿದೆ.

ಪರಿಸರ ಸಂರಕ್ಷಣೆಯಿಂದ ಆರೋಗ್ಯ ಸಮತೋಲನ

ಚಂದ್ರಗುತ್ತಿ: ಪರಿಸರವು ಜೀವ ಸಂಪನ್ಮೂಲದ ಅವಿಭಾಜ್ಯ ಅಂಗವಾಗಿದ್ದು ಪರಿಸರ ಸಂರಕ್ಷಣೆಯಿಂದಲೇ ಆರೋಗ್ಯ ಸಮತೋಲನ ಕಾಯ್ದುಕೊಂಡು ಬಂದಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಡಾ.ಕೆ.ಎಸ್ ನಟರಾಜ್ ಹೇಳಿದರು,

ಚಂದ್ರಗುತ್ತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಡುವುದರ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ನಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛತೆ ಕಾಪಾಡುವ ಮೂಲಕ ಆರೋಗ್ಯಕರ ಸುಸ್ಥಿರ ಪರಿಸರ ನಿರ್ಮಿಸಲು ಪ್ರತಿಯೊಬ್ಬರು ಶ್ರಮವಹಿಸಬೇಕು, ಕೇವಲ ಗಿಡಗಳನ್ನು ನೆಡುವುದು ಮಾತ್ರವಲ್ಲದೆ ಅವುಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು,

ಈಲ್ಲಾ ಆರ್ ಸಿ ಎಚ್ ಅಧಿಕಾರಿ ಡಾ. ನಾಗರಾಜ್ ನಾಯ್ಕ್, ಜಿಲ್ಲಾ ಮಲೇರಿಯಾ ನಿಯಂತ್ರಣ ಅಧಿಕಾರಿ ಡಾ. ಗುಡದಪ್ಪ ಕಸಬಿ, ತಾಲೂಕು ವೈದ್ಯಾಧಿಕಾರಿ ಡಾ. ವಿನಯ್ ಪಟೇಲ್, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ. ಯತೀಶ್, ಡಾ. ಬಾಲಾಜಿ ನಾಯ್ಕ್, ಸೇರಿದಂತೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಉಪಸ್ಥಿತರಿದ್ದರು,

ಚಳ್ಳಕೆರೆ ಹೊಂಗಿರಣ ಶಾಲೆಗೆ ಶೇ.100 ಫಲಿತಾಂಶ

ಚಳ್ಳಕೆರೆ: ಜೂನ್ 5 ರಂದು ಮರು ಮೌಲ್ಯಮಾಪನ ಫಲಿತಾಂಶದಲ್ಲಿ ಚಳ್ಳಕೆರೆ ತಾಲೂಕಿಗೆ ಟಾಪರ್‌ಆಗಿ ಹೊಂಗಿರಣ ಇಂಟರ್ ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಯ ಮಕ್ಕಳು ಹೊರಹೊಮ್ಮಿದ್ದಾರೆ

ಕಳೆದ ಮೇ.9 ರಂದು ರಾಜ್ಯಾದ್ಯಂತ ಎಸ್ ಎಸ್ ಎಲ್ ಸಿ ಫಲಿತಾಂಶ ಹೊರ ಬಿದ್ದಿತ್ತು, ಅದರಂತೆ ಚಳ್ಳಕೆರೆ ತಾಲೂಕಿನಲ್ಲಿ ಹೊಂಗಿರಣ ಇಂಟರ್ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಗೆ ಶೇಕಡ ನೂರಕ್ಕೆ ನೂರರಷ್ಟು ಫಲಿತಾಂಶ ಸಂದು ತಾಲೂಕಿಗೆ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟಿಕೊಂಡಿತ್ತು.

ಆದರೆ ಅವಿರತ ಸಾಧನೆಗೈದ ವಿದ್ಯಾರ್ಥಿಗಳು ಮತ್ತೆ ಮರು ಮೌಲ್ಯಮಾಪನ ಫಲಿತಾಂಶಕ್ಕೆ ಹಾಕಿದ್ದರು, ಇನ್ನೂ ಇಲಾಖೆಯಲ್ಲಿ ಮರು ಮೌಲ್ಯಮಾಪನದಲ್ಲಿ ಸುಮಾರು 4 ರಿಂದ 5 ಅಂಕಗಳು ಹೆಚ್ಚಳವಾಗಿ ಈಡೀ ತಾಲೂಕಿಗೆ ಪ್ರಥಮ ಸ್ಥಾನ ಪಡೆಯುವ ಮೂಲಕ ಮೊದಲಿಗರಾಗಿದ್ದಾರೆ.

ವಿದ್ಯಾರ್ಥಿನಿ ನಂದಿತಾ- 617, ಸುಮುಖ್ -617, ಅಂಕಗಳನ್ನು ಪಡೆಯುವ ಮೂಲಕ ಸಾಧನೆಯ ಹಾದಿಯಲ್ಲಿ ಇದ್ದಾರೆ.

ಕೇವಲ ಮೂರು ವರ್ಷಗಳಲ್ಲಿ ಅತ್ಯುತ್ತಮ ಹ್ಯಾಟ್ರಿಕ್ ಸಾಧನೆಗೈಯುವ ಮೂಲಕ ತಾಲೂಕಿಗೆ ಪ್ರಥಮಸ್ಥಾನ ಪಡೆದ ಹೊಂಗಿರಣ ಇಂಟರ್ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆ ತಾಲ್ಲೂಕಿನಲ್ಲಿ ಮೊದಲ ಸಾಲಿನಲ್ಲಿ ಇದೆ.

ಜೂನ್.5 ರಂದು ಮರು ಮೌಲ್ಯಮಾಪನ ಫಲಿತಾಂಶ ಹೊರಬಿದ್ದಿದ್ದು ಹೊಂಗಿರಣ ಶಾಲೆಯ ವಿದ್ಯಾರ್ಥಿಗಳು ಸಂತಸದ ನಗೆ ಬೀರಿದ್ದಾರೆ. ಅತೀ ಕಡಿಮೆ ಅವಧಿಯಲ್ಲಿ ಹೆಚ್ಚು ಸಾಧನೆಗೈಯುವ ಮೂಲಕ ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

ಇನ್ನೂ ಮಕ್ಕಳ ಸಾಧನೆಗೆ ಕಳೆದ ಮೂರು ವರ್ಷಗಳಿಂದ ಮಾರ್ಗದರ್ಶನ ನೀಡುತ್ತಿರುವ ಭೋಧಕ ವೃಂದದವರಿಗೆ ಶಾಲೆಯ ಆಡಳಿತ ಮಂಡಳಿಯು ಧನ್ಯವಾದಗಳನ್ನು ಅರ್ಪಿಸಿದ್ದಾರೆ.

ಕಳೆದ ಮೂರು ವರ್ಷಗಳಿಂದ ಸತತವಾಗಿ ನೂರಕ್ಕೆ ನೂರರಷ್ಟು ಫಲಿತಾಂಶ ತರುವಲ್ಲಿ ಹೊಂಗಿರಣ ಶಾಲೆಯ ಮಕ್ಕಳು ಹ್ಯಾಟ್ರಿಕ್ ಸಾಧನೆಯಲಿದ್ದಾರೆ, ಈ ಬಾರಿ ತಾಲೂಕಿಗೆ ಪ್ರಥಮ ಸ್ಥಾನ ತರುವ ಮೂಲಕ ಕೀರ್ತಿ ಹೆಚ್ಚಿಸಿದ್ದಾರೆ ಎಂದು ದಯಾನಂದ ಪ್ರಹ್ಲಾದ್ ಸಂಸ್ಥೆಯ ಕಾರ್ಯದರ್ಶಿ ಹೇಳಿದ್ದಾರೆ

ಇನ್ನೂ ಸಂಸ್ಥೆಯ ಆಡಳಿತ ಮಂಡಳಿಯ ಗೌರವ ಅಧ್ಯಕ್ಷರಾದ ಡಿ.ನಾಗಪ್ಪ, ಅಧ್ಯಕ್ಷರಾದ ರಾಜೇಶ್ ಗುಪ್ತ, ಕಾರ್ಯದರ್ಶಿಯಾದ ದಯಾನಂದ ಪ್ರಹ್ಲಾದ್, ಟ್ರಸ್ಟಿಗಳಾದ ಡಿಎನ್.ಶಿವಪ್ರಸಾದ್, ಮಧುಸೂದನ್, ರವರು ಭೋಧಕ ವರ್ಗಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ಅಕ್ರಮ ಗಾಂಜಾ ಬೆಳೆ ಆರೋಪಿ ಬಂಧನ, ಗಾಂಜಾ ಸೊಪ್ಪು ವಶ

ದಾವಣಗೆರೆ: ಅಕ್ರಮವಾಗಿ ಗಾಂಜಾ ಗಿಡ ಬೆಳೆದ ಆರೋಪಿ ಬಂಧಿಸಲಾಗಿದ್ದು, ಆರೋಪಿಯಿಂದ ಸುಮಾರು 75 ಸಾವಿರ ಮೌಲ್ಯದ ಗಾಂಜಾ ಸೊಪ್ಪು ವಶಕ್ಕೆ ಪಡೆಯಲಾಗಿದೆ. ಜೂ. 7ರಂದು ಮಧ್ಯಾಹ್ನ ಸಮಯದಲ್ಲಿ ಜಗಳೂರು ತಾಲ್ಲೂಕು ಅಸಗೋಡು ಗ್ರಾಮದಲ್ಲಿ ನಾಗರಾಜ್ (28) ತನ್ನ ಮನೆ ಮುಂದೆ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆದಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ದಾವಣಗೆರೆ ಗ್ರಾ. ಉಪ ವಿಭಾಗದ ಡಿವೈಎಸ್ಪಿ ಪ್ರಶಾಂತ್ ಸಿದ್ದನ ಗೌಡರ್ ಮಾರ್ಗದರ್ಶನದಲ್ಲಿ ಬಿಳಿಚೋಡು ಪೊಲೀಸ್ ಠಾಣೆಯ ಪಿಎಸ್‌ಐ ಓಂಕಾರಿನಾಯ್ಕ ಹಾಗೂ ಸಿಬ್ಬಂದಿಗಳ ತಂಡ ದಾಳಿ ಮಾಡಿ, ಕಾನೂನು ಬಾಹಿರವಾಗಿ ಗಾಂಜಾ ಸೊಪ್ಪನ್ನು ಬೆಳೆದಿದ್ದ ಆರೋ ಪಿತ ನಾಗರಾಜ್ ಬಂಧನ ಮಾಡಲಾಗಿದೆ. ಸುಮಾರು 75 ಸಾವಿರ ಮೌಲ್ಯದ 3 ಕೆಜಿ ಕ್ಕಿಂತ ಹೆಚ್ಚು ಗಾಂಜಾ ಸೊಪ್ಪನ್ನು ವಶಪಡಿಸಿಕೊಂಡಿದ್ದು, ಈ ಸಂಬಂಧ ಬಿಳಿಚೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಸದರಿ ದಾಳಿಯಲ್ಲಿ ಬಿಳಿ ಚೋಡು ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರಾದ ಓಂಕಾರಿನಾಯ್ಕ, ಕೆ ಹಾಗೂ ಸಿಬ್ಬಂದಿಗಳಾದ ಆರ್ .ಎ.ಕೃಷ್ಣಮೂರ್ತಿ, ಪಿ. ತಿಪ್ಪೇಸ್ವಾಮಿ, ಜಿ.ಜೆ ಬಸವರಾಜ, ರಾಜು ಕೊಡವರ ಲೋಕೇಶ, ಮಹಾತೇಶ, ಎಸ್ ಅಶೋಕ ಭಾಗವಹಿಸಿ ದ್ದರು. ತಮಡಕ್ಕೆ ಪೊಲೀಸ್ ಅಧೀಕ್ಷಕ್ಷಿ ಉಮಾ ಪ್ರಶಾಂತ್ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ್ ಎಂ ಸಂತೋಷ್ ಹಾಗೂ ಜಿ ಮಂಜುನಾಥ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಮದ್ಯವ್ಯಸನಿಗಳ ಕುಡಿತ ಬಿಡುವ ಕಾರ್ಯಾಗಾರ

ಶಿವಮೊಗ್ಗ: ಆಲ್ಕೊಹಾಲಿಕ್ ಅನಾನಿಮಸ್(ಅನಾಮಿಕ ಅಮಲಿಗಳ ಒಕ್ಕೂಟ) ಸಂಸ್ಥೆ ವತಿಯಿಂದ ಇಲ್ಲಿನ ಕುಂಬಾರ ಬೀದಿಯ ಜ್ಞಾನಪ್ರಭಾ ವಿದ್ಯಾ ಸಂಸ್ಥೆಯಲ್ಲಿ ಜೂ.9 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 12 ಗಂಟೆವರೆಗೆ ಮದ್ಯವ್ಯಸನಿಗಳು ಕುಡಿತ ಬಿಡಲು (ಚೇತರಿಕೆ) ಒಂದು ದಿನದ ಉಚಿತ ಕಾರ್ಯಗಾರ ಆಯೋಜಿಸಲಾಗಿತ್ತು. ಕುಡಿತವೊಂದು ಮಾರಕ ರೋಗವೆಂದು ವಿಶ್ವಸಂಸ್ಥೆಯೇ ಒಪ್ಪಿಕೊಂಡಿದೆ. ಇಲ್ಲಿ ಮದ್ಯವ್ಯಸನಿಗಳು ಕುಡಿತ ಬಿಡುವ ಉದ್ದೇಶ ಹೊಂದಿದರೂ ಸಹ, ಚಟದಿಂದ ದೂರವಾಗಲು ಯಾವುದೇ ಮಾರ್ಗ ಕಾಣಿಸುವುದಿಲ್ಲ. ಆದ್ದರಿಂದ, ಈ ಕಾರ್ಯಗಾರದಲ್ಲಿ ಇದಕ್ಕೆ ಬೇಕಾದ ಪೂರಕ ಮಾಹಿತಿ ಒದಗಿಸಲಾಗಿದೆ ಎಂದು ಸಂಸ್ಥೆಯು ತಿಳಿಸಿದೆ. ಮಾಹಿತಿಗೆ ದೂರವಾಣಿ ಸಂಖ್ಯೆ: 9886336011,9980203087,6364570514 ಸಂಪರ್ಕಿಸಬಹುದು.

ನರೇಗಾ ಕಾಮಗಾರಿ ಪರಿಶೀಲನೆ

ಮೈಲಿಮನೆ: ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳಾದ ಡಾ.ಬಿ.ಗೋಪಾಲ್ ಕೃಷ್ಣ ಅವರು ತಾಲೂಕಿನ ಮೈಲಿಮನೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅಭಿವೃದ್ಧಿ ಪಡಿಸಿರುವ ಅಮೃತ ಸರೋವರ ಕಾಮಗಾರಿಯನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಜರಿದ್ದರು.

ಬಿ.ಆರ್ ಶೇಷಾದ್ರಿ ನಿಧನಕ್ಕೆ ಸಂತಾಪ

ಶಿವಮೊಗ್ಗ: ಜಯನಗರ ಹೌಸಿಂಗ್ ಕೋ ಆಪರೇಟಿವ್ (ಸಂಘ) ಸೊಸೈಟಿ ಸದಸ್ಯರು ಸಂಘದ ಕಚೇರಿಯಲ್ಲಿ ಶನಿವಾರ ಈ ಹಿಂದೆ ಸಂಘದ ಮಾಜಿ ಅಧ್ಯಕ್ಷ ಹಾಗೂ ನಿರ್ದೇಶಕರೂ ಆದ ಬಿ.ಆರ್. ಶೇಷಾದ್ರಿ ಅವರ ನಿಧನಕ್ಕೆ ಸಂತಾಪ ಸೂಚಿಸಿದರು. ಅಮೇರಿಕಾದಲ್ಲಿ ನೆಲೆಸಿದ್ದ ಬಿ.ಆರ್. ಶೇಷಾದ್ರಿ ಅವರು ಜೂನ್ 7 ರಂದು ನಿಧನರಾಗಿದ್ದರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಎನ್ ಉಮಾಪತಿ, ಖಜಾಂಚಿ ಎಂ.ಉಮಾಶಂಕರ, ಸಂಘದ ಉಪಾಧ್ಯಕ್ಷರು ಹಾಗೂ ನಿರ್ದೇಶಕರಾದ ಕೆ.ರಂಗನಾಥ, ಸಿ. ಹೊನ್ನಪ್ಪ, ಎಸ್.ಪಿ.ಶೇಷಾದ್ರಿ, ಎಸ್.ಪಿ.ದಿನೇಶ್, ಎಸ್.ಎಂ.ಕುಮಾರ್, ಎಚ್.ಬಿ.ನಟರಾಜ ಶಾಸ್ತ್ರೀ, ಟಿ.ವಿ.ರಂಜಿತ್,ಪಿ.ಪ್ರಕಾಶ್, ಡಾ.ಶ್ರೀನಿವಾಸ ಕರಿಯಣ್ಣ, ಎಂ.ಆರ್.ಪ್ರಕಾಶ್, ಕೆ.ಜಿ. ರಾಘವೇಂದ್ರ, ಬಿ.ಮಲ್ಲಿಕಾರ್ಜುನ, ನಿರ್ಲಕಾಶಿ, ಪೂರ್ಣಿಮಾ ಸುನಿಲ್ ಸೇರಿ ಸಿಬ್ಬಂದಿ ಇದ್ದರು.

ವಿಡಿಯೋ ಘಟಕದಿಂದ ಸಭೆ ಜೂ.11 ರಂದು

ಶಿವಮೊಗ್ಗ: ವಿಡಿಯೋ ಮತ್ತು ಫೋಟೋಗ್ರಾಫರ್ಸ್ ಅಸೋಸಿಯೇಷನ್ ಜಿಲ್ಲಾ ಘಟಕ ವತಿಯಿಂದ ನಗರದ ವೀರಶೈವ ಕಲ್ಯಾಣ ಮಂದಿರದಲ್ಲಿ ಜೂ.11 ರಂದು ಬೆಳಿಗ್ಗೆ 10 ಗಂಟೆಗೆ ಸರ್ವ ಸದಸ್ಯರ ಸಭೆ ಆಯೋಜಿಸಲಾಗಿದೆ ತಾಲೂಕು ಘಟಕದ ಪ್ರಧಾನ ಕಾರ್ಯದರದರ್ಶಿ ಚೇತನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಂಘದ ಅಧ್ಯಕ್ಷ ವಿ.ಸತೀಶ್ ಅವರು ಸಭೆಯ ಅಧ್ಯಕ್ಷತೆ ವಹಿಸಿವರು. ಸಭೆಯಲ್ಲಿ ಚರ್ಚಿಸಬೇಕೆಂದುಕೊಂಡಿರುವ ವಿಷಯಗಳನ್ನು ಕನಿಷ್ಠ ಏಳು ದಿನಗಳ ಮುನ್ನ ಸಂಘದ ಕಚೇರಿಗೆ ಲಿಖಿತ ರೂಪದಲ್ಲಿ ತಲುಪಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಸಭೆಗೆ ಆಗಮಿಸಬೇಕು ಎಂದು ಕೋರಿದ್ದಾರೆ.

ಡಿ.ಟಿ.ಶ್ರೀನಿವಾಸ್ ಗೆಲುವು: ಸಂಭ್ರಮ

ಚಳ್ಳಕೆರೆ: ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾದ ಡಿ ಟಿ ಶ್ರೀನಿವಾಸ್ ರವರು ಗೆಲುವು ಸಾಧಿಸಿದ ಪ್ರಯುಕ್ತ ಕಾರ್ಯಕರ್ತರೊಂದಿಗೆ ವಿಜಯೋತ್ಸವ ಆಚರಿಸಿದರು. ಚಳ್ಳಕೆರೆ ನಗರದ ವಾಲ್ಮೀಕಿ ವೃತ್ತದಲ್ಲಿ ತಮ್ಮ ಅಪಾರ ಅಭಿಮಾನಿಗಳೊಂದಿಗೆ ಪರಸ್ಪರ ಸಿಹಿ ತಿನಿಸುವ ಮೂಲಕ ಪಟಾಕಿ ಸಿಡಿಸಿ ಸಂಭ್ರಮಿಸಿದ ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಟಿ ರಘುಮೂರ್ತಿ ರವರು ನಮ್ಮ ಗೆಲುವು ಮತದಾರರಿಗೆ ಸಮರ್ಪಣೆ, ಕಾಂಗ್ರೆಸ್ ಪಕ್ಷದ ನಿಷ್ಠೆಯನ್ನು ಗುರುತಿಸಿ ನಮಗೆ ಆರ್ಶೀವಾದಿಸಿದ ಶಿಕ್ಷಕರಿಗೆ ಅಭಿನಂದನೆಗಳು ಎಂದರು. ಈ ಸಂದರ್ಭದಲ್ಲಿ ಕಾರ್ಯಕರ್ತರು, ಮುಖಂಡರುಗಳು ಉಪಸ್ಥಿತರಿದ್ದರು.

ಶಿಥಿಲಾವಸ್ಥೆಯ ಭರಮಸಮುದ್ರ ಸರಕಾರಿ ಶಾಲೆ ಕಟ್ಟಡ

90 ವರ್ಷ ಹಳೆಯ ಶಾಲಾ ಕೊಠಡಿ ಗೋಡೆ, ಚಾವಣಿ ಕುಸಿಯುವ ಭೀತಿ | ಸರಕಾರಗಳಿಂದಲೇ ಈ ಶಾಲೆಗಳ ತಾತ್ಸಾರ

ಜಗಳೂರು: ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ ಎಂದು ಸರಕಾರಿ ಶಾಲೆಯ ಬಾಗಿಲಿನಲ್ಲಿ ಬರೆದಿರುತ್ತಾರೆ. ಆದರೆ ತಾಲೂಕಿನ ಭರಮಸಮುದ್ರ ಸರಕಾರಿ ಶಾಲೆಗೆ ಹೋಗುವ ಮಕ್ಕಳು ಯಾವಾಗ ಗೋಡೆಗಳು, ಚಾವಣಿಗಳು ಉದುರಿ ಮಕ್ಕಳ ಮೈ ಮೇಲೆ ಬೀಳುತ್ತವೋ ಎಂಬ ಆತಂಕದಲ್ಲಿ ಪಾಠ ಕೇಳಬೇಕಾದ ದುಸ್ಥಿತಿ ಇಲ್ಲಿನ ಶಾಲಾ ಮಕ್ಕಳಿಗೆ ಬಂದೊಂದಗಿದೆ.

ಈಗಾಗಲೇ ಶಾಲೆ ಆರಂಭವಾಗಿ ಎರಡು ವಾರಗಳು ಕಳೆಯುತ್ತ ಬಂದಿದೆ, ಜೊತೆಯಲ್ಲಿ ಮುಂಗಾರು ಮಳೆಯು ಸಹ ರಾಜ್ಯಕ್ಕೆ ಕಾಲಿಟ್ಟಿದ್ದು, ಮಳೆಗೆ ಹಲವು ಶಾಲೆಗಳ ಮೇಲ್ಚಾವಣಿ ಬಿದ್ದಿರುವುದು ಕಾಣಬಹುದಾಗಿದ್ದು, ಭರಮಸಮುದ್ರ ಗ್ರಾಮದ ಸರಕಾರಿ ಶಾಲೆಯ ಕೊಠಡಿಗಳು ಮಳೆ ಗಾಳಿಗೆ ಬಿದ್ದು ಹೋಗಿದ್ದು, ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅಕ್ಷರಶಃಹ ತೊಂದರೆಯಾಗುತ್ತಿದೆ.

ಶಾಲೆಯ 1934 ರಲ್ಲಿ ನಿರ್ಮಾಣವಾಗಿದ್ದು, ಈ ಶಾಲೆ 90 ವರ್ಷಕ್ಕೂ ಹೆಚ್ಚು ವರ್ಷದ ಆಯಷು ಕಳೆದಿದ್ದು, ಕಟ್ಟಡ ತುಂಬಾ ಶಿಥಿಲಾವ್ಯಸ್ಥೆ ತಲುಪಿದೆ, ಯಾವಗ ಬೇಕಾದರೂ ಬೀಳುವ ಆತಂಕ ಶಿಕ್ಷಕರಲ್ಲಿ ಮನೆ ಮಾಡಿದ್ದು, ಈ ಕುರಿತು ಗ್ರಾಮಸ್ಥರು, ಶಿಕ್ಷಕರು ಶಿಕ್ಷಣ ಇಲಾಖೆಗೆ, ಗ್ರಾ.ಪಂ, ಶಾಸಕರಿಗೂ ಪತ್ರಗಳ ಮೂಲಕ ಗಮನಕ್ಕೆ ತರಲಾಗಿದ್ದು, ಇಲ್ಲಿಯವರೆಗೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ವಿಶ್ವವಾಣಿ ಪತ್ರಿಕೆಗೆ ಮಾಹಿತಿ ನೀಡಿದ್ದಾರೆ.

ಭರಮಸಮುದ್ರ ಗ್ರಾಮದ ಸರಕಾರಿ ಶಾಲೆಯ ಕೊಠಡಿಗಳು ಮಳೆ ಗಾಳಿಗೆ ಬಿದ್ದು ಹೋಗಿದ್ದು, ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅಕ್ಷರಶಃಹ ತೊಂದರೆಯಾಗಿದೆ.

ವರ್ಷಕ್ಕೊಮ್ಮೆ ನಡೆಯುವ ಶಾಲಾ ಪ್ರಾರಂಭೋತ್ಸವ ಸಂದರ್ಭದಲ್ಲಿ ಕಟ್ಟಡದಲ್ಲಿರುವ ಧೂಳು, ಹಕ್ಕಿಗಳ ಗೂಡುಗಳು, ಜೇಡರ ಬಲೆಗಳನ್ನು ತೆರವುಗೊಳಿಸಿ ಶಾಲೆಯ ಶುಚಿ ಮಾಡಿ ತಳಿರು ತೋರಣ ಕಟ್ಟಿ ಸಂಭ್ರಮಿಸಲಾಗುತ್ತದೆ. ತರಗತಿಗಳು ಪ್ರಾರಂಭವಾದ ಬಳಿಕ ಕಟ್ಟಡದಲ್ಲಿ ಕಟ್ಟಿಕೊಳ್ಳುವ ಜೇಡರ ಬಲೆಗಳನ್ನು ದಿನ ನಿತ್ಯ ತೆರವುಗೊಳಿಸಲಾಗುತ್ತದೆ. ಇತ್ತ ಶಿಕ್ಷಕರಿಗೆ ಶಿಥಿಲ ಗೋಡೆಗಳು ಯಾವಗ ಕಳಚುತ್ತವೆಯೋ ಎಂಬ ಭಯ ಕಾಡುತ್ತಿದ್ದು, ಶಾಲೆಯ 1934 ರಲ್ಲಿ ನಿರ್ಮಾಣವಾಗಿದ್ದು, 90 ವರ್ಷಕ್ಕೂ ಹೆಚ್ಚು ವರ್ಷದ ಆಯಷು ಕಳೆದಿರುವ ಗೋಡೆಗಳ ನಿರ್ಮಾಣ, ನಿರ್ವಹಣೆ ದುರಸ್ಥಿ ಮಾತ್ರ ದೂರವಾದ ಮಾತಾಗಿದೆ.

ತಾಲೂಕಿ ಭರಮಸಮುದ್ರ ಗ್ರಾಮದ ಸರಕಾರಿ ಶಾಲೆಯಲ್ಲಿ 120 ಕ್ಕೂ ಹೆಚ್ಚು ಮಕ್ಕಳು 1 ರಿಂದ 7 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.ಈ ಶಾಲೆಯು 90 ವರ್ಷಗಳ ಹಳೆ ಕಟ್ಟಡದಲ್ಲಿಯೇ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಈಗಾಗಲೇ ಅಲ್ಲಲ್ಲಿ ಕಟ್ಟಡ ಚಾವಣಿ ಕುಸಿಯುತ್ತಿದೆ. ಇಂದೋ ನಾಳೆಯೋ ಬೀಳುವ ಸ್ಥಿತಿ ಬಂದೊದಗಿದ್ದರು ಶಿಕ್ಷಣ ಇಲಾಖೆಯ ಅಧಿಕಾರಿಗಳಾಗಲಿ ಹೊಸ ಕಟ್ಟಡ ನಿರ್ಮಿಸಲು ಮುಂದಾಗುತ್ತಿಲ್ಲ, ಕಟ್ಟಡ ಕೊರತೆಯಿಂದ ವಿದ್ಯಾರ್ಥಿಗಳು ಖಾಸಗಿ ಶಾಲೆಗಳತ್ತ ಮುಖ ಮಾಡುವ ಪರಿಸ್ಥಿತಿ ಗ್ರಾಮದಲ್ಲಿ ನಿರ್ಮಾಣವಾಗಿದೆ.

> ಶಾಲೆಯ ಶಿಥಿಲ ಗಮನಿಸಿ ವರ್ಷಗಳಿಂದ ಗ್ರಾ.ಪಂ ಶಿಕ್ಷಣ ಇಲಾಖೆ ಅಲ್ಲದೆ ಜನಪ್ರತಿನಿಧಿಗಳಿಗೆ ಗ್ರಾಮಸ್ಥರ ಜೊತೆಗೂಡಿ ಪತ್ರಗಳ ಮೂಲಕ ಮನವಿ ಮಾಡಲಾಗಿದೆ. ಶಾಲೆಯಲ್ಲಿ 120 ಕ್ಕೂ ಹೆಚ್ಚು ಮಕ್ಕಳು ಕಲಿಯುತ್ತಿದ್ದಾರೆ. ನಾಲ್ಕು ಕೊಠಡಿಗಳು ಮಾತ್ರ ಚೆನ್ನಾಗಿದ್ದು, ಮೂರು ಕಟ್ಟಡಗಳು ತುಂಬಾ ಶಿಥಿಲಾವ್ಯಸ್ಥೆ ಹೊಂದಿದ್ದು, ನಾಲ್ಕು ಕೊಠಡಿಗಳು ಅವಶ್ಯಕವಾಗಿ ಬೇಕಾಗಿದೆ.'
>
> ಓ.ತಿಪ್ಪೇಸ್ವಾಮಿ, ಪ್ರಭಾರಿ ಮುಖ್ಯಶಿಕ್ಷಕರು

ಬಡವರ ಮಕ್ಕಳಿಗಾಗಿ..

ನಮ್ಮೂರಿಂದ ತಾಲೂಕು ಕೇಂದ್ರವು ಸಮೀಪವಿದ್ದು, 1 ಕಿ. ಮಿ ಸಮೀಪವೇ ಸುಸಜ್ಜಿತವಾದ ಖಾಸಗಿ ಶಾಲೆಗಳಿವೆ. ಆದ್ದರಿಂದ ಶೀಘ್ರವೇ ನಮ್ಮೂರಿನ ಶಾಲೆಯ ದುರಸ್ಥಿ ಕಾರ್ಯ ಮಾಡಿಸಿ ಬಡವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡಬೇಕಿದೆ ಎಂದು ಭರಮಸಮುದ್ರ ಗ್ರಾಮಸ್ಥ ಕುಮಾರ್ ಹೇಳಿದರು.

ಒಗ್ಗಟ್ಟಿನಿಂದ ಕುಂಚಿಟಿಗರಿಗೆ ಸ್ಥಾನಮಾನ ಲಭ್ಯ

ಹೊನ್ನಾಳಿ: ಸಮಾಜದ ಸರಕಾರಿ ನೌಕರರು ಒಗ್ಗಟ್ಟಾದ ಹಿನ್ನೆಲೆಯಲ್ಲಿ ಎಲ್ಲಾ ಸಂಘ-ಸಂಸ್ಥೆಗಳಲ್ಲಿ ಕುಂಚಿಟಿಗ ನೌಕರರಿಗೆ ಸ್ಥಾನ-ಮಾನ ಸಿಗುವಂತಾಗಿದೆ ಎಂದು ಕುಂಚಿಟಿಗ ನೌಕರರ ಸಂಘದ ಅಧ್ಯಕ್ಷ ಜಿ.ಎಸ್. ತಿಮ್ಮಪ್ಪ ಹರ್ಷ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಹೊನ್ನಾಳಿ-ನ್ಯಾಮತಿ ಕುಂಚಿಟಿಗ ನೌಕರರ ಸಂಘದವತಿಯಿಂದ ನಿವೃತ್ತ ನೌಕರರಿಗೆ ಬೀಳ್ಕೊಡುಗೆ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕುಂಟಿಟಿಗರ ಸಂಘ ಸ್ಥಾಪನೆಗೂ ಮೊದಲು ಸಮಾಜದ ನೌಕರರನ್ನು ತಾಲ್ಲೂಕು ಮಟ್ಟದ ಯಾವ ಸಂಘಟನೆಯಲ್ಲೂ ಅವಕಾಶ ಕೊಡದೇ ನಿರ್ಲಕ್ಷ್ಯ ಧೋರಣೆ ತೋರುತ್ತಿದ್ದು, ಕಳೆದ 25 ವರ್ಷಗಳಿಂದ ಆರ್.ಪಿ. ಕೃಷ್ಣಮೂರ್ತಿ ಅವರ ನೇತೃತ್ವದಲ್ಲಿ ಕುಂಚಿಟಿಗರ ನೌಕರರ ಸಂಘ ಸ್ಥಾಪನೆಯಾದಾಗ ಬೆರಳೆಣಿಕೆಯ ಶಿಕ್ಷಕರು ಮಾತ್ರವೇ ಸಂಘದಲ್ಲಿದ್ದರು. ಆಗ ಸಂಘದಲ್ಲಿ ಹಣ ಇಲ್ಲದಿದ್ದರೂ ಸಂಘಟನೆ ಇದ್ದರೆ ಮಾತ್ರವೇ ಶಕ್ತಿಯೆಂದರಿತು ಆತ್ಮಸ್ಥೈರ್ಯದಿಂದ ಕಟ್ಟಿದ ಸಂಘವೂ ಇಂದು ಹೆಮ್ಮರವಾಗಿ ಬೆಳೆಯಲು ಕಾರಣರಾದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು.

ಸನ್ಮಾನ ಸ್ವೀಕರಿಸಿ ನಿವೃತ್ತ ಬಿ.ಇ.ಒ. ಎಸ್.ಸಿ.ನಂಜರಾಜ್ ಮಾತನಾಡಿ ಶಾಸಕ ಡಿ.ಜಿ.ಶಾಂತನಗೌಡ ಮತ್ತು ಅವರ ಕುಟುಂಬವರ್ಗದವರೂ ಎಂದೂ ತಮ್ಮ ಕಾರ್ಯದಲ್ಲಿ ಒತ್ತಡ ಹೇರದೇ ಈ ಬಿಇಒ ಅವರು ಯಾವುದೇ ಸಮಸ್ಯೆಗಳು ನನ್ನ ಹತ್ತಿರ ಸುಳಿಯದಂತೆ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದ್ದನ್ನು ಉಲ್ಲೇಖಿಸಿ ಶಾಸಕರಿಂದ ಒಳ್ಳೆಯ ಅಧಿಕಾರಿಯೆನಿಸಿಕೊಂಡು ನಿವೃತ್ತಿಯಾಗುತ್ತಿರುವುದು ಸುಲಭದ ಮಾತಲ್ಲವೆಂದು ಸಂತಸ ಹಂಚಿಕೊಂಡರು.

ನಿವೃತ್ತ ನೌಕರರಾದ ಲೋಕೇಶ್, ಎಚ್.ಕೆ. ಪರಮೇಶ್ವರಪ್ಪ, ಫಲವನಹಳ್ಳಿ ಮಹೇಶ್ವರಪ್ಪ, ಅಂಗನವಾಡಿ ಶಿಕ್ಷಕಿ ರತ್ನಮ್ಮ ಇವರುಗಳ ನಿವೃತ್ತಿ ಹಿನ್ನೆಲೆಯಲ್ಲಿ ಸನ್ಮಾನಿಸಲಾಯಿತು. ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಬಹುಮಾನದೊಂದಿಗೆ ವಿಶೇಷವಾಗಿ ಸನ್ಮಾನಿಸಲಾಯಿತು. ಸಮಾಜದ ವಿದ್ಯಾರ್ಥಿಗಳು ಸರ್ಕಾರಿ ವೈದ್ಯಕೀಯ ಸೀಟ್ ಪಡೆದರೆ 5000 ನೀಡುವುದಾಗಿ ಕೆ.ಆರ್.ಶೋಭಾ ಮತ್ತು ಎಚ್.ಜಿ. ಪುರುಷೋತ್ತಮ್ ಶಿಕ್ಷಕ ದಂಪತಿಗಳು ಘೋಷಿಸಿದರು. ಶಿಕ್ಷಕ ಜಿ.ಎಚ್. ಪ್ರಹ್ಲಾದ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ನ್ಯಾಮತಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಂತೋಷ್, ಪ್ರಾ.ಶಾ.ಶಿ. ನ್ಯಾಮತಿ ಘಟಕದ ಅಧ್ಯಕ್ಷೆ ಸುಧಾ ಮಾತನಾಡಿದರು. ಈ ಸಂದರ್ಭದಲ್ಲಿ ಯುವ ಘಟಕದ ಅಧ್ಯಕ್ಷ ರಾಜೇಶ್, ಬಿ.ಆರ್.ಪಿ.ಗಳಾದ ಜಿ.ಕೆ.ಅರುಣ್‌ಕುಮಾರ್, ಎಸ್.ಸುನಿಲ್, ಎ.ಪಿ. ಶಾಂತರಾಜ್, ಎಚ್.ಜಿ. ಪುರುಷೋತ್ತಮ್, ಸುರೇಶ್, ನಿವೃತ್ತ ಬಿಇಒ ಪತ್ನಿ ವಾಣಿ ಮತ್ತು ಸಮಾಜದ ನೌಕರರ ವರ್ಗದವರು ಉಪಸ್ಥಿತರಿದ್ದರು.

ಬೇಳೂರು ಬಗ್ಗೆ ಅವಹೇಳನಕಾರಿ ಹೇಳಿಕೆ ಖಂಡನೆ

ಹೊಸನಗರ: ಇತ್ತೀಚೆಗೆ ನಡೆದ ಲೋಕಸಭೆ ಹಾಗೂ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋತಿ ರಬಹುದು ಬಿಜೆಪಿಯವರು ಬಾವನೆಗಳ ಮೂಲಕ ಹಾಗೂ ಹಣದ ಹೊಳೆಯ ಮೂಲಕ ಚುನಾ ವಣೆಯಲ್ಲಿ ಗೆದ್ದಿರ ಬಹು ದು ಅದರೆ ಹೊಸನಗರ-ಸಾಗರ ಶಾಸ ಕರ ಬಗ್ಗೆ ಬಿಜೆಪಿಯವರ ಹಗುರ ಮಾತು ಬೇಡ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಮೌಳಿ ಗೌಡರವರು ಹೇಳಿದರು.

ಅವರು ಹೊಸನಗರ ಕಾಂಗ್ರೆಸ್ ಕಛೇರಿಯಲ್ಲಿ ಸುದ್ದಿಗೊಷ್ಠಿ ನಡೆಸಿ ಮಾತನಾಡಿದರು. ಕಾಂಗ್ರೆಸ್ ಪಕ್ಷ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದು ಒಂದು ವರ್ಷ ಕಳೆದಿದೆ ಚುನಾವಣೆಯಲ್ಲಿ ಘೋಷಿಸಿದ ಹಾಗೇ 5 ಗ್ಯಾರಂಟಿಗಳನ್ನು ಜನರಿಗೆ ನೀಡಿದೆ ಅದರೆ ಲೋಕಸಭೆ ಚುನಾವಣೆ ಹಾಗೂ ವಿದಾನ ಪರಿಷತ್ ಚುನಾವಣೆಯಲ್ಲಿ ಮೋದಿಯವರ ಭಾವ ಚಿತ್ರ ತೋರಿಸಿ ಗೆಲುವು ಸಾಧಿಸಿದ್ದಾರೆ ಚುನಾವಣೆಯಲ್ಲಿ ಸೋಲು ಗೆಲುವು ಶಾಶ್ವತವಲ್ಲ ಅದರೆ ಚುನಾವಣೆಯ ಸೋಲಿಗೆ ನಮ್ಮ ಸಾಗರ-ಹೊಸನಗರ ಶಾಸಕರಾದ ಬೇಳೂರು ಗೋಪಾಲಕೃಷ್ಣರವರನ್ನೂ ಸೋಲಿಗೆ ಗುರಿಯಾಗಿಸಿ ಬಿಜೆಪಿಯವರು ಹೊಣೆ ಮಾಡುತ್ತಿರುವುದು ಸರಿಯಲ್ಲ ಎಂದರು.

ಶಾಸಕರಾದ ಬೇಳೂರು ಗೋಪಾಲಕೃಷ್ಣರವರು ಲೋಕಸಭೆ ಚುನಾವಣೆ ಘೋಷಣೆಯಾದ ದಿನದಿಂದ ಹಗಲಿರೂಳು ಪ್ರತಿ ತಾಲ್ಲೂಕಿನ ಬೂತ್ ಗಳಿಗೆ ಬೇಟಿ ನೀಡಿ ಕಾರ್ಯಕರ್ತರನ್ನು ಮತದಾರರನ್ನು ಮಾತನಾಡಿಸಿ ಮತ ಪಡೆಯುವ ಪ್ರಯತ್ನ ಮಾಡಿದ್ದಾರೆ. ಶಾಸಕರಾದ ಒಂದು ವರ್ಷದಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಮಾಡಿದ್ದಾರೆ ಸಾಕಷ್ಟು ರಸ್ತೆ ಅಭಿವೃದ್ಧಿ ಮಾಡಿದ್ದಾರೆ ಕೆರೆ ಅಭಿವೃದ್ಧಿಗೆ ಸಣ್ಣ ನೀರಾವರಿ ಇಲಾಖೆಯಿಂದ 12ಕೋಟಿ ರೂಪಾಯಿ ತಂದಿದ್ದಾರೆ ಸಾಕಷ್ಟು ಶಾಲೆಗಳನ್ನು ರಿಪೇರಿ ಮಾಡಿಸಿದ್ದಾರೆ ಶಾಲೆಗಳಿಗೆ ಹೊಸ ಬಿಲ್ಡಿಂಗ್ ಮಾಡಿಸಲು ಪ್ರಯತ್ನಿಸಿದ್ದಾರೆ ಎಂದರು.

ಈಗ ನಾವು ಸೋತಿರಬಹುದು ಮುಂದಿನ ದಿನದಲ್ಲಿ ಬೂತ್ ಮಟ್ಟದಲ್ಲಿ ಶಾಸಕರ ನೇತೃತ್ವದಲ್ಲಿ ಪಕ್ಷವನ್ನು ಕಟ್ಟುವ ಕೆಲಸ ಮಾಡಿ ಮುಂದೆ ಬರುವ ಎಲ್ಲ ಚುನಾವಣೆಯಲ್ಲಿಯೂ ನಮ್ಮ ಪ್ರಬಾವ ಏನೆಂದು ತಿಳಿಸುವ ಕಾರ್ಯಕ್ಕೆ ಮುಂದಾಗುತ್ತೇವೆಂದರು.

ಈ ಪತ್ರಿಕಾ ಘೋಷ್ಠಿಯಲ್ಲಿ ಎಂ.ಪಿ ಸುರೇಶ್, ಪ್ರಬಾಕರ್‌ರಾವ್, ಪ್ರಧಾನ ಕಾರ್ಯದರ್ಶಿ ಸದಾಶಿವ ಶ್ರೇಷ್ಠಿ, ಶಾಸಕರ ಆಪ್ತ ಕಾರ್ಯದರ್ಶಿ ಸಣ್ಣಕ್ಕಿ ಮಂಜು, ಗಗ್ಗ ಬಸವರಾಜ್, ಟೌನ್ ಘಟಕದ ಅಧ್ಯಕ್ಷ ಗುರುರಾಜ್, ಅಶೋಕಗೌಡ, ಅಶ್ವಿನಿಕುಮಾರ್, ಚನ್ನ ಬಸಪ್ಪ, ಚಂದ್ರಮೂರ್ತಿ, ವೇದಂತಪ್ಪ ಗೌಡ, ಇಕ್ಬಾಲ್, ಗುರು ಜಯನಗರ, ಒಬೆದುಲ್ಲ, ಭದ್ರಪ್ಪ ಗೌಡ, ಇನ್ನೂ ಮುಂತಾದವರು ಉಪಸ್ಥಿತರಿದ್ದರು.

ಮರಗಿಡವಿಲ್ಲದೆ ಮನುಷ್ಯ ಬದುಕಲಾರ

ಶಿಕಾರಿಪುರ: ಮನುಷ್ಯನ ಸಹಕಾರವಿಲ್ಲದೆ ಮರಗಿಡಗಳು ನೂರಾರು ವರ್ಷಗಳ ಕಾಲ ಸುದೀರ್ಘವಾಗಿ ಬದುಕಬಲ್ಲದು ಆದರೆ ಮರಗಿಡವಿಲ್ಲದೆ ಮನುಷ್ಯ ಕ್ಷಣ ಕಾಲ ಬದುಕಲು ಸಾಧ್ಯವಿಲ್ಲ ಎಂದು ಇಲ್ಲಿನ ಕುಮದ್ವತಿ ಪ್ರೌಢಶಾಲೆ ಮತ್ತು ಮೈತ್ರಿ ಪ್ರಾಥಮಿಕ ಶಾಲಾ ಪ್ರಾಚಾರ್ಯ ವಿಶ್ವನಾಥ ಪಿ ತಿಳಿಸಿದರು.

ಪಟ್ಟಣದ ಭವಾನಿರಾವ್ ಕೇರಿಯಲ್ಲಿನ ಕುಮದ್ವತಿ ಪ್ರೌಢ ಶಾಲೆ ಮತ್ತು ಮೈತ್ರಿ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪರಿಸರ ಮನುಷ್ಯನ ಬದುಕಿಗೆ ಅತ್ಯಂತ ಮಹತ್ವವಾಗಿದ್ದು, ಶುದ್ದ ಗಾಳಿ,ಕುಡಿಯಲು ನೀರು ಪರಿಸರದ ಬಹು ದೊಡ್ಡ ಕೊಡುಗೆಯಾಗಿದೆ ಎಂದ ಅವರು ಸ್ವಾರ್ಥಕ್ಕಾಗಿ ಪರಿಸರದ ವಿರುದ್ದದ ದೌರ್ಜನ್ಯದಿಂದಾಗಿ ಕುಡಿಯುವ ನೀರಿನ ಸಮಸ್ಯೆ ವಿಪರೀತವಾಗಿದ್ದು ಈ ದಿಸೆಯಲ್ಲಿ ಪರಿಸರವನ್ನು ಸ್ವಚ್ಛವಾಗಿಸಿ, ಮಾಲಿನ್ಯದಿಂದ ಸುರಕ್ಷಿತವಾಗಿರಿಸುವ ಉದ್ದೇಶಕ್ಕಾಗಿ ಹಾಗೂ ಗಾಳಿಯನ್ನು ಶುದ್ದೀಕರಿಸಲು ಭೂಮಿಯನ್ನು ಹಸಿರುಗೊಳಿಸ ಬೇಕಾದ ಅನಿವಾರ್ಯತೆಯಿದ್ದು ಹೆಚ್ಚಿನ ಗಿಡ ಮರಗಳನ್ನು ಬೆಳೆಸುವ ಮೂಲಕ ಮಾತ್ರ ಪರಿಹಾರ ಸಾಧ್ಯ ಎಂದು ಅವರು ತಿಳಿಸಿದರು.

ಆರೋಗ್ಯಯುತ ಜೀವನಕ್ಕೆ ಪರಿಸರವನ್ನು ಮಾಲಿನ್ಯದಿಂದ ಮುಕ್ತವಾಗಿಡಲು ಇತರರನ್ನು ಪ್ರೇರೇಪಿಸಬೇಕು. ಪ್ರಕೃತಿಯು ಮನುಷ್ಯನಿಲ್ಲದೆ ಇರಬಹುದು ಆದರೆ ಮನುಷ್ಯ ಪ್ರಕೃತಿಯಿಲ್ಲದೆ ಕ್ಷಣ ಕಾಲ ಬದುಕಲು ಸಾಧ್ಯವಿಲ್ಲ.ವರ್ಷದಿಂದ ವರ್ಷಕ್ಕೆ ತೀವ್ರವಾಗಿ ಹೆಚ್ಚುತ್ತಿರುವ ಉಷ್ಣತೆಗೆ ಅರಣ್ಯದ ನಾಶ ಪ್ರಮುಖ ಕಾರಣವಾಗಿದ್ದು ಗಿಡ ಮರ ಬೆಳೆಸಿ ಅಂತರ್ಜಲ ಹೆಚ್ಚಿಸಲು ಎಲ್ಲರೂ ಪ್ರಯತ್ನಿಸಬೇಕು.ಎಂದು ತಿಳಿಸಿದರು.

ವಿಜ್ಞಾನ ಶಿಕ್ಷಕಿ ವಿದ್ಯಾ ಕೋರಿ ಶೆಟ್ಟರ್ ಮಾತನಾಡಿ,ಭೂಮಿ ಮಾತ್ರ ಜೀವಿಗಳನ್ನು ಹೊಂದಿರುವ ಏಕೈಕ ಗ್ರಹ. ಭೂಮಿಯಲ್ಲಿನ ಜೀವಿಗಳ ಉಗಮ,ವಿಕಾಸ,ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವುದು ಪಂಚಭೂತ ಗಳಿಂದ ನಿರ್ಮಿತವಾದ ನಮ್ಮ ಸುತ್ತಲಿನ ವಾತಾವರಣ,ಪರಿಸರವಾಗಿದ್ದು, ಅಭಿವೃದ್ಧಿ,ಹಣದ ಬೆನ್ನತ್ತಿ ಓಡುವ ಈ ಓಟದಲ್ಲಿ,ಪ್ರಕೃತಿ, ಪರಿಸರದ ಬಗೆಗಿನ ನಿರ್ಲಕ್ಷ್ಯದಿಂದ ನಾಶವಾಗುತ್ತಿದೆ.ಜೀವವೈವಿಧ್ಯತೆಯನ್ನು, ನೈಸರ್ಗಿಕ ಸೌಂದ ರ್ಯ, ತನ್ಮಯತೆಯನ್ನು ಕಳೆದುಕೊಳ್ಳು ತ್ತಿದೆ ಎಂದು ವಿಷಾಧಿಸಿದರು. ಉಪ ಪ್ರಾಚಾರ್ಯ ಪ್ರಶಾಂತ ಕುಬುಸದ ಮಾತನಾಡಿದರು. ಪ್ರತಿಯೊಬ್ಬರು ಪರಿಸರದ ಉಳಿವಿಗಾಗಿ ಶ್ರಮಿಸ ಬೇಕು. ಪ್ರತಿಯೊಂದು ಕುಟುಂಬವೂ ಒಂದೊಂ ದು ಗಿಡವನ್ನು ನೆಡುವುದರ ಮೂಲಕ ಗಿಡ ಮರದ ಸಂಖ್ಯೆಯನ್ನು ಹೆಚ್ಚಿಸಬೇಕು.ಶುಭ ಕಾರ್ಯಕ್ರಮದ ಸವಿ ನೆನಪಿಗಾಗಿ ಗಿಡ ಮರಗಳನ್ನು ನೆಡುವುದರ ಮೂಲಕ ಪರಿಸರ ಸ್ನೇಹಿಯಾಗಿ ಆಚರಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮಕ್ಕಳ ದಾಖಲಾತಿ ಹೆಚ್ಚಳಕ್ಕೆ ಯೋಜನೆ ಜಾರಿ

ಆನವಟ್ಟಿ: ಇಲ್ಲಿನ ನೇರಲಿಗೆ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸುವ ಸಲುವಾಗಿ ಶಿಕ್ಷಕರು ಮಗು ನಿಮ್ಮದು, ಶೈಕ್ಷಣಿಕ ಜವಾಬ್ದಾರಿ ನಮ್ಮದು ಎಂಬ ವಿಶಿಷ್ಠ ಯೋಜನೆಯೊಂದನ್ನು ರೂಪಿಸಿದ್ದಾರೆ.

ಪೋಷಕರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಸೇರಿಸುವಂತೆ ಪ್ರೇರೇಪಿಸಲು ಸರ್ಕಾರ ನೀಡುವ ಸವಲತ್ತುಗಳ ಜೊತೆಗೆ ಶಿಕ್ಷಕರು ತಮ್ಮ ಸ್ವಂತ ಹಣದಲ್ಲಿ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಬೇಕಾಗುವಷ್ಟು ಪೆನ್ನು, ನೋಟ್‌ಬುಕ್, ಕಲಿಕಾ ಸಾಮಗ್ರಿ, ಬ್ಯಾಗ್ ಕೊಡುತ್ತಿದ್ದಾರೆ. ಸರ್ಕಾರ ನೀಡುವ ಸಮವಸ್ತ್ರ ಬಿಟ್ಟು ಒಂದು ಜೊತೆ ಪ್ರತ್ಯೇಕ ಕಲರ್ ಸಮವಸ್ತ್ರವನ್ನು ಒಂದನೇ ತರಗತಿಗೆ ದಾಖಲಾಗುವ ಪ್ರತಿ ಮಗುವಿಗೆ ನೀಡುತ್ತಿದ್ದಾರೆ. ಶಾಲೆಯಲ್ಲಿ ಒಂದನೇ ತರಗತಿಯಿಂದ ಏಳನೇ ತರಗತಿವರೆಗೆ 86 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

ಕಳೆದ ವರ್ಷ ಶಾಲೆಗೆ ಒಂದನೇ ತರಗತಿಗೆ 7 ವಿದ್ಯಾರ್ಥಿಗಳು ದಾಖಲಾಗಿದ್ದರು. ಈ ವರ್ಷ ಶಿಕ್ಷಕರು ಕೈಗೊಂಡ ಹೊಸ ಯೋಜನೆಯಿಂದ ಪ್ರೇರಣೆಗೊಂಡು 12 ಮಂದಿ ದಾಖಲಾಗಿದ್ದಾರೆ. ಜ ತಿಂಗಳ ಕೊನೆವರೆಗೂ ದಾಖಲಾತಿಗೆ ಅವಕಾಶವಿರುವುದರಿಂದ ಮಕ್ಕಳ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯನ್ನು ಶಿಕ್ಷಕರು ಹೊಂದಿದ್ದಾರೆ.

ಎನ್‌ಎಸ್‌ಎಸ್ ಗಾಂಧೀಜಿಯವರ ಕನಸಿನ ಕೂಸು: ಶ್ರೀ

ಹೊನ್ನಾಳಿ: ರಾಷ್ಟ್ರೀಯ ಸೇವಾ ಯೋಜನೆಯಿಂದ ವಿದ್ಯಾರ್ಥಿಗಳ ಭವಿಷ್ಯದ ಜೀವನಕ್ಕೆ ನಾಂದಿಯಾಗಲಿದೆ ಎಂದು ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಜಿಗಳು ಹೇಳಿದರು.

ತಾಲ್ಲೂಕಿನ ಹತ್ತೂರಿನ ಶ್ರೀತಿಮ್ಮೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀಮೃತ್ಯುಂಜಯ ಶಿವಾಚಾರ್ಯ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜಿನವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸ್ವಚ್ಛ ಗ್ರಾಮ ಸದೃಢ ಭಾರತ ಎಂಬ ಶೀರ್ಷಿಕೆಯಡಿಯಲ್ಲಿ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಬಿರಾರ್ಥಿಗಳು ತಮಗೆ ಸಿಕ್ಕಿರುವ 7 ದಿನಗಳ ಕಾಲಾವಕಾಶವನ್ನು ಗ್ರಾಮದ ಅಭಿವೃದ್ಧಿಗಾಗಿ ಪಣತೊಟ್ಟು ಸಮಯವನ್ನು ವ್ಯರ್ಥ ಮಾಡದೇ ಈ ಶಿಬಿರದ ಮೂಲಕ ಗ್ರಾಮದಲ್ಲಿ ಎನ್.ಎಸ್.ಎಸ್. ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ದೇಶಕ್ಕೆ ಕೊಡುಗೆ ನೀಡಬೇಕೆಂದು ಕರೆ ನೀಡಿದರು. ಗ್ರಾಮಗಳಲ್ಲಿ ಸಾಮರಸ್ಯದ ಮತ್ತು ಭಾವನಾತ್ಮಕ ಜೀವನವನ್ನು ಕಾಣಬಹುದು. ರಾಷ್ಟ್ರೀಯ ಸೇವಾ ಯೋಜನೆಯು ಮಹಾತ್ಮಾ ಗಾಂಧೀಜಿಯವರ ಕನಸಿನ ಕೂಸಾಗಿದ್ದು ಗ್ರಾಮಗಳ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿ ಸಾಧ್ಯವೆಂದು ಮನಗಂಡಿದ್ದರು. ಈ ನಿಟ್ಟಿನಲ್ಲಿ ಶಿಬಿರಗಳನ್ನು ಗ್ರಾಮೀಣ ಪ್ರದೇಶಗಳಲ್ಲೇ ಆಯೋಜನೆ ಮಾಡಲಾಗುತ್ತದೆ. ವಿದ್ಯಾರ್ಥಿಗಳು ವಿಶ್ವ ಕುಟುಂಬಿಗಳಾಗಬೇಕು. ಎಲ್ಲರೂ ನನ್ನವರು ಎಂದು ಭಾವಿಸಿದಾಗ ಮಾತ್ರವೇ ಸಾಮರಸ್ಯದ ಜೀವನ ಸಾಧ್ಯವೆಂದು ದೃಷ್ಟಾಂತಗಳ ಮೂಲಕ ಉದಾಹರಿಸಿದರು. ದಾವಣಗೆರೆ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಸಂಯೋಜನಾಧಿಕಾರಿ ಡಾ. ಅಶೋಕ್ ಕುಮಾರ್ ವಿ.ಪಾಳೇದ ಮಾತನಾಡಿ ಹಿರೇಕಲ್ಮಠ ಮತ್ತು ಇಲ್ಲಿನ ಶಾಲಾ-ಕಾಲೇಜುಗಳ ಬಗ್ಗೆ ತಮಗೆ ವಿಶೇಷ ಗೌರವವಿದ್ದು ಇಲ್ಲಿಯ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು 1 ಎನ್.ಎಸ್.ಎಸ್. ಘಟಕವಿದ್ದುದನ್ನು 2 ಘಟಕಗಳಿಗೆ ಅನುಮತಿ ನೀಡಲಾಗಿದ್ದು ಒಟ್ಟು 100 ವಿದ್ಯಾರ್ಥಿಗಳು ಎನ್.ಎಸ್.ಎಸ್.ನ ಲಾಭವನ್ನು ಪಡೆದುಕೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು. ದಾವಣಗೆರೆಯಲ್ಲಿ ಇದೇ ವರ್ಷ ಪ್ರಥಮ ಬಾರಿಗೆ ರಾಜ್ಯಮಟ್ಟದ ಯುವ ಜನ ಮೇಳವನ್ನು ಜೂನ್ 15 ರಿಂದ ನಡೆಸಲು ಅನುಮತಿ ಸಿಕ್ಕಿದ್ದು ಇದನ್ನು ವಿದ್ಯಾರ್ಥಿಗಳು ಸದುಪಯೋಗಪಡೆದುಕೊಳ್ಳಬೇಕೆಂದು ತಿಳಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಪ್ರವೀಣ್ ದೊಡ್ಡಗೌಡ್ರು ಮಾತನಾಡಿದರು. ಕಾರ್ಯಕ್ರಮದಲ್ಲಿ ತಿರುಮಲ ದೇವಸ್ಥಾನದ ಧರ್ಮದರ್ಶಿ ಎಂ.ಈಶ್ವರಪ್ಪ, ಮಾಜಿ ಜಿಪಂ ಸದಸ್ಯ ಎ.ಬಿ.ನೇಮಿಚಂದ್ರಪ್ಪ, ಗ್ರಾಪಂ ಸದಸ್ಯ ಬಿ.ಎಂ.ಮೇಘರಾಜ್, ಜಿ.ಮಹೇಶ್ವರಪ್ಪ, ಡಿ.ಶೇಖರಪ್ಪ, ಎಂ.ಬಿ.ಬಸವರಾಜ್, ಕೆ.ಇ.ಪರಮೇಶ್, ಎಚ್.ಪಾಲಾಕ್ಷಪ್ಪ, ಎನ್.ಎಸ್.ಎಸ್. ಘಟಕ 1ರ ಕಾರ್ಯಕ್ರಮಾಧಿಕಾರಿ ಪ್ರಕಾಶ್ ನರಗಟ್ಟಿ, ಉಪನ್ಯಾಸಕರಾದ ಡಾ.ನವೀನ್ ಕುಮಾರ್, ಡಾ,ಶರತ್, ಸಂಗೀತಾ ಬಂಗೇರ, ಸತೀಶ್, ಶಾಂತರಾಜ್, ಹೇಮಂತ್, ಶಿಬಿರದ ಸಹಾಯಕ ಎನ್. ಲೋಕೇಶ್ವರ್ ಮತ್ತಿತರರು ಉಪಸ್ಥಿತರಿದ್ದರು.

ಮಲೆನಾಡಿನಲ್ಲಿ ಆವರಿಸುತ್ತಿದೆ ಜಾಲಿ ಮರ

ಶಿರಾಳಕೊಪ್ಪ: ಶ್ರೀಗಂಧ ಬೆಳೆಯುತ್ತಿದ್ದ ಮಲೆನಾಡಿನ ಭೂ ಪ್ರದೇಶದಲ್ಲಿ ಈಗ ಜಾಲಿ ಗಿಡ ವ್ಯಾಪಕವಾಗಿ ಬೆಳೆಯುತ್ತಿದೆ.

ಉತ್ತರ ಕರ್ನಾಟಕದ ಜಿಲ್ಲೆಗಳ ಬಯಲು ಪ್ರದೇಶದಲ್ಲಿ ನದಿದಡ, ಹಳ್ಳಕೊಳ್ಳ, ಕೋಟೆ, ಕಂದಕ ಸೇರಿದಂತೆ ಖಾಲಿ ಪ್ರದೇಶದಲ್ಲಿ ನೀರಿಲ್ಲದೆ, ಸಂರಕ್ಷಣೆಯಿಲ್ಲದೆ ಬರಡು ಭೂಮಿಯಲ್ಲಿ ಜಾಲಿಗಿಡ ಬೆಳೆಯುತ್ತಿತ್ತು. ಇದು ಭೂಮಿಯ ಆಳಕ್ಕೆ ತನ್ನ ಬೇರನ್ನು ಚಾಚುವ ಮೂಲಕ ನೀರು, ಪೋಷಕಾಂಶ ಹಾಗೂ ಲವಣಗಳನ್ನು ಇತರೆ ಸಸ್ಯಗಳಿಗೆ ಸಿಗದಂತೆ ಕಬಳಿಸುವ ಗುಣಲಕ್ಷಣ ಹೊಂದಿ ದೆ. ಶಿವಮೊಗ್ಗ ಜಿಲ್ಲೆಯ ಗಡಿಯನ್ನು ದಾಟಿ ಹಾವೇರಿ ಜಿಲ್ಲೆ ಪ್ರವೇಶಿಸುತ್ತಿದಂತೆ ಜಾಲಿ ಗಿಡಗಳು ಕಾಣಸಿಗುತ್ತಿದ್ದವು. ಆದರೀಗ ಒಂದು ಕಾಲದಲ್ಲಿ ಭತ್ತದ ಕಣಜವಾಗಿದ್ದ, ನೈಸರ್ಗಿಕವಾಗಿ ಶ್ರೀಗಂಧ ಬೆಳೆಯುತ್ತಿದ್ದ ಶಿಕಾರಿಪುರ ತಾಲ್ಲೂಕಿನ ವಿವಿಧೆಡೆ ಜಾಲಿ ಮರಗಳು ಬೆಳೆದು ನಿಂತಿವೆ. ಐತಿಹಾಸಿಕ ಬಳ್ಳಿಗಾವಿ ರಸ್ತೆಯ ಕೆರೆ ಏರಿಯಿಂದ ಹಿಡಿದು ಶಿರಾಳಕೊಪ್ಪ, ಉಡುಗಣಿ, ಶಿಕಾರಿಪುರದ ಹೆದ್ದಾರಿಯ ಇಕ್ಕೆಲಗಳಲ್ಲಿ ಜಾಲಿ ಮರಗಳನ್ನು ಕಾಣಬಹುದಾಗಿದೆ.

ಕಳೆದ ಏಪ್ರಿಲ್, ಮೇ ತಿಂಗಳ ಬೇಸುಗೆ ಅವಧಿಯಲ್ಲಿ ಮಲೆನಾಡಿನ ತಾಪಮಾನ ಈಗ 40 ಡ್ರಿಗ್ರಿ ದಾಟಿತ್ತು. ಅರಣ್ಯದಲ್ಲಿ ಈಗ ಕಾಡು ಜಾತಿಯ ಮರಗಳಾದ ನೇರಲು, ಹೆಬ್ಬಲಸು, ಮತ್ತಿ, ನಂದಿ, ಹುನಾಲು, ಬೀಟೆ, ದೇವದಾರು ಮಾಯವಾಗಿವೆ. ಹಸಿರು ಹೊದಿಕೆಯ ಹಾಸಿ ಭೂಮಿಯ ತಾಪಮಾನ ಹೆಚ್ಚಾಗದಂತೆ ಕಾಪಾಡುತ್ತಿದ್ದ ಹುಲ್ಲುಗಾವಲು ಈಗ ಕಾಣೆಯಾಗಿದೆ. ಭೂಮಿಯಲ್ಲಿ ಧಗೆ ಹೆಚ್ಚಾಗಿದೆ. ನವಿಲು, ಚಿರತೆ, ಮಂಗಗಳು ಆಹಾರ ಸಿಗದೇ ಕಾಡು ಬಿಟ್ಟು ನಾಡಿನತ್ತ ನುಗ್ಗುತ್ತಿವೆ. ಪರಿಸರದ ವ್ಯತ್ಯಾಸಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಲೆನಾಡು ಬರಡಾಗುತ್ತಿದೆಯೇ ಎಂಬ ಆತಂಕ ಮೂಡುತ್ತಿದೆ. ಆದಕಾರಣ ಪರಿಸರದಲ್ಲಿ ಸಮತೋಲನ ಕಾಯ್ದುಕೊ ಳ್ಳಲು ನೈಸರ್ಗಿಕ ಅರಣ್ಯ ಸಂರಕ್ಷಣೆ ಅಗತ್ಯ ಎಂದು ಪರಿಸರ ಕಾರ್ಯಕರ್ತ ಶ್ರೀಪಾದ ಬಿಚ್ಚುಗತ್ತಿ ತಿಳಿಸಿದ್ದಾರೆ. ಜಾಲಿಯು ಅನೇಕ ಪ್ರಭೇದಗಳನ್ನು ಒಳಗೊಂಡಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷ್ ಅಧಿಕಾರಿಗಳು ಭಾರತಕ್ಕೆ ಬರುವಾಗ ತಮ್ಮ ಹಡಗುಗಳಿಗೆ ಇಂಧನ ಪೂರೈಸಲು ಈ ಜಾಲಿಯ ಮರವನ್ನು ಆಶ್ರಯಿಸುತ್ತಿದ್ದರು. ಮೂಲತಃ ಇದು ದಕ್ಷಿಣ ಅಮೆರಿಕದ ಅಮೆಜಾನ್ ಕಾಡುಗಳಲ್ಲಿ ಕಂಡು ಬರುವ ಕ್ಯಾಕ್ಟಸ್ ಮುಳ್ಳು ಜಾತಿಯ ಸಸ್ಯ ಸಂಕುಲ.

ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಪೊಲೀಸ್ ಅಧಿಕಾರಿಗಳು ವಿಶೇಷವಾಗಿ ಕೆಲವೊಂದು ಆಯ್ದ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಕಾನೂನುಗಳ ಬಗ್ಗೆ ಅರಿವು ಮೂಡಿಸಿ ಸಮಾಜದಲ್ಲಿ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾನೂನು ಜಾಗೃತಿ ಕಾರ್ಯಕ್ರಮವನ್ನು ಪೊಲೀಸರು ರವಿವಾರ ನಡೆಸಿದರು.

ರಾಜಕಾಲುವೆ ಒತ್ತುವರಿ ತೆರವಿಗೆ ಶಾಸಕ ಸೂಚನೆ

ಚಿಕ್ಕಮಗಳೂರು: ಒತ್ತುವರಿಯಾಗಿರುವ ರಾಜಕಾಲುವೆ ತೆರವುಗೊಳಿಸಿ ಸುಗಮವಾಗಿ ನೀರು ಹರಿಯುವಂತೆ ಮಾಡಲು ಈಗಾಗಲೇ ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಶಾಸಕ ಹೆಚ್.ಡಿ ತಮ್ಮಯ್ಯ ತಿಳಿಸಿದರು.

ಅವರು ಇಂದು ನಗರದ ಹೌಸಿಂಗ್‌ಬೋರ್ಡ್‌ನ ಟೀಚರ್ ಕಾಲೋನಿಯಲ್ಲಿ ಮೊನ್ನೆ ಬಿದ್ದ ಭಾರಿ ಮಳೆ ನೀರು ವಸತಿ ಬಡಾವಣೆಗೆ ನುಗ್ಗಿ ಸಾರ್ವಜನಿಕರಿಗೆ ತೊಂದರೆ ಆಗಿದ್ದು, ಸ್ಥಳ ಪರಿಶೀಲಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಮಲೆನಾಡು-ಬಯಲು ಸೀಮೆ ಹೊಂದಿರುವ ಚಿಕ್ಕಮಗಳೂರು ನಗರದಲ್ಲಿ ಹೆಚ್ಚು ಮಳೆ ಬಂದಾಗ ತಗ್ಗು ಪ್ರದೇಶಗಳಿಗೆ ಮಳೆನೀರು ಬರುವುದು ಸಹಜವಾಗಿದ್ದು, ನೀರು ಸರಾಗವಾಗಿ ಹರಿದು ಹೋಗುವಂತೆ, ರಾಜಕಾಲುವೆ ನಿರ್ಮಾಣ ಮಾಡಿದ್ದು, ಅವುಗಳ ಒತ್ತುವರಿಯಾಗಿರುವುದರಿಂದ ಸಮಸ್ಯೆ ತಲೆದೋರಿದೆ ಎಂದು ಹೇಳಿದರು. ಈ ಸಂಬಂಧ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್,

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಸ್ಥಳಕ್ಕೆ ಬರುವಂತೆ ಸೂಚಿಸಿದ್ದು, ಸ್ಥಳ ಪರಿಶೀಲಿಸಿ ರಾಜಕಾಲುವೆ ಒತ್ತುವರಿಯಾಗಿದ್ದರೆ ತೆರವು ಮಾಡುವಂತೆ ಸೂಚನೆ ನೀಡಿದರು. ಕಂದಾಯ ಭೂಮಿಯಲ್ಲಿ ನಿವೇಶನಗಳಾಗಿ ಪರಿವರ್ತಿಸಿ ಮನೆಗಳನ್ನು ನಿರ್ಮಾಣ ಮಾಡಿದ್ದಾರೆ, ಅವರಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು ಈ ಭಾಗದ ನಗರಸಭೆ ಸದಸ್ಯರು ಹಾಗೂ ಶಾಸಕರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ರಾಜಕಾಲುವೆಯನ್ನು ದುರಸ್ತಿ ಮಾಡಿ ಸೇತುವೆ ಹಾಗೂ ಚಾನೆಲ್ ನಿರ್ಮಾಣ ಮಾಡಿ, ನೀರು ಸುಗಮವಾಗಿ ಹರಿಯುವಂತೆ ಮಾಡಲು ಆದೇಶಿಸಲಾಗಿದೆ ಎಂದ ಅವರು ತಹಸೀಲ್ದಾರ್ ಜೊತೆ ಸಹಾಯಕ ಸರ್ವೇಯರ್ ಆಗಮಿಸಿ ರಾಜಕಾಲುವೆ ಸರ್ವೇ ಮಾಡಿ ಮಾರ್ಕ್ ಮಾಡುತ್ತಾರೆ, ನಂತರ ರಾಜ್ಯ ಕಾಲುವೆಯಲ್ಲಿ ಶೌಚಾಲಯ, ಪೈಪ್‌ಲೈನ್ ಅಳವಡಿಸಿಕೊಂಡಿರುವವರಿಗೆ ನೋಟೀಸ್ ನೀಡಿ ತೆರವುಗೊಳಿಸುವಂತೆ ತಿಳಿಸಲಾಗುವುದು ಎಂದರು.

ಮುಂದಿನ ದಿನಗಳಲ್ಲಿ ನಗರದ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ಬಳಿಗೆ ಹೋಗಿ ವಿಶೇಷ ಅನುದಾನ ಬಿಡುಗಡೆ ಮಾಡುವಂತೆ ಕೋರಲಾಗುವುದು. ರಾಜಕಾಲುವೆ ಕಿರಿದಾಗಿ ನಿರ್ಮಾಣ ಮಾಡಲಾಗಿದ್ದು, ಈಗಿನ ಜನಸಂಖ್ಯೆಗೆ ಅನುಗುಣವಾಗಿ ಅಧಿಕಾರಿಗಳೊಂದಿಗೆ ಚರ್ಚಿಸಿ ನಿರ್ಮಾಣ ಮಾಡುವುದಾಗಿ ಭರವಸೆ ನೀಡಿದರು. ನಗರದ ಬಸವನಹಳ್ಳಿ ಕೆರೆ ತೂಬು ದುರಸ್ತಿ ಮಾಡಿ, ನೀರು ಸಂಗ್ರಹಣೆಗೆ ಮುಂದಾಗಿದ್ದು ಈ ಬಾರಿ ಮಳೆಗಾಲ ಮುಕ್ತಾಯವಾಗುವುದರೊಳಗೆ ಅಚ್ಚುಕಟ್ಟುದಾರರಿಗೆ ಅನುಕೂಲವಾಗುವಂತೆ ನೀರು ತುಂಬಿಸಲಾಗುವುದೆಂದು ಹೇಳಿದರು. ನಗರಸಭೆ ಸದಸ್ಯೆ ಕವಿತಾಶೇಖರ್ ಮಾತನಾಡಿ, ಕಳೆದ ಎರಡು ವರ್ಷದಿಂದ ಈ ರೀತಿ ನೀರು ವಸತಿ ಬಡಾವಣೆಗೆ ಹರಿದುಬರುತ್ತಿದೆ.

ಸಮಾಚಾರ ಸಣ್ಣದಲ್ಲ

ಮೋದಿ ಪ್ರಮಾಣ ವಚನ ವಿಶೇಷ ಪೂಜೆ

ಶೃಂಗೇರಿ: ಮೆಣಸೆಯ ನಿವಾಸಿಗಳೊಬ್ಬರು ಶೃಂಗೇರಿಯ ಉತ್ತರ ದಿಕ್ಕಿನ ರಕ್ಷಣಾ ದೇವತೆಯದಾದ ಶ್ರೀಕಾಳಿಕಾಂಬಾ ಅಮ್ಮನವರ ಸನ್ನಿಧಿಯಲ್ಲಿ ಇಂದು ಸತತ ಮೂರನೆಯ ಬಾರಿಗೆ ಪ್ರಧಾನ ಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಲಿರುವ ನರೇಂದ್ರ ಮೋದಿಯವರ ಹೆಸರಿನಲ್ಲಿ ಸಪ್ತಶತಿ ಪಾರಾಯಣ ಸೇವೆಯನ್ನು ಸಲ್ಲಿಸಿದರು.

ಬ್ಯಾಂಕ್ ಹುದ್ದೆಗಳಿಗೆ ನೇರ ಸಂದರ್ಶನ

ಚಿಕ್ಕಮಗಳೂರು: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ದಲ್ಲಿ ಐಸಿಐಸಿಐ ಬ್ಯಾಂಕ್‌ನಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇರ ಸಂದರ್ಶನವನ್ನು ಜೂ. 11 ರಂದು ಬೆಳಿಗ್ಗೆ 10. 30ಕ್ಕೆ ಏರ್ಪಡಿಸಲಾಗಿದೆ. 18-25 ವರ್ಷದ ಯಾವುದೇ ಪದವಿ ಪಡೆದ ಪುರುಷ, ಮಹಿಳಾ ಅಭ್ಯರ್ಥಿ ಗಳು ಭಾಗವಹಿಸಬಹುದು. ಪ್ರವೇಶ ಉಚಿತ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ದೂರವಾಣಿ ಸಂಖ್ಯೆ: 9945198500, 08262-295538 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

ನರೇಗಾ ಕಾಮಗಾರಿ ಪರಿಶೀಲನೆ

ಮೈಲಿಮನೆ: ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳಾದ ಡಾ.ಬಿ.ಗೋಪಾಲ್ ಕೃಷ್ಣ ಅವರು ತಾಲೂಕಿನ ಮೈಲಿಮನೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅಭಿವೃದ್ಧಿ ಪಡಿಸಿರುವ ಅಮೃತ ಸರೋವರ ಕಾಮಗಾರಿಯನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಜರಿದ್ದರು.

ವಕೀಲರ ಸಂಘದ ಅಧ್ಯಕ್ಷ ರಾಘವೇಂದ್ರ

ಮಂಗಳೂರು: ಮಂಗಳೂರು ವಕೀಲರ ಸಂಘದ ಅಧ್ಯಕ್ಷರಾಗಿ ಎಚ್.ವಿ.ರಾಘವೇಂದ್ರ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷ ಸುಜಿತ್ ಕುಮಾರ್, ಪ್ರಧಾನ

ಕಾರ್ಯದರ್ಶಿ ಶ್ರೀಧರ್ ಎಚ್, ಜತೆ ಕಾರ್ಯದರ್ಶಿ ಜ್ಯೋತಿ, ಖಜಾಂಚಿ ಗಿರೀಶ್ ಶೆಟ್ಟಿ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಶಾ ದೀಪ ಪೈ, ಎಚ್ .ಆಶಾ ನಾಯಕ್, ದೇವದಾಸ್ ರಾವ್, ಪುರುಶೋತ್ತಮ ಭಟ್ ಎಮ್. ಚಂದ್ರ ಹಾ ಸ ಕೊಟ್ಟಾರಿ, ಕುಶಾಲಪ್ಪ ಕೆ. ಪ್ರವೀಣ್ ಕುಮಾರ್ ಅಧ್ಯಪಾಡಿ, ಸುಮನಾ ಶರಣ್, ಕುಮಾರಿ ಆರತಿ, ಹರೀಶ್ ಕೆ. ರವಿಕುಮಾರ್ ವಿ. ರವಿರಾಜ್, ಶ್ರೀಗಿ ರೀಶ, ಕೃಷ್ಣಪ್ರಸಾದ್ ಕೆ.ವಿ. ಮಹಮ್ಮದ್ ಅಸ್ಗರ್ ಹಾಗೂ ಕುಮಾರಿ ಅಕ್ಷತಾ ಆಯ್ಕೆಯಾಗಿದ್ದಾರೆ.

ತೀವ್ರ ಕಡಲ್ಕೊರೆತ ಮನೆಗಳ ತೆರವಿಗೆ ಸೂಚನೆ

ಅಪಾಯದಲ್ಲಿ ಇರುವ ಮನೆ ಸ್ಥಳಾಂತರಕ್ಕೆ ಸೂಕ್ತ ಜಾಗದ ವ್ಯವಸ್ಥೆ | ನೀರು ಶೇಖರಣೆ ಆಗದಂತೆ ಮುನ್ನೆಚ್ಚರಿಕೆ ವಹಿಸಿ

ಮಂಗಳೂರು: ಸೋಮೇಶ್ವರ ಪುರಸಭಾ ವ್ಯಾಪ್ತಿಯ ಬಟ್ಟಪ್ಪಾಡಿ ಕಡಲ್ಕೊರೆತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅಪಾಯದಲ್ಲಿ ಇರುವ ಮನೆಗಳನ್ನು ಶೀಘ್ರ ಸ್ಥಳಾಂತರ ಮಾಡಿ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು, ಕಡಲ್ಕೊರೆತದಿಂದ ಹಾನಿ ಆಗಿದ್ದಲ್ಲಿ ಸಮರ್ಪಕ ವರದಿ ಸಲ್ಲಿಸುವಂತೆ ಸ್ಪೀಕರ್ ಯು.ಟಿ.ಖಾದರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಸೋಮೇಶ್ವರ ಪುರಸಭಾ ಕಚೇರಿಯಲ್ಲಿ ಭಾನುವಾರ ವಿವಿಧ ಇಲಾಖೆಗಳ ಅಧಿಕಾರಿಗಳ ಕರೆದು ನಡೆಸಿದ ಪ್ರಕೃತಿ ವಿಕೋಪ ನಿರ್ವಹಣಾ ಸಭೆಯಲ್ಲಿ ಮಾತನಾಡಿದರು.

ಈ ಸಂದರ್ಭ ಪ್ರತಿಕ್ರಿಯಿಸಿದ ಪುರಸಭೆ ಮುಖ್ಯಾಧಿಕಾರಿ ಮಾತನಾಡಿ, ಈಗಾಗಲೇ ಮನೆ ಕಳಕೊಂಡ ರಾಜೀವಿ ಅವರಿಗೆ ಮಂಜೂರಾದ ಐದು ಲಕ್ಷ ರೂ. ಪೈಕಿ ಒಂದು ಲಕ್ಷ ನೀಡಲಾಗಿದೆ. ಬಟ್ಟಪ್ಪಾಡಿ ಕಡಲ ಕಿನಾರೆ ಬಳಿ ಇರುವ ಬೀಪಾತುಮ್ಮ ಅವರ ಮನೆ ಅಪಾಯದಲ್ಲಿ ಇದ್ದು, ಸ್ಥಳಾಂತರಕ್ಕೆ ಒಪ್ಪುತ್ತಿಲ್ಲ. ಬಾಡಿಗೆ ಕೊಠಡಿ ಬೇಡ ಎನ್ನುತ್ತಾರೆ ಎಂದು ಸ್ಪೀಕರ್ ಖಾದರ್ ಅವರ ಗಮನ ಸೆಳೆದರು. ಈ ಬಗ್ಗೆ ಸ್ಪೀಕರ್ ಯುಟಿ

ಸೋಮೇಶ್ವರ ಪುರಸಭಾ ಕಚೇರಿಯಲ್ಲಿ ಭಾನುವಾರ ವಿವಿಧ ಇಲಾಖೆಗಳ ಅಧಿಕಾರಿಗಳ ಕರೆದು ನಡೆಸಿದ ಪ್ರಕೃತಿ ವಿಕೋಪ ನಿರ್ವಹಣಾ ಸಭೆಯಲ್ಲಿ ಮಾತನಾಡಿದರು.

ಖಾದರ್ ಪ್ರತಿಕ್ರಿಯಿಸಿ, ಚರಂಡಿ ಸಹಿತ ಕೆಲವು ಮೂಲ ಭೂತ ಸಮಸ್ಯೆಗಳಿಗೆ ಸಂಬಂಧಿಸಿ ಅಧಿಕಾರಿಗಳನ್ನೇ ತರಾಟೆಗೈದ ಅವರು, ಕಟ್ಟಡ, ಮನೆಗಳಿಗೆ ಹಾನಿಯಾಗದ ರೀತಿ ಕಾಮಗಾರಿ ಮಾಡಬೇಕು. ನೀರು ಶೇಖರಣೆ ಆಗದಂತೆ ಮುನ್ನೆಚ್ಚರಿಕೆ ವಹಿಸಿ ಚರಂಡಿ ಕಾಮಗಾರಿ ಮಾಡಿ ಚರಂಡಿಗೆ ಯಾರೂ ಆಕ್ಷೇಪ ಮಾಡುವಂತಿಲ್ಲ. ತುರ್ತು ಅಗತ್ಯ ಬರುವಲ್ಲಿ ಚರಂಡಿ ನಿರ್ಮಾಣ ಮಾಡಬೇಕಾಗಿದೆ. ಈ ಬಗೆ ಆಯಾ ಪುರಸಭೆ, ಪಂಚಾಯತ್ ಕಾರ್ಯ ನಿರ್ವಹಣೆ ಮಾಡಿ ವರದಿ ನೀಡಿ. ತಾ.ಪಂ. ವ್ಯಾಪ್ತಿಯ ಸಮಸ್ಯೆ ಗಳು ಇದ್ದರೆ ಇ.ಒ.ಅವರು ಈಗಲೇ ತಿಳಿಸಬೇಕು. ಗ್ರಾ.ಪಂ.ವ್ಯಾಪ್ತಿಯ ಸಮಸ್ಯೆ ಇದ್ದರೆ ಪಿಡಿಒ ರವರು ತಿಳಿಸಬೇಕು. ಈಗಲೇ ಪರಿಹಾರ ವ್ಯವಸ್ಥೆ ಮಾಡೋಣ. ಸಭೆ ಮುಗಿದ ಬಳಿಕ ಮತ್ತೆ ಸಮಸ್ಯೆ ಇದೆ ಎಂದು ಹೇಳಬೇಡಿ ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು. ಕಡಲ್ಕೊರೆತದ ಬಗ್ಗೆ ಇಂದೇ ಪರಿಶೀಲನೆ ಮಾಡಬೇಕು ಎಂದು ಸ್ಪೀಕರ್ ಯುಟಿ ಖಾದರ್ ಸೂಚನೆ ಮೇರೆಗೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯ ಬಳಿಕ ಬಟ್ಟಪ್ಪಾಡಿ ಕಡಲ್ಕೊರೆತ ಪ್ರದೇಶಗಳಿಗೆ ಭೇಟಿ ನೀಡಿದರು.

ಈ ಸಂದರ್ಭ ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್, ಕಂದಾಯ ನಿರೀಕ್ಷಕ ಪ್ರಮೋದ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸದಾಶಿವ ಉಳ್ಳಾಲ್, ಸೋಮೇಶ್ವರ ಪುರಸಭಾ ಮುಖ್ಯಾಧಿಕಾರಿ ಮತಾಡಿ, ತಾ.ಪಂ.ಇ.ಒ.ಶೈಲಾ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

> ಮೊದಲು ಅಪಾಯದಲ್ಲಿ ಇರುವ ಮನೆ ಸ್ಥಳಾಂತರಕ್ಕೆ ಸೂಕ್ತ ಜಾಗ ವ್ಯವಸ್ಥೆ ಮಾಡಬೇಕು. ಇದರ ಬಳಿಕ ಮನೆ ಸ್ಥಳಾಂತರ ಮಾಡಬೇಕು. ಬೀಪಾತುಮ್ಮ ರವರ ಮನೆ ಸಮೀಪ ಕಡಲ್ಕೊರೆತ ತಡೆಗೆ ಕಲ್ಲು ಹಾಕಿ ಪರಿಹಾರ ವ್ಯವಸ್ಥೆ ಮೊದಲೇ ಮಾಡಬೇಕಿತ್ತು. ಈ ಹಿಂದೆ ತಡೆಗೋಡೆ ಮಾಡಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಯಾವ ಅಧಿಕಾರಿಗಳು ಕೂಡ ಕೈಕಟ್ಟಿ ಕೂರುವುದು ಬೇಡ. ತಕ್ಷಣ ಎಲ್ಲಾ ಅಧಿಕಾರಿಗಳು ಬಟ್ಟಪ್ಪಾಡಿ ಕಡಲ್ಕೊರೆತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ಕ್ರಮಬದ್ಧವಾಗಿ ನಡೆಸಬೇಕು. ಕಡಲ್ಕೊರೆತ ತಡೆಗೆ ಕಾರ್ಯಯೋಜನೆ ಹಾಗೂ ಅಪಾಯದಲ್ಲಿ ಮನೆಗಳನ್ನು ಗುರುತಿಸಿ ವರದಿ ಒಪ್ಪಿಸಬೇಕು. ಅಪಾಯದಂಚಿನಲ್ಲಿರುವ ಮನೆ ಸ್ಥಳಾಂತರ ಶೀಘ್ರ ಆಗಬೇಕು.'
>
> **ಯು.ಟಿ.ಖಾದರ್**, ವಿಧಾನಸಭೆ ಸ್ಪೀಕರ್

ಮನೆ ನಿರ್ಮಾಣಕ್ಕೆ ಸ್ಥಳ ನಿಗದಿ

ಕಡಲ್ಕೊರೆತದಿಂದ ಮನೆ ಕಳಕೊಂಡವರಿಗೆ ಪರಿಹಾರ ಮಂಜೂರಾಗಿದೆ. ರಾಜೀವಿ ಅವರಿಗೆ ಐದು ಲಕ್ಷ ಮಂಜೂರಾಗಿದ್ದು, ಒಂದು ಲಕ್ಷ ನೀಡಲಾಗಿದೆ. ಮನೆ ನಿರ್ಮಾಣಕ್ಕೆ ಸ್ಥಳ ನಿಗದಿ ಆದ ಬಳಿಕ ಉಳಿದ ಮೊತ್ತ ನೀಡಲಾಗುವುದು ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

ದಲಿತ ಶೋಷಿತರ ಪರ ದನಿ ಪ್ರೊ.ಕೃಷ್ಣಪ್ಪ

ಚಿಕ್ಕಮಗಳೂರು: ದಲಿತರ ಸಮುದಾಯಗಳ ಮೇಲೆ ಶೋಷಣೆ ಹಿಂಸೆ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಿ, ಶೋಷಣೆಗೆ ಒಳಗಾದ ಎಲ್ಲಾ ಸಮುದಾಯವನ್ನು ಒಗ್ಗೂಡಿಸಿ ಅವರ ಏಳಿಗೆಗೆ ದುಡಿದ ಮಹಾನಾಯಕ ಪ್ರೊ.ಬಿ.ಕೃಷ್ಣಪ್ಪ ಎಂದು ಬಿಎಸ್‌ಪಿ ರಾಜ್ಯ ಕಾರ್ಯದರ್ಶಿ ಕೆ.ಬಿ.ಸುಧಾ ಹೇಳಿದರು.

ನಗರದ ಜಿಲ್ಲಾ ಬಿ.ಎಸ್.ಪಿ. ಕಚೇರಿಯಲ್ಲಿ ಮಹಾತ್ಮ ಪ್ರೊ.ಬಿ. ಕೃಷ್ಣಪ್ಪರವರ ಜನ್ಮದಿನದ ಅಂಗವಾಗಿ ಭಾವಚಿತ್ರಕ್ಕೆ ಭಾನುವಾರ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ದೇಶದ ದೀನ, ದಲಿತರ ಹಾಗೂ ಹಿಂದುಳಿದ ವರ್ಗದವರ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡು ಪಾಗಿಟ್ಟ ಧೀಮಂತ ನಾಯಕ ಪ್ರೊ.ಬಿ.ಕೃಷ್ಣಪ್ಪ. ಅವರ ಬದುಕು ಇಂದಿನ ಹೋರಾಟಕ್ಕೆ ಸ್ಫೂರ್ತಿದಾಯಕ. ಸರ್ವರ ಏಳಿಗೆ ಬಯಸುವ ಮೂಲಕ ಸಾಮಾಜಿಕ ಹಾಗೂ ರಾಜಕೀಯವಾಗಿ ಹಿಂದುಳಿದ ವರ್ಗದವರನ್ನು ಶೋಷಣೆಯಿಂದ ಮುಕ್ತಗೊಳಿಸಲು ಶ್ರಮಿಸಿದವರು ಎಂದರು.

ಎಲ್ಲಾ ಕ್ಷೇತ್ರಗಳಲ್ಲಿ ತಮ್ಮದೇ ಪ್ರಭಾವ ಬೀರಿದ್ದ ಅವರು ಬಡವರ, ಕೃಷಿಕರ ಹಾಗೂ ಕೂಲಿ ಕಾರ್ಮಿ ಕರ ಧ್ವನಿಯಾಗಿ ಸದಾ ಹೋರಾಟ ಮಾಡುತ್ತಾ ಬಂದಿದ್ದು ಇಂದಿನ ಎಲ್ಲಾ ಹೋರಾಟಗಾರರಿಗೆ ಅವರು ಪ್ರೇರಣೆಯಾಗಿದ್ದು. ಅವರ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕಿದೆ ಎಂದು ಕಿವಿಮಾತು ಹೇಳಿದರು. ದೂರದೃಷ್ಟಿಕೋನ ಉಳ್ಳವರಾಗಿದ್ದ ಕೃಷ್ಣಪ್ಪನವರು ಜನರ ಏಳಿಗೆಗಾಗಿ ನಿರಂತರ ಕೆಲಸ ಮಾಡಿದ ವರು. ಹೋರಾಟದ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಾ ಶೋಷಣೆಯಿಂದ ಮುಕ್ತವಾಗಬಹುದು ಎಂಬ ನಂಬಿಕೆಯಿಂದ ಬದುಕಿದವರು. ಅವರ ಜೀವನ ದಾರಿಯೇ ಇಂದಿನ ಹೋರಾಟಗಾರರಿಗೆ ದಾರಿದೀ ಪ ಎಂದು ಹೇಳಿದರು.

ಬಿಎಸ್‌ಪಿ ಜಿಲ್ಲಾಧ್ಯಕ್ಷ ಕೆ.ಟಿ.ರಾಧಾಕೃಷ್ಣ ಮಾತನಾಡಿ ಶೋಷಿತ ಸಮುದಾಯಗಳ ಬದುಕಿನಲ್ಲಿ ಸ್ವಾಭಿ ಮಾನದ ಹಣತೆ ಹಚ್ಚಿದವರು ದಸಂಸ ಸ್ಥಾಪಕ ಪ್ರೊ.ಬಿ.ಕೃಷ್ಣಪ್ಪ. ಡಾ.ಬಿ.ಆರ್.ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳಲ್ಲಿ ನಂಬಿಕೆಯಿಟ್ಟಿದ್ದ ಅವರು ಶೋಷಿತ ಸಮುದಾಯಗಳ ಪ್ರಗತಿಗೆ ಸಾಮಾಜಿಕ ಚಳುವಳಿ ರೂ ಪಿಸಿ ಸ್ವಾಭಿಮಾನದ ಸಂಕೇತವಾದವರು ಎಂದು ಸ್ಮರಿಸಿದರು. ಮೌಢ್ಯಗಳನ್ನು ಮುಂದಿಟ್ಟುಕೊಂಡು ದಲಿತರಿಗೆ ಅನ್ಯಾಯದ ಆಡಿದ ಪುರೋಹಿತಶಾಹಿಗಳ ವಿರುದ್ಧ ಸೆಟೆದು ನಿಂತು ದಲಿತರಲ್ಲಿ ಜಾಗೃತಿ ಮೂಡಿಸಿದ ಮಹಾಚೇತನ ಬಿ.ಕೃಷ್ಣಪ್ಪ. ಅವರ ಆಚಾರ-ವಿಚಾ ರಗಳನ್ನು ನೆನಪು ಮಾಡಿಕೊಳ್ಳುವುದೇ ನಿಜವಾಗಿಯೂ ಅವರಿಗೆ ನೀಡುವ ದೊಡ್ಡ ಗೌರವ ಎಂದರು. ಉಡುಪಿ- ಚಿಕ್ಕಮಗಳೂರು ಲೋಕಸಭಾ ಸಂಯೋಜಕ ಪಿ.ಪರಮೇಶ್ವರ್, ಸರ್ ಕಾರ್ಯಕ್ರಮ ವನ್ನು ಉದ್ದೇಶಿಸಿ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಕೆ.ಎಸ್. ಮಂಜುಳಾ, ಅಸೆಂಬ್ಲಿ ಉಪಾಧ್ಯಕ್ಷರಾದ ಸಿದ್ದಯ್ಯ, ಗಿರೀಶ್, ಶಂಕರ್, ಸರಸ್ವತಿ, ಪ್ರಧಾನ ಕಾರ್ಯದರ್ಶಿ ಆರ್. ವಸಂತ್, ಖಜಾಂಚಿ ಟಿ.ಎಚ್.ರತ್ನ ಉಪಸ್ಥಿತರಿದ್ದರು.

ರೋಟರಿ ಸಿಟಿ ಸಂಸ್ಥೆಗೆ ಪ್ಲಾಟಿನಂ ಪ್ಲಸ್ ಪ್ರಶಸ್ತಿ

ಮಂಗಳೂರು: ರೋಟರಿ ಜಿಲ್ಲಾ 3181 ರ ಆಡಳಿತ ಸಮಿತಿಯ ಆಶ್ರಯದಲ್ಲಿ ರೋಟರಿ ಜಿಲ್ಲಾ ಮಟ್ಟದ ವಾರ್ಷಿಕ ಪ್ರಶಸ್ತಿ ಪ್ರಧಾನ 'ಜೈತ್ರ ಯಾತ್ರಾ 2024' ಸಮಾರಂಭವು ರೋಟರಿ ಜಿಲ್ಲಾ 3181 ರ ಗವರ್ನರ್‌ರಾದ ಕೇಶವ್ ನೇತೃತ್ವದಲ್ಲಿ ಮತ್ತು ಅಧ್ಯಕ್ಷತೆಯಲ್ಲಿ ಮೈಸೂರ್ ನಗರದ ಮೈಸೂರ್ ಯುನಿಯನ್ ಸಭಾಂಗಣದಲ್ಲಿ ತಾ. 08.06.2024 ರಂದು ಜರಗಿತು. ಸುಮಾರು 800 ರೋಟರಿ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ರೋಟರಿ ಕ್ಲಬ್ ಮಂಗಳೂರು ಸಿಟಿ ಸಂಸ್ಥೆಯು ಪ್ರಸ್ತುತ ಸಾಲಿನಲ್ಲಿ ಸಲ್ಲಿಸಿದ ಶ್ರೇಷ್ಠ ಜನಪರ ಸೇವೆ ಮತ್ತು ಸಾಧಿಸಿದ ಶ್ರೇಷ್ಠ ಸಾಧನೆಯನ್ನು ಪರಿಗಣಿಸಿ ರೋಟರಿಯ ಅತ್ಯುನ್ನತ ಪ್ರಶಸ್ತಿಯಾದ ಪ್ಲಾಟಿನಂ ಪ್ಲಸ್ ಪ್ರಶಸ್ತಿ ಪ್ರಧಾನ ಮಾಡಿ ಅಭಿನಂದಿಸಲಾಯಿತು. ಸಂಸ್ಥೆಯು ಸಂಸ್ಥೆ ಸೇವೆ, ಸಮುದಾಯ ಸೇವೆ, ವೃತ್ತಿಪರ

ಸೇವೆ, ಅಂತರಾಷ್ಟ್ರೀಯ ಸೇವೆ ಹಾಗೂ ರೋಟರಿ ಜಿಲ್ಲಾ ಸಮಿತಿಯು ಹಮ್ಮಿಕೊಂಡ ವಿವಿಧ ಯೋಜನೆಗಳಾದ , ವಿದ್ಯಾರ್ಥಿ ವೇತನ ವಿತರಣೆ, ಕುಡಿಯುವ ನೀರಿನ ಯೋಜನೆ , ಆರೋಗ್ಯ, ತಪಾಸಣೆ, ರಕ್ತದಾನ ಶಿಬಿರ, ಪರಿಸರ ಸಂರಕ್ಷಣೆ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದನ್ನು ಪರಿಗಣಿಸಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಸಂಸ್ಥೆಯ ಅಧ್ಯಕ್ಷರಾದ ಪ್ರಶಾಂತ್ ರೈ, ಕಾರ್ಯದರ್ಶಿರಾದ ಗಣೇಶ್ ರವರಿಗೆ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರಕಾಶ್ ಕಾರತ್ ರವರು ಹಾಗೂ ಮುಖ್ಯ ಅತಿಥಿಯಾಗಿದ ಚಲನಚಿತ್ರ ನಟಿ ಶ್ರೀಮತಿ ಪ್ರಿಯಾಂಕ ಪ್ರಧಾನ ಮಾಡಿ ಅಭಿನಂದಿಸಿದರು.

ವೇದಿಕೆಯಲ್ಲಿ ಸಹಾಯಕ ಗವರ್ನರ್ ರಾದ ಪಿ.ಡಿ.ಶೆಟ್ಟಿ ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾದ ಡಾ! ರಂಜನ್ , ಪದಾಧಿಕಾರಿಗಳಾದ ಕೆನ್ಯೂಟ್ ಪಿಂಟೋ , ಸುಮಿತ್ ರಾವ್, ನಿತಿನ್, ಸಂಸ್ಥೆಯ ಸಲಹೆಗಾರರದ ರಾಜೇಂದ್ರ ಕಲ್ಬಾವಿ ಉಪಸ್ಥಿತರಿದ್ದರು.

ಚದುರಂಗ ಆಟ ಸಹಕಾರಿ: ಎಂ.ಕೆ.ಪ್ರಾಣೇಶ್

ಮೂಡಿಗೆರೆ: ಚದುರಂಗ ಹಳೆಯ ಹಾಗೂ ಜನಪ್ರಿಯ ಹೊಂದಿರುವ ಆಟವಾಗಿದೆ. ಬುದ್ಧಿಶಕ್ತಿ ಹೆಚ್ಚಾಗಲು ಈ ಚದುರಂಗ ಆಟ ಅತ್ಯಂತ ಸಹಕಾರಿಯಾಗಿದೆ ಎಂದು ಉಪ ಸಭಾಪತಿ ಎಂ.ಕೆ.ಪ್ರಾಣೇಶ್ ಹೇಳಿದರು.

ಅವರು ಪಟ್ಟಣದ ಬಿಜಿಎಸ್‌ವಿಎಸ್ ಶಾಲೆ ಆವರಣದಲ್ಲಿ ಚಿಕ್ಕಮಗಳೂರು ಡಿಸ್ಟ್ರಿಕ್ ಚೆಸ್ ಅಸೋಸಿಯೇಷನ್ ವತಿಯಿಂದ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಚೆಸ್ ಪಂದ್ಯಾವಳಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಚದುರಂಗ ಆಟದಲ್ಲಿ ಕಪ್ಪು ಬಿಳಿ ಬಣ್ಣದ 16 ಕಾಯಿಗಳ ನಡುವೆ 64 ಚೌಕಾಕಾರದ ಕೋಣೆಯೊಳಗೆ ಇಬ್ಬರು ರಾಜರ ಸೈನ್ಯ ಸೆಣಸಾಡುವ ಜತೆಗೆ ರಾಜನನ್ನು ಸೆರೆ ಹಿಡಿಯುವ ತಂತ್ರಗಾರಿಕೆ ನಡೆಸಲು ಬುದ್ಧಿವಂತಿಕೆ ಬಳಸಬೇಕಾಗುತ್ತದೆ. ಇದರಿಂದ ಏಕಾಗ್ರತೆ ಹೆಚ್ಚುತ್ತದೆ. ಇಂತಹ ಆಟವನ್ನು ಎಲ್ಲಾ ಮಕ್ಕಳು ಆಡುವ ಮೂಲಕ ಬುದ್ಧಿವಂತಿಕೆ ಹಾಗೂ ಏಕಾಗ್ರತೆ ಬೆಳೆಸಿಕೊಳ್ಳಬೇಕೆಂದು ಹೇಳಿದರು.

ಕಾಫಿ ಬೆಳೆಗಾರ ಪುಣ್ಣಮೂರ್ತಿ

ಮಾತನಾಡಿ, ಸಮೀಕ್ಷೆ ಪ್ರಕಾರ ವಿಶ್ವದಲ್ಲಿ ಸುಮಾರು 600 ಮಿಲಿಯನ್ ಮಂದಿ ಚದುರಂಗ ಆಟವಾಡು ಹವ್ಯಾಸ ಬೆಳೆಸಿಕೊಂಡಿದ್ದಾರೆ. ಬಹುತೇಕ ಮಕ್ಕಳಲ್ಲಿ ಚದುರಂಗ ಆಟವಾಡುವ ಬುದ್ಧಿವಂತಿಕೆ ಇರುತ್ತದೆ. ಆದರೆ ಅವರಿಗೆ ಕಲಿಯುವ ಹಾಗೂ ಪ್ರದರ್ಶಿಸುವ ಅವಕಾಶ ಹಾಗೂ ತರಬೇತಿ ಸಿಗದೇ ಎಲೆಮರೆಕಾಯಿಯಾಗಿಯೇ ಉಳಿಯುತ್ತಾರೆ. ಅಂತಹ ಪ್ರತಿಭೆಯುಳ್ಳ ಮಕ್ಕಳನ್ನು ಪೋಷಕರು ಹಾಗೂ ಶಿಕ್ಷಕರು ಗುರುತಿಸಬೇಕಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಮಗಳೂರು ಡಿಸ್ಟ್ರಿಕ್ ಚೆಸ್ ಅಸೋಸಿಯೇಷನ್‌ನ ಅಧ್ಯಕ್ಷ ನಯನ ತಳವಾರ ವಹಿಸಿದ್ದರು. ತಾ.ಪಂ. ಮಾಜಿ ಅಧ್ಯಕ್ಷ ಕೆ.ಸಿ.ರತನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಜಿ.ಸುರೇಂದ್ರ, ಬಿಜಿಎಸ್ ವಿಎಸ್ ಪಿಯು ಕಾಲೇಜಿನ ಪ್ರಾಂಶುಪಾಲ ಎಂ.ಆರ್.ಸಂದೇಶ್, ಪ್ರೌಢಶಾಲೆ ಪ್ರಾಂಶುಪಾಲ ಬಿ.ಆರ್.ರಮೇಶ್, ಅಮರ್‌ನಾಥ್ ಮತ್ತಿತರರಿದ್ದರು.

ಶಾಸಕರಿಗೆ ಅಭಿನಂದನೆ ಜೂ.11ರಂದು

ಚಿಕ್ಕಮಗಳೂರು: ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದರು, ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವ ಮೂರು ಜನ ಶಾಸಕರಿಗೆ ಜೂ.11 ರಂದು ನಗರದಲ್ಲಿ ಬಿಜೆಪಿ ನೇತೃತ್ವದಲ್ಲಿ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ.

ಲೋಕಸಭಾ ಸದಸ್ಯ ಕೋಟಾ ಶ್ರೀನಿವಾಸ ಪೂಜಾರಿ, ವಿಧಾನಸಭೆಯಿಂದ ಮೇಲ್ಮನೆಗೆ ಶಾಸಕರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಡಾ.ಸಿ.ಟಿ.ರವಿ, ನೈರುತ್ಯ ಪದವೀಧರ ಕ್ಷೇತ್ರದಿಂದ ಆಯ್ಕೆಯಾಗಿರುವ ಡಾ.ದನಂಜಯ ಸರ್ಜಿ, ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿರುವ ಎಸ್.ಎಲ್.ಬೋಜೇಗೌಡ ಅವರುಗಳನ್ನು ಅಭಿನಂದಿಸಲು ಶನಿವಾರ ಜಿಲ್ಲಾ ಬಿಜೆಪಿ ಪಾಂಚಜನ್ಯ ಕಚೇರಿಯಲ್ಲಿ ನಡೆದ ನಗರ ಮತ್ತು ಗ್ರಾಮಾಂತರ ಬಿಜೆಪಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ನಗರ ಬಿಜೆಪಿ ಅಧ್ಯಕ್ಷ ಕೆಂಪನಹಳ್ಳಿ ಪುಷ್ಪರಾಜ್ ತಿಳಿಸಿದ್ದಾರೆ.

ಅಂದು ಬೆಳಗ್ಗೆ 11 ಗಂಟೆಗೆ ಪಕ್ಷದ ಕಚೇರಿ ಪಾಂಚಜನ್ಯದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಇವರೆಲ್ಲರನ್ನು ಅಭಿನಂದಿಸುವುದರೊಂದಿಗೆ ಮುಖಂಡರು, ಕಾರ್ಯಕರ್ತರಿಗೆ ಕೃತಜ್ಞತೆಗಳನ್ನು ಅರ್ಪಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಹೇಳಿದ್ದಾರೆ.

ಕಾರ್ಯಕ್ರಮಕ್ಕೆ ಮೊದಲು ನಗರದ ಹನುಮಂತಪ್ಪ ಸರ್ಕಲ್‌ನಿಂದ ಮೆರವಣಿಗೆಯಲ್ಲಿ ಸಂಸದರು, ಶಾಸಕರುಗಳನ್ನು ಎಂಜಿ ರಸ್ತೆ ಮೂಲಕ ಕಚೇರಿಗೆ ಕರೆತರಲಾಗುತ್ತದೆ. ನೂರಾರು ಕಾರ್ಯಕರ್ತರು, ಮುಖಂಡರುಗಳು ಬೈಕ್ ಜಾಥಾದೊಂದಿಗೆ ಆಗಮಿಸಲಿದ್ದಾರೆ. ವೇದಿಕೆಯ ಕಾರ್ಯಕ್ರಮದಲ್ಲಿ ಮಾಜಿ ಸಚಿವರು, ಶಾಸಕರುಗಳು ಸೇರಿದಂತೆ ಪಕ್ಷದ ಮುಖಂಡರುಗಳು, ಕಾರ್ಯಕರ್ತರುಗಳು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಐವರ್ನಾಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,3229
ಅಂಚೆ: ಐವರ್ನಾಡು, ಸುಳ್ಯ ತಾಲೂಕು, ದಕ್ಷಿಣ ಕನ್ನಡ
Email:aivarnadupacs@gmail.com ದೂರವಾಣಿ : 9148385221

ಪ್ರಕಟಣೆ

ನಮ್ಮ ಸಹಕಾರ ಸಂಘದಲ್ಲಿ ಈ ಕೆಳಕಂಡ ಹುದ್ದೆಗೆ (ಕರ್ನಾಟಕ ಸಹಕಾರ ಸಂಘಗಳ ನಿಯಮ 17 ಮತ್ತು 18 ರಂತೆ ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು) ಸಹಕಾರ ಸಂಘಗಳ ನಿಬಂಧಕರ ಕಛೇರಿ ಬೆಂಗಳೂರು ಇವರ ಸುತ್ತೋಲೆ ಮಾರ್ಗದರ್ಶನದ ರಿತ್ಯಾ) ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	ಹುದ್ದೆಯ ವಿವರ	ಹುದ್ದೆಯ ಸಂಖ್ಯೆ	ವಿದ್ಯಾರ್ಹತೆ
1	ಡಿ ಗ್ರೂಪ್	3	ಎಸ್.ಎಸ್.ಲ್.ಸಿ. ಉತ್ತೀರ್ಣ ಆಗಿರತಕ್ಕದ್ದು

ಷರತ್ತುಗಳು:-

1) ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ವಿತರಿಸುವ ದಿನಾಂಕ 10.06.2024 ರಿಂದ ಸಂಘದ ಕಛೇರಿಯಲ್ಲಿ ಪೂರ್ವಾಹ್ನ 11ಘಂಟೆಯಿಂದ ಅಪರಾಹ್ನ 4 ಘಂಟೆ ಒಳಗೆ - 4 ಘಂಟೆಯ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕೃತಿಸಲಾಗುವುದಿಲ್ಲ, 2) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 19.06.2024 ಪತ್ರಿಕಾ ಪ್ರಕಟಣೆ ದಿನಾಂಕದಿಂದ 10 ದಿನದ ಒಳಗಾಗಿ ಅಂತಿಮ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. 3) ಅರ್ಜಿ ಸಲ್ಲಿಸುವಾಗ ಅಗತ್ಯ ದಾಖಲೆಗಳಾದ ಭಾವಚಿತ್ರ - 2 ಪ್ರತಿ. ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ಬಗ್ಗೆ ಪ್ರಮಾಣ ಪತ್ರದ ಸ್ವಯಂ ದೃಢೀಕೃತ ಪ್ರತಿ ಲಗತ್ತಿಸತಕ್ಕದ್ದು ಹಾಗೂ ಪ.ಜಾತಿ/ಪ.ಪಂಗಡ ಅಭ್ಯರ್ಥಿಗಳಿಗೆ ರೂ.300+ ಜಿ.ಎಸ್.ಟಿ. ಇತರೆ ವರ್ಗದ ಅಭ್ಯರ್ಥಿಗಳಿಗೆ 500 + ಜಿ.ಎಸ್.ಟಿ. ಯನ್ನು ಸಂಘಕ್ಕೆ ಪಾವತಿಸಿ ರಶೀದಿಯನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸಿ ಸ್ವತಃ ಅರ್ಜಿದಾರರು ಅರ್ಜಿ ಸಲ್ಲಿಸಬಹುದು, ದಾಖಲಾತಿಗಳು ದೃಢೀಕರಣಗೊಳ್ಳದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು, 4) ಡಿ ಗ್ರೂಪ್ ಹುದ್ದೆಗೆ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು, ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆಗೆ ಕನ್ನಡದಲ್ಲಿ ಬರೆಯುವ, ಸ್ಪಷ್ಟವಾಗಿ ಮಾತನಾಡುವ ಮತ್ತು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಿರಬೇಕು. ಸಂಘದ ಕಾರ್ಯವ್ಯಾಪ್ತಿಯ ಅಭ್ಯರ್ಥಿಗಳಿಗೆ ಹಾಗೂ ಸಹಕಾರ ಸಂಘದಲ್ಲಿ ಕೆಲಸ ಮಾಡಿ ಅನುಭವವಿರುವವರಿಗೆ ಮೊದಲ ಆದ್ಯತೆ ನೀಡಲಾಗುವುದು. 5) ವಯೋಮಿತಿ, ಪ.ಜಾತಿ/ಪ.ಪಂಗಡ ಅಭ್ಯರ್ಥಿಗಳಿಗೆ 40 ವರ್ಷ, ಹಿಂದುಳಿದ ವರ್ಗ ಅಭ್ಯರ್ಥಿಗಳಿಗೆ 38 ವರ್ಷ ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷ. 6) ಹುದ್ದೆಗಳಿಗೆ ಆಡಳಿತ ಮಂಡಳಿ ಕಾಲ ಕಾಲಕ್ಕೆ ನಿರ್ಧರಿಸಿದಂತೆ ವೇತನ ಶ್ರೇಣಿ ಮತ್ತು ಇತರ ಭತ್ಯೆಗಳನ್ನು ನೀಡಲಾಗುವುದು, 7) ಅಂತಿಮ ಅಧಿಕಾರವು ಸಂಘದ ಸಿಬ್ಬಂದಿ ನೇಮಕಾತಿ ಸಮಿತಿಯದ್ದಾಗಿರುತ್ತದೆ. 8) ನೇಮಕಾತಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ಮತ್ತು ಅರ್ಹತೆಗಳನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಂದ ಕಛೇರಿಯ ವೇಳೆಯಲ್ಲಿ ನೇಮಕಾತಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಪಡೆದು ಹುದ್ದೆಗೆ ಅರ್ಜಿ ಸಲ್ಲಿಸಬಹುದಾಗಿದೆ.

(ನೇಮಕಾತಿ ಸಮಿತಿ ಅಪ್ಪಣೆ ಮೇರೆಗೆ)

ಸಹಿ/-
ಸಂಚಾಲಕ ಕಾರ್ಯದರ್ಶಿ/ ಮುಖ್ಯಕಾರ್ಯನಿರ್ವಹಣಾಧಿಕಾರಿ
ಸಿಬ್ಬಂದಿ ನೇಮಕಾತಿ ಸಮಿತಿ
ಐವರ್ನಾಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,3229

ಸಾಧನೆಗೆ ಬೇಕು ಛಲದ ಗುಣ: ಶಾಸಕ ತಮ್ಮಯ್ಯ

ಚಿಕ್ಕಮಗಳೂರು: ಸಾಧನೆಯ ಹಾದಿ ಸುಗಮವಲ್ಲ. ಛಲವಿದ್ದವರು ಮಾತ್ರ ಆ ಹಾದಿಯಲ್ಲಿ ಸಾಗಲು ಸಾಧ್ಯ ಎಂದು ಶಾಸಕ ಹೆಚ್.ಡಿ.ತಮ್ಮಯ್ಯ ಹೇಳಿದರು.

ನಗರದ ಬಸವನಹಳ್ಳಿ ಸಮೀಪ ಬ್ರಹ್ಮಕುಮಾರೀಸ್ ಸಂಸ್ಥೆಯಲ್ಲಿ ಆಧ್ಯಾತ್ಮಿಕ ಸಶಕ್ತೀಕರಣದಿಂದ ಸ್ವಚ್ಛ, ಸ್ವಾಸ್ಥ್ಯ ಸಮಾಜ ಉದ್ಘಾಟನೆ ಹಾಗೂ 2023-24ನೇ ಸಾಲಿನ ಎಸ್.ಎಸ್. ಎಲ್.ಸಿ. ಪಿಯುಸಿ ವಿದ್ಯಾರ್ಥಿ ಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಭೆ ಎಲ್ಲರಲ್ಲಿದೆ, ಆಧುನಿಕತೆ ಬೆಳೆದಂತೆ ಸ್ಪರ್ಧೆಗಳು ಹೆಚ್ಚಿದೆ. ಹೀಗಾಗಿ ಇವರೆಡರ ನಡುವೆ ಸಾ ಮಾಜಿಕ ಜವಾಬ್ದಾರಿಯ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಹೋದರೆ ಮಾತ್ರ ಯಶಸ್ಸು ನಿಶ್ಚಿತ ಎಂದ ಅವರು ಮಕ್ಕಳು ವಿದ್ಯಾಕ್ಷೇತ್ರದಲ್ಲಿ ಸಾಧನೆಗೈಯಲು ಹೆಚ್ಚು ಶ್ರಮವಹಿಸಬೇಕು ಎಂದು ತಿಳಿಸಿದರು.

ವೃತ್ತಿಯಲ್ಲಿ ಶ್ರದ್ಧೆ, ನಿಷ್ಠೆ ಹಾಗೂ ನೈತಿಕ ಮೌಲ್ಯ ಹೊಂದಿರಬೇಕು. ಮರಳಿ ಯತ್ನಿಸು ಎಂಬ ನಾಣ್ನುಡಿಯಂತೆ ನಿರಂತರ ಪ್ರಯತ್ನದಿಂದ ಮಾತ್ರ ಯಶಸ್ಸು ಸಿಗಬಲ್ಲದು. ಅದರ ಜೊತೆಗೆ ಜೀವನದ ಸವಾಲನ್ನು ಎದುರಿಸುವ ಶಕ್ತಿ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಸಾಧನೆಯ ಮೆಟ್ಟಿಲನ್ನು ಏರುವ ತುಡಿತ ನಮ್ಮಲ್ಲಿ ರಬೇಕು ಎಂದು ಹೇಳಿದರು. ಜಿಲ್ಲಾ ಪಂಚಾಯಿತಿ ಸಿಇಓ ಬಿ.ಗೋಪಾಲಕೃಷ್ಣ ಮಾತನಾಡಿ ಸಮಾಜದಲ್ಲಿ ಒಂದು ಹಂತದಲ್ಲಿ ವಿದ್ಯಾ



ರ್ಥಿಗಳು ಬೆಳೆಯಲು ಶಿಕ್ಷಣ ಬಹುಮುಖ್ಯ. ಬದುಕಿನಲ್ಲಿ ಹಲವಾರು ಅಡೆತಡೆಗಳು ಎದುರಾಗಲಿದೆ. ಎಲ್ಲವ ನ್ನೂ ಮೀರಿ ನಿಂತು ಶ್ರಮವಹಿಸಿ ವಿದ್ಯಾಭ್ಯಾಸದಲ್ಲಿ ಉನ್ನತ ಸ್ಥಾನ ಗಳಿಸಿದರೆ ಯಶಸ್ವಿ ವ್ಯಕ್ತಿಯಾಗಿ ರೂಪು ಗೊಳ್ಳಲು ಸಾಧ್ಯ ಎಂದರು. ಪೋಷಕರು ವೈದ್ಯ ಅಥವಾ ಇಂಜಿನಿಯರ್‌ಗಳು ಆಗಬೇಕೆಂಬ ಆಸೆಗಳ ಮೂಟೆ ಮಕ್ಕಳಿಗೆ ಏರಬಾ ರದು. ಆಸಕ್ತಿ ಹೊಂದಿರುವ ಕ್ಷೇತ್ರದಲ್ಲಿ ಪ್ರೋತ್ಸಾಹಿಸಿದರೆ ನಾಗರೀಕ ಸಮಾಜದಲ್ಲಿ ಉತ್ತಮರಾಗಬಹುದು. ಇತ್ತೀಚೆಗೆ ಸರಕಾರ ನೌಕರರಿಗಿಂತ ಹೆಚ್ಚು ದುಡಿಮೆಯನ್ನು ಸ್ವಂತ ವ್ಯಾಪಾರದಲ್ಲಿ ಕಾಣುತ್ತಿರುವುದು ನಮ್ಮ ಮುಂದಿದೆ ಎಂದರು.

ಮನಸ್ಸು, ಬುದ್ದಿ ಹಾಗೂ ಮೆದುಳನ್ನು ಆಧ್ಯಾತ್ಮಿಕ ಸಶಕ್ತಿಕರಣದಿಂದ ಸ್ವಚ್ಛವಾಗಿಡಬಹುದು. ಬಾಲ್ಯ ದಿಂದಲೇ ಮಕ್ಕಳು ಆಧ್ಮಾತ್ಮಿಕ ಅಭಿರುಚಿ ಬೆಳೆಸಿಕೊಂಡಲ್ಲಿ ಮುಂದಿನ ಉನ್ನತ ವ್ಯಾಸಂಗಕ್ಕೆ ಬಹಳಷ್ಟು ಸಹ ಕಾರಿ ಎಂದ ಅವರು ಮನಸ್ಸು ಹತೋಟಿ ಹಾಗೂ ಗೊಂದಲಗಳನ್ನು ನಿವಾರಿಸಲು ಆಧ್ಯಾತ್ಮಿಕ ಚಿಂತನೆ ಅನು ಕೂಲವಾಗಲಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬ್ರಹ್ಮಕುಮಾರೀಸ್ ಮಾತನಾಡಿದರು. ಈ ಸಂದರ್ಭದಲ್ಲಿ ಲೆಫ್ಟಿನೆಂಟ್ ಜನರಲ್ ಬಿ.ಹೆಚ್.ರಾಜು, ಜಿಲ್ಲಾ ಕಾರಾಗೃಹ ಅಧೀಕ್ಷಕ ಎಸ್.ಎಸ್. ಮೇಟಿ, ಎಸ್.ಬಿ.ಐ ಹಿರಿಯ ವ್ಯವಸ್ಥಾಪಕಿ ಕೃಷ್ಣ ಕಿಶೋರ್, ಜ್ಞಾನರಶ್ಮಿ ಶಾಲೆ ಸಂಸ್ಥಾಪಕ ನಂದಕುಮಾರ್, ಶಿಕ್ಷಕ ಚಂದ್ರಶೇಖರ್, ಹೇಮಾವತಿ ಹಾಗೂ ವಿದ್ಯಾರ್ಥಿಗಳು, ಪೋಷಕರು ಮತ್ತಿತರರು ಉಪಸ್ಥಿತರಿದ್ದರು.

ಪಾರ್ಕಿಂಗ್ ಅವ್ಯವಸ್ಥೆ: ಪ್ರಯಾಣಿಕರಿಗೆ ತೊಂದರೆ

ಕೊಟ್ಟಿಗೆಹಾರ: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಕೊಟ್ಟಿಗೆಹಾರ ಪ್ರವಾಸಿ ತಾಣವಾಗಿದ್ದು, ಇಲ್ಲಿಗೆ ಪ್ರವಾಸಿಗರು ಅಡ್ಡಾದಿಡ್ಡಿ ವಾಹನಗಳನ್ನು ಪಾರ್ಕಿಂಗ್ ಮಾಡಿ ಪ್ರಯಾಣಿಕರು ಹಾಗೂ ಸ್ಥಳೀಯರಿಗೆ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರು ದೂರಿದ್ದಾರೆ. ಕೊಟ್ಟಿಗೆಹಾರವು ಹೊರನಾಡು, ಧರ್ಮಸ್ಥಳ, ಶೃಂಗೇರಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು, ವಾರಾಂತ್ಯದಲ್ಲಿ ಈ ಪ್ರದೇಶ ಜನರಿಂದ ತುಂಬಿ ತುಳುಕುತ್ತಿರುತ್ತದೆ. ಆದರೆ, ಇಲ್ಲಿಗೆ ಬರುವ ಪ್ರವಾಸಿಗರು ನಗರದಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುವಂತೆ ಈ ಭಾಗದಲ್ಲೂ ಪಾರ್ಕಿಂಗ್ ಮಾಡಿ ಸಾಗುತ್ತಾರೆ. ಆದರೆ, ಇತರೆ ವಾಹನಗಳಿಗೆ ಇದರಿಂದ ತೊಂದರೆಯಾಗುತ್ತಿದೆ. ವಾಹನ ನಿಲ್ಲಿಸುವವರಿಗೆ ದಂಡದ ಬಿಸಿ ಮುಟ್ಟಿಸಬೇಕಿದೆ. ಆದರೆ, ಪೋಲಿಸರು ಕಾಣುತಿಲ್ಲ. ವಾಹನಗಳ ಪಾರ್ಕಿಂಗ್ ಬಗ್ಗೆ ಪ್ರವಾಸಿಗರು ಹೆಚ್ಚು ಗಮನ ಹರಿಸಬೇಕಿದೆ ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಪ್ರವಾಸಿಗರು ವಾಹನ ನಿಲುಗಡೆ ಬೇಕಾಬಿಟ್ಟಿ ರಸ್ತೆ ಮಧ್ಯದಲ್ಲಿಯೇ ನಿಲ್ಲಿಸಿ ಹೋಟೆಲ್ ಅಂಗಡಿಗೆ ತೆರಳುತ್ತಾರೆ. ಇದರಿಂದ ಇನ್ನಿತರ ವಾಹನಗಳಿಗೆ ಹಾಗೂ ಪಾದಚಾರಿಗಳಿಗೆ ತುಂಬಾ ತೊಂದರೆಯಾಗುತ್ತದೆ. ವಾರದಲ್ಲಿ ಶನಿವಾರ ಹಾಗೂ ಭಾನುವಾರ ಪ್ರವಾಸಿಗರು ಹೆಚ್ಚು ಇರುವುದರಿಂದ ಈ ಎರಡು ದಿನ ಟ್ರಾಫಿಕ್ ಸಮಸ್ಯೆ ಬಗೆಹರಿಸಲು ಪೊಲೀಸರನ್ನು ನಿಯೋಜಿಸಬೇಕು.ಸಂಜಯ್ ಗೌಡ ಕೊಟ್ಟಿಗೆಹಾರ.

...ಹೇಳಿಕೆಗೆ ಕಡಿವಾಣ ಹಾಕಿ

← ಮೊದಲಪುಟದಿಂದ

ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರಿಗೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪತ್ರ ಬರೆದಿದ್ದು, ಗ್ಯಾರಂಟಿ ಯೋಜನೆಗಳು ಈಗ ಇಡೀ ದೇಶಕ್ಕೆ ಮಾದರಿಯಾದ ಕ್ರಾಂತಿಕಾರಿ ಯೋಜನೆಗಳಾಗಿವೆ. ಗೃಹಲಕ್ಷ್ಮೀ ಯೋಜನೆಯಲ್ಲಿ ಪ್ರತಿ ತಿಂಗಳು ಸರಕಾರದಿಂದ ನೀಡುವ 2000 ರು., ಉಳಿಸಿಕೊಂಡು ಬಂಗಾರ ಖರೀದಿ ಮಾಡಿದ ಮಹಿಳೆಯರಿದ್ದಾರೆ. ಫ್ರಿಜ್ ಖರೀದಿಸಿದವರಿದ್ದಾರೆ. ಸ್ಮಾರ್ಟ್ ಫೋನ್‌ಗಳನ್ನು ಖರೀದಿ ಮಾಡಿದವರಿದ್ದಾರೆ. ಈ ಹಣ ಮಕ್ಕಳ ಶಿಕ್ಷಣಕ್ಕೆ, ಹಿರಿಯರ ಔಷಧಕ್ಕೆ ಸಹ ನೆರವಾಗುತ್ತಿದೆ ಎಂದು ಅದೆಷ್ಟೋ ಮಂದಿ ಹೇಳಿದ್ದಾರೆ. ನಮ್ಮ ಸರಕಾರವನ್ನು ಹಾರೈಸಿದ್ದಾರೆ. ಶಕ್ತಿ ಯೋಜನೆಯಿಂದ ರಾಜ್ಯದ ತೀರ್ಥ ಕ್ಷೇತ್ರಗಳನ್ನು ನೋಡುವ ಭಾಗ್ಯ ಲಭಿಸಿದೆ. ದೇವಸ್ಥಾನಗಳ ಆದಾಯ ಹೆಚ್ಚಳವಾಗಿದೆ. ಅಲ್ಲದೆ, ಸುತ್ತಮುತ್ತಲಲ್ಲಿ ವ್ಯಾಪಾರ-ವಹಿವಾಟು ಹೆಚ್ಚಳವಾಗಿದೆ. ಗೃಹಜ್ಯೋತಿ ಯೋಜನೆಯಡಿ ನೀಡಲಾಗಿರುವ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ಬಡವರಿಗೆ ಊರುಗೋಲಾಗಿದೆ. ಇಂಡಿಯ ಮೈತ್ರಿ ಕೂಟದ ಮೇಲೆ ವಿಶ್ವಾಸವಿಟ್ಟ ಜನ ಅಪಾರ ಪ್ರಮಾಣದಲ್ಲಿ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ಅಭ್ಯರ್ಥಿಗಳಿಗೆ ಮತನೀಡಿ ಮೋದಿ ಸರಕಾರ ಮತ್ತೆ ಬಹುಮತ ಪಡೆಯಲು ತಡೆಯೊಡ್ಡಿ ಇಂಡಿಯ ಮೈತ್ರಿಕೂಟಕ್ಕೆ 235 ಸ್ಥಾನಗಳನ್ನು ಕಲ್ಪಿಸಿ ಅಭೂತಪೂರ್ವ ಬೆಂಬಲ ನೀಡಿದೆ. ಆದರೆ, ಲೋಕಸಭಾ ಚುನಾವಣೆ ಫಲಿತಾಂಶದಲ್ಲಿ ಕರ್ನಾಟಕದಲ್ಲಿ ಉಂಟಾದ ಅಲ್ಪ ಹಿನ್ನಡೆಯಿಂದ ಕಾಂಗ್ರೆಸ್‌ನ ಕೆಲವು ಶಾಸಕರು, ಸಚಿವರು, ಮುಖಂಡರು ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಬೇಕು ಎಂಬ ಹೇಳಿಕೆಗಳನ್ನು ಬಹಿರಂಗವಾಗಿ ನೀಡುತ್ತಿದ್ದು, ಇಂತಹ ಹೇಳಿಕೆಗಳನ್ನು ಕೊಡದಂತೆ ಸೂಚನೆ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಬಂದ್ ಅಧಿಕಾರ ಯಾರಿಗೂ ಇಲ್ಲ: ಗ್ಯಾರಂಟಿ ಯೋಜನೆಗಳಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರು ಚಾಲನೆ ನೀಡಿದ್ದರು. ಯೋಜನೆಗಳನ್ನು ಶ್ಲಾಘಿಸಿದ್ದರು. ಈ ಯೋಜನೆ ನಿರಂತರವಾಗಿ ಜಾರಿಯಾಗುತ್ತದೆ ಎಂದು ವಾಗ್ದಾನ ನೀಡಿದ್ದರು. ಹೈಕಮಾಂಡ್ ನಿರ್ಣಯದಿಂದ ಜಾರಿ ಯಾದ ಯೋಜನೆಯನ್ನು ಬಂದ್ ಮಾಡುವಂತೆ ಹೇಳುವ ಅಧಿಕಾರ ಯಾರಿಗೂ ಇಲ್ಲ. ಬಡವರ ಪರವಾದ ಯೋಜನೆಗಳನ್ನು ಬಂದ್ ಮಾಡುವುದಿರಲಿ, ಅಂಥ ಹೇಳಿಕೆಗಳಿಂದಲೂ ಪಕ್ಷದ ಮೇಲಿನ ವಿಶ್ವಾಸ ಕಡಿಮೆಯಾಗುತ್ತದೆ. ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಇದರಿಂದ ಅಂಥ ಹೇಳಿಕೆಗಳಿಗೆ ತಕ್ಷಣ ಕಡಿವಾಣ ಹಾಕಬೇಕು ಎಂದು ದಿನೇಶ್ ಗೂಳಿಗೌಡ ಆಗ್ರಹಿಸಿದ್ದಾರೆ.

ಮೋದಿ 3.0 ಯುಗಾರಂಭ

← ಮೊದಲಪುಟದಿಂದ

ರಾಜ್ಯ ಖಾತೆ ಸಚಿವರು

- ಜಿತಿನ್ ಪ್ರಸಾದ್ (ಬಿಜೆಪಿ-ಉತ್ತರ ಪ್ರದೇಶ)
- ಶ್ರೀಪಾದ್ ನಾಯ್ಕ್ (ಬಿಜೆಪಿ-ಗೋವಾ)
- ಪಂಕಜ್ ಚೌಧರಿ (ಬಿಜೆಪಿ-ಉತ್ತರ ಪ್ರದೇಶ)
- ಕ್ರಿಶನ್ ಪಾಲ್ (ಬಿಜೆಪಿ-ಹರಿಯಾಣ)
- ರಾಮ್‌ದಾಸ್ ಅಠಾವಳೆ (ಆರ್‌ಪಿಐ-ಮಹಾರಾಷ್ಟ್ರ)
- ರಾಮನಾಥ್ ಠಾಕೂರ್ (ಜೆಡಿಯು-ಬಿಹಾರ)
- ನಿತ್ಯಾನಂದ್ ರಾಯ್ (ಬಿಜೆಪಿ-ಬಿಹಾರ)
- ಅನುಪ್ರಿಯಾ ಪಟೇಲ್ (ಅಪ್ನಾದಳ್ (ಎಸ್)-ಉತ್ತರ ಪ್ರದೇಶ)
- ವಿ.ಸೋಮಣ್ಣ (ಬಿಜೆಪಿ-ಕರ್ನಾಟಕ)
- ಪೆಮ್ಮಸಾನಿ ಚಂದ್ರಶೇಖರ್ (ಟಿಡಿಪಿ-ಆಂಧ್ರಪ್ರದೇಶ)
- ಎಸ್‌ಪಿ ಸಿಂಗ್ ಬಘೇಲ್ (ಬಿಜೆಪಿ-ಉತ್ತರ ಪ್ರದೇಶ)
- ಶೋಭಾ ಕರಂದ್ಲಾಜೆ (ಬಿಜೆಪಿ-ಕರ್ನಾಟಕ)
- ಕೀರ್ತಿ ವರ್ಧನ್ ಸಿಂಗ್ (ಬಿಜೆಪಿ-ಉತ್ತರ ಪ್ರದೇಶ)
- ಬಿ.ಎಲ್.ವರ್ಮಾ (ಬಿಜೆಪಿ-ಉತ್ತರ ಪ್ರದೇಶ)
- ಶಂತನು ಠಾಕೂರ್ (ಬಿಜೆಪಿ-ಪಶ್ಚಿಮ ಬಂಗಾಳ)
- ಸುರೇಶ್ ಗೋಪಿ (ಬಿಜೆಪಿ-ಕೇರಳ)
- ಡಾ.ಎಲ್.ಮುರುಗನ್ (ಬಿಜೆಪಿ-ತಮಿಳುನಾಡು)
- ಅಜಯ್ ತಮ್ಟಾ (ಬಿಜೆಪಿ-ಉತ್ತರಾಖಂಡ)
- ಬಂಡಿ ಸಂಜಯ್ ಕುಮಾರ್ (ಬಿಜೆಪಿ-ತೆಲಂಗಾಣ)
- ಕಮಲೇಶ್ ಪಾಸ್ವಾನ್ (ಬಿಜೆಪಿ-ಉತ್ತರ ಪ್ರದೇಶ)
- ಭಾಗೀರಥ್ ಚೌಧರಿ (ಬಿಜೆಪಿ-ರಾಜಸ್ಥಾನ)
- ಸತೀಶ್ ಚಂದ್ರ ದುಬೆ (ಬಿಜೆಪಿ-ಬಿಹಾರ)
- ಸಂಜಯ್ ಸೇಠ್ (ಬಿಜೆಪಿ-ಜಾರ್ಖಂಡ್)
- ರವನೀತ್ ಸಿಂಗ್ ಬಿಟ್ಟು (ಬಿಜೆಪಿ-ಪಂಜಾಬ್)
- ದುರ್ಗಾದಾಸ್ ಉಯಿಕೆ (ಬಿಜೆಪಿ- ಮಧ್ಯಪ್ರದೇಶ)
- ರಕ್ಷಾ ನಿಖಿಲ್ ಖಡ್ಸೆ (ಬಿಜೆಪಿ-ಮಹಾರಾಷ್ಟ್ರ)
- ಸುಕಾಂತ ಮಜುಂದಾರ್ (ಬಿಜೆಪಿ-ಪಶ್ಚಿಮ ಬಂಗಾಳ)
- ಸಾವಿತ್ರಿ ಠಾಕೂರ್ (ಬಿಜೆಪಿ-ಮಧ್ಯಪ್ರದೇಶ)
- ತೋಖನ್ ಸಾಹು (ಬಿಜೆಪಿ-ಛತ್ತೀಸ್‌ಗಢ)
- ಡಾ.ರಾಜ್‌ಭೂಷಣ್ ಚೌಧರಿ (ಬಿಜೆಪಿ-ಬಿಹಾರ)
- ಭೂಪತಿ ರಾಜು ಶ್ರೀನಿವಾಸ್ ವರ್ಮಾ (ಬಿಜೆಪಿ-ಆಂಧ್ರಪ್ರದೇಶ)

ಇತಿಹಾಸ ಸೃಷ್ಟಿಸಿದ ಸಚಿವ ವಿ. ಸೋಮಣ್ಣ

ತುಮಕೂರು: ಲೋಕಸಭಾ ಚುನಾವಣೆಯಲ್ಲಿ 1,75,594 ಮತಗಳ ಅಂತರದಿಂದ ಜಯಗಳಿಸಿದ್ದ ಬಿಜೆಪಿ, ಜೆಡಿಎಸ್ ಮೈತ್ರಿ ಅಭ್ಯರ್ಥಿ ಸೋಮಣ್ಣಗೆ ಕೇಂದ್ರದಲ್ಲಿ ರಾಜ್ಯ ಖಾತೆ ಸಚಿವ ಸ್ಥಾನ ನೀಡಲಾಗಿದ್ದು, ಜಿಲ್ಲೆಯ ಮೊದಲ ಕೇಂದ್ರ ಸಚಿವ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

2023 ವಿಧಾನಸಭಾ ಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಸೋತು ಕಂಗಲಾಗಿದ್ದ ಸೋಮಣ್ಣಗೆ 2024ರ ತುಮಕೂರು ಲೋಕಸಭೆ ಚುನಾವಣೆ ಮರುಜನ್ಮ ನೀಡಿದೆ. ಮಾಜಿ ಪ್ರಧಾನ ದೇವೇಗೌಡ, ಕೋದಂಡರಾಮಯ್ಯ, ಕೃಷ್ಣಪ್ಪ ತುಮಕೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋಲುವ ಮೂಲಕ ವಲಸೆ ಬಂದವರಿಗೆ ಗೆಲುವು ಸಾಧ್ಯವಿಲ್ಲ ಎಂಬ ಸಂದೇಶ ರವಾನೆಯಾಗಿತ್ತು. ಆದರೆ ಸೋಮಣ್ಣ ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ.

ರಾಜಕೀಯ ಜೀವನ: 1983 ರಲ್ಲಿ ಬಿಬಿಎಂಪಿ ಸದಸ್ಯರಾಗಿ ರಾಜಕೀಯ ಪ್ರವೇಶಿಸಿದ ಸೋಮಣ್ಣ ಕೇಂದ್ರ ರಾಜ್ಯ ಖಾತೆ ಸಚಿವರಾಗುವ ಹಂತಕ್ಕೆ ತಲುಪಿದ್ದಾರೆ. ಜನತಾಪಕ್ಷದ ಮೂಲಕ ರಾಜಕೀಯ ಕ್ಷೇತ್ರ ಪ್ರವೇಶಿಸಿದ ಸೋಮಣ್ಣ ಐದು ಬಾರಿ ಶಾಸಕ, 2 ಬಾರಿ ವಿಧಾನಪರಿಷತ್ ಸದಸ್ಯರಾಗಿದ್ದರು. ಈ ಅವಧಿಯಲ್ಲಿ ಮೂರು ಬಾರಿ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.

1994ರಲ್ಲಿ ಜನತಾಪಕ್ಷದಿಂದ ಬಿನ್ನಿಪೇಟೆ ಕ್ಷೇತ್ರದಿಂದ ಗೆದ್ದು ವಿಧಾನಸೌಧ ಪ್ರವೇಶಿಸಿದ ಸೋಮಣ್ಣ ಮಂತ್ರಿ ಪಟ್ಟ ಗಿಟ್ಟಿಸಿಕೊಂಡರು. ಬಳಿಕ ಪಕ್ಷೇತರರಾಗಿ 1999ರಲ್ಲಿ ಸ್ಪರ್ಧಿಸಿ ಪುನರಾಯ್ಕೆಯಾದರು. 2004ರಲ್ಲಿ ಕಾಂಗ್ರೆಸ್ ಸೇರ್ಪಡೆಯಾಗಿ ಮತ್ತೆ ಬಿನ್ನಿಪೇಟೆಯಿಂದ ಗೆದ್ದು ಹ್ಯಾಟ್ರಿಕ್ ವಿಜಯ ಸಾಧಿಸಿದರು. ಕ್ಷೇತ್ರ ಪುನರ್ ವಿಂಗಡಣೆ ಬಳಿಕ 2008ರಲ್ಲಿ ಗೋವಿಂದರಾಜನಗರದಿಂದ ಸ್ಪರ್ಧಿಸಿ ಗೆದ್ದ ಸೋಮಣ್ಣ ಆಪರೇಷನ್ ಕಮಲಕ್ಕೆ ಸಿಲುಕಿ ರಾಜೀನಾಮೆ ನೀಡಿ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಕ್ಷೇತ್ರ ಕಳೆದುಕೊಂಡರು. ಆ ನಂತರ ಎರಡುಬಾರಿ ವಿಧಾನಪರಿಷತ್ ಸದಸ್ಯರಾದರು. ಬಿಎಸ್ವೈ ಮಂತ್ರಿ ಮಂಡಲದಲ್ಲಿ ಸಚಿವ ಸ್ಥಾನ ಕೂಡ ಗಿಟ್ಟಿಸಿಕೊಂಡರು. 2013ರಲ್ಲಿ ಸೋಮಣ್ಣ ಸೋಲುಂಡರು. 2018ರಲ್ಲಿ ಗೋವಿಂದರಾಜ ನಗರದಿಂದ ಜಯಗಳಿಸಿ ಸಚಿವರಾದರು. 2023ರಲ್ಲಿ ಚಾಮರಾಜನಗರ, ವರುಣಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋಲುಂಡು ಹತಾಶರಾಗಿದ್ದರು. 2024ರ ತುಮಕೂರು ಲೋಕಸಭಾ ಕ್ಷೇತ್ರ ಸೋಮಣ್ಣಗೆ ಪುನರ್ಜನ್ಮ ನೀಡಿದೆ.

ಜಿಲ್ಲೆಯ ಮೊದಲ ಸಚಿವ ಸೋಮಣ್ಣ: 1952 ರಿಂದ ಇಲ್ಲಿಯವರೆಗೆ ಜಿಲ್ಲೆಯಿಂದ ಕೇಂದ್ರ ಸಚಿವರಾಗಿ ಕಾರ್ಯನಿರ್ವಹಿಸುವ ಅದೃಷ್ಟ ಯಾವ ಸಂಸದರೂ ಪಡೆದಿರಲಿಲ್ಲ. 1991ರಲ್ಲಿ ಜಿಲ್ಲೆಯ ಮಲ್ಲಿಕಾರ್ಜುನಯ್ಯ ಅವರಿಗೆ ವಾಜಪೇಯಿ ನೇತೃತ್ವದ ಸರಕಾರದಲ್ಲಿ ಡೆಪ್ಯೂಟಿ ಸ್ಪೀಕರ್ ಹುದ್ದೆ ನೀಡಲಾಗಿತ್ತು. ಅದನ್ನು ಹೊರತುಪಡಿಸಿದರೆ ಜಿಲ್ಲೆಯಿಂದ ಸೋಮಣ್ಣ ಕೇಂದ್ರದಲ್ಲಿ ಮೊದಲ ಬಾರಿಗೆ ಸಚಿವರಾಗುವ ಮೂಲಕ ಇತಿಹಾಸ ಬರೆದಿದ್ದಾರೆ. ವಲಸೆ ಹಕ್ಕಿ ಸೋಮಣ್ಣ ಜಿಲ್ಲೆಯನ್ನು ಮಾದರಿಯನ್ನಾಗಿ ಮಾಡುತ್ತಾರಾ? ಎಂಬುದನ್ನು ಮುಂದೆ ಕಾದು ನೋಡಬೇಕಿದೆ.

ಅಕ್ರಮ ಗಾಂಜಾ ಜಪ್ತಿ: ನಾಲ್ವರ ಸೆರೆ

ಹಾವೇರಿ: ನಗರ ಠಾಣೆ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ 10 ಕೆ.ಜಿ ಗಾಂಜಾ ಜಪ್ತಿಮಾಡಿ, ನಾಲ್ವರನ್ನು ಬಂಧಿಸಿದ್ದಾರೆ. ಹಾವೇರಿ ರೈಲುನಿಲ್ದಾಣದ ಬಳಿಯ ಓವರ್ ಬ್ರಿಡ್ಜ್‌ನಲ್ಲಿ ಗಾಂಜಾ ಸಾಗಿಸುತ್ತಿದ್ದಾಗ ದಿಳ್ಳೆಪ್ಪ ಮಲ್ಲಪ್ಪ ಅಳಲಗೇರಿ, ಫಾರೂಕ್ ಅಹ್ಮದ್ ಕುಂಚೂರು, ಇಸ್ಮಾಯಿಲ್ ನದಾಫ್ ಮತ್ತು ಸಾಹಿಲ್ ಕರ್ಜಗಿ ಎಂಬ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳು ಒಡಿಶಾದಲ್ಲಿ ಕಡಿಮೆ ಬೆಲೆಗೆ ಸಿಗುವ ಗಾಂಜಾದ ಹೂವು, ಮೊಗ್ಗು, ಬೀಜಮಿಶ್ರಿತ ಗಂಟುಗಂಟಾದ ಒಣಗಿದ ಘಾಟು ವಾಸನೆಯುಳ್ಳ ಗಾಂಜಾ ಸಾಗಿಸುತ್ತಿದ್ದರು. ಅಲ್ಲಿಂದ ಕೆಜಿಗಟ್ಟಲೆ ಗಾಂಜಾ ತಂದು, ಅದನ್ನು 10 ಗ್ರಾಂ ಸೇರಿದಂತೆ ವಿವಿಧ ಗ್ರಾಂ ಲೆಕ್ಕದಲ್ಲಿ ಪ್ಯಾಕೆಟ್ ಮಾಡಿ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದರು. ವಶಕ್ಕೆ ಪಡೆದ ಗಾಂಜಾ ಸುಮಾರು 9,900 ಗ್ರಾಂ ಇದ್ದು, ಇದರ ಬೆಲೆ 7.91 ಲಕ್ಷ ರು.ಗಳಾಗಿವೆ.

ಹಾವೇರಿ ಎಸ್‌ಪಿ ಸಿ. ಗೋಪಾಲ್, ರಾಜ್ಯದಲ್ಲಿ ಗಾಂಜಾ ಬೆಳೆಗೆ ಕಡಿವಾಣ ಹಾಕಲಾಗಿದೆ. ಈ ಹಿನ್ನೆಲೆಯಲ್ಲಿ ಬೇರೆ ರಾಜ್ಯಗಳಿಂದ ಆರೋಪಿಗಳು ಗಾಂಜಾ ಖರೀದಿಸಿ ಮಾರಾಟ ಮಾಡುತ್ತಾರೆ. ಹಾವೇರಿಯ ನಾಲ್ವರು ಆರೋಪಿಗಳು ಒಡಿಶಾದಿಂದ ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ ಚಿಲ್ಲರೆ ಗ್ರಾಹಕರಿಗೆ ಮಾರಾಟ ಮಾಡಲು ಗಾಂಜಾವನ್ನು ರೈಲಿನ ಮೂಲಕ ಹಾವೇರಿಗೆ ತಂದಿದ್ದರು. ಖಚಿತ ಮಾಹಿತಿ ಮೇರೆಗೆ ಹಾವೇರಿ ನಗರ ಪೊಲೀಸ್ ಠಾಣೆಯ ಸಿಪಿಐ ಮೋತಿಲಾಲ್ ಪವಾರ್ ಮತ್ತು ತಂಡ ದಾಳಿ ಮಾಡಿ ಗಾಂಜಾ ವಶಪಡಿಸಿಕೊಂಡಿತ್ತು. ಅಲ್ಲದೆ ನಾಲ್ವರು ಆರೋಪಿಗಳನ್ನು ಬಂಧಿಸಿ ಅವರಿಂದ 4 ಮೊಬೈಲ್ ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಕಾರ್ಯಾಚರಣೆ ನಡೆಸಿದ ಸಿಬ್ಬಂದಿಯನ್ನು ಎಸ್‌ಪಿ ಗೋಪಾಲ್ ಅಭಿನಂದಿಸಿದ್ದಾರೆ.

ರಾಜ್ಯ ನಾಯಕರ ಶಿಫಾರಸಿಗೆ ಸಿಗದ ಮನ್ನಣೆ, ಪ್ರಬಲ ಸಮುದಾಯವೇ ಮೋದಿ ಗುರಿ

ಪಕ್ಷ ನಿಷ್ಠರಿಗಷ್ಟೇ ಮಂತ್ರಿಗಿರಿ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ದೇಶದ ಹ್ಯಾಟ್ರಿಕ್ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ರಾಜ್ಯದ ಐವರು ಸಂಸದರಿಗೆ ಮಂತ್ರಿ ಸ್ಥಾನ ಲಭಿಸಿದ್ದು, ಅವರ ಆಯ್ಕೆಗಳ ಹಿಂದೆ ದೊಡ್ಡ ರಾಜಕೀಯ ಲೆಕ್ಕಾಚಾರವೇ ಅಡಗಿರುವುದು ಗೋಚರವಾಗುತ್ತಿದೆ.

ರಾಜ್ಯಸಭೆಗೆ ಕರ್ನಾಟಕದಿಂದ ಹೆಸರಿಗಷ್ಟೇ ಎನ್ನುವಂತೆ ಆಯ್ಕೆಯಾಗಿರುವ ನಿರ್ಮಲಾ ಸೀತಾರಾಮನ್ ಅವರನ್ನು ಹೊರತುಪಡಿಸಿದರೆ ರಾಜ್ಯದ ಲೋಕಸಭಾ ಸದಸ್ಯರಾದ ಪ್ರಹ್ಲಾದ್ ಜೋಶಿ, ಶೋಭಾ ಕರಂದ್ಲಾಜೆ, ಎಚ್.ಡಿ ಕುಮಾರಸ್ವಾಮಿ ಹಾಗೂ ವಿ. ಸೋಮಣ್ಣ ಅವರು ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಈ ಎಲ್ಲ ಸಂಸದರನ್ನು ಮೋದಿ ತಮ್ಮ ಸಂಪುಟಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ ಎಂದರೆ ಅದರ ಹಿಂದೆ ಒಂದು ದೊಡ್ಡ ರಾಜಕೀಯ ಲೆಕ್ಕಾಚಾರವೇ ಇದೆ ಎನ್ನುವುದು ಸ್ಪಷ್ಟ. ಏಕೆಂದರೆ ಸದ್ಯ ರಾಜ್ಯದಿಂದ ಮಂತ್ರಿಯಾಗಿರುವ ಈ ಐವರಲ್ಲಿ ಯಾರೊಬ್ಬರೂ ರಾಜ್ಯ ಬಿಜೆಪಿ ಅಧ್ಯಕ್ಷರು ಹಾಗೂ ನಾಯಕರಿಂದ ಶಿಫಾರಸುಗೊಂಡವರಲ್ಲ. ಹಾಗೆಯೇ ಒತ್ತಡ ಮತ್ತು ಪ್ರಭಾವ ಬಳಸಿ ಆಯ್ಕೆ ಮಾಡಿದ್ದೂ ಅಲ್ಲ. ಅಂದರೆ ಈ ಎಲ್ಲಾ ಐದು ಆಯ್ಕೆಗಳು ಪಕ್ಕಾ ಹೈಕಮಾಂಡ್ ಅಂದರೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಪಕ್ಷದ ವರಿಷ್ಠ ಅಮಿತ್ ಶಾ ಅವರ ನೇರ ಆಯ್ಕೆಯಾಗಿದೆ ಎನ್ನಲಾಗಿದೆ.

ಅಷ್ಟೇ ಅಲ್ಲ ಇಂಥವರನ್ನು ಮಂತ್ರಿ ಮಾಡಬೇಕು ಎನ್ನುವ ನಿಟ್ಟಿನಲ್ಲಿ ರಾಜ್ಯ ನಾಯಕರು ಒತ್ತಡ ಹೇರಿದ್ದ ಯಾರೊಬ್ಬರೂ ಮಂತ್ರಿಯಾಗಿಲ್ಲ ಎನ್ನಲಾಗಿದ್ದು, ಇದರೊಂದಿಗೆ ಪಕ್ಷವನ್ನು ವಿಭಿನ್ನ ದಿಕ್ಕಿನಲ್ಲಿ ಸಂಘಟನೆ ಮಾಡುವ ಯತ್ನ ನಡೆದಿದೆ ಎಂದು ತಿಳಿದು ಬಂದಿದೆ.

ಅಂದರೆ ಈತನಕ ಪಕ್ಷವನ್ನು ಹೆಚ್ಚಾಗಿ ಲಿಂಗಾಯತ ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಸಂಘಟನೆ ಮಾಡುತ್ತಿದ್ದ ವರಿಷ್ಠರು ಇನ್ನೂ ಮುಂದೆ ಒಕ್ಕಲಿಗರನ್ನೂ ಗಮನದಲ್ಲಿಟ್ಟುಕೊಂಡು ಮುನ್ನಡೆ ಯುವ ನೀಡಿದ್ದಾರೆ. ಹೀಗಾಗಿ ಸಂಪುಟದಲ್ಲಿ ರಾಜ್ಯ ದಿಂದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗದ ಸಂಸದರಿಗೆ ಸದ್ಯಕ್ಕೆ ಯಾವುದೇ ಆದ್ಯತೆ ಸಿಕ್ಕಿಲ್ಲ ಎನ್ನಲಾಗಿದೆ. ಪಕ್ಷದ ವರಿಷ್ಠರ ಈ ನಡೆಯನ್ನು ಗಮನಿಸಿದರೆ ರಾಜ್ಯದಲ್ಲಿ ಪ್ರಬಲ ಸಮುದಾಯಗಳನ್ನು ತನ್ನ ತೆಕ್ಕೆಗೆ ತಂದುಕೊಳ್ಳುವುದಲ್ಲದೆ ಕುಟುಂಬ ಮತ್ತು ಬಣ ಗಳಿಗೆ ಸೀಮಿತವಾದ ಪಕ್ಷವನ್ನು ಪರ್ಯಾಯ ವ್ಯವಸ್ಥೆಯೊಂದಿಗೆ ಬಲಗೊಳಿಸುವ ತಂತ್ರವು ಅಡಗಿದೆ ಎಂದು ಬಿಜೆಪಿ ದೆಹಲಿ ಕಚೇರಿ ಮೂಲಗಳು ತಿಳಿಸಿವೆ.

ಯಾವ ಕಾರಣಕ್ಕೆ ಯಾರಿಗೆ ಮಂತ್ರಿಗಿರಿ?

ಧಾರವಾಡದ ಪ್ರಹ್ಲಾದ ಜೋಶಿ ಸಂಪುಟದಲ್ಲಿ ಸ್ಥಾನ ಪಡೆಯುವುದರಲ್ಲಿ ಪ್ರಥಮ ಆದ್ಯತೆ ಪಡೆದಿದ್ದಾರೆ. ಹಾಗೆ ನೋಡಿದರೆ ಧಾರವಾಡ ಭಾಗದಲ್ಲಿ ಲಿಂಗಾಯತ ಸಮಾಜಕ್ಕೆ ಆದ್ಯತೆ ಸಿಗಬೇಕು ಎನ್ನುವ ನಿಟ್ಟಿನಲ್ಲಿ

ಜಗದೀಶ್ ಶೆಟ್ಟರ್ ಅವರಿಗೆ ಅವಕಾಶ ದೊರಕಿಸುವ ಪ್ರಯತ್ನ ನಡೆದಿತ್ತು. ಆದರೆ ಹೈಕಮಾಂಡ್ ಸತತ 5ನೇ ಬಾರಿಗೆ ಸಂಸದರಾಗಿ ಆಯ್ಕೆಯಾಗಿರುವ ಜೋಶಿ ಅವರಿಗೆ ಮಣೆಹಾಕಿದೆ. ಆನಂತರದಲ್ಲಿ ಚಿಕ್ಕಮಗಳೂರಿನಿಂದ ಬೆಂಗಳೂರಿಗೆ ಸ್ಥಳಾಂತರಗೊಂಡು ಜಯ ಸಾಧಿಸಿರುವ ಶೋಭಾ ಕರಂದ್ಲಾಜೆ ಅವರಿಗೆ ಹೈಕಮಾಂಡ್ ಆದ್ಯತೆ ನೀಡಿದೆ. ಇವರಿಬ್ಬರ ಆಯ್ಕೆ ವಿಚಾರದಲ್ಲಿ ಪಕ್ಷದ ಕಾರ್ಯಬದ್ಧತೆ ಹಾಗೂ ಮೋದಿ ಮತ್ತು ಅಮಿತ್ ಶಾ ಅವರ ಬಗೆಗಿನ ನಿಷ್ಠೆ ಹೆಚ್ಚು ಕೆಲಸ ಮಾಡಿದೆ ಎಂದು ಹೇಳಲಾಗಿದೆ.

ಉಳಿದಂತೆ ಎನ್.ಡಿ.ಎ ಪ್ರಾತಿನಿಧ್ಯದಲ್ಲಿ ಎಚ್.ಡಿ ಕುಮಾರಸ್ವಾಮಿ ಅವರಿಗೆ ಮಂತ್ರಿಸ್ಥಾನ ನೀಡಿ ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗರು ಕಾಂಗ್ರೆಸ್‌ನಿಂದ ಇನ್ನಷ್ಟು ಅಂತರ ಕಾಯ್ದುಕೊಳ್ಳುವಂತೆ ಮಾಡುವ ಒಳಮರ್ಮ ಅಡಗಿದೆ ಎಂದು ರಾಜಕೀಯ ಪಂಡಿತರು ವಿಶ್ಲೇಷಿಸಿದ್ದಾರೆ. ಇದೆಲ್ಲಕ್ಕಿಂತ ಮುಖ್ಯವಾಗಿ ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಪುತ್ರ ವಿಜಯೇಂದ್ರ ವಿರುದ್ಧ ದೂರುನೀಡಿ ಬಹಿರಂಗ ಸಮರ ಸಾರಿದ್ದ ವಿ. ಸೋಮಣ್ಣ ಅವರಿಗೆ ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿರುವ ಸಂದರ್ಭದಲ್ಲಿ ಮಂತ್ರಿಸ್ಥಾನ ನೀಡಿರುವುದು ಅಚ್ಚರಿ ಮೂಡಿಸಿದೆ. ಲಿಂಗಾಯತ ಸಮುದಾಯದಿಂದ ಅನೇಕ ಸಂಸದರು ಸಮರ್ಥರಿದ್ದರೂ ಅವರನ್ನೆಲ್ಲ ಪಕ್ಕಕ್ಕಿರಿಸಿ ಸೋಮಣ್ಣ ಅವರಿಗೆ ಆದ್ಯತೆ ನೀಡುವುದು ಸಮುದಾಯದಲ್ಲಿ ಪರ್ಯಾಯ ನಾಯಕತ್ವ ರೂಪಿಸುವ ಉದ್ದೇಶವಿದೆ ಎನ್ನುವ ಮಾತನ್ನು ಅಲ್ಲಗಳೆಯಲಾಗದು ಎಂದು ಪಕ್ಷದ ಮುಖಂಡರೆ ಹೇಳಿದ್ದಾರೆ.

ಮಾಜಿ ಸಿಎಂಗಳು ಏಕೆ ಮೂಲೆಗೆ ?

ಕೇಂದ್ರಮಂತ್ರಿಯಾಗುವುದು ಖಚಿತ ಎಂದು ನಿರೀಕ್ಷೆ ಮಾಡಿಸಿದ್ದ ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್



ಹಾಗೂ ಬಸವರಾಜ ಬೊಮ್ಮಾಯಿ ಅವರಿಗೆ ಸಂಪುಟದಲ್ಲಿ ಸ್ಥಾನ ಸಿಕ್ಕಿಲ್ಲ. ಜಗದೀಶ್ ಶೆಟ್ಟರ್ ಈ ಹಿಂದೆ ಪಕ್ಷ ಬಿಟ್ಟು ಹೋಗಿದ್ದು ಹಾಗೂ ಬೊಮ್ಮಾಯಿ ಅವರ ಹಿಂದೆ ರಾಜ್ಯ ನಾಯಕರ ಒತ್ತಾಯ ಒತ್ತಾಸೆಯಿರುವುದು ಕೂಡ ಮಂತ್ರಿಸ್ಥಾನ ಕೈತಪ್ಪಲು ಕಾರಣ ಎಂದು ಹೇಳಲಾಗಿದೆ. ಉಳಿದಂತೆ ಗೋವಿಂದ ಕಾರಜೋಳ ಮತ್ತು ಬಿ .ವೈ ರಾಘವೇಂದ್ರ ಅವರ ವೈಫಲ್ಯಕ್ಕೂ ರಾಜ ನಾಯಕರ ಒತ್ತಡವೇ ಕಾರಣ ಎಂದು ತಿಳಿದುಬಂದಿದೆ. ಆದರೆ ರಾಜ್ಯದ ಐವರು ಸಚಿವರ ಪೈಕಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಆದ್ಯತೆ ನೀಡದಿರುವುದು ಪಕ್ಷದಲ್ಲಿ ಕೊಂಚ ಅಸಮಾಧಾನ ಮತ್ತು ಅಪಸ್ವರಕ್ಕೆ ದಾರಿಯಾಗಬಹುದು ಎಂದು ಹೇಳಲಾಗುತ್ತಿದೆ.

ರಾಜ್ಯದಲ್ಲಿ ನಿಲ್ಲದ ಮಳೆ

ಬೆಳಗಾವಿ, ಹಾಸನ ಸೇರಿ ರಾಜ್ಯದ ಹಲವೆಡೆ ನಿಲ್ಲದ ವರುಣನ ಆರ್ಭಟ | ಮರ ಬಿದ್ದು ಯುವಕ ಸಾವು, ಅಲ್ಲಲ್ಲಿ ಅಸ್ತವ್ಯಸ್ತ

ಬೆಂಗಳೂರು: ರಾಜ್ಯದ ಉದ್ದಗಲಕ್ಕೂ ಮುಂಗಾರು ಮಳೆಯ ಆರ್ಭಟ ಮುಂದುವರಿದಿದೆ. ಎಲ್ಲ ಜಿಲ್ಲೆಗಳಲ್ಲೂ ಜೂನ್ 8 ರಿಂದ 11ರವರೆಗೂ ಮೂರು ದಿನಗಳ ಕಾಲ ಮಳೆ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಶನಿವಾರವೇ ಮುನ್ಸೂಚನೆ ನೀಡಿತ್ತು. ಅದರ ಬೆನ್ನಲ್ಲೇ ಇಂದು ಕೂಡ ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮಳೆ ಅಬ್ಬರಿಸಿದೆ. ಧಾರಾಕಾರ ಮಳೆಗೆ ಮರಗಳು ಉರುಳಿ ವಾಹನಗಳ ಸಂಚಾರಕ್ಕೆ ಅಡಚಣೆಯಾಗಿದ್ದು, ಮನೆ ಮೇಲೆ ಬಿದ್ದ ಮರ ಬೆಂಗಳೂರಿನ ಜಯನಗರದ ಮಾರೇನಹಳ್ಳಿ ಕಲಾಭವನ ಪಕ್ಕದ ಮನೆಯ ಮೇಲೆ ಶನಿವಾರ ಬೆಳಗ್ಗೆ ಭಾರಿ ಮರ ಉರುಳಿ ಮನೆಗೆ ಹಾನಿಯಾಗಿದೆ. ಮಾಲೀಕರು ಬಿಬಿಎಂಪಿ ಮತ್ತು ಸ್ಥಳೀಯ ಜನಪ್ರತಿನಿಧಿಗಳನ್ನು ಸಂಪರ್ಕಿಸಿದರೂ ರಕ್ಷಣಾ ತಂಡಗಳು ತಕ್ಷಣ ಸ್ಥಳಕ್ಕೆ ಧಾವಿಸದ ಪರಿಣಾಮ ಮನೆಯವರು ತೊಂದರೆಗೊಳಗಾದರು.

ಮರ ಬಿದ್ದು ಯುವಕ ಸಾವು: ಬಿರುಗಾಳಿ ಸಹಿತ ಭಾರಿ ಮಳೆಗೆ ಮರ ಬಿದ್ದು ಓರ್ವ ಯುವಕ ಮೃತಪಟ್ಟಿದ್ದು, ಇಬ್ಬರಿಗೆ ಗಂಭೀರ ಗಾಯಗಳಾಗಿರುವ ಘಟನೆ ಬೆಳಗಾವಿ ತಾಲೂಕಿನ ಬೆಳಗುಂದಿ ಗ್ರಾಮದ ಬಳಿ ನಡೆದಿದೆ. ಕರ್ಲೆ ಗ್ರಾಮದ ಸೋಮನಾಥ್ ಮುಚ್ಚಂಡಿಕರ್(21) ಮೃತ ಯುವಕ. ವಿಠಲ್ ತಳವಾರ್, ಸ್ವಪ್ನಿಲ್ ದೇಸಾಯಿ ಎಂಬುವರಿಗೆ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೂವರು ಬೈಕ್‌ನಲ್ಲಿ ಬೆಳಗಾವಿಗೆ ತೆರಳುತ್ತಿದ್ದಾಗ ಮರ ಬಿದ್ದು ದುರಂತ ಸಂಭವಿಸಿದೆ. ಸ್ಥಳೀಯರ ನೆರವಿನಿಂದ ಮರ ತೆರವುಗೊಳಿಸಲಾಗಿದೆ. ಬೆಳಗಾವಿ ಗ್ರಾಮೀಣ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಉತ್ತರ ಕನ್ನಡದಲ್ಲಿ ನಿಲ್ಲದ ವರ್ಷಧಾರೆ: ಉತ್ತರ ಕನ್ನಡ ಜಿಲ್ಲೆಯಲ್ಲಿ ಧಾರಾಕಾರ ಮಳೆ ಮುಂದುವರೆದಿದ್ದು, ಕುಮಟಾದಲ್ಲಿ 15ಕ್ಕೂ ಹೆಚ್ಚು ಮನೆಗಳಿಗೆ ಮಳೆ ನೀರು ನುಗ್ಗಿದೆ. ಕುಮಟಾ ಪುರಸಭಾ ವ್ಯಾಪ್ತಿಯ ಸಸಿಹಿತ್ಲು ವ್ಯಾಪ್ತಿ ಪ್ರದೇಶದಲ್ಲಿ ಘಟನೆ ನಡೆದಿದೆ. ಸಮರ್ಪಕವಾಗಿ ರಾಜಕಾಲುವೆ ನಿರ್ಮಿಸದೆ ಪುರಸಭೆ ಸಿಬ್ಬಂದಿ ನಿರ್ಲಕ್ಷ್ಯ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇನ್ನೂ ಹೆಚ್ಚಿನ ಮಳೆಯಾದರೆ ಹಲವು ಮನೆಗಳಿಗೆ ನೀರು ನುಗ್ಗುವ ಭೀತಿ ಜನರಲ್ಲಿ ಆರಂಭವಾಗಿದೆ.

ಮೇಲ್ಮನೆಯಲ್ಲಿ ಮೈತ್ರಿಗೆ ಮೇಲುಗೈ

← ಮೊದಲಪುಟದಿಂದ

2026ರವರೆಗೆ ಇದೇ ಸ್ಥಿತಿ: ಈ ಬಾರಿ ಪದವೀಧರ ಕ್ಷೇತ್ರದಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಮೂಲಕ ಬಹುಮತದ ಲೆಕ್ಕಾಚಾರದಲ್ಲಿದ್ದ ರಾಜ್ಯ ಕಾಂಗ್ರೆಸ್ ನಾಯಕರಿಗೆ ಹಿನ್ನಡೆಯಾಗಿದ್ದು, ವಿಧಾನ ಪರಿಷತ್‌ನಲ್ಲಿ ಬಹುಮತ ಪಡೆಯಲು ಕಾಂಗ್ರೆಸ್ 2026ರವರೆಗೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಜೆಪಿ-ಜೆಡಿಎಸ್ ದೋಸ್ತಿ ಪಕ್ಷಗಳೇ 2026ರ ಜುಲೈವರೆಗೆ ವಿಧಾನ ಪರಿಷತ್‌ನಲ್ಲಿ ಮೇಲುಗೈ ಹೊಂದಿರಲಿವೆ ಎನ್ನುವುದು ಸ್ಪಷ್ಟ.

ಜಗದೀಶ್ ಶೆಟ್ಟರ್ ರಾಜೀನಾಮೆಯಿಂದ ವಿಧಾನಸಭೆಯಿಂದ ಪರಿಷತ್‌ಗೆ ಆಯ್ಕೆಯಲ್ಲಿನ ಒಂದು ಸ್ಥಾನ ತೆರವಾಗಿದೆ. ವಿಧಾನಸಭೆಯಲ್ಲಿನ ಸಂಖ್ಯಾಬಲದ ಆಧಾರದಲ್ಲಿ ಆ ಸ್ಥಾನ ಕಾಂಗ್ರೆಸ್ ಪಾಲಾಗಲಿದೆ. ಈ ಸ್ಥಾನಕ್ಕೆ ಈಗಾಗಲೇ ಕಾಂಗ್ರೆಸ್ ಬಸನಗೌಡ ಬಾದರ್ಲಿ ಅವರನ್ನು ಆಯ್ಕೆ ಮಾಡಿದೆ. ಆ ಗೆಲುವಿನ ಬಳಿಕ ಕಾಂಗ್ರೆಸ್ ಸಂಖ್ಯಾಬಲ 35ಕ್ಕೆ ಏರಿಕೆಯಾಗಲಿದೆ.

ಇನ್ನು ಸಂಸದರಾಗಿರುವ ಕೋಟ ಶ್ರೀನಿವಾಸ್ ಪೂಜಾರಿ ರಾಜೀನಾಮೆಯಿಂದ ಮೇಲ್ಮನೆಯಲ್ಲಿ ಮತ್ತೊಂದು ಸ್ಥಾನ ತೆರವಾಗಲಿದೆ. ಕೋಟ ಅವರು ದಕ್ಷಿಣ ಕನ್ನಡದ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಜನವರಿ 2025ರಲ್ಲಿ ಜೆಡಿಎಸ್ ನಾಮನಿರ್ದೇಶಿತ ಕೆ.ಎ.ತಿಪ್ಪೇಸ್ವಾಮಿ ನಿವೃತ್ತಿ ಬಳಿಕ ಮತ್ತೊಂದು ಸ್ಥಾನ ಕಾಂಗ್ರೆಸ್ ಪಾಲಾಗಲಿದೆ. ಒಂದು ವೇಳೆ ಕೋಟ ಶ್ರೀ ನಿವಾಸ್ ಪೂಜಾರಿಯಿಂದ ತೆರವಾದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೆ, ಕೈ ಪಕ್ಷದ ಸಂಖ್ಯಾಬಲ 37ಕ್ಕೆ ಏರಲಿದೆ.

ಇದರ ಬಳಿಕವೂ ಬಿಜೆಪಿ-ಜೆಡಿಎಸ್ ದೋಸ್ತಿಗಳು ಮೇಲ್ಮನೆಯಲ್ಲಿ ತಮ್ಮ ಮೇಲುಗೈ ಮುಂದುವರಿಸಲಿದೆ. ಜುಲೈ 2026ರವರೆಗೆ ಆಡಳಿತಾರೂಢ ಕಾಂಗ್ರೆಸ್ ಮೇಲ್ಮನೆಯಲ್ಲಿ ಬಹುಮತ ಪಡೆಯುವುದಿಲ್ಲ. 2026 ಜೂನ್ 30ಕ್ಕೆ ವಿಧಾನಭೆಯಿಂದ ಪರಿಷತ್‌ಗೆ ಆಯ್ಕೆಯಾಗಿರುವ ಏಳು ಸದಸ್ಯರ ಕಾಲಾವಧಿ ಮುಕ್ತಾಯವಾಗಲಿದೆ. 2026ಕ್ಕೆ ಐದು ಮಂದಿ ನಾಮನಿರ್ದೇಶಿತ ಸದಸ್ಯರ ಅವಧಿ ಮುಗಿಯಲಿದೆ. ಆ ಬಳಿಕವೇ ಆಡಳಿತರೂಢ ಕಾಂಗ್ರೆಸ್‌ಗೆ ಬಹುಮತ ಬರುವ ಸಾಧ್ಯತೆ ಇದೆ.

ಮಳೆ: 5 ಜಿಲ್ಲೆಗಳಿಗೆ ರೆಡ್ ಅಲರ್ಟ್

ಬೆಂಗಳೂರು: ಮುಂಗಾರು ಮಾರುತಗಳು ರಾಜ್ಯಾದ್ಯಂತ ಆವರಿಸಿಕೊಂಡಿದ್ದು, ಹಲವು ಜಿಲ್ಲೆಗಳಲ್ಲಿ ಎರಡು ದಿನ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ.

ಕರಾವಳಿಯ ಉಡುಪಿ, ಉತ್ತರ ಕನ್ನಡ ಮತ್ತು ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗದಲ್ಲಿ ರೆಡ್ ಅಲರ್ಟ್ ಇರಲಿದೆ. ಉಳಿದಂತೆ ಬಾಗಲಕೋಟೆ, ಹಾವೇರಿ, ಕೊಪ್ಪಳ, ವಿಜಯ ಪುರ, ಶಿವಮೊಗ್ಗ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್, ಇನ್ನು ಕಲಬುರಗಿ, ಯಾದಗಿರಿ, ಬಳ್ಳಾರಿ, ಚಿಕ್ಕಮಗಳೂರು, ದಾವಣಗೆರೆ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೋಲಾರ ಸಂಸದ ಎಂ.ಮಲ್ಲೇಶ್‌ಬಾಬು ಕನಸು, ಅಭಿವೃದ್ಧಿ ಸಾಕಾರದ ನನಸು

ಶಾಶ್ವತ ನೀರಾವರಿ ಋಣ, ಉದ್ಯೋಗ ಸೃಷ್ಟಿ ಪಣ

ಕೆ.ಎಸ್.ಮಂಜುನಾಥರಾವ್

ಕೋಲಾರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮಾಡಿಕೊಂಡ ಯಡವಟ್ಟುಗಳಿಂದಾಗಿ ನಿರೀಕ್ಷೆಯಂತೆಯೇ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಎನ್‌ಡಿಎ ಅಭ್ಯರ್ಥಿ ಎಂ.ಮಲ್ಲೇಶ್‌ಬಾಬು ಅವರು 71,388 ಬಹುಮತದ ಅಂತರದಿಂದ ಜಯಭೇರಿ ಬಾರಿಸಿದ್ದಾರೆ. ಸಚಿವ ಕೆ.ಎಚ್.ಮುನಿಯಪ್ಪ ಅಳಿಯ ಚಿಕ್ಕಪೆದ್ದಣ್ಣಗೆ ಹೈಕಮಾಂಡ್ ಮಣೆಹಾಕಿದಾಗ ಸಿಡಿದೆದ್ದ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಬಣದ ನಾಲ್ವರು ರಾಜೀನಾಮೆಗೆ ಮುಂದಾದಾಗ ಸುರಕ್ಷಿತ ಅಭ್ಯರ್ಥಿ ಬೆಂಗಳೂರಿನ ಗೌತಮ್ ಅವರನ್ನು ಕೋಲಾರದ ಅಭ್ಯರ್ಥಿಯನ್ನಾಗಿಸಿದಾಗಲೇ ಕಾಂಗ್ರೆಸ್ ಸೋಲು ಕಟ್ಟಿಟ್ಟ ಬುತ್ತಿಯಾಗಿತ್ತು! ಈ ನಿಟ್ಟಿನಲ್ಲಿ ನೂತನ ಸಂಸದ ಮಲ್ಲೇಶ್ ಬಾಬು ತಮ್ಮ ಮನದಾಳದ ಮಾತುಗಳನ್ನು ವಿಶ್ವವಾಣಿಗೆ ಜತೆಗೆ ಮುಕ್ತವಾಗಿ ಹಂಚಿಕೊಂಡಿದ್ದು ಚುನಾವಣೆಯಲ್ಲಿ ಕೆ.ಎಚ್.ಮುನಿಯಪ್ಪ ಅವರ ಬೆಂಬಲಿಗರ ಸಹಕಾರವನ್ನೂ ಸಹಾ ಬಯಸಲಾಗಿತ್ತು ಎಂಬ ಬಾಂಬ್ ಸಿಡಿಸುವ ಮೂಲಕ ಕೋಲಾರ ಜಿಲ್ಲಾ ಕಾಂಗ್ರೆಸ್ ಬುಡವನ್ನೇ ಅಲ್ಲಾಡಿಸಿದ್ದಾರೆ!!

ಕೆ.ಎಚ್.ಮುನಿಯಪ್ಪ ಕುಟುಂಬಕ್ಕೆ ಕಾಂಗ್ರೆಸ್ ಟಿಕೆಟ್ ತಪ್ಪಿದ್ದರಿಂದಾಗಿ ಬೆಂಬಲಿಗರು ಮತ್ತು ಅಭಿಮಾನಿಗಳು ತಿರುಗಿಬಿದ್ದ ಪರಿಣಾಮ ನನ್ನ ಗೆಲುಗೆ ಸ್ವಲ್ಪಮಟ್ಟಿನ ಸಹಾಯ ಆಗಿದ್ದು ನಿಜ, ಅಸಮಾಧಾನಿತ ಕಾಂಗ್ರೆಸ್ ಕಾರ್ಯಕರ್ತರ ಬೆಂಬಲ ಕೋರಿದ್ದೂ ಸತ್ಯ. ಆದರೆ ಕ್ಷೇತ್ರದ ಅಭಿವೃದ್ಧಿ ಚಾರದಲ್ಲಿ ಪಕ್ಷಾತೀತವಾಗಿ ಕೆಲಸ ಮಾಡುವ ಜತೆಗೆ ಕಾಂಗ್ರೆಸ್ ಜನಪ್ರತಿನಿಧಿಗಳ ಸಹಕಾರವನ್ನೂ ಪಡೆದುಕೊಂಡು ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುತ್ತೇನೆ. ಅಭಿವೃದ್ಧಿಯಲ್ಲಿ ರಾಜಕೀಯ ಮಾಡುವುದಿಲ್ಲ.

- ಎಂ.ಮಲ್ಲೇಶ್ ಬಾಬು ಸಂಸದರು

ಸಮಚಿತ್ತ ಭಾವ, ಸಮಾಧಾನ ಅನುಭಾವ

ಮಲ್ಲೇಶ್ ನಗುವುದಿಲ್ಲ, ಸದಾ ಮುಖ ಊದಿಸಿಕೊಂಡು ಇರುತ್ತಾರೆ ಎಂಬುದು ಎಲ್ಲರ ಕಾಮೆಂಟ್. ವಾಸ್ತವದಲ್ಲಿ ಚಿತ್ರಣವೇ ಬೇರೆ. ಬಾಲ್ಯದಿಂದಲೇ ತಂದೆಯ ಐಎಎಸ್ ಅಧಿಕಾರ,ಐಶ್ವರ್ಯ ಕಂಡು ಅರಗಿಸಿಕೊಂಡ ಮಲ್ಲೇಶ್ ಸೋಲು,ಗೆಲುವು ಎಲ್ಲವನ್ನೂ ಸಮಾಧಾನ ಚಿತ್ತದಿಂದ ಹಗುರ ಮನದಿಂದ ಆಹ್ವಾದಿಸುತ್ತಾರೆ. ಎರಡು ಬಾರಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆಯಾಗಿ ತಾಯಿ ನಡೆಸಿದ ಆಡಳಿತವನ್ನು ಹತ್ತಿರದಿಂದ ಕಂಡ ಮಲ್ಲೇಶ್ ಸಮಾಧಾನದಿಂದ ಮುನ್ನಡೆಯುವ ಮನೋಭಾವಕ್ಕೆ ಜೋತು ಬಿದ್ದಿದ್ದಾರೆ. ಹೀಗಾಗಿಯೇ ಎರಡು ಬಾರಿ ಸತತ ಸೋಲು ಕಂಡರೂ ಹಿಂಜರಿಯದೇ ಜನರೊಂದಿಗೆ ಇರಲು ಸಾಧ್ಯವಾಯಿತು. ಎಂಬಿಎ ಪದವೀಧರ ಮಲ್ಲೇಶ್ ಯಶಸ್ವಿ ಉದ್ಯಮಿಯೂ ಹೌದು, ಆದ್ದರಿಂದಲೇ ರಾಜಕೀಯ, ವ್ಯಾಪಾರ, ಬದುಕು, ಜಯ-ಅಪಜಯ ಎಲ್ಲವನ್ನೂ ಸಮರ್ಪಕವಾಗಿ ಸದ್ದಿಲ್ಲದೆ ನಿರ್ವಹಿಸಿಕೊಂಡು ಹೋಗುವ ಕಲೆಯನ್ನು ಸಿದ್ಧಿಸಿಕೊಂಡಿದ್ದಾರೆಂದು ಪತ್ನಿ ಡಾ.ಮಂಜುಳಾ ಪ್ರತಿಕ್ರಿಯಿಸುತ್ತಾರೆ.

- **ನೂತನ ಸಂಸದರಾಗಿ ನಿಮ್ಮ ಮುಂದಿನ ಯೋಜನೆಗಳೇನು?**

- ಶಾಶ್ವತ ಬರದನಾಡೆಂದು ಹಣೆಪಟ್ಟಿ ಪಡೆದಿರುವ ಕೋಲಾರ ಜಿಲ್ಲೆಗೆ ಶಾಶ್ವತ ನೀರಾವರಿ ಒದಗಿಸುವುದು ನನ್ನ ಪ್ರಮುಖ ಗುರಿಯಾಗಿದ್ದು ಕೈಗಾರಿಕೆಗಳ ಸ್ಥಾಪನೆ ಮೂಲಕ ಉದ್ಯೋಗ ಸೃಷ್ಟಿಸುವುದರೊಂದಿಗೆ ಸ್ಥಳೀಯ ಯುವಕ-ಯುವತಿಯರಿಗೆ ಉದ್ಯೋಗ ಕಲ್ಪಿಸಬೇಕಾಗಿದೆ.

ಮುಖ್ಯವಾಗಿ ಬಂಗಾರಪೇಟೆ ಮತ್ತು ಕೆಜಿಎಫ್ ನಿಂದ ಪ್ರತಿದಿನ ಬೆಂಗಳೂರಿಗೆ ಉದ್ಯೋಗಕ್ಕಾಗಿ ಹೋಗುತ್ತಿರುವ 10 ಸಾರ ಯುವಶಕ್ತಿಗೆ ಸ್ಥಳೀಯವಾಗಿ ಪುನರ್ವಸತಿ ಕಲ್ಪಿಸಬೇಕಿದೆ. ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಕೈಗಾರಿಕಾ ಹಬ್ ಆರಂಭ, ಐಟಿ ಸ್ಥಾಪನೆ, ಎಪಿಎಂಸಿ ಮಾರುಕಟ್ಟೆ ವಿಸ್ತರಿಸಿ ರೈತರಿಗೆ ಸುಸಜ್ಜಿತ ಮಾರ್ಕೆಟ್ ಆರಂಭ ಆಗಬೇಕು. ಮುಖ್ಯವಾಗಿ ಕೆಸಿ ವ್ಯಾಲಿಯ ಮೂರನೇ ಹಂತದ ಶುದ್ಧೀಕರಣ ಮಾಡಬೇಕಾಗಿದೆ.

- **ಅಭಿವೃದ್ಧಿಯಲ್ಲಿ ತಾಯಿ ಮಂಗಮ್ಮ, ತಂದೆ ಮುನಿಸ್ವಾಮಿ ಸ್ಫೂರ್ತಿ ಹೇಗಿದೆ?**

- ತಾಯಿ ಮಂಗಮ್ಮ ಅವರು ಜಿಲ್ಲಾ ಪಂಚಾಯತಿ ಅಧ್ಯಕ್ಷೆಯಾಗಿ ಎರಡು ಬಾರಿ ಮಾಡಿರುವ ಸೇವೆ ಮನೆಮಾತಾಗಿದೆ. ತಂದೆ ಮುನಿಸ್ವಾಮಿ ಅವರು ಐಎಎಸ್ ಅಧಿಕಾರಿಯಾಗಿ ಕೋಲಾರದಲ್ಲಿ ಕೈಗಾರಿಕಾ ಬೆಳವಣಿಗೆಗೆ ಕಾರಣರಾಗಿದ್ದು ಇತಿಹಾಸ. ಹೀಗಾಗಿ ಅಪ್ಪ,ಅಪ್ಪನ ಸಾಧನೆಯನ್ನು ನನಗೆ ಹೋಲಿಕೆ ಮಾಡಿ ನೋಡುವುದರಿಂದಾಗಿ ಇಬ್ಬರನ್ನೂ ಮೀರಿದ ಸಾಧನೆ ಮೂಲಕ ನನ್ನತನವನ್ನು ಸಾಬೀತು ಮಾಡಬೇಕಿದೆ. ಆದ್ದರಿಂದ ನನ್ನ ಮೇಲೆ ದೊಡ್ಡ ಜವಾಬ್ದಾರಿ ಇದೆ.

- **ಕೋಲಾರ ಕ್ಷೇತ್ರಕ್ಕೆ ನೂತನ ಯೋಜನೆಗಳೇನು?**

- ಎಪಿಎಂಸಿಯಿಂದ ಕೋಲಾರ ರೈಲ್ವೆ ಸ್ಟೇಷನ್‌ಗೆ ಟ್ರ್ಯಾಕ್ ಹಾಕಿಸಿದರೆ ಕೃಷಿ ಉತ್ಪನ್ನಗಳನ್ನು ಶೀಘ್ರವಾಗಿ ಉತ್ತರ ಭಾರತಕ್ಕೆ ಕಳುಹಿಸಬಹುದಾಗಿದ್ದು ಇದರಿಂದಾಗಿ ತಾಜಾ ತರಕಾರಿ ಮಾರುಕಟ್ಟೆಗೆ ಕಳುಹಿಸುವ ಮೂಲಕ ರೈತರನ್ನು ಆರ್ಥಿಕವಾಗಿ ಸದೃಢರನ್ನಾಗಿಸಬಹುದಾಗಿದ್ದು ಖರೀದಿದಾರರಿಗೂ ಗುಣಮಟ್ಟದ ಉತ್ಪನ್ನಗಳು ದೊರೆಯುತ್ತವೆ. ಕೆಜಿಎಫ್‌ನಲ್ಲಿ ಕೆಐಡಿಬಿ ಪಡೆದುಕೊಳ್ಳುತ್ತಿರುವ ಜಮೀನಿನಲ್ಲಿ ಬೃಹತ್ ಅಂತಾರಾಷ್ಟ್ರೀಯ ಕಂಪನಿಗಳನ್ನು ಬರುವಂತೆ ಮಾಡುವ ಮೂಲಕ ಚಿನ್ನದನಾಡನ್ನು ಕೈಗಾರಿಕಾ ಹಬ್ ಮಾಡಬೇಕಿದೆ.

- **ಚುನಾವಣೆಯಲ್ಲಿ ಬಿಜೆಪಿ ಸಹಕಾರ ಹೇಗಿತ್ತು..?**

- ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಕೂಟದ ಮುಖಂಡರು ಹಾಗೂ ಕಾರ್ಯಕರ್ತರ ಶ್ರಮದಿಂದಾಗಿ ಗೆಲುವು ಸಿಕ್ಕಿದ್ದು ಅಭಿವೃದ್ಧಿ ರಾಜಕಾರಣದ ಮೂಲಕ ಎಲ್ಲರ ಋಣ ತೀರಿಸಿಕೊಳ್ಳಬೇಕಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಒಂದೇ ವರ್ಷದಲ್ಲಿ ವಿಶ್ವಾಸ ಕಳೆದುಕೊಂಡಿದ್ದು ಗ್ಯಾರಂಟಿಗಳೂ ಕೆಲಸ ಮಾಡಿಲ್ಲ. ಇಂತಹ ಸಂದರ್ಭದಲ್ಲಿ ಅಭಿವೃದ್ಧಿ ಮಂತ್ರದ ಮೂಲಕ ಜನರ ಮನಸು ಗೆಲ್ಲಬೇಕಿದ್ದು ಈ ನಿಟ್ಟಿನಲ್ಲಿ ಎತ್ತಿನಹೊಳೆ ಯೋಜನೆ ಮೂಲಕ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗೆ ಕುಡಿಯುವ ನೀರನ್ನು ತರಬೇಕಿದ್ದು ಯೋಜನೆಗೆ ವೇಗ ಕೊಡುತ್ತೇನೆ. ಕೋಲಾರ ಗಡಿಯಲ್ಲಿನ ಆಂಧ್ರದ ವಿ.ಕೋಟ, ಪಲಮನೇರು ಭಾಗದಲ್ಲಿ ಹರಿಯುತ್ತಿರುವ ನದಿ ನೀರನ್ನು ಕೋಲಾರ ಜಿಲ್ಲೆಗೆ ತರಲು ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಆಂಧ್ರದ ಟಿಡಿಪಿ ಪಕ್ಷದ ಮೇಲೆ ಪ್ರಧಾನಿ ಮೋದಿ ಅವರ ಮೂಲಕ ಒತ್ತಡ ಮಾಡಿಸಲಾಗುತ್ತದೆ.

ಬಿದ್ದಲ್ಲೇ ಎದ್ದ ಮಲ್ಲೇಶ್ ಬಂಗಾರಪೇಟೆ ಖುಷ್

ಬಂಗಾರಪೇಟೆ ವಿಧಾನಸಭಾ ಚುನಾವಣೆಯಲ್ಲಿ ಸತತ ಎರಡು ಸೋಲು ಕಂಡಿದ್ದ ಮಲ್ಲೇಶ್ ಲೋಕಸಭಾ ಚುನಾವಣೆಯಲ್ಲಿ ಅತ್ಯಧಿಕ ಲೀಡ್ ಪಡೆಯುವ ಮೂಲಕ ಬಿದ್ದಲ್ಲೇ ಎದ್ದು ಸಾಧನೆಗೈದಿದ್ದಾರೆ. ಮಂಗಮ್ಮ ಅವರು ಲೋಕಸಭೆಗೆ ಸ್ಪರ್ಧಿಸಿ ಸೋತಿದ್ದು ಇದೀಗ ಮಲ್ಲೇಶ್ ಸಂಸದರಾಗುವ ಮೂಲಕ ತಾಯಿಯ ಕನಸನ್ನು ನನಸು ಮಾಡಿದ್ದಾರೆ. ತಂದೆ ಮುನಿಸ್ವಾಮಿ ಅವರು ತಮ್ಮ 42 ವಯಸ್ಸಿನಲ್ಲಿ ಮಗ ಮುಂದೆ ಎಂಪಿ ಆಗಬೇಕೆಂದು ಕನಸು ಕಂಡಿದ್ದು , ಅದೃಷ್ಟ ಎಂಬಂತೆ 42 ವರ್ಷದ ಮಲ್ಲೇಶ್ ಇದೀಗ ತಂದೆಯ ಆಸೆ ಪೂರೈಸಿದ್ದಾರೆ!

ಕರ್ನಾಟಕ ಸರ್ಕಾರ
ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು-560 001.
ದೂ : 080-2286 4681/4604, ಫ್ಯಾಕ್ಸ್: 080-2286 4619,
ಇ-ಮೇಲ್: dof-blr-ka@nic.in,
ಟೆಂಡರ್ ಪ್ರಕಟಣೆ ಸಂಖ್ಯೆ:ಮೀನಿ/ವಾಹನ/ಹೊರಗುತ್ತಿಗೆ/36/ಇ-1416229/2024-25 ದಿನಾಂಕ: 10.06.2024
ಇ-ಟೆಂಡರ್ ಪ್ರಕಟಣೆ
2024-25ನೇ ಸಾಲಿಗೆ ಮೀನುಗಾರಿಕೆ ನಿರ್ದೇಶನಾಲಯದ ಕಛೇರಿಯ ಉಪಯೋಗಕ್ಕಾಗಿ 2017ರ ಅಥವಾ ನಂತರದ ಮಾಡೆಲ್‌ನ ಹವಾನಿಯಂತ್ರಿತ ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಹ್ಯಾಚ್ ಬ್ಯಾಕ್/ಸಿಡಾನ್ ಮಾದರಿಯ ಸ್ವಿಫ್ಟ್ ಡಿಜೈರ್/ ಟೊಯೋಟಾ ಇಟಿಓಎಸ್/ಮಾರುತಿ ವಾಹನಗಳನ್ನು ನುರಿತ ಚಾಲಕರೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆಗೆ ಒದಗಿಸಲು ಅರ್ಹ ವಾಹನ ಮಾಲೀಕರು/ಟ್ರಾವಲ್ಸ್ ಸಂಸ್ಥೆ/ಏಜೆನ್ಸಿಗಳಿಂದ ದ್ವಿ ಲಕೋಟೆ (TWO COVERS SYSTEM) ಪದ್ಧತಿಯಲ್ಲಿ ಇ-ಟೆಂಡರ್ (E-Provurement Portal ಮುಖಾಂತರ) ಆಹ್ವಾನಿಸಲಾಗಿದೆ.
ಟೆಂಡರ್ ವಿವರಗಳು : 1. ಕಛೇರಿಗಳು : ಮೀನುಗಾರಿಕೆ ನಿರ್ದೇಶನಾಲಯ ಬೆಂಗಳೂರು, **2. ವಾಹನ ವಿವರ ಹಾಗೂ ಮಾದರಿ (MODEL) :** 2017 ರ ಅಥವಾ ನಂತರದ ಮಾಡೆಲ್‌ನ ಹ್ಯಾಚ್‌ಬ್ಯಾಕ್/ಸಿಡಾನ್ ಮಾದರಿಯ ಸ್ವಿಫ್ಟ್ ಡಿಜೈರ್ / ಟೊಯೋಟಾ ಇಟಿಎಸ್, **3. ಮಾಸಿಕ ದರ ಹಾಗೂ ಇ.ಎಂ.ಡಿ. ಮೊತ್ತದ ವಿವರಗಳು :** ಗರಿಷ್ಠ **ರೂ.40,000/-** ಇ.ಎಂ.ಡಿ. ಮೊತ್ತ : **48,000/-** (ಇ.ಎಂ.ಡಿ. ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು ಬೆಂಗಳೂರು ರವರ ಹೆಸರಿಗೆ Online ನಲ್ಲಿ ಜಮಾ ಮಾಡುವುದು.
ಸೂಚನೆ: ಹೆಚ್ಚಿನ ಮಾಹಿತಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.
1) ಇ-ಟೆಂಡರ್(e-Provurement) ಗೆ ಸಂಬಂಧಿಸಿದ ದಾಖಲೆಗಳನ್ನು ಅಂತರ್ಜಾಲಕ್ಕೆ ರವಾನಿಸಲು (Upload ಮಾಡಲು): ಅಂತಿಮ ದಿನಾಂಕ ಮತ್ತು ವೇಳೆ : 24.06.2024, ಸಂಜೆ 5.00 ಗಂಟೆಗೆ. 2) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ: (ಇ-ಪೋರ್ಟಲ್‌ನಲ್ಲಿ) 26.06.2024 ಮಧ್ಯಾಹ್ನ 12.00 ಗಂಟೆಗೆ. 3) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ವೇಳೆ : ತಾಂತ್ರಿಕ ಬಿಡ್ ಅನುಮೋದನೆ ನಂತರ.
ಸಹಿ/-
ಮೀನುಗಾರಿಕೆ ನಿರ್ದೇಶಕರು
ವಾಸಾಸಂಇ/ವಾ.ಪ್ರ/215/ಶಿರಡಿ ಸಾಯಿ/2024-25

ಶಾಸಕ ಬೆಲ್ಲದ ವಿರುದ್ಧ ಜೀವ ಬೆದರಿಕೆ ದೂರು ದಾಖಲು

ಹುಬ್ಬಳ್ಳಿ: ಕೊಳಚೆ ನಿರ್ಮೂಲನಾ ಮಂಡಳಿ ನೀಡಿದ ಹಕ್ಕುಪತ್ರ ವಿತರಣೆ ಕುರಿತು ಸಲ್ಲಿಸಿದ್ದ ಅರ್ಜಿಗೆ ಸಂಬಂಧ ಜೀವ ಬೆದರಿಕೆ ಹಾಕಲಾಗಿದೆ ಎಂದು ಶಾಸಕ ಅರವಿಂದ ಬೆಲ್ಲದ,ಹುಬ್ಬಳ್ಳಿ-ಧಾರವಾಡ ಉಪಮೇಯರ್ ಸತೀಶ ಹಾನಗಲ್

ಮತ್ತು ಲಕ್ಷ್ಮಣ ಭೋವಿ ವಿರುದ್ಧ ಹಳೇಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2023 ಡಿ. 30ರಂದು ಪೊಲೀಸ್ ಕಮೀಷನರ್ ನೇತೃತ್ವದಲ್ಲಿ ಪರಿಶಿಷ್ಟ ಜಾತಿ, ಪಂಗಡದ ಕುಂದುಕೊರತೆ ಸಭೆ ನಡೆದಿತ್ತು. ಅಂದು ಪರಶುರಾಮ ದಾವಣಗೆರೆ , ಆನಂದನಗರದ ಕೃಷ್ಣಾಕಾಲೋನಿಗೆ ಸಂಬಂಧಪಟ್ಟ ಖಾಲಿ ಜಾಗವನ್ನು ಕೊಳಚೆ ನಿರ್ಮೂಲನ ಮಂಡಳಿ ಅಕ್ರಮವಾಗಿ ಹಕ್ಕುಪತ್ರ ವಿತರಿಸಿದೆ ಎಂದು ದೂರಿದ್ದರು. ಈ ಅರ್ಜಿಯನ್ನು ಹಿಂಪಡೆಯುವಂತೆ ಸತೀಶ ಹಾನಗಲ್ ಹಾಗೂ ಶಾಸಕ ಅರವಿಂದ ಬೆಲ್ಲದ ಕುಮ್ಮಕ್ಕಿನಿಂದ ಲಕ್ಷ್ಮಣ ಭೋವಿ ತಮ್ಮನ್ನು ಅವಾಚ್ಯ ಪದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದಾರೆ. ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪರಶುರಾಮ 4ನೇ ಎಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ದೂರು ದಾಖಲಿಸಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳುವಂತೆ ನ್ಯಾಯಾಲಯ ಸೂಚಿಸಿದೆ.

ಮೋದಿ ಪ್ರಮಾಣವಚನ: ಗಡಿಜಿಲ್ಲೆ ಮಹಿಳೆಗೆ ಆಹ್ವಾನ

ಚಾಮರಾಜನಗರ: ನರೇಂದ್ರ ಮೋದಿ ಮೂರನೇ ಬಾರಿಗೆ ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಸಮಾರಂಭಕ್ಕೆ ತಾಲೂಕಿನ ಉಮ್ಮತ್ತೂರು ಗ್ರಾಮದ ವರ್ಷಾ ಅವರಿಗೆ ಆಹ್ವಾನ ನೀಡಲಾಗಿತ್ತು.

ಉಮ್ಮತ್ತೂರು ಗ್ರಾಮದ ಪ್ರಗತಿಪರ ರೈತರಾದ ವರ್ಷಾ ಪ್ರಧಾನಮಂತ್ರಿ ನರೇಂದ್ರ ಮೋದಿ ಮನ್ ಕಿ ಬಾತ್ ಮಾತುಗಳಿಂದ ಪ್ರೇರಣೆಗೊಂಡು ಬಾಳೆದಿಂಡಿನಿಂದ ವಸ್ತುಗಳನ್ನು ತಯಾರಿಸಿ ಉದ್ಯಮಿಯಾಗಿದ್ದಾರೆ. ಆತ್ಮನಿರ್ಭರ ಯೋಜನೆಯ ಮೂಲಕ ಪ್ರೇರಣೆಗೊಂಡು ಬಾಳೆದಿಂಡಿನಿಂದ ವಿವಿಧ ಉತ್ಪನ್ನಗಳನ್ನು ತಯಾರಿಸಿ ಮೌಲ್ಯವರ್ಧನೆ ಮಾಡಿ ಬದುಕು ಕಟ್ಟುಕೊಂಡಿರುವ ವರ್ಷಾ ಅವರಿಗೆ ಪ್ರಧಾನಿ ಮೋದಿ ಕಾರ್ಯಾಲಯದಿಂದ ಆಹ್ವಾನಬಂದಿದೆ. ದೆಹಲಿಗೆ ತೆರಳಿದ ವರ್ಷಾ ಮೋದಿ ಮೂರನೇ ಬಾರಿ ಪ್ರಧಾನಿಯಾದ ಸಮಾರಂಭವನ್ನು ಕಣ್ತುಂಬಿಕೊಂಡಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪ್ರಮಾಣವಚನ ಕಾರ್ಯಕ್ರಮಕ್ಕೆ ಪ್ರಧಾನಮಂತ್ರಿ ಕಾರ್ಯಾಲಯದಿಂದ ಆಹ್ವಾನಿಸಿದ್ದು ತುಂಬಾ ಖುಷಿ ತಂದಿದೆ ಎಂದು ವರ್ಷಾ ಸಂತಸ ವ್ಯಕ್ತಪಡಿಸಿದ್ದಾರೆ.

2019ರಲ್ಲಿ ದೇವೇಗೌಡರನ್ನು ಸೋಲಿಸಿದ್ದು ನಾನೇ: ರಾಜಣ್ಣ

ಹಾಸನ: 2019 ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಲ್ಲಿ ದೇವೇಗೌಡರನ್ನು ಸೋಲಿಸಿದ್ದು ನಾನೇ, ಅದರಲ್ಲಿ ಅನುಮಾನ ಏನೂ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಹೇಳಿದರು.



ಪಟ್ಟಣದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮಧುಗಿರಿ ಕ್ಷೇತ್ರದಲ್ಲಿ ಬಿಜೆಪಿಗೆ ಎರಡು ಸಾವಿರ ಮತಗಳೂ ಇರಲಿಲ್ಲ. ನಾನು ಅವರಿಗೆ 80 ಸಾವಿರ ಓಟು ಕೊಡಿಸಿದ್ದೆ. ಅದರಿಂದ ದೇವೇಗೌಡರು ಸೋತರು. ತುಮಕೂರಿನಲ್ಲಿ ನಡೆದ ಅನೇಕ ಸಭೆಗಳಲ್ಲಿ ಇದನ್ನು ಹೇಳಿದ್ದೇನೆ ಎಂದರು. ಈ ಬಾರಿ ತುಮಕೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಸೋಲು ಅನುಭವಿಸಿರುವ ಬಗ್ಗೆ ಪ್ರತಿಕ್ರಿಯಿಸಿ, ಈ ಬಾರಿ ನಾನು ಹಾಸನ ಜಿಲ್ಲಾ ಉಸ್ತುವಾರಿ. ಡಾ. ಪರಮೇಶ್ವರ್ ತುಮಕೂರಿನ ಸಚಿವರು. ತುಮಕೂರು ಚುನಾವಣೆ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲು ಹೋಗಲಿಲ್ಲ. ನನ್ನ ಮಧುಗಿರಿ ಕ್ಷೇತ್ರಕ್ಕೆ ಸೀಮಿತವಾಗಿದ್ದೆ ಎಂದು ಸ್ಪಷ್ಟಪಡಿಸಿದರು. ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸದಿದ್ದರೆ ಹಾಸನಕ್ಕೆ ಬರಲ್ಲ ಎಂದು ಹೇಳಿದ್ದೆ. ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಿದ್ದಾರೆ. ಪುಟ್ಟಸ್ವಾಮಿಗೌಡರ ಹೆಸರಿನ ಆಧಾರದ ಮೇಲೆ ಹೆಚ್ಚಿನ ಮತ ಬರಲು ಸಾಧ್ಯವಾಗಿದೆ ಎಂದರು.

ರಾಮ, ಪಾಂಡವರು ತಂದೆಗೆ ಹುಟ್ಟಿದವರಲ್ಲ

ಹರಿಹರ: ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್ ಭಗವಾನ್ ಮತ್ತೊಂದು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ರಾಮಾಯಣದ ಶ್ರೀರಾಮ ಹಾಗೂ ಮಹಾಭಾರತದ ಪಾಂಡವರು ತಮ್ಮ ತಂದೆಯಿಂದ ಹುಟ್ಟಿದವರಲ್ಲ. ಈ ಮಾತಿಗೆ ಪುರಾವೆಗಳಿವೆ'ಎಂದು ಪ್ರೊ.ಕೆ.ಎಸ್.ಭಗವಾನ್ ಹೇಳಿದ್ದಾರೆ.

ಇಲ್ಲಿನ ಮೈತ್ರಿವನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಏರ್ಪಡಿಸಿದ್ದ ಆಯೋಜಿಸಿದ್ದ ಡಾ.ಅಂಬೇಡ್ಕರ್ ಹಾಗೂ ಪ್ರೊ.ಬಿ.ಕೃಷ್ಣಪ್ಪ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ರಾಮ ದಶರಥ ಮಹಾರಾಜರ ಮಗ ಎಂಬುದಷ್ಟೇ ತಿಳಿದ ವಿಷಯವಾದರೂ, ರಾಮ ದಶರಥನಿಂದ ಹುಟ್ಟಿಲ್ಲ. ಬದಲಾಗಿ ಪುರೋಹಿತನೊಬ್ಬನಿಂದ ಹುಟ್ಟಿದವನು. ಅದೇ ರೀತಿ ಮಹಾಭಾರತದಲ್ಲಿ ಬರುವ ಶಾಪಗ್ರಸ್ತ ರಾಜ ಪಾಂಡು ಐವರು ಪಾಂಡವರ ತಂದೆ ಎಂದು ಹೇಳಲಾಗುತ್ತಿದ್ದರೂ ಪಾಂಡವರು ಹುಟ್ಟಿದ್ದು ಮಾತ್ರ ದೇವತೆಗಳಿಂದ ಎಂದು ಮಹಾಭಾರತದಲ್ಲೇ ಇದೆ' ಎಂದರು. ದೇವಸ್ಥಾನ, ಪುರಾಣಗಳಿಂದ ಯಾವುದೇ ಪ್ರಯೋಜನವಿಲ್ಲ. ಈ ಪುರಾಣಗಳು ಹಾಗೂ ಮನುಸ್ಮೃತಿಯಲ್ಲಿ ಬ್ರಾಹ್ಮಣರನ್ನು ಬಿಟ್ಟು ಉಳಿದೆಲ್ಲ ಜಾತಿ, ಜನಾಂಗದವರನ್ನು ಶೂದ್ರರೆಂದು ಕರೆದಿವೆ ಎಂದರು.

ಸಮಾಚಾರ ಸಣ್ಣದಲ್ಲ

ಕಾಡಾನೆ ದಾಳಿ: ವ್ಯಕ್ತಿ ಅಪಾಯದಿಂದ ಪಾರು

ಸುಂಟಿಕೊಪ್ಪ: ಸಮೀಪದ ಏಳನೇ ಹೊಸ ಕೋಟೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ಬೆಳಿಗ್ಗೆ ಕಾಡಾನೆಯೊಂದು ಕಾಣಿಸಿಕೊಂಡಿದೆ. ಗ್ರಾಮ ಪಂಚಾಯಿತಿ ಕಚೇರಿ ಬಳಿ ಇರುವ ಸಾವಿತ್ರಿ ಎಂಬುವವರ ತೋಟದ ಮೂಲಕ ಬಂದ ಕಾಡಾನೆಯೊಂದು ಆಗ ತಾನೇ ಮಸೀದಿಗೆ ತೆರಳಿ ಪ್ರಾರ್ಥನೆ ಮುಗಿಸಿ ಬರುತ್ತಿದ್ದ ವ್ಯಕ್ತಿಯೊಬ್ಬರ ಮೇಲೆ ದಾಳಿ ನಡೆಸಿದ್ದು, ಕೂದಲೆಳೆ ಅಂತರದಲ್ಲಿ ಅವರು ಪಾರಾಗಿದ್ದಾರೆ. ಆದರೆ ಅವರ ಕಾರನ್ನು ಜಖಂಗೊಳಿಸಿದ ಆನೆ ತೋಟದೊಳಗೆ ನುಸುಳಿದೆ. ನಂತರ ಅದೇ ಮಾರ್ಗದಲ್ಲಿ ಮತ್ತೊಂದು ಕಾಡಾನೆಯೂ ಅಲ್ಲಿಗೆ ಬಂದಿದೆ. ಇದರಿಂದ ಸ್ಥಳೀಯರು ಭಯಭೀತರಾಗಿದ್ದಾರೆ.

ಪ್ರವಾಸಿತಾಣಗಳಲ್ಲಿ ಪ್ಲಾಸ್ಟಿಕ್ ನಿಷೇಧ

ಚಿಕ್ಕಮಗಳೂರು: ಮುಳ್ಳಯ್ಯನಗಿರಿ ಸೇರಿ ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿ ಪ್ಲಾಸ್ಟಿಕ್ ನಿಷೇಧ ಜಾರಿಗೊಳಿಸಿದ್ದ ಜಿಲ್ಲಾಡಳಿತ, ಕೊನೆಗೂ ಕಟ್ಟುನಿಟ್ಟಾಗಿ

ಜಾರಿಗೆ ಮುಂದಾಗಿದೆ. ಕೈಮರ ಚೆಕ್ ಪೋಸ್ಟ್ ಬಳಿ ವಾಹನಗಳ ತಪಾಸಣೆ ಆರಂಭಿಸಿದ್ದು, ಪ್ಲಾಸ್ಟಿಕ್ ಬಾಟಲಿ ವಶಪಡಿಸಿ ಕೊಳ್ಳಲಾಗುತ್ತಿದೆ. ಚಂದ್ರದ್ರೋಣ ಪರ್ವತ ಶ್ರೇಣಿಯ ಮುಳ್ಳಯ್ಯನಗಿರಿ, ದತ್ತಪೀಠ, ಸೀತಾಳಯ್ಯನಗಿರಿ, ಝರಿ ಫಾಲ್ಸ್, ಹೊನ್ನಮ್ಮನಹಳ್ಳ, ಮಾಣಿಕ್ಯಧಾರಾದಲ್ಲಿ ಸಂಪೂರ್ಣ ಪ್ಲಾಸ್ಟಿಕ್ ನಿಷೇಧಿಸಿ ಏಪ್ರಿಲ್ 14ರಂದು ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದರು. 4.99 ಲೀಟರ್ ತನಕ ನೀರು ಸಂಗ್ರಹಿಸಬಹುದಾದ ಪ್ಲಾಸ್ಟಿಕ್ ಬಾಟಲಿ, ಗುಟ್ಕಾ, ಚಿಪ್ಸ್ ಮತ್ತು ಇತರ ತಿನಿಸುಗಳ ಪ್ಯಾಕೆಟ್‌ಗಳನ್ನು ಗಿರಿ ಪ್ರದೇಶಕ್ಕೆ ಕೊಂಡೊಯ್ಯುವುದು ಮತ್ತು ಮಾರಾಟ ಮಾಡು ವುದನ್ನು ನಿಷೇಧಿಸಲಾಗಿದೆ. ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಬಸ್ ಪಲ್ಟಿ: 30 ಮಂದಿಗೆ ಗಾಯ

ಶಿವಮೊಗ್ಗ: ಚಾಲಕನ ನಿಯಂತ್ರಣ ತಪ್ಪಿ ಖಾಸಗಿ ಬಸ್ ಪಲ್ಟಿಯಾಗಿ 30 ಪ್ರಯಾಣಿಕರು ಗಾಯಗೊಂಡಿರುವ ಘಟನೆ ಸಾಗರ ತಾಲೂಕಿನ ಮುಂಬಾಳು ತಿರುವಿನಲ್ಲಿ ನಡೆದಿದೆ. 30ಕ್ಕೂ ಹೆಚ್ಚು ಪ್ರಯಾಣಿಕರೊಂದಿಗೆ ಸಾಗರದಿಂದ ಧರ್ಮಸ್ಥಳಕ್ಕೆ ತೆರಳುತ್ತಿದ್ದ ಖಾಸಗಿ ಬಸ್ ಇಂದು ಬೆಳಗ್ಗೆ ಧಾರಾಕಾರ ಮಳೆಯ ನಡುವೆ ಮುಂಬಾಳು ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಬಸ್ ಪಲ್ಟಿಯಾಗಿದೆ. ಅಪಘಾತದಲ್ಲಿ ಗಾಯಗೊಂಡ ಪ್ರಯಾಣಿಕರನ್ನು ಸಮೀಪದ ಆನಂದಪುರಂ ಆರೋಗ್ಯ ಕೇಂದ್ರಕ್ಕೆ ಕಳುಹಿಸಲಾಗಿದೆ. ಇನ್ನೂ ಕೆಲವರನ್ನು ಸಾಗರ ಹಾಗೂ ಶಿವಮೊಗ್ಗದ ಆಸ್ಪತ್ರೆಗೆ ದಾಖಲಿಸಲಾಗಿದೆ. ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಕುರಿತು ಆನಂದಪುರಂ ಪೊಲೀಸರು ತನಿಖೆ ನಡೆಸಿದ್ದಾರೆ.

ಕೆರೆ ಹೂಳು ಅವ್ಯವಹಾರ: ಬ್ಯಾನರ್ ಅಳವಡಿಕೆ

ಕೊಪ್ಪ: ತಾಲ್ಲೂಕಿನ ಹರಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿ ಗುಣವಂತೆ ಗ್ರಾಮದ ವಡ್ಡನಮಕ್ಕಿ ಕೆರೆಯಲ್ಲಿ ಸಮರ್ಪಕವಾಗಿ ಹೂಳು ತೆಗೆಯದೆ ಅವ್ಯವಹಾರ ನಡೆಸಲಾಗಿದೆ ಎಂದು ಆರೋಪಿಸಿ ಕೆರೆ

ಬಳಿ ಬ್ಯಾನರ್ ಅಳವಡಿಸಲಾಗಿದೆ. ಕೆರೆ ಅಭಿವೃದ್ಧಿಯೋ..? ಎಂಜಿನಿಯರ್ ಅಭಿವೃದ್ಧಿಯೋ..? ಎಂದು ಬ್ಯಾನರ್‌ನಲ್ಲಿ ಪ್ರಶ್ನಿಸಲಾಗಿದೆ. ₹3.79 ಲಕ್ಷ ಮೊತ್ತ ಬಿಲ್ ಮಾಡಲಾಗಿದ್ದು, ಕನಿಷ್ಠ ₹60 ಸಾವಿರ ಮೊತ್ತದಷ್ಟು ಕೂಡ ಕೆಲಸ ನಡೆದಿಲ್ಲ. ಪ್ರಜ್ಞಾವಂತ ಊರಿನ ಹಿರಿಯರು, ಚುನಾಯಿತ ಪ್ರತಿನಿಧಿಗಳು ಇದರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಮನವಿ ಮಾಡಲಾಗಿದೆ. ಹೂಳನ್ನು ತೆಗೆಯಲು ಕೊಪ್ಪದ ಬಾಳಗಡಿಯಲ್ಲಿನ ಜಿಲ್ಲಾ ಪಂಚಾಯತ್ ಎಂಜಿನಿಯರಿಂಗ್ ಕಚೇರಿಯಲ್ಲಿನ ಎಂಜಿನಿಯರ್ ನೀಡಿದ ಭರವಸೆಯನ್ನು ನಂಬಿ ಗ್ರಾಮದ ಜನರಿಗೆ ಉತ್ತಮ ನೀರು ಕೊಡಲು ಒಪ್ಪಿಕೊಂಡೆ. ಆದರೆ, ಬಿಲ್ ಮಾಡಿ ಹಣ ಪಡೆದಿದ್ದಾನೆ. ಇದರಿಂದ ನನಗೆ ನನ್ನ ಗ್ರಾಮದ ಜನರಿಗೆ ಅನ್ಯಾಯವಾಗಿದೆ ಎಂಬುದಾಗಿ ವಡ್ಡನಮಕ್ಕಿ ಕೆರೆಯೇ ಪ್ರಶ್ನಿಸುತ್ತಿರುವಂತೆ ಬ್ಯಾನರ್ ಅಳವಡಿಸಲಾಗಿದೆ.

ಸವದಿ ವಿರುದ್ಧ ನೇರ ಆರೋಪಕ್ಕೆ ಇಳಿದ ಸಚಿವ ಸತೀಶ್ ಜಾರಕಿಹೊಳಿ | ಮಂತ್ರಿಸ್ಥಾನದ ಮೇಲೆ ಕಣ್ಣಿಟ್ಟರಾ ಬೆಳಗಾವಿ ಜಿಲ್ಲೆಯ ಲಿಂಗಾಯತ ನಾಯಕರು...?

ಸವದಿಗೆ ತಪ್ಪದ ಜಾರಕಿಹೊಳಿ ಸಹೋದರರ ಕಾಟ

ಬೆಳಗಾವಿ: 2018 ರ ವಿಧಾನಸಭಾ ಚುನಾವಣೆಯಲ್ಲಿ ಅಥಣಿಯಲ್ಲಿ ಸೋತು ಸುಣ್ಣವಾಗಿದ್ದ ಲಕ್ಷ್ಮಣ ಸವದಿ ಅವರನ್ನು 2019 ರ ಯಡಿಯೂರಪ್ಪ ಸರ್ಕಾರದಲ್ಲಿ ಡಿಸಿಎಂ ಹುದ್ದೆ ನೀಡಿದ್ದ ಬಿಜೆಪಿ ಹೈಕಮಾಂಡ್ ಎಲ್ಲರ ಹುಬ್ಬು ಮೇಲೇರುವಂತೆ ಮಾಡಿತ್ತು. ಆಗಿನಿಂದಲೇ ಜಾರಕಿಹೊಳಿ ಸಹೋದರರು ಮತ್ತು ಸವದಿ ನಡುವೆ ಪ್ರಾರಂಭವಾದ ಒಳಜಗಳ, ಸವದಿ ಕಾಂಗ್ರೆಸ್ ಸೇರಿದ ನಂತರವೂ ಪಕ್ಷದಲ್ಲಿ ತಿಕ್ಕಾಟ ಮುಂದುವರಿದಿದೆ.

ಬೆಳಗಾವಿ ಜಿಲ್ಲಾ ರಾಜಕಾರಣದಲ್ಲಿ ತಮ್ಮದೇ ವೈಯಕ್ತಿಕ ವರ್ಚಸ್ಸು ಹೊಂದಿರುವ ಜಾರಕಿಜೊಳಿ ಹಾಗೂ ಸವದಿ ಕುಟುಂಬ ಆಗಾಗ್ಗೆ ಆಂತರಿಕ ಜಗಳದ ಮೂಲಕ ರಾಜ್ಯದ ಗಮನ ಸೆಳೆಯುವುದು ಸರ್ವೇ ಸಾಮಾನ್ಯ. ಬೆಳಗಾವಿ ಡಿಸಿಸಿ ಬ್ಯಾಂಕ್ ಚುನಾವಣೆಯಿಂದ ಹಿಡಿದು ಪ್ರತಿಯೊಂದು ಸ್ಥಳೀಯ ಸಂಸ್ಥೆ ಚುನಾವಣೆ ನಡೆದರೂ ಈ ಎರಡು ಕುಟುಂಬಗಳ ನಡುವೆ ಒಂದಿಲ್ಲೊಂದು ರೀತಿಯ ತಿಕ್ಕಾಟ ಇದ್ದೇ ಇದೆ. 2023 ರ ವಿಧಾನಸಭಾ ಚುನಾವಣೆಯಲ್ಲಿ ಅಥಣಿ ಬಿಜೆಪಿ ಟಿಕೆಟ್ ವಿಚಾರವಾಗಿ ಮುನಿಸಿಕೊಂಡು ಲಕ್ಷ್ಮಣ ಸವದಿ ಕಾಂಗ್ರೆಸ್ ಸೇರ್ಪಡೆಯಾಗಿದ್ದರು. ಉತ್ತರ ಕರ್ನಾಟಕ ಭಾಗದ ಅನೇಕ

ಕ್ಷೇತ್ರಗಳಲ್ಲಿ ತಮ್ಮ ವರ್ಚಸ್ಸು ಬಳಸಿಕೊಂಡಿದ್ದ ಸವದಿ ಕಾಂಗ್ರೆಸ್ ಗೆಲುವಿಗೆ ಕಾರಣರಾಗಿದ್ದರು. ಸವದಿ ಆಗಮನದಿಂದ ಉತ್ತರ ಕರ್ನಾಟಕ ಭಾಗದಲ್ಲಿ ದೊಡ್ಡ ಶಕ್ತಿ ಬಂದಂತಾಗಿದೆ ಎಂದು ಸ್ವತಃ ಸಿಎಂ ಹಾಗೂ ಡಿಸಿಎಂ ಇಬ್ಬರು ಬಹಿರಂಗವಾಗಿ ಒಪ್ಪಿಕೊಂಡಿದ್ದರು.

ವಿಧಾನಸಭಾ ಚುನಾವಣೆ ಮುಗಿದು ಕೇವಲ ಒಂದು ವರ್ಷ ಕಳೆಯುವ ಒಳಗಾಗಿ ಸವದಿ ಹಾಗೂ ಕಾಂಗ್ರೆಸ್ ನಾಯಕರ ನಡುವೆ ಜಟಾಪಟಿ ಜೋರಾಗಿದೆ. ಸ್ವತಃ ಬೆಳಗಾವಿ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಲಕ್ಷ್ಮಣ ಸವದಿ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದು, ಸ್ಥಳೀಯ ಹಾಗೂ ವಲಸಿಗರು ಎಂಬ ಕಾರ್ಡ್ ಬಳಸುವ ಮೂಲಕ ಮತ್ತೊಂದು ಸುತ್ತಿನ ರಾಜಕೀಯ ಆಟಕ್ಕೆ ಮುಂದಾಗಿದ್ದಾರೆ.

ಸವದಿ ಮಂತ್ರಿಸ್ಥಾನಕ್ಕೆ ಕುತ್ತು?

ಬೆಳಗಾವಿ ರಾಜಕಾರಣದ ಸೂತ್ರಧಾರ ಎಂದೇ ಹೆಸರು ಪಡೆದಿರುವ ಸಚಿವ ಸತೀಶ್ ಜಾರಕಿಹೊಳಿ ಸವದಿ ವಿರುದ್ಧ ಸಿಡಿದೆದ್ದಿದ್ದು, ಇದರಿಂದ ಭವಿಷ್ಯದಲ್ಲಿ ಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ಸವದಿಗೆ ಹಿನ್ನಡೆ ಆಗಲಿದೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಜೋರಾಗಿವೆ. ಲೋಕಸಭಾ ಚುನಾವಣೆ ಆದ ಕೆಲ ಹಿನ್ನಡೆಯನ್ನೇ ಸಚಿವ ಸತೀಶ್ ಕಾಂಗ್ರೆಸ್ ಮುಖಂಡರ ಮುಂದಿಡುವ ಮೂಲಕ ಸವದಿಗೆ ಸಂಕಷ್ಟ ತಂದರೂ ಅಚ್ಚರಿ ಪಡಬೇಕಿಲ್ಲ. ಜಾರಕಿಹೊಳಿ ತಮ್ಮ ಪುತ್ರಿಯ ಚುನಾವಣೆಯಲ್ಲಿ ಆದ ಅನ್ಯಾಯವನ್ನು ಗಟ್ಟಿ ಧ್ವನಿಯಲ್ಲಿ ಹೇಳುವ ಮೂಲಕ ತಮ್ಮ ರಾಜಕೀಯ ವಿರೋಧಿಗಳಿಗೆ ಎಚ್ಚರಿಕೆ ಸಂದೇಶ ನೀಡುತ್ತಿರುವುದಂತೂ ಸ್ಪಷ್ಟ.

ಸಹಜವಾಗಿ ಇಂತಹ ಬೆಳವಣಿಗೆ ಸವದಿ ಅವರಿಗೆ ಕೊಂಚಮಟ್ಟಿಗೆ ನಿರಾಸೆ ಮೂಡಿಸಿದೆ ಎಂದು ಹೇಳಲಾಗುತ್ತಿದೆ.

ಸಚಿವ ಸ್ಥಾನದ ಮೇಲೆ ಲಿಂಗಾಯತರ ಕಣ್ಣು ?

ಲೋಕಸಭಾ ಚುನಾವಣಾ ಫಲಿತಾಂಶದ ನಂತರ ಬೆಳಗಾವಿ ಜಿಲ್ಲೆಯ ರಾಜಕಾರಣದಲ್ಲಿ ತೀವ್ರ ಬೆಳವಣಿಗೆಗಳಾಗುತ್ತಿದ್ದು ಪ್ರಬಲ ವೀರಶೈವ -ಲಿಂಗಾಯತ ಸಮುದಾಯದ ಕೆಲ ಶಾಸಕರು ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಸಿಎಂ ಸಿದ್ದರಾಮಯ್ಯ ಆಪ್ತಬಳಗದಲ್ಲಿ ಒಬ್ಬರಾದ ರಾಮದುರ್ಗ ಶಾಸಕ ಅಶೋಕ್ ಪಟ್ಟಣ, ಬೈಲಹೊಂಗಲ ಶಾಸಕ ಮಹಾಂತೇಶ್ ಕೌಜಲಗಿ ಹಾಗೂ ಚಿಕ್ಕೋಡಿ -ಸದಲಗಾ ಶಾಸಕ ಹಾಗೂ ಮಾಜಿ ಸಚಿವ ಪ್ರಕಾಶ್ ಹುಕ್ಕೇರಿ ಪುತ್ರ ಗಣೇಶ್ ಹುಕ್ಕೇರಿ ಮಂತ್ರಿಸ್ಥಾನಕ್ಕೆ ಪ್ರಯತ್ನಿಸುತ್ತಿದ್ದಾರೆ. ಈ ಕುರಿತು ಕಾಂಗ್ರೆಸ್ ನ ಹಿರಿಯ ನಾಯಕರ ಮುಂದೆ ಶಾಸಕರು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಅಂದು ರಮೇಶ್ , ಇಂದು ಸತೀಶ್ ಏನಿದರ ಗುಟ್ಟು...?: ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಸವದಿ ವಿರುದ್ಧ ಬಹಿರಂಗ ಸಮರಕ್ಕೆ ಇಳಿದಿದ್ದರು. ಇದರ ಪರಿಣಾಮ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಠಕ್ಕೆ ಬಿದ್ದು ಸವದಿ ಬದಲಿಗೆ ತಮ್ಮ ಆಪ್ತ ಮಹೇಶ್ ಕುಮಠಳ್ಳಿಗೆ ಅಥಣಿ ಬಿಜೆಪಿ ಟಿಕೆಟ್ ಕೊಡಿಸುವಲ್ಲಿ ಯಶಸ್ವಿಯಾಗಿದ್ದರು. ನಂತರ ಸವದಿ ಮುನಿಸಿಕೊಂಡು ಬಿಜೆಪಿ ತೊರೆದು ''ಬಳು ಹೊಕ್ಕ ಮನೆ ಅಳುವು'' ಆಗಿತ್ತೆಂದು ಹೇಳುವ ಮೂಲಕ ರಮೇಶ್ ಜಾರಕಿಹೊಳಿ ವಿರುದ್ಧ ಆಕ್ರೋಶ ಹೊರಹಾಕಿದ್ದರು.

ಕಾಂಗ್ರೆಸ್ ಸೇರ್ಪಡೆಯಾದ ಲಕ್ಷ್ಮಣ ಸವದಿ ಸಿದ್ದರಾಮಯ್ಯ ಸರ್ಕಾರದಲ್ಲಿ ಮಂತ್ರಿ ಸ್ಥಾನದ ನಿರೀಕ್ಷೆಯಲ್ಲಿದ್ದರು. ಆದರೆ ಈಗ ಸಚಿವ ಸತೀಶ್ ಜಾರಕಿಹೊಳಿ ಬಹಿರಂಗ ಸಮರಕ್ಕಿಳಿದಿರುವುದು ಸವದಿಗೆ ಕೊಂಚ ನಿರಾಸೆ ಮೂಡಿಸಿದಂತೆ ಕಾಣುತ್ತಿದೆ. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ತಾವು ಪ್ರತಿನಿಧಿಸುವ ಅಥಣಿ ಕ್ಷೇತ್ರದಲ್ಲಿ ಬಿಜೆಪಿಗೆ 8 ಸಾವಿರಕ್ಕೂ ಅಧಿಕ ಮತಗಳ ಲೀಡ್ ನೀಡಿದ್ದು ಸತೀಶ್ ಸಿಟ್ಟಿಗೆ ಕಾರಣವಾಗಿದೆ. ವಿಧಾನಸಭಾ ಚುನಾವಣೆಯಲ್ಲಿ 75 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಗೆದ್ದ ಸವದಿ ಈಗ ಲೋಕಸಭಾ ಚುನಾವಣೆಯಲ್ಲಿ ನಮಗೆ ಮೋಸ ಮಾಡಿದ್ದಾರೆ ಎಂಬುದು ಸತೀಶ್ ಜಾರಕಿಹೊಳಿ ವಾದ.

ಕೋತಿಗಳು ನಿಗೂಢ ಸಾವು ಪ್ರಕರಣ

ಕೆಎಫ್‌ಡಿ ಸೋಂಕು ಶಂಕೆ!

ಚಿಕ್ಕಮಗಳೂರು: ಚಿಕ್ಕಮಗಳೂರಿನ 34 ಮಂಗಗಳ ಸಾವಿಗೆ ನಿಖರವಾದ ಕಾರಣ ಇನ್ನೂ ತಿಳಿದುಬಂದಿಲ್ಲ, ಆದರೆ ಮಂಗನ ಕಾಯಿಲೆ(ಕೆಎಫ್‌ಡಿ) ವೈರಸ್ ಸೋಂಕು ತಗುಲಿರುವ ಕುರಿತು ಶಂಕೆಗಳು ವ್ಯಕ್ತವಾಗತೊಡಗಿವೆ.

ಮುಂಜಾಗ್ರತಾ ಕ್ರಮವಾಗಿ ಈ ಪ್ರದೇಶವನ್ನು ಸ್ವಚ್ಛಗೊಳಿಸಿ ಶಿವಮೊಗ್ಗ ಮೂಲದ ಕೆಎಫ್‌ಡಿ ಸಂಶೋಧನಾ ಕೇಂದ್ರಕ್ಕೆ ಮಾದರಿಗಳನ್ನು ಕಳುಹಿಸಲಾಗಿದೆ ಎಂದು ಎನ್‌ಆರ್ ಪುರ ತಾಲೂಕಿನ ಡಾ. ವಿಜಯಕುಮಾರ್ ಅವರು ತಿಳಿಸಿದ್ದಾರೆ.

ಅಗತ್ಯವಿದ್ದರೆ, ಮಾದರಿಗಳನ್ನು ಪುಣೆ ಸಂಶೋಧನಾ ಕೇಂದ್ರಕ್ಕೆ ಕಳುಹಿಸಲಾಗುವುದು. ಸ್ಥಳದಲ್ಲಿ ಮೆಲಥಿಯಾನ್ ಪುಡಿಯನ್ನು ಸಿಂಪಡಿಸಲಾಗಿದ್ದು, ಜನರಿಗೆ ಡಿಇಎಫ್ ಎಣ್ಣೆಯನ್ನು ವಿತರಿಸಲಾಗಿದೆ ಎಂದು ಹೇಳಿದ್ದಾರೆ. ಅರಣ್ಯಾಧಿಕಾರಿ ರಂಗನಾಥ್ ಅವರು ಘಟನೆಯ ಕುರಿತು ಎನ್ ಆರ್ ಪುರ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದು, ತನಿಖೆಗೆ ಆದೇಶಿಸಿದ್ದಾರೆ. ಟೈರ್ ಗುರುತುಗಳ ಆಧಾರದ ಮೇಲೆ ಟ್ರಕ್ನಿಂದ ಮಂಗಗಳನ್ನು ರಸ್ತೆಗೆ ಎಸೆಯಲಾಗಿದ್ದು, ವಾಹನಕ್ಕಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ. ಮಂಗನ ಜ್ವರ ಎಂದೂ ಕರೆಯಲ್ಪಡುವ ಕೆಎಫ್‌ಡಿ ಪ್ರಕರಣಗಳು ಶಿವಮೊಗ್ಗ ಜಿಲ್ಲೆಯ ಪಕ್ಕದ ತಾಲ್ಲೂಕುಗಳಲ್ಲಿ ವರದಿಯಾಗಿದ್ದು, ಎನ್‌ಆರ್ ಪುರ ಶಿವಮೊಗ್ಗಕ್ಕೆ ಬಹಳ ಹತ್ತಿರದಲ್ಲಿದ್ದು, ಈ ಹಿನ್ನೆಲೆಯಲ್ಲಿ ಶಂಕೆಗಳು ವ್ಯಕ್ತವಾಗಿದೆ.

ಪರೀಕ್ಷೆಗಾಗಿ ಶಿವಮೊಗ್ಗಕ್ಕೆ ಮೂರ್ನಾಲ್ಕು ಮಂಗಗಳನ್ನು ಮಾತ್ರ ಕಳುಹಿಸಲಾಗಿದೆ. ಅರಣ್ಯ ಇಲಾಖೆ ನಿಯಮ ಪ್ರಕಾರ ಎಲ್ಲಾ ಕೋತಿಗಳ ಶವಗಳ 2 ಮಾದರಿಗಳನ್ನು ಕಳುಹಿಸಬೇಕು. ಕೆಲವೊಮ್ಮೆ ಸಿಸಿಎಂಬಿ, ಹೈದರಾಬಾದ್ ಅಥವಾ ಭಾರತೀಯ ವನ್ಯಜೀವಿ ಸಂಸ್ಥೆ, ಡೆಹ್ರಾಡೂನ್ ಅಥವಾ ಕೋರಮಂಗಲದಲ್ಲಿರುವ ಸಂಶೋಧನಾ ಕೇಂದ್ರಕ್ಕೆ ಕಳುಹಿಸಬೇಕಾಗುತ್ತದೆ .

ಜಿ.ಕೆ.ಸುದರ್ಶನ್ ,
ಕೊಪ್ಪ ಉಪವಿಭಾಗದ ಎಸಿಎಫ್

ಅಕ್ರಮಗಳನ್ನು ಸರಕಾರ ಬಯಲಿಗೆಳೆಯಲಿ

ಅನುದಾನ ದುರ್ಬಳಕೆ ತನಿಖೆಗೆ ಗೂಳಿಹಟ್ಟಿ ಆಗ್ರಹ

ಹೊಸದುರ್ಗ: ವಿವೇಚನಾ ಕೋಟಾ ಹೆಸರಿನಲ್ಲಿ ಭೋವಿ ಅಭಿವೃದ್ಧಿ ನಿಗಮದ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಇದು ಯಾವ ಸಚಿವರ ಅವಧಿಯಲ್ಲಿ ಆಗಿದೆ

ಎಂಬುದರ ಬಗ್ಗೆ ತನಿಖೆಯಾಗಬೇಕು ಎಂದು ಮಾಜಿ ಶಾಸಕ ಗೂಳಿಹಟ್ಟಿ ಡಿ.ಶೇಖರ್ ಮತ್ತೆ ಆರೋಪಿಸಿದ್ದಾರೆ.

ಭೋವಿ ನಿಗಮಕ್ಕೆ 2018-19ರಲ್ಲಿ ₹127 ಕೋಟಿ, 2019-20ರಲ್ಲಿ ₹119 ಕೋಟಿ ಹಣ ಬಂದಿತ್ತು. 2020-21ನೇ ಸಾಲಿನಲ್ಲಿ ₹106 ಕೋಟಿ, 2021-22ರಲ್ಲಿ ₹40 ಕೋಟಿ, 2022-23ರಲ್ಲಿ ₹107 ಕೋಟಿ ಸೇರಿ ಈವರೆಗೆ ಒಟ್ಟು ₹499 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಆದರೆ ವಿವೇಚನಾ ಕೋಟಾದ ಹೆಸರಿನಲ್ಲಿ ನಿಯಮ ಮೀರಿ ಹಣ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಗೂಳಿಹಟ್ಟಿ ತಮ್ಮ ಹೇಳಿಕೆಯಲ್ಲಿ ದೂರಿದ್ದಾರೆ.

ಕಲಬುರಗಿ ಹಾಗೂ ರಾಯಚೂರು ಜಿಲ್ಲೆಗೆ ವಿವೇಚನಾ ಕೋಟಾದಡಿ ₹20 ಕೋಟಿ ನೀಡಲಾಗಿದೆ. ಕಿರಾಣಿ ಅಂಗಡಿಗೆ ನೀಡುವ ಸಾಲದಲ್ಲಿ ಫಲಾನುಭವಿ ಹೆಸರು ತೋರಿಸಿ ಹಣ ದುರ್ಬಳಕೆ ಮಾಡಿಕೊಳ್ಳಲಾಗಿದೆ. ಶಿಕ್ಷಕರು ಮತ್ತು ಎಂಜಿನಿಯರ್‌ಗಳನ್ನು ವ್ಯವಸ್ಥಾಪಕರನ್ನಾಗಿ ಮಾಡಲಾಗಿದೆ. ಭೋವಿ ಅಭಿವೃದ್ಧಿ ನಿಗಮದಲ್ಲಿ ಮಾತ್ರ ಹೀಗೆ ನಡೆದಿದ್ದಲ್ಲ. ಎಲ್ಲ ನಿಗಮಗಳಲ್ಲಿ ಕೂಡ ಇಂತಹ ಅಕ್ರಮಗಳು ನಡೆದಿವೆ. ನಿಗಮದ ಅಕ್ರಮಗಳ ಬಗ್ಗೆ ಸರಕಾರ ತನಿಖೆ ನಡೆಸಬೇಕು ಎಂದಿದ್ದಾರೆ. ನಾನು ಹಿಟ್ ಅಂಡ್ ರನ್ ಮಾಡುವವನಲ್ಲ, ಯಾರ ಮೇಲೂ ವಿನಾಕಾರಣ ಆರೋಪ ಮಾಡುವುದಿಲ್ಲ. ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರ ಮೇಲೆ ಅಪಾರ ಗೌರವ ಇದೆ ಎಂದು ಗೂಳಿಹಟ್ಟಿ ಶೇಖರ್ ಹೇಳಿದ್ದಾರೆ.

ಅನುದಾನದ ಉದ್ದೇಶವೇನು?

ನಿಗಮದ ಅನುದಾನದಲ್ಲಿ ವಾಹನ, ವ್ಯಾಪಾರ, ಉದ್ಯೋಗಕ್ಕಾಗಿ ಸಾಲ, ಗಂಗಾಕಲ್ಯಾಣ, ಭೂಒಡೆತನ ಯೋಜನೆ ಸೇರಿದಂತೆ ಹಲವು ಯೋಜನೆಗಳಿಗಾಗಿ ಹಣವನ್ನು ಮೀಸಲಿಡಲಾಗುತ್ತದೆ. ಆದರೆ, ಅನಿಕಾ ಎಂಟರ್‌ಪ್ರೈಸಸ್‌ಗೆ ₹1.94 ಕೋಟಿ ಹಾಗೂ ಸಾಯಿ ಥೆರಪಿಸ್ಟ್ ಸಂಸ್ಥೆಗೆ ₹1.78 ಕೋಟಿ ಹಣ ನೀಡಲಾಗಿದೆ. ಈ ಸಂಸ್ಥೆಗಳ ವಿವರ ಹಾಗೂ ಯಾವ ಉದ್ದೇಶಕ್ಕೆ ಅನುದಾನ ನೀಡಲಾಯಿತು ಎಂಬುದಕ್ಕೆ ಉತ್ತರ ಸಿಗಬೇಕಿದೆ ಎಂದು ಗೂಳಿಹಟ್ಟಿ ಶೇಖರ್ ಆಗ್ರಹಿಸಿದ್ದಾರೆ.

ಹಮ್ ದೋ ಹಮಾರೆ ಬಾರಾ ಸಿನಿಮಾ ನಿಷೇಧ

ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆ: ಚೇತನ್ ಕಿಡಿ

ಶಿವಮೊಗ್ಗ: ಹಮ್ ದೋ ಹಮಾರೆ ಬಾರಾ ಚಲನಚಿವನ್ನು ರಾಜ್ಯದಲ್ಲಿ ನಿಷೇಧಿಸಿರುವುದು ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆ ಎಂದು ನಟ ಚೇತನ್ ಅಹಿಂಸಾ ಸರ್ಕಾರದ



ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿನಿಮಾ ನೋಡದೇ ಬರೀ ಟ್ರೈಲರ್ ನೋಡಿ ನಿಷೇಧಿಸಿರುವುದು ಎಷ್ಟು ಸರಿ ಎಂದು ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದ ಅವರು, ಇದರ ಹಿಂದೆ ರಾಜ್ಯ ಸರ್ಕಾರದ ಓಲೈಕೆ ತಂತ್ರವೂ ಅಡಗಿದೆ ಎಂದರು.

ಕೋಟಿಗಟ್ಟಲೆ ಖರ್ಚುಮಾಡಿ ನಿರ್ಮಿಸಿದ ಸಿನಿಮಾವನ್ನು ನಿಷೇಧ ಮಾಡಿದರೆ ಹೇಗೆ? ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಯಾರೂ ಹತ್ತಿಕ್ಕಬಾರದು. ಅಷ್ಟಕ್ಕೂ ಈ ಚಿತ್ರಕ್ಕೆ ಸೆನ್ಸಾರ್ ಮಂಡಳಿ ಒಪ್ಪಿಗೆ ನೀಡಿದೆ. ಮಹಾರಾಷ್ಟ್ರದಲ್ಲಿ ಈ ಸಿನಿಮಾ ಪ್ರದರ್ಶನಕ್ಕೆ ಮುಂಬೈ ಹೈ ಕೋರ್ಟ್ ಅನುಮತಿ ನೀಡಿದೆ ಎಂಬುದನ್ನು ಸರ್ಕಾರ ಗಮನಿಸಬೇಕು ಎಂದು ಚೇತನ್ ಹೇಳಿದರು. ಕೆಲವರು ಟ್ರೈಲರ್ ನೋಡಿಯೇ ನಿಷೇಧಿಸುವಂತೆ ಆಗ್ರಹಿಸಿದ್ದರು. ವಾಸ್ತವದಲ್ಲಿ ಚಿತ್ರದ ಟೈಟಲ್ ಬದಲಾವಣೆಯಾಗಿದ್ದರೆ ಸಾಕಿತ್ತು. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಕಾಶ್ಮೀರ ಫೈಲ್ ಚಿತ್ರ ನಿಷೇಧಿಸಿದ್ದರು. ಅದು ಸರಿಯಲ್ಲ ಎಂದರು. ಚುನಾವಣೆ ಮುಗಿದಿದೆ. ಈಗಲಾದರೂ ಸರ್ಕಾರ ಜಾತಿಗಣತಿ ವರದಿ ಅನುಷ್ಠಾನಗೊಳಿಸಬೇಕು. ₹200 ಕೋಟಿ ವ್ಯಯಿಸಿ ಜಾತಿಗಣತಿ ವರದಿ ಸಿದ್ಧಪಡಿಸಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ವರ್ಷ ಕಳೆದರೂ ಚುನಾವಣೆಗೆ ಮುನ್ನ ಕೊಟ್ಟ ಮಾತಿನಂತೆ ಜಾತಿಗಣತಿ ವರದಿ ಬಿಡುಗಡೆ ಮಾಡಿಲ್ಲ ಎಂದು ದೂರಿದರು.

ಜಾತಿಗಣತಿ ಬಿಡುಗಡೆ ಮಾಡದೇ ದಲಿತರು, ಶೋಷಿತರು, ಆದಿವಾಸಿಗಳಿಗೆ ನ್ಯಾಯ ಹೇಗೆ ಸಿಗುತ್ತದೆ ಎಂದ ಚೇತನ್, ಕಾಂಗ್ರೆಸ್ ಸರ್ಕಾರ ಕೂಡಲೇ ಅದನ್ನು ಬಿಡುಗಡೆ ಮಾಡಬೇಕು. ದೆಎನ್‌ಡಿಎ ಜೊತೆ ಹೆಜ್ಜೆ ಹಾಕಿರುವ ನಿತೀಶ್‌ಕುಮಾರ್ ಮತ್ತು ಚಂದ್ರಬಾಬು ನಾಯ್ಡು ಪ್ರಧಾನಿ ಮೋದಿ ಮೇಲೆ ಒತ್ತಡ ತಂದು ದೇಶದಲ್ಲಿ ಜಾತಿಗಣತಿ ಮಾಡಿಸಬೇಕು ಎಂದು ಒತ್ತಾಯಿಸಿದರು.

ಅಲೆಮಾರಿಗಳಿಗೆ ಶಾಶ್ವತ ಸೂರು ಕಲ್ಪಿಸಿ ತೀರ್ಥಹಳ್ಳಿ ಬಳಿಯ ಬುಕ್ಲಾಪುರದಲ್ಲಿ ನೆಲೆಸಿರುವ ಅಲೆಮಾರಿ ಸಮುದಾಯದ ದೊಂಬರಿಗೆ ಶಾಶ್ವತ ಪುನರ್ವಸತಿ ಕಲ್ಪಿಸಿ ಎಂದು ಚೇತನ್ ಅಹಿಂಸಾ ಒತ್ತಾಯಿಸಿದರು.

ಕುಮಾರ ಬಂಗಾರಪ್ಪ ಮನೆ ಮುತ್ತಿಗೆ: ಬಿಜೆಪಿ ಪ್ರತಿಭಟನೆ

ಶಿವಮೊಗ್ಗ: ಮಾಜಿ ಸಚಿವ ಕುಮಾರ್ ಬಂಗಾರಪ್ಪ ನಿವಾಸದ ಮೇಲೆ ಮುತ್ತಿಗೆ ಹಾಕಿ ಗೂಂಡಾ ವರ್ತನೆ ಮಾಡಿದ್ದನ್ನು ಖಂಡಿಸಿ, ಭಾನುವಾರ ಸೊರಬ ಪಟ್ಟಣದ ಪುರಸಭೆ ಮುಂಭಾಗದ ಸರ್ಕಲ್‌ನಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಕುಮಾರ್ ಬಂಗಾರಪ್ಪ ಅಭಿಮಾನಿಗಳು ಪ್ರತಿಭಟನೆ ನಡೆಸಿದರು.

ಸಚಿವ ಮಧು ಬಂಗಾರಪ್ಪ ಗೂಂಡಾಗಿರಿ ನಡೆಸುತ್ತಿದ್ದಾರೆ. ಚುನಾವಣೆಯಲ್ಲಿ ಸೋತ ಅವರು ಹತಾಶರಾಗಿ ಈ ರೀತಿ ದಾಳಿ ನಡೆಸಿದ್ದಾರೆ. ಇದನ್ನು ಬಿಜೆಪಿ ಉಗ್ರವಾಗಿ ಖಂಡಿಸುತ್ತದೆ. ಇಂತಹ ದಾಳಿ ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚುನಾವಣೆಯ ಸಂದರ್ಭದಲ್ಲಿ ವಿರೋಧಿಗಳನ್ನು ಟೀಕಿಸುವುದು ಸಹಜ. ಆ ಸಮಯದಲ್ಲಿ ನೀವೂ ಟೀಕಿಸಿದ್ದಿರಿ. ನಾವೂ ಟೀಕಿಸಿದ್ದೆವು. ಅದಕ್ಕಾಗಿ ಮನೆ ಮುತ್ತಿಗೆಯಂತಹ ಕೃತ್ಯಕ್ಕೆ ಮುಂದಾಗಿರುವುದು ಸೊರಬ ಕ್ಷೇತ್ರದ ಮತದಾರರಿಗೆ ಮಾಡಿದ ಅವಮಾನ. ಸಚಿವ ಮಧು ಬಂಗಾರಪ್ಪ , ಗೀತಾ ಶಿವರಾಜ್‌ಕುಮಾರ್ ಹಾಗೂ ಶಿವರಾಜ್‌ಕುಮಾರ್ ಕ್ಷೇತ್ರದ ಮತದಾರರ ಬಳಿ ಕ್ಷಮೆಯನ್ನು ಯಾಚಿಸಬೇಕು ಎಂದು ಆಗ್ರಹಿಸಿದರು.

ಬಸವ ಜಯಂತಿಯಲ್ಲಿ ಸಚಿವ ಎಂ.ಬಿ.ಪಾಟೀಲ

ಲಿಂಗಾಯತರ ಸಂಘಟನೆ ಅಗತ್ಯ

ಮೈಸೂರು: ಲಿಂಗಾಯತ ಸಮುದಾಯದ ಸಂಘಟನೆ ಮತ್ತಷ್ಟು ವ್ಯವಸ್ಥಿತವಾಗಿ ಆಗಬೇಕಾದರೆ ಉತ್ತರ ಮತ್ತು ದಕ್ಷಿಣ ಕರ್ನಾಟಕ- ಭಾಗಗಳ ಸಮಸ್ತ ಲಿಂಗಾಯತರ ಸಂಬಂಧ-ಸಂಪರ್ಕ ಗಾಢವಾಗಬೇಕಾದ ಅಗತ್ಯವಿದೆ ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ, ವೀರಶೈವ-ಲಿಂಗಾಯತ ಸಂಘಸಂಸ್ಥೆಗಳು ಮತ್ತು ಬಸವ ಬಳಗಗಳ ಒಕ್ಕೂಟದ ಆಶ್ರಯದಲ್ಲಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಉತ್ತರ ಮತ್ತು ದಕ್ಷಿಣ ಕರ್ನಾಟಕದ ಲಿಂಗಾಯತರು ಒಟ್ಟಾಗುವ ಜತೆಗೆ, ಎಲ್ಲ ಉಪಪಂಗಡಗಳನ್ನೂ ಒಂದು ಮಾಡಿ ಸಮನ್ವಯ ಸಾಧಿಸಬೇಕು. ಅನೇಕ ಉಪಪಂಗಡಗಳು ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ. ಈ ನ್ಯೂನತೆಯನ್ನು ಸರಿಪಡಿಸುವ ಕಾರ್ಯ ಮೊದಲು ಆಗಬೇಕಾಗಿದೆ. ರಾಜ್ಯದ ದಕ್ಷಿಣ ಭಾಗದಲ್ಲಿ ಸಿದ್ಧಗಂಗೆ ಮತ್ತು ಸುತ್ತೂರು ಮಠಗಳು ಅಪಾರ ಕೆಲಸ ಮಾಡಿವೆ. ಈಗ ಸಂಘಟನೆಯ ದೃಷ್ಟಿಯಿಂದ ಉತ್ತರ ಭಾಗದವರು ದಕ್ಷಿಣ ಭಾಗದವರಿಗೆ ಸ್ಪಂದಿಸುವ ಕೆಲಸ ಮಾಡಲಿದ್ದೇವೆ. ಜತೆಗೆ ಸಮುದಾಯದ ನ್ಯಾಯಯುತ ಬೇಡಿಕೆಗಳಿಗೆ ಸರಕಾರದ ಬೆಂಬಲವೂ ಇರಲಿದೆ ಎಂದು ನುಡಿದರು. ಹಿಂದಿನ ಸಲ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಇದ್ದಾಗ ಸರಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಕಡ್ಡಾಯ ಮಾಡಿದೆವು. ಬಸವಣ್ಣನವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದೆವು ಎಂದರು.

ಹನ್ನೆರಡನೇ ಶತಮಾನದಲ್ಲಿ ಅನುಭವ ಮಂಟಪ ಕಟ್ಟಿದ್ದ ಹಿರಿಮೆ ಅವರದಾಗಿದೆ. ವಚನಗಳ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸಿದ ಅವರ ತತ್ವಾದರ್ಶದಡಿ ಸಮುದಾಯದ ಸಂಘಟನೆ ಬೇಕಾಗಿದೆ ಎಂದು ಪಾಟೀಲ ಆಶಿಸಿದರು.

ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ, ಶಾಸಕರಾದ ಡಾ.ಯತೀಂದ್ರ, ವಿನಯ ಕುಲಕರ್ಣಿ ದೇವನೂರಿನ ಮಹಾಂತ ಸ್ವಾಮೀಜಿ ಭಾಗವಹಿಸಿದ್ದರು.

ದೇಸಾಯಿ ಹೆಗ್ಗಳಿಕೆ

ಲಿಂಗಾಯತರನ್ನು ಒಗ್ಗೂಡಿಸಿದ ಕೀರ್ತಿ ಶಿರಸಂಗಿಯ ಲಿಂಗರಾಜ ದೇಸಾಯಿ ಅವರಿಗೆ ಸಲ್ಲುತ್ತದೆ. ಅವರು ವೀರಶೈವ -ಲಿಂಗಾಯತ ಮಹಾಸಭೆ ಹುಟ್ಟು ಹಾಕಿದರು. ಮಂಜಪ್ಪನವರು ಬಸವ ಜಯಂತಿಗೆ ಒಂದು ಅರ್ಥಪೂರ್ಣ ರೂಪ ಕೊಟ್ಟರು. ಫ.ಗು.ಹಳಕಟ್ಟಿ ಒಟ್ಟು 700ಕ್ಕೂ ಹೆಚ್ಚು ವಚನಕಾರರನ್ನು ಗುರುತಿಸಿದರು. ಸಂಸ್ಕೃತಮಯವಾಗಿದ್ದ ಕನ್ನಡಕ್ಕೆ ಇಲ್ಲಿನ ಸಹಜರೂಪ ಕೊಟ್ಟ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ ಎಂದರು.

ದೇವಸ್ಥಾನಗಳಲ್ಲಿ ಸರಣಿ ಕಳ್ಳತನ: ನಾಗರಿಕರ ಆತಂಕ

ಚಿಕ್ಕಮಗಳೂರು: ಚಿಕ್ಕಮಗಳೂರು ತಾಲೂಕಿನ ಗ್ರಾಮೀಣ ಪ್ರದೇಶದ ಹಲವು ದೇವಸ್ಥಾನಗಳಲ್ಲಿ ಕಳ್ಳತನವಾಗಿರುವ ಪ್ರಕರಣ ನಡೆದಿದೆ.

ಚಿಕ್ಕಮಗಳೂರು ಸಮೀಪದ ಜೋಳದಾಳು ಹಾಗೂ ಸುತ್ತಮುತ್ತಲ ಪ್ರದೇಶಗಳ ದೇವಸ್ಥಾನಗಳಲ್ಲಿ ಒಂದೇ ದಿನ ರಾತ್ರಿ ಕಳ್ಳರು ಹಲವು ದೇವಸ್ಥಾನಗಳಿಗೆ ಕನ್ನ ಹಾಕಿದ್ದಾರೆ. ಜೋಳದಾಳು ಮತ್ತು ಸಮೀಪದ

ಮೈಲಿಮನೆ ಎರಡು ದೇವಸ್ಥಾನಗಳಲ್ಲಿ ಕಳ್ಳರು ದೇವರ ಗುಡಿಯನ್ನು ಒಡೆದಿದ್ದು ಜೊತೆಗೆ ದೇವರ ವಿಗ್ರಹದ ಕಿವಿಯ ಭಾಗವನ್ನೇ ಕತ್ತರಿಸಿಕೊಂಡು ಹೋಗಿದ್ದಾರೆ. ಜೋಳದಾಳು ಗ್ರಾಮದ ದೇವಸ್ಥಾನದ ಬಾಗಿಲು ಒಡೆಯಲು ಪ್ರಯತ್ನಿಸಿದ್ದು ಅದರಲ್ಲಿ ವಿಫಲರಾದ ಕಳ್ಳರು ಹೊರಗಡೆಯ ಕಾಣಿಕೆ ಡಬ್ಬದಿಂದ ಹಣವನ್ನು ಕದ್ದೊಯ್ದಿದ್ದಾರೆ. ಹಾಗೆ ಮೈಲಿಮನೆ ದೇವಸ್ಥಾನದಲ್ಲಿ ತೋಳೂರಮ್ಮ ಮತ್ತು ಬಿಲ್ಲೇಶ್ವರ ದೇವಸ್ಥಾನಗಳಿಗೆ ಕಳ್ಳರು ಕನ್ನ ಹಾಕಿದ್ದಾರೆ. ಮೈಲಿಮನೆ ದೇವಸ್ಥಾನದಲ್ಲಿ ವಿಗ್ರಹದ ಕಿವಿಯ ಭಾಗವನ್ನು ಕಳ್ಳರು ಕತ್ತರಿಸಿ ಕೊಂಡೊಯ್ದಿದ್ದಾರೆ.

ಪಂಚಲೋಹದಿಂದ ಮಾಡಿದ್ದ ವಿಗ್ರಹದ ಕಿವಿಯ ಭಾಗದಲ್ಲಿ ಚಿನ್ನ ಇರಬಹುದೆಂದು ಭಾವಿಸಿ ಕಳ್ಳರು ಕಿವಿಯನ್ನೇ ತುಂಡರಿಸಿ ಕೊಂಡೊಯ್ದಿದ್ದಾರೆ ಎಂದು ಹೇಳಲಾಗುತ್ತಿದೆ. ಈ ವಿಗ್ರಹ ಸುಮಾರು 15 ಲಕ್ಷ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಇದೀಗ ಕಿವಿಯ ಭಾಗ ವಿಘ್ನವಾಗಿರುವುದರಿಂದ ಹೊಸ ವಿಗ್ರಹ ಮಾಡಿಸಬೇಕಾದ ಅನಿವಾರ್ಯತೆ ಗ್ರಾಮಸ್ಥರಿಗೆ ಎದುರಾಗಿದೆ. ಈ ಬಗ್ಗೆ ಮಲ್ಲಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಕಳ್ಳರ ಪತ್ತೆಗಾಗಿ ಬಲೆಬೀಸಿದ್ದಾರೆ ಈ ರೀತಿ ಗ್ರಾಮೀಣ ಪ್ರದೇಶಗಳಲ್ಲಿ ದೇವಸ್ಥಾನಗಳಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದ್ದು, ಗ್ರಾಮಸ್ಥರು -ದೇವಸ್ಥಾನ ಸಮಿತಿಯವರು ಈ ಬಗ್ಗೆ ಮುನ್ನೆಚ್ಚರಿಕೆ ಕ್ರಮವಹಿಸಬೇಕಾಗಿದೆ. ಪೊಲೀಸರು ಕೂಡಲೇ ಕಳ್ಳರನ್ನು ಪತ್ತೆಹಚ್ಚಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಸಂರಕ್ಷಣೆಗಿಂತ ಬೆಳೆಸಲು ಪ್ರೋತ್ಸಾಹಿಸಿ

ರಾಜ್ಯದ ಅರಣ್ಯ, ಗೋಮಾಳ, ಸರಕಾರಿ ಭೂಮಿ ಹಾಗೂ ಪಟ್ಟಾ ಭೂಮಿಯಲ್ಲಿ ಬೃಹತ್ ಮರಗಳ ಅಕ್ರಮ ಕಡಿತ ಪ್ರಕರಣಗಳು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಮರ-ಗಿಡಗಳನ್ನು ಉಳಿಸಲು ವೃಕ್ಷ ಸಂರಕ್ಷಣಾ ಕಾಯಿದೆ 1976ಕ್ಕೆ ತಿದ್ದುಪಡಿ ತರಲು ಚಿಂತನೆ ನಡೆದಿದೆ ಎಂದಿದ್ದಾರೆ ಸಚಿವ ಈಶ್ವರ ಖಂಡ್ರೆ. ಅನುಮತಿಯಿಲ್ಲದೆ ಮರ ಕಡಿದರೆ ಮರದ ಮಾರುಕಟ್ಟೆ ಮೌಲ್ಯಕ್ಕಿಂತ ಹೆಚ್ಚು ದಂಡದೊಂದಿಗೆ ಜೈಲುಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಿ ಕಾಯಿದೆಗೆ ತಿದ್ದುಪಡಿ ತರುವ ಇಂಗಿತವನ್ನು ಅವರು ವ್ಯಕ್ತ ಪಡಿಸಿ, ಪ್ರಾಣವಾಯು ನೀಡುವ, ತಾಪಮಾನ ಹೆಚ್ಚಾಗದಂತೆ ತಡೆಯುವ ಹಾಗೂ ಭೂ ಫಲವತ್ತತೆ ಕಾಪಾಡುವ ವೃಕ್ಷಗಳ ಸಂರಕ್ಷಣೆಯ ಅಗತ್ಯವಿದೆ ಎಂದಿದ್ದಾರೆ. ಸಚಿವರ ಪರಿಸರ ಕಾಳಜಿ ಮೆಚ್ಚುವಂಥದ್ದೇ. ಆದರೆ ಈಗಾಗಲೇ ಅತ್ಯಂತ ಬಿಗಿಯಾಗಿರುವ ಅರಣ್ಯ ಕಾಯಿದೆಯನ್ನು ಮತ್ತಷ್ಟು ಬಿಗಿಗೊಳಿಸಿ ಕಾನೂನಿಂದಲೇ ಅರಣ್ಯ, ಪರಿಸರ ಉಳಿಸುತ್ತೇವೆ ಎಂಬ ಚಿಂತನೆಯಲ್ಲಿಯೇ ದೋಷವಿದೆ. ಬಹುಶಃ ಮಲೆನಾಡಿನ ವಾಸ್ತವತೆಯ ಪರಿಚಯವಿಲ್ಲದ ಅಧಿಕಾರಿಗಳ ಮಾತು ಕೇಳಿ ಸಚಿವರು ಈ ನಿರ್ಧಾರಕ್ಕೆ ಬಂದಂತಿದೆ. ಸಿರಿಗಂಧದ ಬೀಡು ಎನಿಸಿಕೊಂಡಿದ್ದ ರಾಜ್ಯವಿಂದು ಈ ಸಿರಿತನ ಕಳೆದುಕೊಳ್ಳಲು ಕಾರಣವಾಗಿರುವುದೇ ಅರಣ್ಯ ಕಾನೂನು ಎಂದರೆ ಬಯಲುಸೀಮೆ ಮೂಲದ ಸಚಿವರಿಗೆ ಸುಲಭವಾಗಿ ಅರ್ಥವಾಗದು. ಹಿಂದೆ ಮಲೆನಾಡಿನಲ್ಲಿ ಶ್ರೀಗಂಧ, ಬೀಟೆಯಂಥ ಮರಗಳು ಪ್ರಕೃತಿ ಸಹಜವಾಗಿಯೇ ಹೇರಳವಾಗಿ ಬೆಳೆದಿದ್ದವು. ಇವಕ್ಕೆ ವಾಣಿಜ್ಯ ಬೇಡಿಕೆ ಆರಂಭವಾದ ಬಳಿಕ ಇವುಗಳ ಸಂರಕ್ಷಣೆ ಹೆಸರಿನಲ್ಲಿ ಕಾನೂನು ರೂಪಿಸಲಾಯಿತು. ಆಗ ಶ್ರೀಗಂಧದ ಕಳ್ಳಸಾಗಣೆ ಶುರುವಾಯಿತು. ಕಳ್ಳಕಾಕರು ಖಾಸಗಿಯವರ ಜಮೀನಿನಲ್ಲಿದ್ದ ಶ್ರೀಗಂಧದ ಮರಗಳನ್ನೂ ರಾತ್ರೋರಾತ್ರಿ ಕತ್ತರಿಸಿ ಸಾಗಿಸಲಾರಂಭಿಸಿದರು. ಇದನ್ನು ತಡೆಯದ ಇಲಾಖೆ, ಮರಗಳು ಕಾಣೆಯಾದ ಕಡೆ ಸಮೀಪದ ನಿವಾಸಿಗಳ ಮೇಲೆ ಪ್ರಕರಣ ದಾಖಲಿಸಲಾರಂಭಿಸಿತು. ಇದರ ಗೊಡವೆಯೇ ಬೇಡ ಎಂದುಕೊಂಡ ಮಲೆನಾಡಿಗರು ಮರದ ಬುಡಕ್ಕೆ ಬೆಂಕಿ ಹಚ್ಚಿ, ರಾಸಾಯನಿಕ ಸುರಿದು ಅವು ಸಹಜವಾಗಿ ಬಿದ್ದು ನೆಲಕ್ಕುರುಳುವಂತೆ ಮಾಡಲಾರಂಭಿಸಿದರು. ಇಂದು ಶ್ರೀಗಂಧ ಮತ್ತು ಬೀಟೆ ಮಲೆನಾಡಿನಲ್ಲೂ ಕಾಣ ಸಿಗುತ್ತಿಲ್ಲ. ಕಾನೂನು ಬಿಗಿಗೊಳಿಸುವ ಬದಲು ಸರಕಾರ ಈ ಮರಗಳನ್ನು ಖಾಸಗಿ ಜಮೀನಿನಲ್ಲೂ ಬೆಳೆಯಲು ಅವಕಾಶ ಕೊಟ್ಟಿದ್ದರೆ, ಇಂದು ಮಲೆನಾಡು, ಕರಾವಳಿಯಲ್ಲಿ ಅಡಕೆಯ ಬದಲು ಈ ಮರಗಳೇ ನಳನಳಿಸುತ್ತಿದ್ದವು. ಇಂದು ಕೋಲಾರ ಮುಂತಾದ ಕಡೆ ಶ್ರೀಗಂಧದ ಕೃಷಿಗೆ ಮುಂದಾಗಿರುವ ರೈತರು, ಇದರ ಸಂರಕ್ಷಣೆಗಾಗಿಯೇ ಲಕ್ಷಾಂತರ ರೂ. ವ್ಯಯಿಸುತ್ತಿದ್ದಾರೆ. ತೇಗದಂತೆ ಶ್ರೀಗಂಧ, ಬೀಟೆಯೂ ರೈತರ ಕೃಷಿಯ ಭಾಗವಾಗಿ ಉಳಿದ ಮರಗಳಂತೆ ಎಲ್ಲೆಡೆ ಲಭ್ಯವಾಗಿದ್ದರೆ ಕಳ್ಳತನದ ಸಮಸ್ಯೆಯೂ ಎದುರಾಗುತ್ತಿರಲಿಲ್ಲ. ಆದ್ದರಿಂದ, ಮರಗಳ ಕಾವಲು ಕೆಲಸಕ್ಕಿಂತ, ಬೆಳೆಸುವ ಕಾರ್ಯದತ್ತ ಸಚಿವರು ಹೆಚ್ಚು ಗಮನಹರಿಸ ಬೇಕಿದೆ. ಮೈಸೂರು ಭಾಗದ ಕಾಡಂಚಿನ ಜನತೆ ಮತ್ತು ಮಲೆನಾಡಿಗರು ಅರಣ್ಯ ಇಲಾಖೆಯನ್ನು ವೈರಿ ಸ್ಥಾನದಲ್ಲಿ ಕಾಣುತ್ತಿದ್ದಾರೆ. ಇದು ತಪ್ಪಬೇಕಾದರೆ ಅರಣ್ಯ ಸಿಬ್ಬಂದಿ, ಪೊಲೀಸರಂತೆ ವರ್ತಿಸದೇ ಜನಸ್ನೇಹಿ ಯೋಜನೆಗಳನ್ನು ಹಮ್ಮಿಕೊಳ್ಳಬೇಕು.

ಸೊಂಪಾದಕೀಯ

ಕ್ಯಾಬ್ ಗ್ರಾಹಕರ ಓಲಾಟ

ಬಸ್ ಪ್ರಯಾಣದ ಕಿರಿಕಿರಿ ಮತ್ತು ಆಟೋಗಳ ಮೇಲಿನ ಅಪನಂಬಿಕೆಗಳ ಕಾರಣಕ್ಕೆ ಓಲಾ, ಉಬರ್ ಟ್ಯಾಕ್ಸಿಗಳು ಜನರಿಗೆ ಹತ್ತಿರ ಆಗಿದ್ದವು. ಆದರೆ ಈಗ ಈ ಕಂಪನಿಗಳ ಕ್ಯಾಬ್‌ಗಳ ವಿಷಯದಲ್ಲಿ ಜನರಿಂದ ಅಸಮಾಧಾನ ವ್ಯಕ್ತವಾಗುತ್ತಿದೆ. ಅದರಲ್ಲೂ ಮಳೆಗಾಲ ಶುರು ಆದ್ರೆ ಈ ಕ್ಯಾಬ್ ಚಾಲಕರು ಮಾಮೂಲಿ ಆಟೋ ಚಾಲಕರಿಗಿಂತ ಏನೂ ಕಮ್ಮಿ ಇಲ್ಲ. ನೀವು ಎಷ್ಟೇ ದುಬಾರಿ ಹಣ ಕೊಡಿ, ಕೊನೆಗೂ ಆ ಕ್ಯಾಬ್ ಡ್ರೈವರ್‌ಗೆ ಬರೋಕೆ ಇಷ್ಟ ಇದೆಯೋ ಇಲ್ಲವೋ ಎಂಬುದರ ಮೇಲೆ ನಿಮ್ಮ ಪ್ರಯಾಣ ಅವಲಂಬಿತವಾಗಿರುತ್ತದೆ. ಹಾಗಾಗಿ ಈ ಕ್ಯಾಬ್‌ಗಳ ವಿಷಯದಲ್ಲಿ ಕ್ಯಾನ್ಸಲ್ ಮಾಡುವ ಪರಮಾಧಿಕಾರವನ್ನು ಇತ್ತೀಚೆಗೆ ಡ್ರೈವರ್‌ಗಳು ತುಂಬಾನೇ ಬಳಸುತ್ತಿದ್ದಾರೆ. ಏನಿದ್ದರೂ ಬೆಳಗ್ಗೆ ಪೀಕ್ ಅವರ್‌ನ ನಂತರ ಮತ್ತು ಸಂಜೆ ಮಳೆ ಆಗೋದ್ರೊಳಗೆ ಮಾತ್ರ ನಿಮಗೆ ಕ್ಯಾಬ್ ಭಾಗ್ಯ ಸಿಗೋ ಎಲ್ಲಾ ಸಾಧ್ಯತೆಗಳು ಇರುತ್ತವೆ. ಇವರದ್ದೊಂಥರಾ ವಿಚಿತ್ರ ಖಯಾಲಿ. ಪ್ರಯಾಣದ ಅವಧಿ ಮೇಲೆ ಇವರ ಆಟಗಳು ನಡೆಯುತ್ತವೆ. ಇತ್ಲಾಗೆ ಜಾಸ್ತಿ ಹತ್ರ ಇದ್ರೂ ಬರಲ್ಲ, ಅತ್ಲಾಗೆ ತುಂಬಾ ದೂರ ಆದ್ರೂ ಬರಲ್ಲ. ಏನಿದ್ರೂ ಇವರ ಏರಿಯಾ ಸುತ್ತಮುತ್ತ ಆದ್ರೆ ಮಾತ್ರ ಗ್ರಾಹಕರ ಮೇಲೆ ಇವರು ದೊಡ್ಡ ಮನಸ್ಸು ಮಾಡುತ್ತಾರೆ. ಈ ಕ್ಯಾಬ್ ಮತ್ತು ಆಟೋ ಸೇವೆ ಒದಗಿಸುವ ಕಂಪನಿ ಡ್ರೈವರ್‌ಗಳ ಇನ್ನೊಂದು ಸಮಸ್ಯೆ ಅಂದ್ರೆ, ಬುಕ್ ಮಾಡಿದ ಕೂಡಲೇ ಎಲ್ಲಿಗೆ ಅಂತ ಫೋನ್ ಮಾಡ್ತಾರೆ, ಕ್ಯಾಷಾ ಅಂತ ಕೇಳ್ತಾರೆ ನೀವು ಓಲಾ, ಉಬರ್ ಕಂಪನಿಗೆ ನೇರ ಪಾವತಿ ಮಾಡ್ತಾ ಇದ್ದೀರ ಅಂತ ಗೊತ್ತಾದ್ರೆ ಅಷ್ಟೇ. ಬರಲ್ಲ. ಹಾಗಾಗಿ ಪೇಮೆಂಟ್ ಮೋಡ್ ಕೂಡಾ ಇಲ್ಲಿ ಮುಖ್ಯ. ಕ್ಯಾಷ್ ಇದ್ರೆ ಮಾತ್ರ ಕ್ಯಾಬ್ ಭಾಗ್ಯ. ಇನ್ನು ಕೆಲವು ಕಿಲಾಡಿ ಡ್ರೈವರ್‌ಗಳು ದೂರದ ಪ್ರಯಾಣ ಮಾಡುವ ಪ್ರಯಾಣಿಕರನ್ನು ಬೆಳಗ್ಗೆ ಎಲ್ಲಾದರೂ ಡ್ರಾಪ್ ಮಾಡಿದರೆ, 'ಸರ್ ಮತ್ತೆ ಸಂಜೆ ಎಷ್ಟೊತ್ತಿಗೆ ಹೊರಡ್ತೀರ, ಡೈರೆಕ್ಟಾಗಿ ನಂಗೇ ಕಾಲ್ ಮಾಡಿಬಿಡಿ. ಬುಕ್ ಮಾಡಬೇಡಿ' ಅಂತಾರೆ. ಇದು ಕಂಪನಿ ಮತ್ತು ಡ್ರೈವರ್‌ಗಳ ನಡುವೆ ಎಲ್ಲವೂ ಸರಿ ಇಲ್ಲ ಅನ್ನೋದನ್ನ ತೋರಿಸುತ್ತದೆ. ಇದಕ್ಕೆ ಪರಿಹಾರ ಹೇಗೋ ಏನೋ. ಸ್ವಿಗ್ಗಿ, ಜೊಮ್ಯಾಟೋ ಕಂಪನಿಗಳೇ ಬಲ್ಲವು!

ಸಂಪಾದಕರ ಸದ್ಯಶೋಧನೆ

ಉತ್ತಮ ನಾಯಕ ಯಾರು?

ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ನೂರಾರು ಸಣ್ಣ ಸಣ್ಣ ತಂಡಗಳಿರುತ್ತವೆ. ಅವು ಪ್ರತ್ಯೇಕವಾದ ಕೆಲಸಗಳಲ್ಲಿ ನಿರತವಾಗಿರುತ್ತವೆ. ಒಂದು ತಂಡ ಮತ್ತೊಂದರ ಜತೆ ಕೂಡಿ ಕೆಲಸ ಮಾಡಬೇಕಾಗುತ್ತದೆ. ಪ್ರತಿ ತಂಡಕ್ಕೂ ಒಬ್ಬ ನಾಯಕನಿರುತ್ತಾನೆ. ಆತ ತನ್ನ ಮೇಲಿನ ನಾಯಕನಿಗೆ ವರದಿ ಮಾಡಿಕೊಳ್ಳುತ್ತಾನೆ. ಆತ ಇನ್ನೊಬ್ಬರಿಗೆ ವರದಿ ಮಾಡಿಕೊಳ್ಳುತ್ತಾನೆ. ಕೊನೆಯಲ್ಲಿ ಎಲ್ಲರೂ ಮುಖ್ಯಸ್ಥರಿಗೆ ಅಥವಾ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗೆ ವರದಿ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಎಲ್ಲ ದೊಡ್ಡ ಸಂಸ್ಥೆಗಳು ಕಾರ್ಯನಿರ್ವಹಿಸುವುದೇ ಹೀಗೆ. ಒಂದು ತಂಡದ ನಾಯಕನ ಯಶಸ್ಸು ಅವನ ಜತೆಯಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಕಾರ್ಯಕ್ಷಮತೆಯನ್ನು ಅವಲಂಬಿಸಿರುತ್ತದೆ. ಉತ್ತಮ ಟೀಮ್ ಲೀಡರ್ ಯಾವತ್ತೂ ತನ್ನ ತಂಡದ ಯಶಸ್ಸನ್ನು ತಾನು ತೆಗೆದುಕೊಳ್ಳುವುದಿಲ್ಲ. ಅದರ ಸಿಂಹಪಾಲನ್ನು ತನ್ನ ಸಹೋದ್ಯೋಗಿಗಳಿಗೆ ನೀಡುತ್ತಾನೆ. ಇದು ಒಬ್ಬ ಉತ್ತಮ ಟೀಮ್ ಲೀಡರ್‌ನ ಲಕ್ಷಣ. ಆದರೆ ಕೆಲವು ಟೀಮ್ ಲೀಡರುಗಳು, ಯಶಸ್ಸನ್ನು ಬೇರೆಯವರಿಗೆ ಕೊಡುವುದೇ ಇಲ್ಲ. ಫೋರ್ಡ್ ಕಾರು ಕಂಪನಿಯಲ್ಲಿ ಡೊನಾಲ್ಡ್ ಪೀಟರ್ಸನ್ ಎಂಬ ಟೀಮ್ ಲೀಡರ್ ಇದ್ದ. ಆತ ಕಾರಿನ ಬೇರಿಂಗ್ ತಯಾರಿಕೆಯ ವಿಭಾಗದ ಮುಖ್ಯಸ್ಥನಾಗಿದ್ದ. ಕಾರು ತಯಾರಿಕೆಯಲ್ಲಿ ಇತರ ಘಟಕಗಳಿಗೆ ಹೋಲಿಸಿದರೆ ಇದು ಅತಿ ಸಣ್ಣ, ಆದರೆ ಅತಿ ಮಹತ್ವದ ವಿಭಾಗ. ಆ ವಿಭಾಗದಲ್ಲಿ ಹೆಚ್ಚು ಕಾಲ ಕೆಲಸ ಮಾಡಲು ಯಾರೂ ಸಿದ್ಧರಿರುವುದಿಲ್ಲ. ಹೆಚ್ಚೆಂದರೆ ಎರಡು ವರ್ಷ ಕೆಲಸ ಮಾಡಿ ಬೇರೆ ವಿಭಾಗಗಳನ್ನು ಬಯಸುತ್ತಾರೆ. ಆದರೆ ಡೊನಾಲ್ಡ್ ಅದೊಂದೇ ವಿಭಾಗದಲ್ಲಿ ಸುಮಾರು ಎಂಟು ವರ್ಷ ಕೆಲಸ ಮಾಡಿದ. ಆತನ ಜತೆಯಲ್ಲಿ ಕೆಲಸ ಮಾಡಲು ಎಲ್ಲರೂ ಇಷ್ಟಪಡುತ್ತಿದ್ದರು. ಕಾರಣ ಆತ ಎಲ್ಲರನ್ನೂ ಕೆಲಸಕ್ಕೆ ಹುರಿದುಂಬಿಸುತ್ತಿದ್ದ ಮತ್ತು ತನ್ನ ತಂಡದ ಶ್ರೇಯಸ್ಸಿನಲ್ಲಿ ಎಲ್ಲವನ್ನೂ ಯಾರಿಗೆ ಸಲ್ಲಬೇಕೋ ಅವರಿಗೆ ಸಲ್ಲಿಸುತ್ತಿದ್ದ. ತನ್ನ ಮೇಲಧಿಕಾರಿಗಳ ಮುಂದೆ ತನ್ನ ಸಹೋದ್ಯೋಗಿಗಳನ್ನು ಬಾಯ್ತುಂಬ ಹೊಗಳುತ್ತಿದ್ದ. ಈ ದಕ್ಷತೆಗೆ ತನ್ನ ತಂಡದ ಸದಸ್ಯರೇ ಕಾರಣ ಎಂದು ಹೇಳುತ್ತಿದ್ದ. ತಾನು ನಿಮಿತ್ತ ಮಾತ್ರ ಎಂದು ಯಶಸ್ಸಿನ ಸರ್ವಪಾಲನ್ನು ತಂಡದ ಸದಸ್ಯರಿಗೆ ಸಮರ್ಪಿಸುತ್ತಿದ್ದ. ಈ ದೊಡ್ಡ ಗುಣದಿಂದ ಡೊನಾಲ್ಡ್ ಎಲ್ಲರ ಪ್ರೀತಿಗೆ ಪಾತ್ರನಾಗಿದ್ದ. ಇಡೀ ಸಂಸ್ಥೆಯಲ್ಲಿ ಎಲ್ಲ ವಿಭಾಗಗಳ ಮುಖ್ಯಸ್ಥರ ದಕ್ಷತೆಯ ಸೂಚ್ಯಂಕದಲ್ಲಿ ಡೊನಾಲ್ಡ್ ಅಗ್ರಗಣ್ಯನಾಗಿದ್ದ. ಯಾರೇ ಕಂಪನಿಯ ಮುಖ್ಯಸ್ಥರಾಗಿ ಬಂದರೂ ಡೊನಾಲ್ಡ್‌ನ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡುತ್ತಿದ್ದರು. ಒಮ್ಮೆ ಆ ಕಂಪನಿಗೆ ಒಬ್ಬ ಹೊಸ ಸಿಇಒ ಬಂದ. ಆತ ಡೊನಾಲ್ಡ್ ರಜೆ ಹೋದಾಗ, ಆತನ ವಿಭಾಗದ ಸದಸ್ಯರನ್ನು ಕರೆಯಿಸಿ, ಡೊನಾಲ್ಡ್‌ನಲ್ಲಿ ನಿಮಗೆ ಇಷ್ಟವಾಗದ ಗುಣ ಯಾವುದು ಎಂದು ಕೇಳಿದ. ಒಬ್ಬನೇ ಒಬ್ಬ ಆತನ ಬಗ್ಗೆ ನಕಾರಾತ್ಮಕವಾಗಿ ಮಾತಾಡಲಿಲ್ಲ. ಇಂಥ ಸಂದರ್ಭದಲ್ಲಿ ಕನಿಷ್ಠ ಒಬ್ಬರಾದರೂ ಅಪಸ್ವರ ಎತ್ತುತ್ತಾರೆ. ಆದರೆ ಡೊನಾಲ್ಡ್ ವಿಷಯದಲ್ಲಿ ಯಾರೂ ಚಕಾರ ಎತ್ತಲಿಲ್ಲ. ಸಂಸ್ಥೆಯ ಮುಖ್ಯಸ್ಥನಿಗೆ ಆಶ್ಚರ್ಯವಾಯಿತು. ಡೊನಾಲ್ಡ್‌ನನ್ನು ಕರೆಯಿಸಿದ ಮುಖ್ಯಸ್ಥ, ಆತನ ಅನುಪಸ್ಥಿತಿಯಲ್ಲಿ ನಡೆದುದನ್ನು ವಿವರಿಸಿದ. ಅದಕ್ಕೆ ಡೊನಾಲ್ಡ್ ಹೇಳಿದ, 'ಯಸ್ ಸರ್, ನನ್ನ ಯಶಸ್ಸಿನ ಸಿಂಹಪಾಲನ್ನು ನಾನು ನನ್ನ ಸಹೋದ್ಯೋಗಿಗಳಿಗೆ ನೀಡುತ್ತೇನೆ. ಅವರೇ ನನ್ನ ಶಕ್ತಿ. ನಾನು ನನ್ನ ಕೆಲಸದಲ್ಲಿ ಪ್ರೇರಣೆಯನ್ನು ಅವರಿಂದ ಪಡೆಯುತ್ತೇನೆ' ಎಂದ. ಮುಂದೆ ಆತ ಫೋರ್ಡ್ ಕಂಪನಿಯ ಸಿಇಒ ಮತ್ತು ಚೇರ್ಮನ್ ಆದ. ಯಾರು ತನ್ನ ಯಶಸ್ಸಿನಲ್ಲಿ ಬೇರೆಯವರಿಗೂ ಪಾಲು ಕೊಡುತ್ತಾರೋ, ಅವರು ಉತ್ತಮ ನಾಯಕರಾಗುತ್ತಾರೆ.

ಯಡಿಯೂರಪ್ಪ ಷಾಕ್, ಸೋಮಣ್ಣ ರಾಕ್

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರ್ನಾಟಕದ ರಾಜಕಾರಣಕ್ಕೆ ವಾಪಸು ಬರುತ್ತಾರೆ ಎಂಬ ಮಾತು ಮೆಲ್ಲಗೆ ಕೇಳತೊಡಗಿದೆ. ಲೋಕಸಭಾ ಚುನಾವಣೆಯಲ್ಲಿ ಗೆದ್ದು ದಿಲ್ಲಿ ಗದ್ದುಗೆ ಹಿಡಿಯಲು ಕಾಂಗ್ರೆಸ್ ವಿಫಲವಾಗಿರುವುದೇ ಇದಕ್ಕೆ ಕಾರಣ. ಅಂದ ಹಾಗೆ ಲೋಕಸಭಾ ಚುನಾವಣೆಗಳು ಘೋಷಣೆಯಾದವಲ್ಲ, ಆ ಸಂದರ್ಭದಲ್ಲಿ ಚುನಾವಣಾ ತಂತ್ರಗಾರಿಕೆಗೆ ಅಂತ ರಾಜ್ಯದ ಕಾಂಗ್ರೆಸ್ ನಾಯಕರು ದಿಲ್ಲಿಗೆ ಹೋಗಿದ್ದರು. ಆಗ ನಡೆದ ಸಭೆಯಲ್ಲಿ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ ಅವರು, ಚುನಾವಣೆಯಲ್ಲಿ ಕರ್ನಾಟಕದಿಂದ ಹೆಚ್ಚು ಸೀಟುಗಳನ್ನು ಗೆಲ್ಲಿಸಲು ನೀವು ಕೆಲಸ ಮಾಡಬೇಕು ಎಂದು ರಾಜ್ಯದ ನಾಯಕರಿಗೆ ಹೇಳಿದ್ದಾರೆ. 'ನಾನು ಎಐಸಿಸಿ ಅಧ್ಯಕ್ಷನಾಗಿರುವುದರಿಂದ ಕರ್ನಾಟಕದಲ್ಲಿ ಹೆಚ್ಚು ಸೀಟು ಗೆಲ್ಲಬೇಕು ಅಂತ ಪಕ್ಷ ಬಯಸುತ್ತದೆ. ಹೀಗಾಗಿ ನಿಮ್ಮ ನಿಮ್ಮಲ್ಲಿ ಏನೇ ಭಿನ್ನಾಭಿಪ್ರಾಯವಿರಲಿ, ಅದನ್ನೆಲ್ಲ ಮರೆತು ಒಗ್ಗಟ್ಟಾಗಿ ಕೆಲಸ ಮಾಡಿ. ಕರ್ನಾಟಕದಲ್ಲಿ ಹದಿನೈದಕ್ಕೂ ಹೆಚ್ಚು ಸೀಟುಗಳನ್ನು ಗೆಲ್ಲಿಸಿಕೊಂಡು ಬನ್ನಿ' ಅಂತ ಖರ್ಗೆಯವರು ಹೇಳಿದಾಗ ಸಭೆಯಲ್ಲಿದ್ದ ನಾಯಕರು 'ಯಸ್ ಸಾರ್' ಎಂದಿದ್ದಾರೆ.

ಇಷ್ಟಾದ ನಂತರವೂ ಮುಂದುವರಿದ ಖರ್ಗೆಯವರು, 'ನೀವು ಕರ್ನಾಟಕದಿಂದ ಹೆಚ್ಚು ಸೀಟು ಗೆಲ್ಲಿಸಿಕೊಂಡು ಬಂದರೆ ಇಂಡಿಯ ಒಕ್ಕೂಟಕ್ಕೆ ಬಲ ಬರುತ್ತದೆ. ಆ ಮೂಲಕ ಒಕ್ಕೂಟ ಕೇಂದ್ರದಲ್ಲಿ ಅಧಿಕಾರ ಹಿಡಿಯಲು ಅನುಕೂಲವಾಗುತ್ತದೆ. ಒಂದು ವೇಳೆ ನೀವು ಹೆಚ್ಚು ಸೀಟು ಗೆಲ್ಲಿಸಿಕೊಂಡು ಬರದೆ ಇದ್ದರೆ ನಾನು ನೈತಿಕವಾಗಿ ಈ ಹುದ್ದೆಯಲ್ಲಿ ಮುಂದುವರಿಯುವುದು ಕಷ್ಟ. ಅರ್ಥಾತ್, ನಾನು ಎಐಸಿಸಿ ಅಧ್ಯಕ್ಷ ಹುದ್ದೆಗೆ ರಾಜೀನಾಮೆ ನೀಡಬೇಕಾಗುತ್ತದೆ. ಹೀಗೆ ರಾಜೀನಾಮೆ ಕೊಟ್ಟ ನಂತರ ನಾನೇನು ಮಾಡಲಿ? ಕರ್ನಾಟಕಕ್ಕೆ ಬರುವುದನ್ನು ಹೊರತುಪಡಿಸಿ ನನ್ನ ಬಳಿ ಯಾವ ದಾರಿಯೂ ಇಲ್ಲ. ಹಾಗಂತ ನಾನು ಸುಖಾಸುಮ್ಮನೆ ಕರ್ನಾಟಕಕ್ಕೆ ಮರಳಲು ಸಾಧ್ಯವಿಲ್ಲವಲ್ಲ? ಯಾಕೆಂದರೆ ಅಲ್ಲಿ ಪಕ್ಷಕ್ಕಾಗಿ ನಾಲ್ಕು ದಶಕಗಳ ಕಾಲ ನಾನು ಕೆಲಸ ಮಾಡಿದ್ದೇನೆ. ಹೀಗಾಗಿ ಎಐಸಿಸಿ ಅಧ್ಯಕ್ಷ ಹುದ್ದೆಗೆ ರಾಜೀನಾಮೆ ಕೊಟ್ಟು ಕರ್ನಾಟಕಕ್ಕೆ ಮರಳಿದರೆ ನಿಶ್ಚಿತವಾಗಿ ನಾನು ನನ್ನ ಪಾಲು ಕೇಳುತ್ತೇನೆ' ಎಂದಿದ್ದಾರೆ.

ಅವತ್ತು ಖರ್ಗೆಯವರಾಡಿದ ಮಾತನ್ನು ಸಭೆಯಲ್ಲಿದ್ದ ರಾಜ್ಯದ ನಾಯಕರು ಅಷ್ಟೇನೂ ಗಂಭೀರವಾಗಿ ಪರಿಗಣಿಸಿಲ್ಲ. ಆದರೆ ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ನಂತರ, ಅದರಲ್ಲೂ ಕರ್ನಾಟಕದಲ್ಲಿ ದೊಡ್ಡ ಮಟ್ಟದ ಗೆಲುವು ಸಾಧಿಸಲು ಪಕ್ಷಕ್ಕೆ ಸಾಧ್ಯವಾಗದೆ ಇರುವುದರಿಂದ ಅವತ್ತು ಖರ್ಗೆಯವರಾಡಿದ ಮಾತಿಗೆ ವಿಶೇಷ ಅರ್ಥ ಕಾಣಿಸತೊಡಗಿದೆ. ಒಂದು ವೇಳೆ ಅವರು ಎಐಸಿಸಿ ಅಧ್ಯಕ್ಷ ಹುದ್ದೆಗೆ ರಾಜೀನಾಮೆ ನೀಡಿ ಕರ್ನಾಟಕಕ್ಕೆ ಮರಳಿದರೆ ಸುಮ್ಮನೆ ಕೂರುತ್ತಾರಾ? ಅಥವಾ ದಿಲ್ಲಿಯ ಸಭೆಯಲ್ಲಿ ಅವರೇ ಹೇಳಿದಂತೆ ಇಲ್ಲಿ ತಮ್ಮ ಪಾಲು ಕೇಳುತ್ತಾರಾ? ಎಂಬುದು ರಾಜ್ಯ ಕಾಂಗ್ರೆಸ್ಸಿಗರ ಕುತೂಹಲ.

ಅಂದ ಹಾಗೆ, ಮಲ್ಲಿಕಾರ್ಜುನ ಖರ್ಗೆಯವರು ಕರ್ನಾಟಕಕ್ಕೆ ಮರಳಿ ಬಂದರೆ ಅವರ ಪಾಲು ಅಂತಿರುವುದು ಕೇವಲ ಮುಖ್ಯಮಂತ್ರಿ ಸ್ಥಾನ. ಹಾಗೊಂದು ವೇಳೆ ಈ ಪಾಲನ್ನು ಅವರು ಕೇಳಿದರೆ ತಕ್ಷಣಕ್ಕೆ ಅದು ಸಾಧ್ಯವಾಗದೆ ಇರಬಹುದು. ಯಾಕೆಂದರೆ ಮುಖ್ಯಮಂತ್ರಿ ಪಟ್ಟದಲ್ಲಿ ಸಿದ್ದರಾಮಯ್ಯ ಇರುವಾಗ ಅವರ ಕೋಟಾ ಮುಗಿಸಿಯೇ ಮುಂದಡಿ ಇಡಬೇಕು. ಆದರೆ ಇನ್ನೊಂದು ವರ್ಷ ಕಳೆದ ನಂತರ ಈ ವಿಷಯ ಚಾಲನೆಗೆ ಬಂದರೆ, 'ನೋ, ನೋ ಅದು ಸಾಧ್ಯವಿಲ್ಲ' ಅಂತ ನಿಷ್ಠುರವಾಗಿ ಹೇಳಲು ಕಾಂಗ್ರೆಸ್ ವರಿಷ್ಠರಿಗೆ ಸಾಧ್ಯವೇ?ಎಂಬುದು ಅವರ ಯೋಚನೆ.

ಅವರ ಪ್ರಕಾರ, ಎಐಸಿಸಿ ಅಧ್ಯಕ್ಷರಾಗಿ ಖರ್ಗೆ ಸಕ್ಸಸ್ ಆಗಿದ್ದಾರೆ. ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬರದೆ ಇರಬಹುದು. ಆದರೆ ಅವರು ಅಧ್ಯಕ್ಷರಾದ ನಂತರ ಕಾಂಗ್ರೆಸ್ ಪಕ್ಷ ಸಂಸತ್ತಿನಲ್ಲಿ ನೂರರ ಗಡಿ ತಲುಪಿದೆ. ಯಾವ ದೃಷ್ಟಿಯಿಂದ ನೋಡಿದರೂ ಇದು ದೊಡ್ಡ ಸಾಧನೆ. ಹೀಗಿರುವಾಗ ಖರ್ಗೆಯವರು ಮುಂದಿನ ದಿನಗಳಲ್ಲಿ ಕರ್ನಾಟಕದ ರಾಜಕಾರಣಕ್ಕೆ ಮರಳಿದರೆ ಮತ್ತು ಮುಖ್ಯಮಂತ್ರಿಯಾಗಲು ಬಯಸಿದರೆ ಹೈಕಮಾಂಡ್ ನಿಶ್ಚಿತವಾಗಿಯೂ ಅದನ್ನು ಪರಿಗಣಿಸಲಿದೆ. ಅಂದ ಹಾಗೆ, ನಿರ್ದಿಷ್ಟ ಕಾಲದ ನಂತರ ಖರ್ಗೆಯವರು ಸಿಎಂ ಆಗಲಿ ಅಂತ ಹೈಕಮಾಂಡ್ ಬಯಸಿದರೆ ಅದನ್ನು ಸ್ವತಃ ಸಿದ್ದರಾಮಯ್ಯ ಬೆಂಬಲಿಸಿದರೂ ಅಚ್ಚರಿಯಿಲ್ಲ ಎಂಬುದು ಇಂಥವರ ಮಾತು.

ಯಡಿಯೂರಪ್ಪ ಕ್ಯಾಂಪಿಗೆ ಬಿಗ್ ಷಾಕ್

ಈ ಮಧ್ಯೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಂಪುಟ ಅಸ್ತಿತ್ವಕ್ಕೆ ಬಂದ ನಂತರ ಮಾಜಿ ಸಿಎಂ ಯಡಿಯೂರಪ್ಪ ಬಣಕ್ಕೆ ಭ್ರಮನಿರಸನವಾಗಿದೆ. ಕಾರಣ? ಮೋದಿಯವರ ಸಂಪುಟಕ್ಕೆ ತಮ್ಮ ಪುತ್ರ ಬಿ.ವೈ.ರಾಘವೇಂದ್ರ ಅವರನ್ನು ಸೇರಿಸಲು ಯಡಿಯೂರಪ್ಪ ಸತತ ಪ್ರಯತ್ನ ಮಾಡಿದ್ದರು. ಕಾಂಗ್ರೆಸ್ಸಿನ ಗ್ಯಾರಂಟಿ ಅಲೆಯ ನಡುವೆ ಬಿಜೆಪಿ ಹದಿನೇಳು ಸ್ಥಾನ ಗೆಲ್ಲಲು ತಮ್ಮ ಶ್ರಮ ಕಾರಣ ಎಂಬ ಮೆಸೇಜು ರವಾನಿಸುತ್ತಾ, ನಾಲ್ಕನೇ ಬಾರಿ ಗೆದ್ದಿರುವ ರಾಘವೇಂದ್ರ ಅವರಿಗೆ ಮಂತ್ರಿಗಿರಿ ಕೊಡುವಂತೆ ವರಿಷ್ಠರನ್ನು ಕೋರಿದ್ದರು.

ಆದರೆ ಯಡಿಯೂರಪ್ಪ ಅದೇನೇ ಲಾಬಿ ಮಾಡಿದರೂ ಮೋದಿ-ಅಮಿತ್ ಶಾ ಜೋಡಿ ಜಪ್ಪಯ್ಯ ಅಂದಿಲ್ಲ. ಬದಲಿಗೆ ಯಡಿಯೂರಪ್ಪ ಅವರ ಕಟ್ಟಾ ವಿರೋಧಿ ವಿ.ಸೋಮಣ್ಣ ಅವರನ್ನು ಕೇಂದ್ರ ಸಂಪುಟಕ್ಕೆ ತೆಗೆದುಕೊಳ್ಳುವ ಮೂಲಕ ಷಾಕ್ ಕೊಟ್ಟಿದೆ. ಮೂಲಗಳ ಪ್ರಕಾರ, ಕರ್ನಾಟಕದಲ್ಲಿ ಬಿಜೆಪಿ ಹದಿನೇಳು ಸೀಟು ಪಡೆಯಲು ತಮ್ಮ ಶ್ರಮ ಕಾರಣ ಅಂತ ಯಡಿಯೂರಪ್ಪ ಮತ್ತು ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಎಷ್ಟೇ ಹೇಳಿಕೊಂಡರೂ ಮೋದಿ-ಅಮಿತ್ ಶಾ ಅದನ್ನು ನಂಬುತ್ತಿಲ್ಲ. ಮೂಲಗಳ ಪ್ರಕಾರ, ಲೋಕಸಭೆ ಚುನಾವಣೆಯ ಫಲಿತಾಂಶ ಬಂದ ನಂತರ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ದಿಲ್ಲಿಗೆ ಹೋಗಿದ್ದರಲ್ಲ? ಆ ಸಂದರ್ಭದಲ್ಲಿ ಅವರ ಜತೆ ಮಾತನಾಡಿದ ಅಮಿತ್ ಶಾ ಅವರು, 'ಕುಮಾರ್‌ಸೋಮೀಜಿ. ನಮಗೆ ಎಲ್ಲ ಗೊತ್ತಿದೆ. ಒಂದು ವೇಳೆ ಜೆಡಿಎಸ್ ಜತೆ ಮೈತ್ರಿ ಮಾಡಿಕೊಳ್ಳದೆ ಹೋಗಿದ್ದರೆ ನಮಗೆ ಹತ್ತು ಸೀಟು ಬರುವುದು ಕಷ್ಟವಿತ್ತು' ಎಂದಿದ್ದಾರೆ.

ಅರ್ಥಾತ್, 'ಕರ್ನಾಟಕದ ನೆಲೆಯಲ್ಲಿ ಲಿಂಗಾಯತರು ಕ್ರಮೇಣ ಬಿಜೆಪಿಯಿಂದ ದೂರವಾಗುತ್ತಿದ್ದಾರೆ. ಈ ಸಲ ಅದು 20-25 ಪರ್ಸೆಂಟ್ ಇರಬಹುದು. ಆದರೆ ಲಿಂಗಾಯತ ಮತಬ್ಯಾಂಕಿನ ಕೊರತೆಯನ್ನು ಒಕ್ಕಲಿಗ ಮತಬ್ಯಾಂಕ್ ಭರ್ತಿಮಾಡಿತು. ಲಿಂಗಾಯತ ಮತಬ್ಯಾಂಕು ಕೊಟ್ಟ ಹೊಡೆತವನ್ನು ಹಳೆ ಮೈಸೂರು ಪಾಕೀಟಿನಲ್ಲಿ ಜೆಡಿಎಸ್‌ನಿಂದಾಗಿ ನಾವು ಜೀರ್ಣ ಮಾಡಿಕೊಂಡೆವು. ಆದರೆ ಈ ಹೊಡೆತವನ್ನು ಕಿತ್ತೂರು ಕರ್ನಾಟಕ, ಮಧ್ಯ ಕರ್ನಾಟಕ, ಅದರಲ್ಲೂ ವಿಶೇಷವಾಗಿ ಕಲ್ಯಾಣ ಕರ್ನಾಟಕದಲ್ಲಿ ತಡೆದುಕೊಳ್ಳಲು ನಮಗೆ ಸಾಧ್ಯವಾಗಲಿಲ್ಲ. ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ದಾವಣಗೆರೆ, ಚಿಕ್ಕೋಡಿಯಂಥ ಕ್ಷೇತ್ರಗಳಲ್ಲಿ ಇದೇ ಕಾರಣಕ್ಕಾಗಿ ನಾವು ಸೋತೆವು. ಏನೇ ಇರಲಿ, ಜೆಡಿಎಸ್ ಜತೆಗಿನ ಮೈತ್ರಿ ನಮಗೆ ಅನುಕೂಲವಾಯಿತು. ಇದನ್ನು ನಾವು ಮರೆಯುವುದಿಲ್ಲ' ಅಂತ ಮುಕ್ತವಾಗಿ ಹೇಳಿದ್ದಾರೆ. ಅರ್ಥಾತ್, ಕರ್ನಾಟಕದ ನೆಲೆಯಲ್ಲಿ ಇನ್ನು ಮುಂದೆ ಜೆಡಿಎಸ್ ನಾಯಕ ಕುಮಾರಸ್ವಾಮಿ ಅವರಿಗೆ ಟಾಪ್ ಪ್ರಿಫರೆನ್ಸು ಸಿಗಲಿದೆಯಲ್ಲದೆ, ಬಿಜೆಪಿಯಲ್ಲಿರುವ ಯಡಿಯೂರಪ್ಪ ವಿರೋಧಿ ಪಡೆಗೆ 'ತಾಖತ್ ಕೀ ದವಾ' ಸಿಗುವುದು ನಿಶ್ಚಿತವಾಗಿದೆ.

ರೇಸಿಗೆ ಬಂದರು ಎಂ.ಬಿ.ಪಾಟೀಲ್

ಅಂದ ಹಾಗೆ, ಲೋಕಸಭಾ ಚುನಾವಣೆಯ ಫಲಿತಾಂಶ ಬಂದ ನಂತರ ರಾಜ್ಯ ಕಾಂಗ್ರೆಸ್ ಪಾಳಯದಲ್ಲಿ ಲಿಂಗಾಯತ ಡಿಸಿಎಂ ಕೂಗು ಕೇಳತೊಡಗಿದೆ. ಕಾರಣ? ಒಕ್ಕಲಿಗ ಪಾಳೆಪಟ್ಟಿನಲ್ಲಿ ಹೀನಾಯ ಸೋಲು ಅನುಭವಿಸಿದ ಪಕ್ಷಕ್ಕೆ ಲಿಂಗಾಯತರು ಆಸರೆಯಾಗಿದ್ದಾರೆ ಎಂಬುದೇ ಈ ಕೂಗಿನ ಮೂಲ.

'ವಿಧಾನಸಭೆ ಚುನಾವಣೆಯಲ್ಲಿ ಒಕ್ಕಲಿಗ ಪ್ರಾಬಲ್ಯದ ಹಳೆ ಮೈಸೂರು ಪಾಕೀಟಿನಲ್ಲಿ ಪಕ್ಷಕ್ಕೆ ಗಣನೀಯ ಸೀಟುಗಳು ಬಂದಿದ್ದು ನಿಜ. ಆದರೆ ತದನಂತರದ ಬೆಳವಣಿಗೆಗಳು ಹಳೆ ಮೈಸೂರು ಭಾಗದಲ್ಲಿ ಪಕ್ಷದ ಶಕ್ತಿಯನ್ನು ಕುಗ್ಗಿಸಿವೆ. ಲೋಕಸಭಾ ಚುನಾವಣೆಯ ಫಲಿತಾಂಶ ಇದಕ್ಕೆ ಸಾಕ್ಷಿ. ಅದಕ್ಕೆ ಪ್ರತಿಯಾಗಿ ನಾವು ಗೆದ್ದಿರುವ ಬೀದರ್, ಚಿಕ್ಕೋಡಿ, ಚಾಮರಾಜನಗರ, ದಾವಣಗೆರೆ, ಗುಲ್ಬರ್ಗ, ಬಳ್ಳಾರಿ, ರಾಯಚೂರು, ಕೊಪ್ಪಳದಂಥ ಕ್ಷೇತ್ರಗಳಲ್ಲಿ ಲಿಂಗಾಯತ ಮತದಾರರು ನಮ್ಮನ್ನು ಬೆಂಬಲಿಸಿದ್ದಾರೆ. ಇಲ್ಲಿ ನಮಗೆ ಅಹಿಂದ ಮತಗಳು ದೊಡ್ಡ ಮಟ್ಟದಲ್ಲಿ ಬಿದ್ದಿರುವುದೇನೋ ನಿಜ. ಆದರೆ ಒಂದು ಮಟ್ಟದಲ್ಲಿ ಲಿಂಗಾಯತ ಮತಬ್ಯಾಂಕು ನೀಡಿದ ಬೆಂಬಲ ನಮಗೆ ಪ್ಲಸ್ ಆಯಿತು' ಎನ್ನುತ್ತದೆ ಈ ಪಾಳಯ.

'ಹೀಗೆ ಒಂದು ಪ್ರಮಾಣದಲ್ಲಿ ಲಿಂಗಾಯತ ಮತಗಳು ಕಾಂಗ್ರೆಸ್ಸಿಗೆ ಬಂದಿರುವುದಕ್ಕೆ ಹಲವು ಕಾರಣಗಳಿವೆ. ಅದೆಂದರೆ ಮೋದಿಯವರ ವಿಷಯದಲ್ಲಿ ಲಿಂಗಾಯತರಿಗೆ ಮುಂಚಿನ ಆಕರ್ಷಣೆಯಿಲ್ಲ, ಇದೇ ರೀತಿ ಲಿಂಗಾಯತ ನಾಯಕತ್ವದ ವಿಷಯದಲ್ಲಿ ಯಡಿಯೂರಪ್ಪ ಅವರನ್ನು ಒಪ್ಪಿದಂತೆ ಆ ಸಮುದಾಯ ಇನ್ನೂ ವಿಜಯೇಂದ್ರ ಅವರನ್ನು ಒಪ್ಪಿಕೊಂಡಿಲ್ಲ. ಈ ಅಂಶವನ್ನು ಗಮನಿಸಿ ನಾವು ಸರಕಾರದ ಮಟ್ಟದಲ್ಲಿ ಲಿಂಗಾಯತರಿಗೆ ಶಕ್ತಿ ತುಂಬಬೇಕು. ಭವಿಷ್ಯದಲ್ಲಿ ಲಿಂಗಾಯತ ಮುಖ್ಯಮಂತ್ರಿಯನ್ನು ಮುಂದಿಟ್ಟುಕೊಳ್ಳುವುದು ಅನಿವಾರ್ಯವಾದರೂ ಸದ್ಯದ ಸ್ಥಿತಿಯಲ್ಲಿ ಆ ಸಮುದಾಯಕ್ಕೆ ಕನಿಷ್ಠ ಉಪಮುಖ್ಯಮಂತ್ರಿ ಹುದ್ದೆಯನ್ನು ನೀಡಬೇಕು. ಲೋಕಸಭಾ ಚುನಾವಣೆಯ ಫಲಿತಾಂಶವನ್ನು ನೋಡಿದರೆ ಒಕ್ಕಲಿಗರು ದೇವೇಗೌಡ-ಕುಮಾರಸ್ವಾಮಿ ಜತೆ ಸಾಲಿಡ್ಡಾಗಿ ನಿಂತಿರುವುದು ಸ್ಪಷ್ಟ. ಇಂಥ ಪರಿಸ್ಥಿತಿಯಲ್ಲಿ ಅಹಿಂದ ಪ್ಲಸ್ ಒಕ್ಕಲಿಗ ಕಾಂಬಿನೇಶನ್ನಿನಲ್ಲಿ ನಾವು ಮುಂದುವರಿಯುವುದು ಕಷ್ಟ. ಇದರ ಬದಲಿಗೆ ಅಹಿಂದ ಪ್ಲಸ್ ಲಿಂಗಾಯತ ಕಾಂಬಿನೇಶನ್ನಿನ ಜತೆ ಹೋದರೆ ಮಾತ್ರ ನಮಗೆ ಭವಿಷ್ಯ' ಎಂಬುದು ರಾಜ್ಯ ಕಾಂಗ್ರೆಸ್ ಪಾಳಯದ ಮಾತು. ಯಾವಾಗ ಈ ಮಾತು ಶುರುವಾಯಿತೋ, ಡಿಸಿಎಂ ಹುದ್ದೆಯ ರೇಸಿನಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲರ ಹೆಸರು ಕಾಣಿಸಿಕೊಂಡಿದೆ. ಅಂದ ಹಾಗೆ ಸರಕಾರದಲ್ಲಿ ಹೆಚ್ಚುವರಿ ಡಿಸಿಎಂ ಹುದ್ದೆಗಾಗಿ ರೇಸು ಶುರುವಾಗಿ ಹಲವು ಕಾಲವೇ ಕಳೆದಿದೆ ಮತ್ತು ರೇಸಿನಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹಾಗೂ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಹೆಸರುಗಳು ಈಗಾಗಲೇ ಓಡುತ್ತಿವೆ. ಈ ಪಟ್ಟಿಗೆ ಸಚಿವ ಎಂ.ಬಿ.ಪಾಟೀಲರ ಹೆಸರು ಸೇರಿಕೊಂಡಿದೆ ಎಂಬುದೇ ಸದ್ಯದ ವಿಶೇಷ

ಸಚಿವ ಮಹದೇವಪ್ಪ ಸಕ್ಸಸ್ ಸ್ಟೋರಿ

ಈ ಮಧ್ಯೆ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರ ವಿಷಯದಲ್ಲಿ ಕಾಂಗ್ರೆಸ್ ವರಿಷ್ಠರು ಖುಷಿಯಾಗಿದ್ದಾರಂತೆ. ಕಾರಣ? ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಅವರು ಸಾಧಿಸಿ ತೋರಿಸಿದ ಸೋಷಿಯಲ್ ಎಂಜಿನಿಯರಿಂಗ್ ವರ್ಕು. ಅಂದ ಹಾಗೆ, ಹಳೆ ಮೈಸೂರು ಭಾಗದ ಲೋಕಸಭಾ ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಜಯ ಗಳಿಸಿದ್ದು ಚಾಮರಾಜನಗರ ಮತ್ತು ಹಾಸನ ಕ್ಷೇತ್ರಗಳಲ್ಲಿ ಮಾತ್ರ. ಆದರೆ ಸೋಷಿಯಲ್ ಎಂಜಿನಿಯರಿಂಗ್ ಮೂಲಕ ಗೆದ್ದಿದ್ದು ಚಾಮರಾಜನಗರದಲ್ಲಿ ಮಾತ್ರ. ಉಳಿದಂತೆ ಹಾಸನ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಲು ರೇವಣ್ಣ ಕುಟುಂಬದ ವಿರುದ್ಧ ಇದ್ದ ವಿರೋಧ ಮತ್ತು ಪ್ರಜ್ವಲ್ ರೇವಣ್ಣ ಎಪಿಸೋಡು ಕಾರಣ. ಆದರೆ ಚಾಮರಾಜನಗರದಲ್ಲಿ ಸಚಿವ ಡಾ. ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್ ಗೆಲುವು ಗಳಿಸಲು ಪಕ್ಕಾ ಸೋಷಿಯಲ್ ಎಂಜಿನಿಯರಿಂಗ್ ವರ್ಕೇ ಕಾರಣ. ಅಂದ ಹಾಗೆ, ಕ್ಷೇತ್ರದಲ್ಲಿ ಲಿಂಗಾಯತರು ಸಾಲಿಡ್ಡಾಗಿದ್ದರೂ ಅಹಿಂದ ಪ್ಲಸ್ ಲಿಂಗಾಯತ ಮತಗಳು ಕ್ರೋಡೀಕರಣಗೊಳ್ಳಲು, ಆ ಮೂಲಕ ಸುನೀಲ್ ಬೋಸ್ ಗೆಲ್ಲಲು ಮಹದೇವಪ್ಪ ಕಾರಣರಾದರು. ಪರಿಣಾಮ? ಈ ಹಿಂದೆ ಬಿಜೆಪಿಯ ಕೈಲಿದ್ದ ಕ್ಷೇತ್ರದಲ್ಲಿ ಕಾಂಗ್ರೆಸ್ ಭಾರಿ ಅಂತರದಿಂದ ಗೆಲುವು ಗಳಿಸಿತು.

ಈ ಸಲ ಚಾಮರಾಜನಗರದಲ್ಲಿ ಡಾ.ಮಹದೇವಪ್ಪ ಅವರು ಸಾಧಿಸಿದ ಸೋಷಿಯಲ್ ಎಂಜಿನಿಯರಿಂಗ್ ಕೆಲಸ ಉತ್ತರ ಕರ್ನಾಟಕದ ಹಲವು ಕ್ಷೇತ್ರಗಳಲ್ಲಿ ಸಾಧಿತವಾಗಿದ್ದರೂ, ಹಳೆ ಮೈಸೂರು ಭಾಗದಲ್ಲಿ ಡಾ.ಮಹದೇವಪ್ಪ ಅವರು ಮಾಡಿದ ಕೆಲಸ ಉಳಿದವರಿಗೆ ಸಾಧ್ಯವಾಗಲಿಲ್ಲ ಎಂಬುದು ವರಿಷ್ಠರ ನೋವು. ಹೀಗಾಗಿ ದಿಲ್ಲಿಯಲ್ಲಿ ಕರ್ನಾಟಕದ ವಿಷಯ ಪ್ರಸ್ತಾಪವಾದಾಗಲೆಲ್ಲ ರಾಹುಲ್ ಗಾಂಧಿ ಸೇರಿದಂತೆ ಹಲವು ನಾಯಕರು, ಚಾಮರಾಜನಗರದಲ್ಲಿ ನಡೆದ ಸೋಷಿಯಲ್ ಎಂಜಿನಿಯರಿಂಗ್ ಬೇರೆ ಕಡೆ ಸಾಧ್ಯವಾಗಬೇಕಿತ್ತು ಎಂದು ಹೇಳತೊಡಗಿದ್ದಾರಂತೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹಲವರ ಸ್ಫೂರ್ತಿಸೆಲೆ

ರಾಮೋಜಿರಾವ್ ಎನ್ನುತ್ತಿದ್ದಂತೆ ಈನಾಡು ಪತ್ರಿಕೆ, ಈಟಿವಿ ನೆಟ್‌ವರ್ಕ್, ಮಾರ್ಗದರ್ಶಿ ಚಿಟ್ ಫಂಡ್ಸ್, ರಮಾದೇವಿ ಪಬ್ಲಿಕ್ ಸ್ಕೂಲ್, ಪ್ರಿಯಾ ಫುಡ್ಸ್, ಕಲಾಂಜಲಿ, ಉಷಾಕಿರಣ್ ಮೂವೀಸ್, ಹೈದರಾಬಾದ್ ಬಳಿಯ ರಾಮೋಜಿ ಫಿಲ್ಮ್ ಸಿಟಿ ಮತ್ತು ಡಾಲ್ಫಿನ್ ಗ್ರೂಪ್ ಆಫ್ ಹೋಟೆಲ್ಸ್ ಮೊದಲಾದ ಹಲವಾರು ಸಂಸ್ಥೆಗಳು ನೆನಪಾಗುತ್ತವೆ. ಕೃಷಿಕ ಕುಟುಂಬದಲ್ಲಿ ಜನಿಸಿದ ರಾಮೋಜಿರಾವ್ ಅವರು 1969ರಲ್ಲಿ 'ಅನ್ನದಾತ' ಮಾಸಪತ್ರಿಕೆಯನ್ನು ಹುಟ್ಟು ಹಾಕುವ ಮೂಲಕ ಮಾಧ್ಯಮ ಕ್ಷೇತ್ರಕ್ಕೆ ಅಡಿಯಿಟ್ಟರು. ತರುವಾಯದಲ್ಲಿ ವಿಭಿನ್ನ ಕ್ಷೇತ್ರಗಳಿಗೆ ಅವರು ತಮ್ಮ ಕಾರ್ಯ ಕ್ಷಮತೆಯನ್ನು ವಿಸ್ತರಿಸಿ, ತಮ್ಮ ಸಂಸ್ಥೆಗಳಲ್ಲಿ ಸಾವಿರಾರು ಜನರಿಗೆ ಉದ್ಯೋಗಾವಕಾಶವನ್ನು ನೀಡಿದ್ದು ದೊಡ್ಡ ಸಾಧನೆಯೇ. ಎರಡು ದಶಕಗಳ ಹಿಂದೆ ಕನ್ನಡದ ಮನರಂಜನಾ ಮಾಧ್ಯಮ ಎಂದರೆ 'ಈಟಿವಿ ಕನ್ನಡ' ವಾಹಿನಿ ನೆನಪಾಗುತ್ತಿತ್ತು ಎಂದರೆ ಅತಿಶಯೋಕ್ತಿಯಲ್ಲ. ಇಂಥ ಅನುಪಮ ಸಾಧಕ ನಮ್ಮನ್ನಗಲಿರುವುದು ತುಂಬಲಾರದ ನಷ್ಟವೇ. ಅವರು ತಮ್ಮ ಸಾಧನೆಯ ಮೂಲಕ ಅಜರಾಮರರಾಗಿರುತ್ತಾರೆ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ.

– **ರಾಸುಮ ಭಟ್**, ಚಿಕ್ಕಮಗಳೂರು

ಹೀಗೆ ಮಾಡಬಾರದಿತ್ತು

ಇತ್ತೀಚೆಗೆ ಚಂಡೀಗಢ ವಿಮಾನ ನಿಲ್ದಾಣದಲ್ಲಿ ಸಂಸದೆ ಕಂಗನಾ ರಣಾವತ್ ಅವರಿಗೆ ಸಿಐಎಸ್‌ಎಫ್‌ನ ಕರ್ತವ್ಯ ನಿರತ ಮಹಿಳಾ ಸಿಬ್ಬಂದಿ ಕುಲ್ವಿಂದರ್ ಕೌರ್ ಕಪಾಳಮೋಕ್ಷ ಮಾಡಿದ ಘಟನೆ ವರದಿಯಾಗಿದೆ. ಕಂಗನಾ ಅವರು ತಮ್ಮ ಹೇಳಿಕೆಯೊಂದರ ಮೂಲಕ ಪಂಜಾಬಿನ ರೈತರಿಗೆ ಅಗೌರವ ತೋರಿದ ಕಾರಣಕ್ಕಾಗಿ ಹೀಗೆ ಅವರ ಕೆನ್ನೆಗೆ ಬಾರಿಸಿದ್ದಾಗಿ ಹೇಳಿಕೊಂಡಿರುವ ಕುಲ್ವಿಂದರ್‌ರನ್ನು ಅಮಾನತು ಮಾಡಲಾಗಿದೆ. ಕಾರಣವೇನೇ ಇರಲಿ, ಸಂಸದೆಗೆ ರಕ್ಷಣೆ ಒದಗಿಸಬೇಕಿದ್ದ ಕರ್ತವ್ಯನಿರತ ಸಿಬ್ಬಂದಿಯೇ ಇಂಥ ವರ್ತನೆ ತೋರಿದ್ದು ತರವಲ್ಲ. ಏತನ್ಮಧ್ಯೆ, ಪಂಜಾಬ್‌ನ ಉದ್ಯಮಿಯೊಬ್ಬರು ಕುಲ್ವಿಂದರ್ ಕೌರ್‌ಗೆ ಒಂದು ಲಕ್ಷ ರುಪಾಯಿ ಬಹುಮಾನ ನೀಡುವುದಾಗಿ ಹೇಳಿಕೊಂಡಿರುವುದು ಮತ್ತು ಗಾಯಕ ವಿಶಾಲ್ ದದ್ಲಾನಿ ಕೆಲಸ ನೀಡುವುದಾಗಿ ಭರವಸೆ ನೀಡಿರುವುದು ಆಕೆಯ ಕೃತ್ಯವನ್ನು ಪ್ರೋತ್ಸಾಹಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ.

– **ಜಿ.ನಾಗೇಂದ್ರ ಕಾವೂರು**, ಸಂಡೂರು

ಹೀಗಾದರೆ ಹೇಗೆ?

ಜೂನ್ 3ರಂದು ರಾಜ್ಯದಲ್ಲಿ ವಿಧಾನ ಪರಿಷತ್ ಚುನಾವಣೆ ನಡೆದಿತ್ತು. ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಒಳಗೊಂಡ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ಫಲಿತಾಂಶ ಹೊರಬಿದ್ದಿದೆ. ಆದರೆ, ಚಲಾವಣೆಯಾದ 18,986 ಮತಗಳಲ್ಲಿ 1,049ರಷ್ಟು ಕುಲಗೆಟ್ಟ ಮತಗಳಾಗಿದ್ದವು ಎಂದು ತಿಳಿದುಬಂದಿದೆ. ಕಳೆದ ಸಲವೂ (2018) ಇದೇ ಕ್ಷೇತ್ರದ ಚುನಾವಣೆಯಲ್ಲಿ 846ರಷ್ಟು ಕುಲಗೆಟ್ಟ ಮತಗಳ ಚಲಾವಣೆಯಾಗಿತ್ತು. ಹೇಳಿ-ಕೇಳಿ ಇದು ಶಿಕ್ಷಕರ ಮತಕ್ಷೇತ್ರ. ಪ್ರೌಢಶಾಲೆಯಿಂದ ಹಿಡಿದು, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳವರೆಗಿನ ವಿದ್ಯಾರ್ಥಿ ಗಳಿಗೆ ಪಾಠ ಹೇಳಿಕೊಡುವ ಶಿಕ್ಷಕರು ಹಾಗೂ ಪ್ರೊಫೆಸರುಗಳೇ ಇಲ್ಲಿ ಮತದಾರರು. ಇಲ್ಲಿಯೂ ಕುಲಗೆಟ್ಟ ಮತಗಳು ಚಲಾವಣೆಯಗುತ್ತವೆಯೇ? ಸಮಾಜದಲ್ಲಿ ವಿದ್ಯಾವಂತರು ಮತ್ತು ಪ್ರಜ್ಞಾವಂತರು ಎನಿಸಿಕೊಂಡವರಿಗೆ ಕನಿಷ್ಠಪಕ್ಷ ಮತದಾನದ ತಿಳಿವಳಿಕೆಯೂ ಇಲ್ಲ ಎಂದರೆ ಹೇಗೆ? ಇಂಥವರು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡಲು ಅರ್ಹರೇ?

– **ಬೂಕನಕೆರೆ ವಿಜೇಂದ್ರ**, ಮೈಸೂರು

ಬರಹ ಖುಷಿ ಕೊಟ್ಟಿತು

ಶ್ರೀವತ್ಸ ಜೋಶಿಯವರ 'ತಿಳಿರು ತೋರಣ' ಅಂಕಣ (ವಿಶ್ವವಾಣಿ ಜೂ.9) ಖುಷಿ ಕೊಟ್ಟಿತು. ಶಾರ್ದೂಲವಿಕ್ರೀಡಿತ ವೃತ್ತ ಎಂಬ ಛಂದಸ್ಸಿನಲ್ಲಿ ರಚನೆಯಾಗಿರುವ ಶ್ಲೋಕಗಳು ಮತ್ತು ಚಂದದ ಆಧುನಿಕ ಪದ್ಯಗಳನ್ನು ಓದಿದಾಗ, ನಮ್ಮ ಕನ್ನಡ ಸಾಹಿತ್ಯವು ಅದೆಷ್ಟು ಸಮೃದ್ಧವಾಗಿದೆಯಲ್ಲವೇ ಎಂಬ ಹೆಮ್ಮೆಯೂ ಮೂಡಿತು. ಇಂಥ ಅಪರೂಪದ ಮಾಹಿತಿಗಳನ್ನು ನೀಡುತ್ತಾರೆ ಎಂಬ ಕಾರಣಕ್ಕಾಗಿಯೇ ನಾವು ಶ್ರೀವತ್ಸ ಜೋಶಿಯವರ ಅಂಕಣಕ್ಕೆ ಚಾತಕ ಪಕ್ಷಿಯಂತೆ ಕಾಯುತ್ತಿರುತ್ತೇವೆ. ಇಂಥ ಬರಹಗಳು ಹೆಚ್ಚೆಚ್ಚು ಮೂಡಿಬರಲಿ.

– **ಸುರೇಂದ್ರ ನಾಯಕ್**, ಬೆಳಗಾವಿ

ರಚ್ಚೆ ಜನಗಳ ಮಧ್ಯೆ ಮತ್ತೆ ಅಚ್ಛೇದಿನ್ ಬಂದೀತೇ?

ಯಕ್ಷಪ್ರಶ್ನೆ

ತುರುವೇಕೆರೆ ಪ್ರಸಾದ್

vveditoped@gmail.com

'ಕೊಟ್ಟ ಕುದುರೆಯ ಏರಲಾಗದವನು ಶೂರನೂ ಅಲ್ಲ, ಧೀರನೂ ಅಲ್ಲ' ಎನ್ನುವ ಮಾತಿದೆ. ಮತದಾರ ಪ್ರಭು ಕೊಟ್ಟ ಕುದುರೆಯನ್ನು ನರೇಂದ್ರ ಮೋದಿ ಸತತವಾಗಿ ಮೂರನೇ ಬಾರಿ ಏರುವ ಮೂಲಕ ತಾವು ಧೀರ, ಶೂರ ಎಂಬುದನ್ನು ತೋರಿಸಿಕೊಡಲು ಸಿದ್ಧರಾಗಿದ್ದಾರೆ. ಈ ಕುದುರೆಯೇರಿ ಅವರು ತಾವಂದುಕೊಂಡಂತೆ ಅಶ್ವಮೇಧ ಯಾಗ ಮಾಡಲಾಗದಿದ್ದರೂ ದೇಶಮೇದು ಹೋಗುವ ಜನರನ್ನು ಅಧಿಕಾರದಿಂದ ದೂರವಿಡಲು, ಅವರೇ ಹೇಳಿಕೊಂಡಂತೆ ಚೌಕೀದಾರನ ಕೆಲಸ ಮಾಡಲು ಈ ಅಧಿಕಾರದ ಕುದುರೆ ಹತ್ತಿರುವುದು ಸರಿಯಾಗಿಯೇ ಇದೆ. ಹಂಗಿನರಮನೆಯಲ್ಲಿದ್ದು ಇಂಗು ತೆಂಗು ಬೇಡಿದರೂ ಒಂದು ಒಳ್ಳೆಯ ಅಡುಗೆ ಮಾಡಿದ ಖುಷಿ, ಸಂತೃಪ್ತಿ ಖಂಡಿತಾ ಇರುತ್ತದೆ. ಇದೂ ಹಾಗೇ! ಎನ್‌ಡಿಎ ಮಿತ್ರಪಕ್ಷಗಳ ಊರುಗೋಲು ಸಹಾಯದಿಂದಲೇ ಅಧಿಕಾರ ನಡೆಸಬೇಕಾದ ಹಂಗಿದ್ದರೂ ವಿರೋಧಿಗಳ ಲಂಗು-ಲಗಾಮು ಹಿಡಿದು ಜನಹಿತ ಕಾಯಲು ಇದು ಅತ್ಯವಶ್ಯವಾಗಿದೆ.

ಏಕರೂಪ ನಾಗರಿಕ ಸಂಹಿತೆಯಂಥ ಬಿಜೆಪಿಯ ಹಲವಾರು ಮಹಾ ಸಂಕಲ್ಪಗಳನ್ನು ಸಾಧಿಸುವುದು ಒತ್ತಟ್ಟಿಗಿರಲಿ, ಅಗ್ನಿವೀರ್‌ನಂಥ ಯೋಜನೆಗಳನ್ನು ಮರುಪರಿಶೀಲಿಸಿ ಎಂಬ ಆಗ್ರಹವೂ ಈಗಾಗಲೇ ಜೆಡಿಯುನಿಂದ ಬಂದಿದೆ. ಈ ಹಿನ್ನೆಲೆಯಲ್ಲಿ ದಿನನಿತ್ಯದ ಆಡಳಿತವನ್ನು ಮೋದಿ ಸುಗಮವಾಗಿ ನಡೆಸಲಾದೀತೇ ಎನ್ನುವುದೇ ಒಂದು ದೊಡ್ಡ ಅನುಮಾನವಾಗಿ ಕಾಡುತ್ತಿದೆ. ಪಕ್ಷ ಪಕ್ಷಗಳ ನಡುವಿನ ಯಾವುದೇ ಮೈತ್ರಿಯಲ್ಲಿ ಅಧಿಕಾರದ ಲೋಭ, ಸ್ವಾರ್ಥ, ಲಾಲಸೆ ಇದ್ದೇ ಇರುತ್ತದೆ. ಇದಕ್ಕೆ ಯಾವ ಪಕ್ಷವೂ ಹೊರತಲ್ಲ. ಅದರಲ್ಲೂ ಈ ಅಧಿಕಾರ ಮತ್ತು ಸ್ವಾರ್ಥಸಾಧನೆಯ ಸ್ಥಿರತೆಯೂ ಮುಖ್ಯವಾಗುತ್ತದೆ. ಇಂಥ ಒಂದು ಸ್ಥಿರತೆ 'ಇಂಡಿಯ' ಮೈತ್ರಿಕೂಟಕ್ಕಿಂತ ಎನ್‌ಡಿಎ ಮೈತ್ರಿಕೂಟದ ಜತೆ ಹೋದರೆ ಹೆಚ್ಚು ಸಲೀಸು ಎಂಬುದನ್ನು ಅರಿಯಲಾರದಷ್ಟು ನಿತೀಶ್ ಕುಮಾರ್ ಹಾಗೂ ಚಂದ್ರಬಾಬು ನಾಯ್ಡು ದಡ್ಡರಲ್ಲ. ಹಾಗಾಗಿಯೇ ಅವರು ಎನ್‌ಡಿಎಗೆ ತಮ್ಮ ಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ.

ಮೋದಿಯವರು ಎನ್‌ಡಿಎ ಮೈತ್ರಿಕೂಟದ ಮುಖ್ಯಸ್ಥರಾಗಿ ತಮ್ಮ ಪಕ್ಷ ಅಂದುಕೊಂಡ ಕಾರ್ಯಸೂಚಿಗಳನ್ನು ಜಾರಿಗೆ ತರಲಾಗದಿದ್ದರೂ ಮೈತ್ರಿಯ ಒಪ್ಪಿತ ಸಮಾನ ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತರಬಹುದು. ಆದರೆ ಮುಖ್ಯ ಸಮಸ್ಯೆ ಇರುವುದು ಇಂಥ ಕಾರ್ಯಕ್ರಮಗಳ ಕ್ಷಮತೆ ಎಷ್ಟರ ಮಟ್ಟಿಗಿದೆ ಎಂಬುದನ್ನು ನಿರ್ಧರಿಸುವಲ್ಲಿ! ಇಂಥ ಕ್ಷಮತೆಗೆ ಸವಾಲಾಗಿ ನಿಲ್ಲುವುದೇ ಭ್ರಷ್ಟಾಚಾರ! ಮೂರನೇ ಅವಧಿಯಲ್ಲಿ ಮೋದಿಯವರಿಗೆ ಅತಿದೊಡ್ಡ ಸಮಸ್ಯೆ ಆಗಬಹುದಾದದ್ದು ಈ ಭ್ರಷ್ಟಾಚಾರವೆಂಬ ಪೆಡಂಭೂತವೇ! ಹಂಗಿನ ಆಡಳಿತ ನಡೆಸುವಾಗ ಮಿತಿ ಮೀರಿದ ಆದರ್ಶವನ್ನು ಹೇರಲು, ತಮ್ಮ ಪಕ್ಷದ ಸಿದ್ಧಾಂತಗಳ ಮೂಲಕ ಮಿತ್ರಪಕ್ಷಗಳ ಮೇಲೆ ಅಂಕುಶ ಹಾಕಲು ಸಾಧ್ಯವಿಲ್ಲ. 10 ವರ್ಷಗಳ ಕಾಲ ಭ್ರಷ್ಟಾಚಾರದ ಕಳಂಕವಿಲ್ಲದೆ ಆಳಿರುವ ಮೋದಿ ಮುಂದೆ ಅಂಥದೇ ಒಂದು ಸ್ವಚ್ಛ, ಪಾರದರ್ಶಕ ಆಡಳಿತ ಕೊಡಬಲ್ಲರೇ ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ.

ದೇಶ ಉದ್ಧಾರವಾಗಲಿ, ದೇಶಕ್ಕೆ ಆಡಳಿತಾತ್ಮಕ ಸ್ಥಿರತೆ ಸಿಗಲಿ ಎಂಬ ಘನ ಉದ್ದೇಶದಿಂದಷ್ಟೇ ಯಾವ ಪಕ್ಷವೂ ಮೈತ್ರಿಗೆ ಒಪ್ಪುವುದಿಲ್ಲ. ಅಂಥ ಒಂದು ಲೋಕೋತ್ತರವಾದ ಘನ ಉದ್ದೇಶವಿದ್ದಿದ್ದರೆ ತೆಲುಗುದೇಶಂ ಪಕ್ಷವು ವಿತ್ತ ಖಾತೆಯೂ ಸೇರಿ ಪ್ರಮುಖ 4 ಖಾತೆಗಳಿಗೆ ಬೇಡಿಕೆ ಇಡುತ್ತಿರಲಿಲ್ಲ, ಕೃಷಿ, ಗ್ರಾಮೀಣಾಭಿವೃದ್ಧಿ, ಅಣುಶಕ್ತಿ ಮೊದಲಾದ ಮೂರು ಕ್ಯಾಬಿನೆಟ್ ಖಾತೆಗಳಿಗೆ ಜೆಡಿಯು ಒತ್ತಾಯ ಮಾಡುತ್ತಿರಲಿಲ್ಲ. ಇತರೆ ಪುಡಿ ಪಕ್ಷಗಳೂ ಸಿಕ್ಕ ಅವಕಾಶದ ದುರ್ಲಾಭ ಪಡೆಯುವಂತೆ ಪೈಪೋಟಿಗೆ ಬಿದ್ದು ಖಾತೆಗಳಿಗೆ ಒತ್ತಾಯಿಸುತ್ತಿರಲಿಲ್ಲ. ಬರೀ ದೇಶಸೇವೆ ಮಾಡುವವರಿಗೆ ಯಾವ ಖಾತೆ ಆದರೇನು? ಅಥವಾ ಈಗಿದ್ದ ಮೋದಿ ಮಂತ್ರಿಮಂಡಲದ ಮಂತ್ರಿಗಳನ್ನು ಮೀರಿಸಿ ಸಾಧನೆ ಮಾಡಿ ದೇಶೋದ್ಧಾರ ಮಾಡುತ್ತಾರೆ ಎಂದರೆ ಯಾರು ನಂಬುತ್ತಾರೆ? ನಂಬಲು ಅಂಥ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿರ ಬೇಕಲ್ಲ?

ತೆಲುಗುದೇಶಂ ಪಕ್ಷದ ಬಗ್ಗೆ ಹೇಳುವುದಾದರೆ ಅದೂ ಆಂಧ್ರದಲ್ಲಿ ಸಂಪೂರ್ಣವಾಗಿ ಭ್ರಷ್ಟಾಚಾರ ಮುಕ್ತ, ಪಾರದರ್ಶಕ ಆಡಳಿತ ನಡೆಸಿದೆ ಎಂದು ಹೇಳಲಾಗುವುದಿಲ್ಲ. ಸ್ವತಃ ಚಂದ್ರಬಾಬು ನಾಯ್ಡು ಅವರೇ 371 ಕೋಟಿ ರು. ಸ್ಕಿಲ್ ಡೆವಲಪ್‌ಮೆಂಟ್ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿ ಬಂಧಿಸಲಾಗಿತ್ತು. ಕೌಶಲ ಅಭಿವೃದ್ಧಿ ಯೋಜನೆ ಗಳಿಗೆ ಮೀಸಲಿಟ್ಟ ಕೋಟ್ಯಂತರ ರುಪಾಯಿ ಹಣವನ್ನು ಶೆಲ್ ಕಂಪನಿಗಳಿಗೆ ವರ್ಗಾಯಿಸಲಾಗಿತ್ತು ಎಂಬುದು ಮುಖ್ಯ ಆರೋಪ. ಇದು ರಾಜಕೀಯ ಪ್ರೇರಿತ ಎಂದರೂ, ಈ ಹಗರಣದ ಕುರಿತು ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬೋಸ್ ಮತ್ತು ನ್ಯಾಯಮೂರ್ತಿ ತ್ರಿವೇದಿ ನಾಯ್ಡು, ನಾಯ್ಡು ಅವರ ಮೇಲೆ ಪಿಸಿ ಕಾಯಿದೆ ಜತೆಗೆ ಇತರೆ ಐಪಿಸಿ ಸೆಕ್ಷನ್‌ಗಳ ಆಧಾರದ ಮೇಲೂ ಆರೋಪ ಹೊರಿಸಿರುವುದರಿಂದ ಅವರ ಬಂಧನ ಸಕ್ರಮವಾಗಿದೆ ಎಂದು ಪ್ರತಿಪಾದಿಸಿದ್ದರು. ಈ ಪ್ರಕರಣ ಇನ್ನೂ ಸರ್ವೋಚ್ಚನ್ಯಾಯಾ ಲಯದ ಮುಖ್ಯ ನ್ಯಾಯಾಧೀಶರ ಮುಂದೆ ವಿಚಾರಣೆಗೆ ಬಾಕಿ ಇದೆ. ಇನ್ನು, ಹಿಂದೆ ತೆಲುಗುದೇಶಂನ ಶಾಸಕರಾಗಿದ್ದ ರೇವಂತ್ ರೆಡ್ಡಿ ಎಂಎಲ್‌ಸಿ ಚುನಾವಣೆಗೆ ಸಂಬಂಧಿಸಿದಂತೆ ಕುದುರೆ ವ್ಯಾಪಾರ ಮಾಡುತ್ತಿದ್ದಾರೆ ಎಂಬ ಆರೋಪದಡಿ ಸಿಕ್ಕಿಬಿದ್ದಿದ್ದರು. ತೆಲುಗುದೇಶಂನ ಪೊನ್ನೂರಿನ ಶಾಸಕ ನರೇಂದ್ರ ಕುಮಾರ್ ಅವರನ್ನೂ ಈ ಹಿಂದೆ ಭ್ರಷ್ಟಾಚಾರದ ಆರೋಪದ ಮೇಲೆ ಬಂಧಿಸಲಾಗಿತ್ತು. ಚುನಾವಣೆ ವೇಳೆ ಅವರು ನೀಡಿದ್ದ ಪ್ರಮಾಣಪತ್ರದ ಪ್ರಕಾರ ಅವರ ವಿರುದ್ಧ 16 ಕ್ರಿಮಿನಲ್ ಪ್ರಕರಣಗಳು ವಿಚಾರಣೆಗೆ ಬಾಕಿ ಉಳಿದಿವೆ. ಯೆಲೂರಿ ಸಾಂಬಶಿವರಾವ್ ಅವರ ಮೇಲೂ, ಮತದಾರರಿಗೆ ಲಂಚ ನೀಡಿದರು ಎಂಬ ಕಾರಣಕ್ಕೆ ಪ್ರಕರಣ ದಾಖಲಿಸಲಾಗಿತ್ತು. ಇಬ್ಬರು ಟಿಡಿಪಿ ರಾಜಕಾರಣಿಗಳ ಮೇಲೆ ಕೇಂದ್ರೀಯ ತನಿಖಾ ದಳಗಳು ದೂರು ದಾಖಲಿಸಿದ್ದು, ಇದಕ್ಕೆ ಕೇಂದ್ರವೇ ಕಾರಣ ಎಂದು ಟಿಡಿಪಿ ದೂರಿತ್ತು.

ಇನ್ನು ಬಿಹಾರದ ನಿತೀಶ್ ಕುಮಾರ್ ಸಾಹೇಬರ ಬಗ್ಗೆ ಹೇಳುವಂತೆಯೇ ಇಲ್ಲ. ಅವರ ಜೆಡಿಯು ಪಕ್ಷ ಹಾಗೂ ಎನ್‌ಡಿಎ ಒಕ್ಕೂಟದ ನಡುವಿನ ಕಣ್ಣಾಮುಚ್ಚಾಲೆ ಮೈತ್ರಿ ಈಗಾಗಲೇ ನಗೆಪಾಟಲಾಗಿದೆ. 2013ರಿಂದ ಈವರೆಗೆ ನರೇಂದ್ರ ಮೋದಿಯವರೊಂದಿಗೆ ಅವರ ಬಾಯಿ ಬಾಯಿ ಸಂಘರ್ಷ ಮುಂದುವರಿದೇ ಇದೆ. 2013ರಲ್ಲಿ ಮೋದಿಯವರನ್ನು ಬಿಜೆಪಿಯ ಪ್ರಧಾನಮಂತ್ರಿ ಅಭ್ಯರ್ಥಿ ಎಂದು ಘೋಷಣೆ ಮಾಡಿದಾಗ ಪಕ್ಷದ ಹಿರಿಯರಾದ ಆಡ್ವಾಣಿ ಅಂಥವರಿಗೆ ನಂಬಿಕೆದ್ರೋಹ ಮಾಡಿ ಮೂಲೆಗುಂಪು ಮಾಡಲಾಗಿದೆ ಎಂಬ ಅಸಮಾಧಾನ ವ್ಯಕ್ತಪಡಿಸಿ ನಿತೀಶ್ ಎನ್‌ಡಿಎಯಿಂದ ದೂರವಾಗಿದ್ದರು. 2017ರಲ್ಲಿ ತಮ್ಮದೇ ರಾಜ್ಯದ ಮಹಾಘಟಬಂಧನದ ಉಪಮುಖ್ಯಮಂತ್ರಿ ತೇಜಸ್ವಿ ಮೇಲೆ ಭ್ರಷ್ಟಾಚಾರದ ಆರೋಪ ಬಂದಾಗ ಅವರು ಮೈತ್ರಿಯಿಂದ ಹೊರಬಂದು ಎನ್‌ಡಿಎ ಬೆಂಬಲ ಪಡೆದಿದ್ದರು. 2022ರ ವಿಧಾನಸಭಾ ಚುನಾವಣೆಗಳ ನಂತರ ಬಿಜೆಪಿಯು ಚಿರಾಗ್ ಪಾಸ್ವಾನ್ ಅವರ ಲೋಕ ಜನಶಕ್ತಿಯೊಂದಿಗೆ ಸೇರಿ ಜೆಡಿಯು ಓಟಕ್ಕೆ, ವೋಟಿಗೆ ಕತ್ತರಿ ಹಾಕಿದೆ ಎಂದು ಆರೋಪಿಸಿ ಎನ್‌ಡಿಎಯಿಂದ ದೂರ ಸರಿದಿದ್ದರು ನಿತೀಶ್. ಆ ಚುನಾವಣೆಯಲ್ಲಿ ಜೆಡಿಯು 28 ಸ್ಥಾನಗಳನ್ನು ಕಳೆದುಕೊಂಡಿತ್ತು. ಮತ್ತೆ ಈ ವರ್ಷದ ಜನವರಿಯಲ್ಲಿ ಅವರು 'ಇಂಡಿಯ' ಮೈತ್ರಿಕೂಟದಿಂದ ಹೊರಬಂದು ಎನ್‌ಡಿಎ ಮೈತ್ರಿಕೂಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದರು. ತೇಜಸ್ವಿಯ ವಿರುದ್ಧ ಭ್ರಷ್ಟಾಚಾರದ ಆರೋಪವಿದೆ ಎಂಬ ಕಾರಣಕ್ಕೆ ಮೈತ್ರಿ ಮುರಿದುಕೊಂಡ ನಿತೀಶ್ ಕುಮಾರ್ ಹಲವು ಭ್ರಷ್ಟಾಚಾರ ಆರೋಪಗಳಿದ್ದ ಮೇವಾಲಾಲ್ ಚೌಧುರಿ ಅವರನ್ನು ಶಿಕ್ಷಣ ಸಚಿವರನ್ನಾಗಿ ನೇಮಿಸಿ ತೀವ್ರ ವಿವಾದಕ್ಕೆ ಗುರಿಯಾಗಿದ್ದರು

ಇನ್ನು ಬಿಜೆಪಿಯವರೇನೂ ಹದಿನಾರಾಣೆ ಸತ್ಯಹರಿಶ್ಚಂದ್ರರಲ್ಲ. ಹಿಂದೊಮ್ಮೆ ಪಕ್ಷದ ಅಧ್ಯಕ್ಷರಾದ ಬಂಗಾರು ಲಕ್ಷ್ಮಣ್ ಅವರೇ ರಕ್ಷಣಾ ಒಪ್ಪಂದದ ಭ್ರಷ್ಟಾಚಾರದಲ್ಲಿ ಸಿಕ್ಕಿಬಿದ್ದು 4 ವರ್ಷ ಸೆರೆವಾಸ ಅನುಭವಿಸಿದ್ದರು. ಬಿಜೆಪಿ ರಾಜ್ಯಭಾರ ಮಾಡುವ ರಾಜ್ಯಗಳಲ್ಲೂ ಭ್ರಷ್ಟಾಚಾರದ ಆರೋಪಗಳು ನಿರಂತರವಾಗಿಯೇ ಇದ್ದವು. ಬಿಜೆಪಿ ಪಾಲಿಗೆ ದಕ್ಷಿಣದ ಭಾಗ್ಯದ ಬಾಗಿಲು ಎನಿಸಿಕೊಂಡ ಕರ್ನಾಟಕದಲ್ಲೂ ಗಣಿ ಭ್ರಷ್ಟಾಚಾರದಿಂದ ಹಿಡಿದು 40 ಪರ್ಸೆಂಟ್ ಕಮಿಷನ್‌ವರೆಗೆ ಹಲವಾರು ಭ್ರಷ್ಟಾಚಾರದ ಪ್ರಕರಣಗಳು ಬಿಜೆಪಿಯನ್ನು ಎಡೆಬಿಡದೇ ಕಾಡಿದ್ದವು. ಕೋವಿಡ್ ನಿರ್ವಹಣೆಯಲ್ಲೂ ರಾಜ್ಯ ಎಡವಿದೆ ಎಂದು ಸಿಎಜಿ ವರದಿ ಆಕ್ಷೇಪಿಸಿತ್ತು. ಕರ್ನಾಟಕ, ಮಹಾರಾಷ್ಟ್ರಗಳಲ್ಲಿ 'ಆಪರೇಷನ್ ಕಮಲ' ನಡೆಯುವಾಗ ಎಷ್ಟು ಕೋಟಿಗಳು ಕೈ ಬದಲಾದವು ಎಂಬುದು ಅಮಿತ್ ಶಾ ಅವರಂಥ ಪಕ್ಷದ ವರಿಷ್ಠರಿಗೆ ಗೊತ್ತಿಲ್ಲದ ವಿಷಯವೇನಲ್ಲ. ಇಂಥ ಅಪವಿತ್ರ ಅಧಿಕಾರ ಕಬಳಿಕೆಗೂ ಕೇಂದ್ರದ ವರಿಷ್ಠರು ಮೌನಮುದ್ರೆ ಒತ್ತಿ ಅಂಗೀಕರಿಸಿದ್ದರು. ಆದರೆ ಮೋದಿಯವರ ಹೆಗ್ಗಳಿಕೆ ಎಂದರೆ ಸ್ವತಃ ತಾವು ಮತ್ತು ತಮ್ಮ ಮಂತ್ರಿಮಂಡಲ ಸ್ವಚ್ಛವಾಗಿರುವಂತೆ ನೋಡಿಕೊಂಡಿದ್ದರು. ಯಾವುದೇ ಭ್ರಷ್ಟಾಚಾರದ ಆರೋಪ ಹತ್ತಿರ ಸುಳಿಯದಂತೆ ನಿಗಾ ವಹಿಸಿದ್ದರು. ಸಂಖ್ಯಾಬಾಹುಳ್ಯದ ದೃಷ್ಟಿಯಿಂದ ಅನುಕೂಲಕರ ಸ್ಥಿತಿಯಲ್ಲಿದ್ದ ಬಿಜೆಪಿ ಸದಸ್ಯರು ತಮ್ಮ ಸ್ಥಾನಪಲ್ಲಟವಾಗುವುದರ ಬಗ್ಗೆ ಹೆದರಿದ್ದರು. ಹಾಗಾಗಿ ಅವರ ಮೇಲೆ ನಿಯಂತ್ರಣ ಹೇರುವುದು, ಶಿಸ್ತಿನ ಕ್ರಮ ಜರುಗಿಸುವುದು ಸುಲಭವಾಗಿತ್ತು. ಆದರೆ ಈಗ ಹಾಗಿಲ್ಲ, ಪ್ರತಿಯೊಬ್ಬ ಸದಸ್ಯನೂ ಬಿಜೆಪಿಗೆ ಹಾಗೂ ಮೈತ್ರಿ ಸರಕಾರಕ್ಕೆ ತೀರಾ ಅನಿವಾರ್ಯ. ಅಲ್ಲದೆ ಹೊರಗಿನವರಿಗೆ ಮಣೆ ಹಾಕಿ ಅಧಿಕಾರ, ಖಾತೆ ಕೊಟ್ಟಮೇಲೆ, ಅವರ ಮೇಲೆ ನಿಯಂತ್ರಣ ಸಾಧ್ಯವಿಲ್ಲದ ಮೇಲೆ ನಮ್ಮನ್ನೇನು ನಿಯಂತ್ರಿಸುವುದು ಎಂಬ ಧೋರಣೆ ಇದ್ದೇ ಇರುತ್ತದೆ. ಹಾಗಾಗಿ ಬಿಜೆಪಿಯವರೂ 'ಸಿಕ್ಕಷ್ಟೇ ಸೀರುಂಡೆ' ಎಂಬ ಧೋರಣೆ ತಳೆದರೂ ಅಚ್ಚರಿಯೇನಿಲ್ಲ. ದೊಡ್ಡ ಪಾಲುದಾರ ಪಕ್ಷಗಳದ್ದೇ ಈ ಕತೆ ಎಂದ ಮೇಲೆ ಚಿಕ್ಕಪುಟ್ಟ ಪಾಳೇಗಾರರನ್ನು ಕೇಳುವವರು ಯಾರು? ಎಲ್ಲಾ ಅಧಿಕಾರಕ್ಕೆ ರಚ್ಚೆ ಹಿಡಿಯುವವರೇ! ಇಂಥ ರಚ್ಚೆ ಜನಗಳ ಮಧ್ಯೆ ಅಚ್ಛೇ ದಿನಗಳ ಕನಸು ನನಸು ಮಾಡುವುದೇ ಮೋದಿ-3 ರಾಜ್ಯಭಾರದ ಅತಿದೊಡ್ಡ ಸವಾಲು!

(ಲೇಖಕರು ಹವ್ಯಾಸಿ ಬರಹಗಾರರು)

ಭಟ್ಟರ್ ಸ್ಕಾಚ್

● **ಅಮಾಸೆ ಸುಬ್ಬು, ಮೈಸೂರು**
ಮಾನವ ಸರಪಳಿ ನಿಮಿತ್ತ ಪರಿಚಯವಾದ ಹುಡುಗಿಯೊಂದಿಗೆ ನನ್ನ ಮದುವೆ ಫಿಕ್ಸ್. ನೀವು ಏನೆಂದು ಹಾಡಿ ಹರಸುವಿರಿ ಭಟ್ರೇ?
– ಸರಪಳಿಯೇ ಕುಣಿಕೆ ಆಯಿತಲ್ಲೋ, ಮನುಜ!

● **ಶ್ರೀಲತಾ ಮಂಜುನಾಥ, ತುಮಕೂರು**
ಭಟ್ರೇ, ಪರಚುವುದು ಹೆಣ್ಣಿನ ವರ್ತನೆ, ಆದರೆ ಆ ಕೆಲಸವನ್ನು ಗಂಡು ಮಾಡಿದರೆ?
– ಅವನಿಗೆ 'ಪರಚುರಾಮ' ಎನ್ನಬಹುದು!

● **ಎಸ್.ರಾಘವೇಂದ್ರ, (ಇಮೇಲ್ ಮೂಲಕ)**
ಭಟ್ರೇ, ನಾನು ಮತ್ತು ನನ್ನ ಹೆಂಡತಿ ಎಲ್ಲ ವಿಷಯಗಳಲ್ಲೂ ರಾಜಿ ಆಗ್ತೇವೆ, ಸರಿನಾ?
– ಜಗಳವಾಡಿದ ನಂತರ ಕೊನೆಗುಳಿಯುವುದು ಅದೊಂದೇ ದಾರಿ!

● **ಹರಿಓಂ ಶಾಸ್ತ್ರಿ, ಶಂಕರಪುರ**
ಮದುವೆಯಲ್ಲಿ ಮದುಮಕ್ಕಳನ್ನು ಬಿಟ್ಟರೆ ಬೇರೆ ಯಾರಲ್ಲಿ ಭಾವನೆಗಳು ಮಡುಗಟ್ಟಿರುತ್ತದೆ?
– ಸಂ'ಭಾವನೆ' ಪಡೆಯುವ ಪುರೋಹಿತರಲ್ಲಿ!

● **ನಿಂಗರಾಜು ಆರ್., (ಇಮೇಲ್ ಮೂಲಕ)**
ಭಟ್ರೇ, ಹೆಂಡತಿಗೂ, ಅಮ್ಮನ ಪ್ರೀತಿಗೂ ಏನ್ ವ್ಯತ್ಯಾಸ?
– ಹೆಂಡತಿಯೂ ಮುಂದೆ ಅಮ್ಮ ಆಗ್ತಾಳಲ್ಲ!

● **ರಾಜಾರಾಮ ಹೆಗಡೆ, ಬೆಂಗಳೂರು**
ಭಟ್ರೇ, ಒಬ್ಬಳಿಗಿಂತ ಹೆಚ್ಚು ಹೆಂಡತಿ ಇದ್ರೆ ಏನು ಪ್ರಯೋಜನ?
– ಆಗ ಒಂದಕ್ಕಿಂತ ಹೆಚ್ಚು ಮನೆ ಇರುತ್ತದಲ್ಲ?!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಹೆಂಡತಿ 'ರೀ' ಅಂದ್ರೆ ಗಂಡನಿಗೆ ಯಾವುದರ ಮುನ್ನುಡಿ?
– ಸಿಡಿಲು ಹೊಡೆಯುವ ಮುನ್ಸೂಚನೆ!

● **ಸತೀಶ ಎಲ್.ವಿ., (ಇಮೇಲ್ ಮೂಲಕ)**
ಭಟ್ರೇ, ಮರಗಳನ್ನು ಯಾಕೆ ಬೆಳೆಸಬೇಕು?
– ಮರಕೋತಿ ಆಟವಾಡಲು ಬೇಕಲ್ಲ?!

● **ರಾಜೇಶ ಶೆಟ್ಟಿ, ಬೆಳ್ತಂಗಡಿ**
ಭಟ್ರೇ, ಬಿಜೆಪಿಯಲ್ಲಿ ಯಾರಿಗೂ ಬೆಳೆಯಲು ಬಿಡುವುದಿಲ್ಲವಲ್ಲ?
– ಗಡ್ಡ, ಕೂದಲು, ಉಗುರುಗಳನ್ನು ಬೆಳೆಸಿಕೊಳ್ಳುವವರಿಗಷ್ಟೇ ಪ್ರಾಶಸ್ತ್ಯವಂತೆ!

● **ಹರಿಪ್ರಕಾಶ ಭಟ್, ಸಿದ್ದಾಪುರ**
ಭಟ್ರೇ, ಪ್ರೀತಿ ಅಂದ್ರೆ ನಿಮ್ಮ ದೃಷ್ಟಿಯಲ್ಲಿ ಕೆರೆ ನೀರಾ, ಹರಿವ ನೀರಾ?
– ನಾವು ಅಂದುಕೊಂಡ ಹೊತ್ತಿಗೆ ಥಟ್ ಅಂತ ಬರುವ ನಲ್ಲಿ ನೀರಾದರೂ ಆಗಬಹುದು!

● **ವಿ.ಹೇಮಂತಕುಮಾರ, ಬೆಂಗಳೂರು**
ಸರ್, ಪ್ರಾಣ ಉಳಿಸುವ ನೀರಿಗೆ, ಪ್ರಾಣ ತೆಗೆಯುವ ಶಕ್ತಿಯೂ ಇದೆಯಂತೆ, ಹೌದಾ?
– ಗುಂಡಿಗೆ ಸೋಡಾ ಬದಲು, ಬರೀ ನೀರು ಹಾಕಿಕೊಳ್ಳುವವರು ಕೇಳುವ ಪ್ರಶ್ನೆ ಇದು!

ಸೀತೆಗೆ ಒಂದೇ ಅಗ್ನಿಪರೀಕ್ಷೆ, ಇದಕ್ಕೆ...?

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಮತ್ತೊಂದು ಮಹಾಸಮರ ಮುಕ್ತಾಯಗೊಂಡಿದೆ. ಭಾರತದಂಥ ದೇಶದಲ್ಲಿ ಚುನಾವಣೆ ನಡೆಸುವುದು ಎಂದರೆ ಸಾಮಾನ್ಯದ ಮಾತಲ್ಲ. ಒಂದು ಕಡೆ ದೇಶದ ವಿಸ್ತಾರ, ಇನ್ನೊಂದು ಕಡೆ ಆಯಾ ಪ್ರದೇಶದ ವಿವಿಧತೆ, ಪ್ರತಿ ನೂರು ಇನ್ನೂರು ಕಿಲೋಮೀಟರಿಗೆ ಬದಲಾಗುವ ಆಚಾರ-ವಿಚಾರ. ಅದಕ್ಕೆ ಪೂರಕವಾಗುವಂತೆ ಅತಿಯಾದ ಜನಸಂಖ್ಯೆ. ಮೂರೋ-ನಾಲ್ಕೋ ಪ್ರಮುಖ ಪಕ್ಷಗಳನ್ನು ಬಿಟ್ಟರೆ, ವಿಚಾರದಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲದ ನೂರಾರು ಪಕ್ಷಗಳು, ಸಾವಿರಾರು ಅಭ್ಯರ್ಥಿಗಳು. ಸಾಲದು ಎಂಬಂತೆ, ಯಾವ ವಿಚಾರಗಳಿಗೂ ಒಗ್ಗದ, ತಮ್ಮದೇ ವಿಚಾರ ಇಟ್ಟುಕೊಂಡಿರುವ ಇನ್ನೊಂದಿಷ್ಟು ಜನ ಪಕ್ಷೇತರರು. ಅದೇನೋ ಹೇಳುತ್ತಾರಲ್ಲ, ಮೊದಲೇ ಉಲ್ಲಾಸ, ಮೇಲಿಂದ ಫಾಲ್ಗುಣ ಮಾಸ ಅಂತ, ಹಾಗೆ.

ಸುಮ್ಮನೆ ಬಹ್ರೈನ್ ದೇಶದಲ್ಲಿ ಎರಡು ವರ್ಷದ ಹಿಂದೆ ನಡೆದ ಚುನಾವಣೆಯ ಉದಾಹರಣೆ ತೆಗೆದುಕೊಳ್ಳಿ. ಬಹ್ರೈನ್ ದೇಶದ ಒಟ್ಟೂ ಜನಸಂಖ್ಯೆ ಸುಮಾರು ಹದಿನೈದೂವರೆ ಲಕ್ಷ. ಅದರಲ್ಲಿ ಸುಮಾರು ಏಳು ಲಕ್ಷಕ್ಕೂ ಹೆಚ್ಚು ವಿದೇಶಿಯರು. ಸ್ಥಳೀಯರ ಸಂಖ್ಯೆ ಸುಮಾರು ಎಂಟು ಲಕ್ಷ. ಅದರಲ್ಲಿ ಮತದಾರರ ಸಂಖ್ಯೆ ಮೂರೂವರೆ ಲಕ್ಷಕ್ಕೂ ಸ್ವಲ್ಪ ಕಮ್ಮಿ. ಅಂದರೆ ಇಡೀ ದೇಶದ ಮತದಾರರ ಸಂಖ್ಯೆ ಭಾರತದ ಕೆಲವೊಂದು ವಿಧಾನಸಭೆ ಕ್ಷೇತ್ರದ ಮತದಾರರ ಸಂಖ್ಯೆಗಿಂತಲೂ ಕಮ್ಮಿ. ಇರಲಿ, ಇವರೆಲ್ಲ ಸೇರಿ ಆರಿಸಬೇಕಾದದ್ದು ಕೇವಲ ನಲವತ್ತು ಜನಪ್ರತಿನಿಧಿಗಳನ್ನು! ಆ ನಲವತ್ತು ಸ್ಥಾನಕ್ಕೆ ಅಬ್ಬಬ್ಬಾ ಎಂದರೆ ಮುನ್ನೂರು-ಮುನ್ನೂರೈವತ್ತು ಸ್ಪರ್ಧಾಳುಗಳು. ಕೆಲವು ಕ್ಷೇತ್ರದಲ್ಲಿ ಐದರಿಂದ ಹತ್ತು ಸಾವಿರ ಮತದಾರರು. ಆದರೂ ಎರಡು ಹಂತದಲ್ಲಿ ಮತದಾನ! ಕೆಲವು ಯುರೋಪ್ ದೇಶಗಳಲ್ಲೂ ಚುನಾವಣೆ ಇದೇ ರೀತಿಯದ್ದಾಗಿರುತ್ತದೆ. ಹೀಗಿರುವಾಗ ಭಾರತದಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯ ಅಗಾಧತೆ ಮತ್ತು ಅದನ್ನು ನಿರ್ವಹಿಸುವ ಜವಾಬ್ದಾರಿ ಏನು ಎನ್ನುವುದರ ಅರಿವಾಗುತ್ತದೆ. ಈ ಚುನಾವಣೆಯಲ್ಲಿ, ಮತದಾನ ನಡೆಯುವ ದಿನಗಳಲ್ಲಿ ಅರವತ್ತೆರಡು ಕೋಟಿ ಗೂಗಲ್ ಸರ್ಚ್ ಆಗಿದೆ ಎಂದರೆ ಹೆಚ್ಚು ಹೇಳಬೇಕಿಲ್ಲ.

ಮೊನ್ನೆ ಮೊನ್ನೆಯಷ್ಟೇ ಸಂಪನ್ನಗೊಂಡ ಲೋಕಸಭೆ ಚುನಾವಣೆಯ ಅಂಕಿ ಅಂಶಗಳನ್ನು ಭಾರತದ ಚುನಾವಣಾ ಆಯೋಗ ನೀಡಿತ್ತು. ಭಾರತದ ಒಟ್ಟೂ ತೊಂಬತ್ತೇಳು ಕೋಟಿ ಮತದಾರರಲ್ಲಿ ಈ ಬಾರಿ ಚುನಾವಣೆಯಲ್ಲಿ ಸುಮಾರು ಅರವತ್ತನಾಲ್ಕು ಕೋಟಿಗೂ ಹೆಚ್ಚು ಜನ ಮತ ಚಲಾಯಿಸಿದ್ದಾರೆ. ಅದಕ್ಕಾಗಿ ಚುನಾವಣಾ ಆಯೋಗ ಹತ್ತೂವರೆ ಲಕ್ಷ ಮತಗಟ್ಟೆಗಳನ್ನು ನಿರ್ಮಿಸಿದೆ. ಒಂದೂವರೆ ಕೋಟಿ ಭದ್ರತೆ ಮತ್ತು ಮತಗಟ್ಟೆಯ ಸಿಬ್ಬಂದಿಗಳು ಕಾರ್ಯ ನಿರ್ವಹಿಸಿದ್ದಾರೆ. ಚುನಾವಣೆಗೆ ಬೇಕಾದ ಸಲಕರಣೆಗಳು ಮತ್ತು ಸಿಬ್ಬಂದಿಗಳನ್ನು ಸಾಗಿಸಲೆಂದೇ ನೂರ ಮೂವತ್ತೈದು ವಿಶೇಷ ರೈಲುಗಳು, ನಾಲ್ಕು ಲಕ್ಷ ವಾಹನಗಳನ್ನು ಆಯೋಗ ಬಳಸಿಕೊಂಡಿದೆ.

ಹೆಮ್ಮೆ ಪಡಬೇಕಾದ ಸಂಗತಿ ಎಂದರೆ, ದೇಶದ ಇಪ್ಪತ್ತೇಳು ರಾಜ್ಯ ಮತ್ತು ಎಲ್ಲ ಕೇಂದ್ರಾಡಳಿತ ಪ್ರದೇಶದಲ್ಲಿ ಮರು ಮತದಾನ ನಡೆಯಲಿಲ್ಲ. ಈ ಬಾರಿ ಕೇವಲ ಮೂವತ್ತೊಂಬತ್ತು ಮತಗಟ್ಟೆಗಳಲ್ಲಿ ಮರು ಮತದಾನ ನಡೆದಿದೆ. ಕಳೆದ ಲೋಕಸಭೆ ಚುನಾವಣೆಯಲ್ಲಿ ಐದು ನೂರ ನಲವತ್ತು ಮತಗಟ್ಟೆಗಳಲ್ಲಿ ಮರುಮತದಾನವಾಗಿತ್ತು. ಎಲ್ಲರೂ ಕುತೂಹಲದಿಂದ ನೋಡುತ್ತಿದ್ದ, ಒಂದು ಕಾಲದಲ್ಲಿ ಆತಂಕವಾದಿಗಳು ಅಟ್ಟಹಾಸ ಮೆರೆಯುತ್ತಿದ್ದ ಜಮ್ಮು-ಕಾಶ್ಮೀರದಲ್ಲಿ ಇತರೆ ರಾಜ್ಯಗಳಿಗಿಂತ ಅಧಿಕ ಮತದಾನವಾಗಿದೆ ಎಂದು ಆಯೋಗ ಹೇಳಿಕೊಂಡಿದೆ. ಯಾವ ದೃಷ್ಟಿಯಲ್ಲಿ ನೋಡಿದರೂ ಈ ಸಲದ ಚುನಾವಣೆ ಅಚ್ಚುಕಟ್ಟು. ನಮ್ಮ ಚುನಾವಣಾ ಆಯೋಗ ನಡೆಸಿದ್ದು ವಿಶ್ವದ ಅತಿ ದೊಡ್ಡ ಲೋಕತಂತ್ರದ ಚುನಾವಣೆ ಎನ್ನುವುದನ್ನು ಮರೆಯಬೇಡಿ.

ಇದರ ಜತೆಗೆ ಇನ್ನೊಂದು ಮಹತ್ವದ ಅಂಕಿ-ಅಂಶವನ್ನು ನೋಡೋಣ. ಈ ಬಾರಿ ಚುನಾವಣಾ ಆಯೋಗ ದೇಶದಾದ್ಯಂತ ಸುಮಾರು ಹತ್ತು ಸಾವಿರ ಕೋಟಿ ರುಪಾಯಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದೆ. ಇದರಲ್ಲಿ ನಾಲ್ಕು ಸಾವಿರದ ಮುನ್ನೂರು ಕೋಟಿ ರೂಪಾಯಿ ಮೌಲ್ಯದ ಡ್ರಗ್ಸ್, ಸುಮಾರು ಒಂಬೈನೂರು ಕೋಟಿ ರೂಪಾಯಿ

ಮೌಲ್ಯದ ಮದ್ಯವನ್ನು ವಶಪಡಿಸಿಕೊಂಡಿದೆ. ನಮ್ಮ ದೇಶದಲ್ಲಿ ಗುಜರಾತ್, ನಾಗಾಲ್ಯಾಂಡ್, ಮಿಜೋರಾಮ್, ಬಿಹಾರದಂಥ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶವಾದ ಲಕ್ಷದ್ವೀಪ ಮತ್ತು ಮಣಿಪುರ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮದ್ಯಪಾನ ನಿಷೇಧವಾದರೂ ಉಳಿದ ಕಡೆಗಳಲ್ಲಿ ಮದ್ಯಪಾನಕ್ಕೆ ಯಾವುದೇ ನಿರ್ಬಂಧವಿಲ್ಲ. ಆದರೆ ಮಾದಕ ವಸ್ತುಗಳ ಮಾರಾಟಕ್ಕೆ ಯಾವ ರಾಜ್ಯದಲ್ಲಿಯೂ ಪರವಾನಗಿ ಇಲ್ಲ. ಆದಾಗ್ಯೂ ಈ ಪ್ರಮಾಣದಲ್ಲಿ ಡ್ರಗ್ಸ್ ವಿಲೇವಾರಿಯಾಗುತ್ತಿದೆ ಎಂದರೆ ಚಿಂತಾಜನಕವಂತೂ ಹೌದು, ಜತೆಗೆ ಹೀಗೆಯೇ ನಡೆದರೆ ಮುಂದೇನು ಎಂಬ ಆತಂಕ ಮೂಡುವುದು ಸಹಜ. ನೆನಪಿರಲಿ, ಇದು ಚುನಾವಣೆ ಘೋಷಣೆಯಾಗಿ, ನೀತಿ ಸಂಹಿತೆ ಜಾರಿಯಾದ ನಂತರ ಸಿಕ್ಕಿಬಿದ್ದದ್ದು. ಇನ್ನು ಸಿಗದೇ ಇರುವುದು, ಉಳಿದ ದಿನಗಳಲ್ಲಿ ವಹಿವಾಟಾಗುವುದು ಎಷ್ಟೋ, ಏನೋ? ಅದರ ಲೆಕ್ಕ ಹೇಳುವವರು ಯಾರು?

ಇದರ ಜತೆಗೆ ಆಯೋಗ ಒಂದು ಸಾವಿರ ಕೋಟಿಗೂ ಹೆಚ್ಚು ನಗದು ಹಣವನ್ನು ವಶಪಡಿಸಿಕೊಂಡಿದೆ. ಸುಮಾರು ಒಂದೂವರೆ ಸಾವಿರ ಕೋಟಿ ಮೌಲ್ಯದ ಚಿನ್ನ, ಬೆಳ್ಳಿ ಮತ್ತು ಆಭರಣಗಳು, ಎರಡು ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ಉಡುಗೊರೆ ವಸ್ತುಗಳು, ಬಟ್ಟೆ, ಆಹಾರ ಧಾನ್ಯಗಳನ್ನೂ ವಶಪಡಿಸಿಕೊಂಡಿದೆ. ಈ ರೀತಿ ಚುನಾವಣೆಯ ಸಂದರ್ಭದಲ್ಲಿ ಮತದಾರರಿಗೆ ಆಮಿಷ ಒಡ್ಡುವುದು ಇದೇ ಮೊದಲ ಸಲವೇನೂ ಅಲ್ಲ. ನಾವು ಸಣ್ಣವರಿರುವಾಗಲೂ ಈ ರೀತಿಯ ಮಾತು ಕೇಳಿ, ಸುದ್ದಿ ಓದಿಯೇ ಬೆಳೆದವರು. ಮದ್ಯ, ಹಣ ಆಗಲೂ ಇತ್ತು. ಸೀರೆ, ಬೆಳ್ಳಿಯ ಹಣತೆ, ಟೇಪ್‌ರೆಕಾರ್ಡರ್‌ಗಳನ್ನು ಹಂಚಲಾಗುತ್ತಿತ್ತು. ಕ್ರಮೇಣ ಟೇಪ್‌ರೆಕಾರ್ಡರ್ ಜಾಗವನ್ನು ಟಿವಿ ಆಕ್ರಮಿಸಿಕೊಂಡಿತು. ಈಗ ಟಿವಿಯೂ ಮಾಯವಾಗಿ ಕುಕ್ಕರ್, ಮಿಕ್ಸರ್ ಅದರ ಸ್ಥಾನ ತುಂಬಿದೆ. ಒಂದೇ ವ್ಯತ್ಯಾಸ ಎಂದರೆ, ಈ ಸಂಸ್ಕೃತಿ ಪ್ರತಿ ಚುನಾವಣೆಗೂ ಹೆಚ್ಚುತ್ತಿದೆಯೇ ವಿನಾ ಕಮ್ಮಿಯಾಗುತ್ತಿಲ್ಲ. ಕಳೆದ ಚುನಾವಣೆಯಲ್ಲಿ ಆಯೋಗ ಮೂರೂವರೆ ಸಾವಿರ ಕೋಟಿ ಮೌಲ್ಯದ ವಸ್ತು ಮತ್ತು ಹಣವನ್ನು ವಶಪಡಿಸಿಕೊಂಡಿತ್ತು. ಅಂದರೆ, ಈ ವರ್ಷ ಆಯೋಗ ಕಳೆದ ಚುನಾವಣೆಗಿಂತಲೂ ಸುಮಾರು ಮೂರು ಪಟ್ಟು ಹೆಚ್ಚು ವಶಪಡಿಸಿಕೊಂಡಿದೆ.

ಗಮನಿಸಬೇಕಾದ ಇನ್ನೊಂದು ವಿಷಯವಿದೆ. ಸಿ-ವಿಜಿಲ್ (cVIJIL) ಬಗ್ಗೆ ನೀವು ಕೇಳಿರಬಹುದು. ಇದು ಚುನಾವಣಾ ಆಯೋಗ ಮತದಾರಿಗೆ ಮಾಹಿತಿ ನೀಡುವುದರ ಜತೆಗೆ ಚುನಾವಣೆಗೆ ಸಂಬಂಧಪಟ್ಟ ದೂರುಗಳನ್ನು ಸ್ವೀಕರಿಸಲು ನಿರ್ಮಿಸಿದ ಅಪ್ಲಿಕೇಷನ್ (ಆ್ಯಪ್). ಈ ಬಾರಿ ಆಯೋಗ ಆ್ಯಪ್ ಮೂಲಕ ನಾಲ್ಕೂವರೆ ಲಕ್ಷಕ್ಕೂ ಹೆಚ್ಚು ದೂರನ್ನು ಸ್ವೀಕರಿಸಿದ್ದಷ್ಟೇ ಅಲ್ಲ, ಶೇಕಡ 99.9ರಷ್ಟು ದೂರುಗಳಿಗೆ ಪ್ರತಿಕ್ರಿಯಿಸಿ, ಪರಿಹಾರ ನೀಡಿದೆ. ಇದು ಇಂದಿನ ಆಯೋಗ ಹೇಗೆ ಕೆಲಸಮಾಡುತ್ತಿದೆ ಎನ್ನುವುದಕ್ಕೆ ಹಿಡಿದ ಕೈಗನ್ನಡಿ. ಈ ನಿಟ್ಟಿನಲ್ಲಿ ಭಾರತದ ಚುನಾವಣಾ ಆಯೋಗದ ಕಾರ್ಯ ನಿಜಕ್ಕೂ ಶ್ಲಾಘನೀಯ.

ಭಾರತದ ಚುನಾವಣಾ ಆಯೋಗ ದಿನ ಕಳೆದಂತೆ ತನ್ನ ಕಾರ್ಯಕ್ಷಮತೆಯನ್ನು ವೃದ್ಧಿಸಿಕೊಂಡು ಬಂದಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಚುನಾವಣೆ ಪ್ರಕ್ರಿಯೆಯಲ್ಲಿ ಮಹತ್ತರ ಬದಲಾವಣೆ ತಂದ ಟಿ.ಎನ್.ಶೇಷನ್ ಅವರನ್ನು ಭಾರತೀಯರು ಇಂದಿಗೂ ಮರೆತಿಲ್ಲ. ನೀತಿಸಂಹಿತೆಯಾಗಲಿ, ಪ್ರಚಾರ ಪ್ರಕ್ರಿಯೆಯಲ್ಲಾಗಲಿ ಆಯೋಗ ಸಾಕಷ್ಟು ಬದಲಾವಣೆಯನ್ನು ಮಾಡಿಕೊಂಡು ಬಂದಿದೆ. ಅದರ ಭಾಗವಾಗಿ ಬಂದದ್ದು ಸಾಕಷ್ಟು ಸುದ್ದಿ ಮಾಡಿದ ಇವಿಎಮ್ (ಇಲೆಕ್ಟ್ರಾನಿಕ್ ವೋಟಿಂಗ್ ಮಷಿನ್). ಬ್ಯಾಲೆಟ್ ಪೇಪರ್ ಮತದಾನಕ್ಕೆ ತಿಲಾಂಜಲಿ ಕೊಡಿಸಿದ್ದು ಇದೇ ಇವಿಎಮ್.

ಕಳೆದ ಹತ್ತು ವರ್ಷಗಳಿಂದ ಚುನಾವಣೆ ಎಂದಾಗ ಸಾಕಷ್ಟು ಚರ್ಚೆಯಲ್ಲಿದ್ದದ್ದು ಇವಿಎಮ್. ಈ ಕುರಿತು ವಿರೋಧಪಕ್ಷಗಳು ಸಾಕಷ್ಟು ಅನುಮಾನ ವ್ಯಕ್ತಪಡಿಸುತ್ತಿದ್ದವು. ಅದರಲ್ಲೂ ವಿಶೇಷವಾಗಿ, ಸೋತಾಗ ಅಪವಾದಕ್ಕೆ ಗುರಿಯಾಗುತ್ತಿದ್ದದ್ದು ಇವಿಎಮ್. ಇಂದಿನ ಇವಿಎಮ್ ಪೂರ್ವಜರು ಅದೆಷ್ಟು ಬಾರಿ ಚೌತಿಯ ಚಂದ್ರನನ್ನು ನೋಡಿದ್ದರೋ ಏನೋ? ಬಹುಶಃ ಭಾರತದಲ್ಲಿ ಮಾಡದ ತಪ್ಪಿಗೆ ಇವಿಎಮ್ ಎದುರಿಸಿದಷ್ಟು ಅಪವಾದವನ್ನು ಇನ್ಯಾವುದೂ ಎದುರಿಸಲಿಲ್ಲ.

ಭಾರತದಲ್ಲಿ ಮೊದಲ ಬಾರಿ ಇವಿಎಮ್ ಬಳಕೆಯಾದದ್ದು 1982ರಲ್ಲಿ, ಕೇರಳದ ಚುನಾವಣೆಯಲ್ಲಿ. ಅಲ್ಲಿಂದ 2014ರವರೆಗೂ ಅದು ಸರಿಯಾಗಿಯೇ ಇತ್ತು. ನಂತರ ಇದ್ದಕ್ಕಿದ್ದಂತೆ ಇವಿಎಮ್ ಸರಿ ಇಲ್ಲ, ಅದನ್ನು ಆಡಳಿತ ಪಕ್ಷದವರು ಹ್ಯಾಕ್ ಮಾಡುತ್ತಿದ್ದಾರೆ, ತಮ್ಮ ಗೆಲುವಿಗೆ ಇವಿಎಮ್ ಬಳಸಿಕೊಳ್ಳುತ್ತಿದ್ದಾರೆ ಎಂಬ ಸುಳ್ಳು ಆರೋಪಗಳು ಬಂದವು. ಇದು ಸುಳ್ಳು ಆರೋಪ ಎಂದು ಹೇಳಲು ಎರಡು ಕಾರಣವಿದೆ. ಮೊದಲನೆಯದು, ಇವಿಎಮ್ ಒಂದು ಸ್ವತಂತ್ರ ಯಂತ್ರ. ಅದಕ್ಕೆ ಮತದಾನ ನಡೆಯುವ ಸಂದರ್ಭದಲ್ಲಿ ಇಂಟರ್ನೆಟ್ ಸಂಪರ್ಕ ಇರುವುದಿಲ್ಲ. ಯಾವುದೇ ಇಲೆಕ್ಟ್ರಾನಿಕ್ ಯಂತ್ರವನ್ನು ಹ್ಯಾಕ್ ಮಾಡಲು ಅಥವಾ ವಶಕ್ಕೆ ತೆಗೆದುಕೊಳ್ಳಲು ಇಂಟರ್‌ನೆಟ್ ಅತ್ಯವಶ್ಯ. ಹಾಗಾಗಿ ಮತದಾನದ ಸಂದರ್ಭದಲ್ಲಿ ಅದನ್ನು ವಶಪಡಿಸಿಕೊಳ್ಳುವುದು ಅಸಾಧ್ಯವಾದ ಮಾತು. ಇನ್ನು ಮತದಾನದ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಜನರಿಂದಲೇ ತಮಗೆ ಬೇಕಾದವರಿಗೆ ಮತ ಹಾಕಿಸಬೇಕು ಅಥವಾ ಅವರನ್ನು ಒಳಗೆ ಬಿಡದೇ ಯಾರಾದರೂ ತಮಗೆ ಬೇಕಾದಂತೆ ಮತ ಹಾಕಬೇಕು, ಅಥವಾ ಮತದಾನದ ನಂತರ ಇವಿಎಮ್ ಬದಲಾಯಿಸಬೇಕು. ಅದೆಲ್ಲ ನಡೆದರೆ ಜನರ ಕಣ್ಣಿಗೆ, ಮಾಧ್ಯಮದವರ ಕಣ್ಣಿಗೆ ಬೀಳದೇ ಇರಲು ಸಾಧ್ಯವಿಲ್ಲ. ಜತೆಗೆ ಇದನ್ನು ಹೈಗೈ ಮಾಡಲಾಗದಂತೆ ಸಾಕಷ್ಟು ಭದ್ರತೆಯ ವ್ಯವಸ್ಥೆಯಿದೆ. ಈ ವಿಷಯ ಭಾರತದ ಉಚ್ಚನ್ಯಾಯಾಲಯದ ಒಳಕ್ಕೂ ಹೋಗಿ, ಸಾಕಷ್ಟು ವಾದ-ಪ್ರತಿವಾದ, ಪರಾಮರ್ಶೆ, ಪರಿಶೀಲನೆ ಎಲ್ಲವೂ ನಡೆದು ತೀರ್ಪನ್ನು ಪಡೆದುಕೊಂಡಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಓದಿದವರಿಗೆ ಇದು ತಿಳಿಯುತ್ತದೆ. ಅಷ್ಟು ವಿಸ್ತಾರವಾಗಿ ನ್ಯಾಯಾಲಯ ಈ ಕುರಿತು ತೀರ್ಪು ನೀಡಿದೆ.

ಎರಡನೆಯದಾಗಿ, ಇವಿಎಮ್ ವಿರುದ್ಧ ಮಾತಾಡುವ ಪಕ್ಷಗಳು ತಾವು ಗೆದ್ದಾಗ ಯಂತ್ರವನ್ನು ದೂಷಿಸುವುದಿಲ್ಲ. ದೋಷಾರೋಪ ಏನಿದ್ದರೂ ಸೋತಾಗ ಮಾತ್ರ. ಇದು ತಮ್ಮ ಸೋಲನ್ನು ಒಪ್ಪಿಕೊಳ್ಳಲಾಗದೇ, ನೆಪ ಹುಡುಕುವ ಕಾರ್ಯವೇ ವಿನಾ ಇನ್ನೇನೂ ಆಗಿರಲಿಲ್ಲ. ಒಂದೇ ಸುಳ್ಳನ್ನು ಎಷ್ಟು ಹೇಳಿದರೂ ಸುಳ್ಳು ಸತ್ಯವಾಗುವುದಿಲ್ಲವಲ್ಲ!

ಮೊನ್ನೆ ನಡೆದ ಚುನಾವಣೆಯಲ್ಲಿ ಭಾರತದ ಮತದಾರ ನೀಡಿದ ತೀರ್ಪು ತೀರಾ ವಿಭಿನ್ನವಾದದ್ದು. ಇದು ಅಧಿಕಾರದಲ್ಲಿರುವ ಪಕ್ಷದ ಅತಿಯಾದ ಆತ್ಮವಿಶ್ವಾಸ ಮತ್ತು ಎಲ್ಲ ಎಕ್ಸಿಟ್ ಪೋಲ್‌ಗಳನ್ನೂ ಹುಸಿಗೊಳಿಸಿದ ಚುನಾವಣೆ. ಬಹುತೇಕ ಪ್ರಮುಖ ರಾಜಕೀಯ ಪಕ್ಷಗಳಿಗೆ ಒಂದು ಬಗೆಯ ಖುಷಿ ಇದ್ದರೂ ಸಂತೋಷ ಪಡಲಾಗದ ಪರಿಸ್ಥಿತಿ. ಚುನಾವಣೆಯ ಫಲಿತಾಂಶ ಬಂದಾಗಿನಿಂದ ಇವತ್ತಿನವರೆಗೂ ಕಾಯುತ್ತಿದ್ದೇನೆ, ಇವಿಎಮ್ ಅಥವಾ ಮತಯಂತ್ರಗಳು ಸರಿಯಾಗಿರಲಿಲ್ಲ ಎಂದು ಈ ಬಾರಿ ಯಾರೂ ಹೇಳಿದ್ದು ಕೇಳಿಬಂದಿಲ್ಲ.

ಕಳೆದ ಹತ್ತು ವರ್ಷಗಳಲ್ಲಿ ನಡೆದ ಸುಮಾರು ಎಪ್ಪತ್ತಕ್ಕೂ ಹೆಚ್ಚು ಚುನಾವಣೆಯಲ್ಲಿ ಪಡೆಯುತ್ತಿದ್ದ ಆಪಾದನೆಯಿಂದ ಈ ಸಲ ಇವಿಎಮ್ ಮುಕ್ತಿ ಪಡೆಯಿತೆ? ರಾಮಾಯಣದ ಸೀತಾಮಾತೆಯೂ ಅಗ್ನಿಪರೀಕ್ಷೆ ಎದುರಿಸಿದ್ದಳು, ಆದರೆ ಒಮ್ಮೆ ಮಾತ್ರ. ಆದರೆ ಭಾರತದ ಇವಿಎಮ್ ಅದೆಷ್ಟು ಬಾರಿ ಅಗ್ನಿಪರೀಕ್ಷೆ ಎದುರಿಸಿತು ನೋಡಿ! ಸೀತೆಯ ಅಗ್ನಿಪರೀಕ್ಷೆಯ ನಂತರ ಅಯೋಧ್ಯೆಯ ಒಬ್ಬ ಪ್ರಜೆ ಬಿಟ್ಟರೆ ಬೇರೆಯಾರೂ ಆ ಕುರಿತು ಮಾತನಾಡಿದ ಉಲ್ಲೇಖವಿಲ್ಲ. ಆದರೆ ಭಾರತದ ರಾಜಕೀಯ ಪಕ್ಷದ ರೂಪದಲ್ಲಿರುವ ಪ್ರಜೆಗಳು ಇವಿಎಮ್ ಪವಿತ್ರ ಎಂದು ಒಪ್ಪಲೇ ಇಲ್ಲ. ಪ್ರತಿ ಚುನಾವಣೆಯ ನಂತರವೂ ಯಂತ್ರವನ್ನು ವನವಾಸಕ್ಕೆ ಕಳಿಸಿ, ಪುನಃ ಬ್ಯಾಲೆಟ್ ಪೇಪರ್ ಮತದಾನ ನಡೆಸುವಂತೆ ಒತ್ತಾಯಿಸುತ್ತಿದ್ದರು. ಪಾಪ ಇವಿಎಮ್!

ಈ ಸಲದ ಚುನಾವಣೆಯ ಫಲಿತಾಂಶ ಇವಿಎಮ್ ಮೇಲಿರುವ ಅಪವಾದವನ್ನು ಶಾಶ್ವತವಾಗಿ ತೊಡೆದುಹಾಕುತ್ತದೆಯೇ ಅಥವಾ ಇದೂ ತಾತ್ಕಾಲಿಕವೇ ಎಂಬುದನ್ನು ಕಾದು ನೋಡಬೇಕು!

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್

● **ಇಂದಿನಿಂದ ಮೋದಿ 'ಮಿತ್ರ' ಸರಕಾರ: ಸುದ್ದಿ**
– ಸಾರ್ವಜನಿಕ ಸಭೆಗಳಲ್ಲಿ ಜನರನ್ನು ಉದ್ದೇಶಿಸಿ ಭಾಷಣ ಮಾಡುವಾಗ ಮಾತ್ರ 'ಮಿತ್ರೋಂ' ಎಂಬ ಶಬ್ದ ಮೋದಿಯವರಿಂದ ಹೊಮ್ಮುತ್ತಿತ್ತು. ಇನ್ನು ಮುಂದೆ ಪ್ರತಿದಿನ ಹೀಗೆನ್ನುವುದು ಅವರಿಗೆ ಅನಿವಾರ್ಯವಾಗಬಹುದು!

● **ಎನ್‌ಡಿಎ ಸರಕಾರವು ಕಾನೂನಿಗೆ, ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ರಚನೆಯಾಗಿದೆ. ಹೀಗಾಗಿ ಮೋದಿ ಪದಗ್ರಹಣ ಸಮಾರಂಭದಲ್ಲಿ ನಾವು ಭಾಗಿಯಾಗುವುದಿಲ್ಲ: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ**
– ಇಂಥದೊಂದು 'ಪಿಳ್ಳೆನೆವ' ಹೊಮ್ಮುತ್ತೆ ಅಂತ ಗೊತ್ತಿತ್ತು ಬಿಡಿ!

● **ಬಸ್ ಟಿಕೆಟ್ ದರ ಹೆಚ್ಚಳವಿಲ್ಲ: ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟನೆ**
– 'ಒಂದು ಪಕ್ಷ ಹೆಚ್ಚಿಸಿದ್ರೂ, ನಾವೇನೂ ಕೇರ್ ಮಾಡ್ತಾ ಇರ್ಲಿಲ್ಲ ಬಿಡಿ' ಎಂದು ಮಹಿಳಾಮಣಿಗಳು ಕಿಸಕ್ ಎಂದು ನಕ್ಕರಂತೆ!

● **ತೊಗರಿ, ಕಡಲೇಬೇಳೆ, ಈರುಳ್ಳಿ, ಆಲೂಗಡ್ಡೆ ಅಭಾವದ ಸಾಧ್ಯತೆ; ಮುಂಜಾಗ್ರತಾ ಕ್ರಮಕ್ಕೆ ಮುಂದಾದ ಕೇಂದ್ರ: ಸುದ್ದಿ**
– ಅಂತೆಯೇ, ಇಡ್ಲಿಯ ಜತೆಯಲ್ಲಿ ಸಾಂಬಾರ್ ಕೊಡದೆ ಚಟ್ನಿಯನ್ನು ಮಾತ್ರವೇ ನೀಡುವ ಕ್ರಮದ ಕುರಿತೂ ಹೋಟೆಲ್ ಮಾಲೀಕರು ಆಲೋಚಿಸುತ್ತಿದ್ದಾರಂತೆ!

● **ನರೇಂದ್ರ ಮೋದಿ ಅವರು ಐದು ವರ್ಷಗಳ ಅಧಿಕಾರಾವಧಿ ಪೂರೈಸುವುದಿಲ್ಲ: ಕಾಂಗ್ರೆಸ್ ಸಂಸದ ಗೌರವ್ ಗೊಗೊಯಿ**
– ಅಯ್ಯೋ, ಈಗಷ್ಟೇ ಸಂಸಾರ ಶುರುಮಾಡಿದ್ದಾರೆ, ಸ್ವಲ್ಪ ಕಾಯಬಾರದಾ ಸ್ವಾಮೀ?

● **ಜಮ್ಮು-ಕಾಶ್ಮೀರದಲ್ಲಿ ಲೋಕಸಭಾ ಚುನಾವಣೆಯಲ್ಲಿ 5 ಕ್ಷೇತ್ರಗಳಿಗೆ ಸ್ಪರ್ಧಿಸಿದ್ದ 100 ಅಭ್ಯರ್ಥಿಗಳಲ್ಲಿ 89 ಮಂದಿಗೆ ಠೇವಣಿ ನಷ್ಟ: ಸುದ್ದಿ**
– ಆಗಲಿ ಬಿಡಿ. ಚುನಾವಣಾ ಆಯೋಗಕ್ಕೆ ಹೀಗಾದರೂ ಒಂದಷ್ಟು ಲಾಭವಾಗಲಿ!

● **ಪ್ರತಿಯೊಂದು ಇಲಾಖೆಯ ಅಧಿಕಾರಿಗಳು, ನೌಕರರು ಪ್ರತಿ ಸೋಮವಾರ ತಂತಮ್ಮ ಕೇಂದ್ರ ಸ್ಥಾನದ ಕಚೇರಿಗಳಲ್ಲಿ ಹಾಜರಿರಬೇಕಾದ್ದು ಕಡ್ಡಾಯ: ಎಲ್ಲ ಸರಕಾರಿ ಇಲಾಖೆಗಳಿಗೆ ರಾಜ್ಯ ಸರಕಾರ ಆದೇಶ**
– ಮಿಕ್ಕ ದಿನಗಳಂದು ಗೈರುಹಾಜರಾಗಬಹುದಾ?

● **ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣ. ನಿಗಮದ ಅಧ್ಯಕ್ಷರ ರಾಜೀನಾಮೆಗೆ ಹೆಚ್ಚಿದ ಆಗ್ರಹ: ಸುದ್ದಿ**
– ಆಗ್ರಹಕ್ಕೆ ಮಣಿದಲ್ಲಿ ಅದು 'ತಲೆದಂಡ ಭಾಗ-2' ಆಗಲಿದೆ!

● **ಪ್ರತಿಪಕ್ಷಗಳ 'ಇಂಡಿಯ' ಒಕ್ಕೂಟ ಈಗ ಕೇಂದ್ರದಲ್ಲಿ ಸರಕಾರ ರಚನೆಗೆ ಹಕ್ಕು ಮಂಡಿಸದಿರಬಹುದು. ಆದರೆ ಮುಂದೊಂದು ದಿನ ಸರಕಾರ ರಚನೆ ಮಾಡುವುದಿಲ್ಲ ಎಂದೇನೂ ಅಲ್ಲ: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ**
– ಒಪ್ಪೋ ಮಾತೇ. ಆದರೆ 'ಇಂಡಿಯ' ಒಕ್ಕೂಟದ ಕಪ್ಪೆಗಳು ತಕ್ಕಡಿಯಲ್ಲಿ ಸುಮ್ಮನೆ ಕುಳಿತಿರಬೇಕಲ್ಲ!

ನಿಮ್ಮ ಸ್ವಾರ್ಥಕ್ಕೆಂದು ನಮ್ಮ ಬದುಕಿಗೆ ಕೊಳ್ಳಿ ಇಡಬೇಡಿ

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ರೈತ ಹೋರಾಟಗಾರರನ್ನು ಖಲಿಸ್ತಾನಿಗಳು ಎಂದು ಕರೆದಿದ್ದರು ಎಂಬ ಕಾರಣಕ್ಕೆ ಸಂಸದೆ ಕಂಗನಾ ರಣಾವತ್ ಅವರಿಗೆ ಕುಲ್ವಿಂದರ್ ಕೌರ್ ಎಂಬ ಸಿಐಎಸ್‌ಎಫ್ ಭದ್ರತಾ ಸಿಬ್ಬಂದಿಯು ಚಂಡೀಗಢ ವಿಮಾನ ನಿಲ್ದಾಣದಲ್ಲಿ ಕಪಾಳಕ್ಕೆ ಹೊಡೆದಿದ್ದಾರೆ. ರಕ್ಷಣೆ ಮಾಡಬೇಕಾದವರೇ ಹೀಗೆ ಕಾನೂನನ್ನು ಕೈಗೆತ್ತಿಕೊಂಡು ಹಲ್ಲೆ ಮಾಡಿರುವುದು ಅತ್ಯಂತ ಆತಂಕದ ಬೆಳವಣಿಗೆಯಾಗಿದೆ.

ಕುಲ್ವಿಂದರ್ ಕೌರ್ ಅವರ ದುರ್ವರ್ತನೆಯನ್ನು ಹಲವರು ಸಮರ್ಥಿಸಿಕೊಂಡು ಸಾಮಾಜಿಕ ತಾಣದಲ್ಲಿ ಬೆಂಬಲಿಸಿರುವುದು ಕೂಡ ಅತ್ಯಂತ ಗಂಭೀರ ವಿಷಯ. ದುರ್ದೈವವೆಂದರೆ, ಪ್ರಮುಖ ವಿರೋಧ ಪಕ್ಷಗಳ ನಾಯಕರು ಇದರ ಬಗ್ಗೆ ಚಕಾರವೆತ್ತದೆ, ಕೌರ್ ನಡವಳಿಕೆಯನ್ನು ಪರೋಕ್ಷವಾಗಿ ಸಮರ್ಥಿಸುತ್ತಿದ್ದಾರೆ. ಕಾನೂನು ಧಿಕ್ಕರಿಸಿ ಹಿಂಸಾತ್ಮಕ ವರ್ತನೆ ತೋರಿದವರನ್ನು ಖಂಡಿಸದೆ ದೇಶದ ಹಿತವನ್ನು ಬಲಿಕೊಡುತ್ತಿದ್ದಾರೆ.

ಆರೋಪಿಗಳಿಗೆ ಹೀಗೆ ದೊರೆಯುವ ರಾಜಕೀಯ ಬೆಂಬಲದಿಂದಾಗಿ ಇಂಥ ಘಟನೆಗಳು ಪುನರಾವರ್ತನೆಯಾಗುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಸಿಖ್ ದಂಗೆಯ ಆರೋಪಿತರಾಗಿದ್ದ ಜಗದೀಶ್ ಟೈಟ್ಲರ್‌ಗೆ ಸಿಬಿಐ ಕ್ಲೀನ್‌ಚಿಟ್ ನೀಡಿದ್ದನ್ನು ವಿರೋಧಿಸಿ 2009ರ ಚುನಾವಣೆಯ ಸಂದರ್ಭದಲ್ಲಿ ಜರ್ನೈಲ್‌ಸಿಂಗ್ ಎಂಬ ಪತ್ರಕರ್ತರು ಎಐಸಿಸಿ ಕಚೇರಿಯಲ್ಲಿ ಅಂದಿನ ಗೃಹಸಚಿವ ಪಿ.ಚಿದಂಬರಂರವರ ಪತ್ರಿಕಾಗೋಷ್ಠಿಯಲ್ಲಿ ಅವರ ಮೇಲೆ ಷೂ ಎಸೆದು ಹಲ್ಲೆಮಾಡಿದ್ದರು. ಜರ್ನೈಲ್‌ಸಿಂಗ್ ವರ್ತನೆ ಅತ್ಯಂತ ಖಂಡನೀಯವಾಗಿತ್ತು. ಆದರೆ ಅವರ ಈ ವರ್ತನೆಯನ್ನು ಆಮ್ ಆದ್ಮಿ ಪಾರ್ಟಿಯು ದೆಹಲಿಯ ಸಿಖ್ಖರ ಮತ ಪಡೆಯುವ ಸಾಧನವಾಗಿ ಬಳಸಿಕೊಳ್ಳಲು 2014ರಲ್ಲಿ ಲೋಕಸಭೆಗೆ ಸ್ಪರ್ಧಿಸಲು ಟಿಕೆಟ್ ನೀಡಿತು. ಅದರಲ್ಲಿ ಪರಾಭವಗೊಂಡ ತರುವಾಯ, 2015ರಲ್ಲಿ ಅವರಿಗೆ ದೆಹಲಿ ವಿಧಾನಸಭೆಗೆ ಟಿಕೆಟ್ ನೀಡಿ ಗೌರವಾನ್ವಿತ ಶಾಸಕರನ್ನಾಗಿಸಿತು.

ಕರ್ಮ ಹೇಗೆ ಹಿಂದಿರುಗಿ ಬರುತ್ತದೆ ಎನ್ನುವುದಕ್ಕೆ ಇಲ್ಲೊಂದು ಸಾಕ್ಷಿಯಿದೆ. 2017ರಲ್ಲಿ ಅರವಿಂದ ಕೇಜ್ರಿವಾಲ್ ರೋಹ್ತಕ್‌ನಲ್ಲಿ ಚುನಾವಣಾ ಪ್ರಚಾರ ಮಾಡುತ್ತಿದ್ದಾಗ ಯುವಕನೊಬ್ಬ ಅವರ ಮೇಲೆ ಚಪ್ಪಲಿ ಎಸೆದ. ಜರ್ನೈಲ್ ಸಿಂಗ್ ಚಪ್ಪಲಿ ಎಸೆದ ತರುವಾಯ, ಒಮರ್ ಅಬ್ದುಲ್ಲಾ ಹಾಗೂ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರ ಮೇಲೂ ಚಪ್ಪಲಿ ಎಸೆದ ಘಟನೆಗಳು ಜರುಗಿದವು. ಹಿಂದೆ ನಡೆದ ಹೊಣೆಗೇಡಿ ವರ್ತನೆಯನ್ನು ಖಂಡಿಸದೆ ಗೌರವಿಸಿದ ಕಾರಣಕ್ಕೆ ಇತರರಿಗೆ ಅದು ಹೇಗೆ ಅನುಕರಣೀಯವಾಯಿತು ಎಂಬುದಕ್ಕೆ ತರುವಾಯದ ಇಂಥ ಘಟನೆಗಳು ಸಾಕ್ಷಿಯಾಗಿವೆ. 2008ರಲ್ಲಿ, ದೆಹಲಿಯ ಬಾಟ್ಲ ಹೌಸ್‌ನಲ್ಲಿ ಅಡಗಿದ್ದ ಭಯೋತ್ಪಾದಕರನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಯಿತು. ಭಯೋತ್ಪಾದಕರ ಹೆಣದ ಚಿತ್ರ ನೋಡಿ ಸೋನಿಯಾ ಗಾಂಧಿಯವರು ಕಣ್ಣೀರಿಟ್ಟರು ಎಂದು ಕಾಂಗ್ರೆಸ್ ಮುಖಂಡ ಸಲ್ಮಾನ್ ಖುರ್ಷಿದ್ ತಿಳಿಸುತ್ತಾರೆ. ಕಾಂಗ್ರೆಸ್ ಪಾರ್ಟಿಗೆ ಕರ್ಮ ಹೇಗೆ ಬಂದಿರುವುದು ಎಂದರೆ, ರಾಜೀವ್ ಗಾಂಧಿಯವರ ಹತ್ಯೆಯ ಆರೋಪಿ ಪೆರಿಯವಾಲನ್ 30 ವರ್ಷಗಳ ನಂತರ ಸೆರೆಮನೆಯಿಂದ ಹೊರಬಂದಾಗ, ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಆತನನ್ನು ಕರೆದು ಸನ್ಮಾನಿಸಿದರು. ಆದರೆ ಡಿಎಂಕೆಯೊಂದಿಗೆ ಮೈತ್ರಿಭಂಗವಾಗುವ ಭೀತಿಯಿಂದ ಕಾಂಗ್ರೆಸ್ ನಾಯಕರು ಉಸಿರೆತ್ತಲಿಲ್ಲ. ಬಿಜೆಪಿ ಕೂಡ ಈ ವಿಷಯದಲ್ಲಿ ತಪ್ಪೆಸಗಿದೆ. 2008ರ ಮಾಲೇಗಾಂವ್ ಬಾಂಬ್ ಸ್ಫೋಟದ ಆರೋಪಿ ಪ್ರಗ್ಯಾಸಿಂಗ್ ಠಾಕೂರ್ ಅವರಿಗೆ, ಅವರು ಆರೋಪದಿಂದ ಮುಕ್ತರಾಗುವ ಮುನ್ನವೇ 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷವು ಟಿಕೆಟ್ ನೀಡಿ ಲೋಕಸಭಾ ಸದಸ್ಯರನ್ನಾಗಿ ಮಾಡಿ ಪ್ರಮಾದ ವೆಸಗಿತು. 1993ರ ಮುಂಬೈ ಬಾಂಬ್ ಸ್ಫೋಟದ ಆರೋಪಿ ಯಾಕೂಬ್ ಮೆಮನ್‌ನನ್ನು ಗಲ್ಲಿಗೇರಿಸಿದ ನಂತರ ಮುಂಬೈ ಯಲ್ಲಿ ನಡೆದ ಅವನ ಅಂತ್ಯಕ್ರಿಯೆಯಲ್ಲಿ ನಲವತ್ತು ಸಾವಿರಕ್ಕೂ ಹೆಚ್ಚು ಜನರು ಭಾಗಿಯಾಗಿದ್ದರು. ಭೂಗತ ಜಗತ್ತಿನ ಪಾಪಿಗಳು ಮೃತಪಟ್ಟರೆ ಅವರನ್ನು ವೈಭವೀಕರಿಸುವ ಕೆಟ್ಟನಡೆ ಸಾಮಾನ್ಯವಾಗಿದೆ. ಕುಖ್ಯಾತ ಅಪರಾಧಿ ಮುಖ್ತಾರ್ ಅನ್ಸಾರಿ ಮೃತನಾದಾಗ ಅವನ ಅಂತ್ಯಕ್ರಿಯೆ ಯಲ್ಲಿ ಸಾವಿರಾರು ಜನರು ಭಾಗವಹಿಸಿ, ಭೂಗತ ಜಗತ್ತಿನ ಕ್ರಿಮಿಯಾಗಿದ್ದರೂ ಸಮುದಾಯ ಅವನ ಕೈಬಿಡುವುದಿಲ್ಲ ಎಂಬ ಸಂದೇಶವನ್ನು ರವಾನಿಸಿದರು.

2024ರ ಲೋಕಸಭಾ ಚುನಾವಣೆಯಲ್ಲಿ ತಮಿಳುನಾಡಿನಲ್ಲಿ ಬಿಜೆಪಿಯು ಅಣ್ಣಾಮಲೈ ಅವರ ನೇತೃತ್ವದಲ್ಲಿ ಶೇ.11ರಷ್ಟು ಮತವನ್ನು ಪಡೆದಿದೆ. ಸ್ವತಂತ್ರವಾಗಿ ಸ್ಪರ್ಧಿಸಿ 9 ಸೀಟುಗಳಲ್ಲಿ ಎರಡನೆಯ ಸ್ಥಾನದಲ್ಲಿದೆ. ಬಿಜೆಪಿಯ ಈ ಬೆಳವಣಿಗೆ ಡಿಎಂಕೆಯ ನಿದ್ರೆಗೆಡಿಸಿದೆ. ಚುನಾವಣಾ ಫಲಿತಾಂಶದ ನಂತರ ಡಿಎಂಕೆ ಕಾರ್ಯಕರ್ತರು ಕೃಷ್ಣಗಿರಿಯಲ್ಲಿ ಮೇಕೆಯೊಂದಕ್ಕೆ ಅಣ್ಣಾಮಲೈ ಅವರ ಚಿತ್ರ ಹಾಕಿ, ಅದರ ತಲೆ ಕತ್ತರಿಸಿ ರಕ್ತವನ್ನು ಚೆಲ್ಲಾಡಿದರು. ಚಿಕ್ಕ ಮಕ್ಕಳು ಅಣ್ಣಾಮಲೈ ವಿರುದ್ಧ ಪ್ರಚೋದನಕಾರಿಯಾಗಿ ಘೋಷಣೆ ಕೂಗಿ ಸಂಭ್ರಮಿಸಿದರು. ಸಾಲದೆಂಬಂತೆ, ಈ ಭಯಾನಕ ಕೃತ್ಯದ ವಿಡಿಯೋ ಚಿತ್ರೀಕರಣ ಮಾಡಿಕೊಂಡು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡರು. ಯಥಾ ಪ್ರಕಾರ, 'ಪ್ರಜಾಪ್ರಭುತ್ವ ಅಪಾಯದಲ್ಲಿದೆ' ಎಂದು ಹೇಳುವ ಯಾರೊಬ್ಬ ನಾಯಕರೂ ಹಿಂಸೆಗೆ ಪ್ರಚೋದಿಸುವ ಇಂಥ ಕೃತ್ಯವನ್ನು ಖಂಡಿಸಲಿಲ್ಲ. ಈ ಅಮಾನುಷ ಕೃತ್ಯದ ಬಗ್ಗೆ ಸಾರ್ವತ್ರಿಕವಾಗಿ ಖಂಡನೆಯಾಗಬೇಕಿತ್ತು. ಇದರಲ್ಲಿ ಭಾಗಿಯಾದವರ ಮೇಲೆ ರಾಜ್ಯ ಸರಕಾರವು ಕಾನೂನಾತ್ಮಕ ಕ್ರಮವನ್ನು ಜರುಗಿಸಬೇಕಿತ್ತು. ಆದರೆ ಅಣ್ಣಾಮಲೈಯವರು ತಮ್ಮ ರಾಜಕೀಯ ವಿರೋಧಿ ಎಂಬ ಕಾರಣಕ್ಕೆ ಆ ಸರಕಾರ ಈ ಪ್ರಕರಣವನ್ನು ನಿರ್ಲಕ್ಷಿಸಿದೆ.

2024ರ ಲೋಕಸಭಾ ಚುನಾವಣಾ ಫಲಿತಾಂಶವು ಪಂಜಾಬ್‌ನಲ್ಲಿ ಮತ್ತೆ ಪ್ರತ್ಯೇಕತಾವಾದಿಗಳು ತಳವೂರುತ್ತಿರುವ ಸ್ಪಷ್ಟ ಸೂಚನೆಯನ್ನು ನೀಡಿದೆ. ಸಿಖ್ ಪ್ರತ್ಯೇಕತಾವಾದಿ ಮತ್ತು ಖಲಿಸ್ತಾನದ ಪರವಾಗಿರುವ ವಾರಿಸ್ ಪಂಜಾಬ್ ಡೇ ಸಂಘಟನೆಯ ಮುಖ್ಯಸ್ಥ ಅಮೃತ್‌ಪಾಲ್ ಸಂಧು ಅನೇಕ ಗಂಭೀರ ಆರೋಪಗಳನ್ನು ಹೊತ್ತಿರುವಾತ. ಇವನ ಬಂಧನಕ್ಕಾಗಿ ಒಂದು ತಿಂಗಳು ಹುಡುಕಾಟ ನಡೆಸಿದ ತರುವಾಯ, ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಮೋಗಾದಲ್ಲಿ ಇವನನ್ನು ಬಂಧಿಸಲಾಯಿತು. ಈತ ಅಸ್ಸಾಂನ ದಿಬ್ರುಗಢ ಸೆರೆಮನೆಯಲ್ಲಿ ಇದ್ದುಕೊಂಡೇ ಖಡೂರ್ ಸಾಹೇಬ್ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ, 2 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಿದ. ಈ ಜಯವು, ಪಂಜಾಬಿನ ಜನರು ಮತ್ತೆ ಪ್ರತ್ಯೇಕತಾವಾದಕ್ಕೆ ಮಣೆಹಾಕುತ್ತಿದ್ದಾರೆಯೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕಿದೆ. ಇಂದಿರಾ ಗಾಂಧಿಯವರ ಹಂತಕ ಬಿಯಾಂತ್ ಸಿಂಗ್‌ನ ಪುತ್ರ ಸರಬ್‌ಜೀತ್ ಸಿಂಗ್ ಖಾಲ್ಸಾ, ಫರೀದ್ ಕೋಟ್ ಮೀಸಲು ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಜಯಗಳಿಸಿದ್ದಾನೆ. ಇವನು ಕೂಡ ಖಲಿಸ್ತಾನ ಸಿದ್ಧಾಂತದ ಪರ ಒಲವು ಇರುವವನು. ಇಂದು ಕಾಂಗ್ರೆಸ್ ವಿರೋಧ ಪಕ್ಷದ ಸ್ಥಾನವನ್ನು ಇವನ ಜತೆ ಹಂಚಿಕೊಳ್ಳುವುದು ಅನಿವಾರ್ಯವಾಗಿದೆ. ಕಾಂಗ್ರೆಸ್ ಪಕ್ಷವು ದೇಶದ ಹಿತಕ್ಕಿಂತ ತನ್ನ ರಾಜಕೀಯ ಹಿತಕ್ಕೆ ಪ್ರಾಶಸ್ತ್ಯ ಕೊಡುವುದು ಹೊಸದೇನಲ್ಲ. ಇಂದಿರಾ ಗಾಂಧಿಯವರ ಹತ್ಯೆಗೆ ಸಂಚು ರೂಪಿಸಿದ್ದ ಆರೋಪಿ ಕೇಹರ್ ಸಿಂಗ್ ಪರವಾಗಿ ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದ ರಾಮ್ ಜೇಠ್ಮಲಾನಿಯವರಿಗೆ ಲಖನೌನಲ್ಲಿ ವಾಜಪೇಯಿ ವಿರುದ್ಧ ಸ್ಪರ್ಧಿಸಲು ಅದು ಟಿಕೆಟ್ ನೀಡಿತ್ತು. ವಾಸ್ತವವಾಗಿ ರಾಮ್ ಜೇಠ್ಮಲಾನಿಯವರನ್ನು ಬಿಜೆಪಿಯಿಂದ ಹೊರಹಾಕಲಾಗಿತ್ತು.

ಕರ್ನಾಟಕದ ಅಂದಿನ ಸಂಸದ ಡಿ.ಕೆ.ಸುರೇಶ್‌ರವರು ಸಂಸತ್ ಭವನದ ಮುಂದೆ ನಿಂತು, ಅನುದಾನ ಹಂಚಿಕೆಯಲ್ಲಿನ ತಾರತಮ್ಯವನ್ನು ಸರಿಪಡಿಸದಿದ್ದರೆ ದಕ್ಷಿಣದ ರಾಜ್ಯಗಳು ಪ್ರತ್ಯೇಕ ದೇಶವಾಗುವ ಕಾಲ ದೂರವಿಲ್ಲ ಎಂಬ ಹೇಳಿಕೆ ಕೊಟ್ಟರೂ ಕಾಂಗ್ರೆಸ್ ಅವರ ವಿರುದ್ಧ ಯಾವ ಕ್ರಮವನ್ನೂ ಜರುಗಿಸಲಿಲ್ಲ. ಭಯೋತ್ಪಾದಕ ಸಂಘಟನೆಗಳಿಗೆ ಧನಸಹಾಯ ಮಾಡಿದ ಆರೋಪದ ಮೇಲೆ ಯುಎಪಿಎ ಕಾಯ್ದೆಯಡಿಯಲ್ಲಿ ಬಂಧಿತನಾಗಿ ದೆಹಲಿಯ ತಿಹಾರ್ ಜೈಲಿನಲ್ಲಿ ಕಳೆದ ಐದು ವರ್ಷದಿಂದ ಕಂಬಿ ಎಣಿಸುತ್ತಿರುವ ರಶೀದ್ ಇಂಜಿನಿಯರ್, ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಕ್ಷೇತ್ರದಿಂದ ಅಭ್ಯರ್ಥಿಯಾಗಿ ಒಮರ್ ಅಬ್ದುಲ್ಲಾ ವಿರುದ್ಧ ಸ್ಪರ್ಧಿಸಿ, 2 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಸುಲಭವಾಗಿ ಜಯ ಸಾಧಿಸಿದ. ಇವನ ಜಯವು ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿಗಳಿಗೆ ಶಕ್ತಿ ತುಂಬುತ್ತದೆ ಎಂಬ ಕಳವಳವನ್ನು ಒಮರ್ ಅಬ್ದುಲ್ಲಾ ವ್ಯಕ್ತಪಡಿಸಿದ್ದಾರೆ. ಅಧಿಕಾರವಂಚಿತ ರಾಜಕೀಯ ಪಕ್ಷಗಳು ಆಡಳಿತ ಪಕ್ಷದ ವಿರುದ್ಧ ಎತ್ತಿಕಟ್ಟಲು ಚುನಾವಣೆಯಿಂದ ಚುನಾವಣೆಗೆ ವಿಚ್ಛಿದ್ರಕಾರಿ ಶಕ್ತಿಗಳನ್ನು ಉತ್ತೇಜಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಅಪಾಯಕಾರಿ ವರ್ತನೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ.

ಕಾಂಗ್ರೆಸ್ ವಕ್ತಾರ ಜೈರಾಮ್ ರಮೇಶ್‌ರವರು, 'ಪಾರ್ಲಿಮೆಂಟ್ ಆವರಣದ ಪ್ರಮುಖ ಸ್ಥಾನಗಳಲ್ಲಿದ್ದ ಛತ್ರಪತಿ ಶಿವಾಜಿ ಮಹಾರಾಜ್, ಮಹಾತ್ಮ ಗಾಂಧಿ ಮತ್ತು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆಗಳನ್ನು ತೆಗೆದುಹಾಕಲಾಗಿದೆ. ಇದು ಅಮಾನುಷ' ಎಂದು ತಮ್ಮ 'ಎಕ್ಸ್' (ಟ್ವಿಟರ್) ಖಾತೆಯಲ್ಲಿ ಬರೆದುಕೊಂಡರು. ನೂತನ ಸಂಸತ್ ಭವನದ ಆವರಣದಲ್ಲಿ, ಬದಲಾದ ಭೂಪ್ರದೇಶಕ್ಕೆ ತಕ್ಕಂತೆ ಸೂಕ್ತ ಸ್ಥಳದಲ್ಲಿ ಸ್ಥಾಪಿಸಲು ಸ್ಥಳಾಂತರ ಮಾಡಿದರೆ, ಅದರ ಹಿನ್ನೆಲೆಯನ್ನು ಮರೆಮಾಚಿ ರಾಜಕೀಯ ಲಾಭಕ್ಕಾಗಿ ಪ್ರಚೋದನಕಾರಿಯಾಗಿ ಬರೆದು ಸಮಾಜದಲ್ಲಿ ಅಶಾಂತಿ ಹುಟ್ಟುಹಾಕಲು ಯತ್ನಿಸುವ ಅಗತ್ಯವೇನಿದೆ?

ಮೋದಿಯವರ ಬೆಂಬಲಿಗರು ಎಂಬ ಕಾರಣಕ್ಕೆ ಅವರ ವಿರುದ್ಧ ನಡೆಯುವ ಹಲ್ಲೆಯನ್ನು ಸ್ವಾಗತಿಸುವ ಅಥವಾ ಅದರ ವಿರುದ್ಧ ಚಕಾರವೆತ್ತದಿರುವ ರೋಗಗ್ರಸ್ತ ಮನಸ್ಥಿತಿಯು ಕಳೆದ 10 ವರ್ಷಗಳಲ್ಲಿ ಹಲವಾರು ಸಂದರ್ಭಗಳಲ್ಲಿ ಕಂಡುಬಂದಿದೆ. ಸಂವಿಧಾನದ ರಕ್ಷಕರು ಎಂದು ಹೇಳಿಕೊಳ್ಳುವವರು ಸಂವಿಧಾನದಲ್ಲಿ ಕಾನೂನುಪಾಲನೆ ಎಲ್ಲರಿಗೂ ಸಮಾನ ಎಂಬ ಮೂಲಭೂತ ಸಂಗತಿಯನ್ನು ಮರೆತಿದ್ದಾರೆ.

ಭದ್ರತಾ ಸಿಬ್ಬಂದಿಯು ಲೋಕಸಭಾ ಸದಸ್ಯೆಯ ಮೇಲೆ ಹಲ್ಲೆ ಮಾಡಿದ್ದನ್ನು ರಾಜಕೀಯ ಕಾರಣಗಳಿಗೆ ಸಮರ್ಥಿಸಿಕೊಳ್ಳುವುದು ಅಪಾಯಕಾರಿ ಬೆಳವಣಿಗೆ. ಹಲ್ಲೆ ಮಾಡಿದವಳ ಕುಟುಂಬಕ್ಕೆ ಸನ್ಮಾನವನ್ನೂ ಮಾಡಿಯಾಯಿತು; ಹಲ್ಲೆ ಮಾಡಿದವಳಿಗೆ ಕಾನೂನು ನೆರವು, ಹಣದ ಸಹಾಯ ಮತ್ತು ಮುಂದೆ ಚುನಾವಣೆಯಲ್ಲಿ ಟಿಕೆಟ್ ನೀಡುವ ಆಶ್ವಾಸನೆಯನ್ನು ಈಗಾಗಲೇ ನೀಡಲಾಗಿದೆ. ಮೋದಿಯವರ ಮೇಲಿನ ದ್ವೇಷವು ಅಂತಿಮವಾಗಿ ದೇಶದ ವಿರುದ್ಧ ತಿರುಗುತ್ತದೆ ಎಂಬ ಆರೋಪವು ಇಂದು ಸತ್ಯವಾಗಿ, ಅದರ ಪರಿಣಾಮವನ್ನು ಕಾಣುವಂತಾಗಿದೆ. ರಾಜಕೀಯ ಲಾಭಕ್ಕಾಗಿ ಜನರ ಸುರಕ್ಷತೆಯ ಜತೆ ಚೆಲ್ಲಾಟವಾಡಬೇಡಿ ಮತ್ತು ನಿಮ್ಮ ಅಧಿಕಾರದಾಹಕ್ಕೆ ದೇಶದ ಹಿತಕ್ಕೆ ಕೊಳ್ಳಿಯಿಡುವ ಕೆಲಸ ಮಾಡಬೇಡಿ ಎಂದು ಇಂಥವರನ್ನು ಆಗ್ರಹಿಸಬೇಕಾಗಿ ಬಂದಿದೆ.

(ಲೇಖಕರು ಬಿಜೆಪಿಯ ವಕ್ತಾರರು)

ಅಭಿಮತ

ಸತ್ಯಬೋಧ

ಗ್ಯಾರಂಟಿ ಮುಂದುವರಿಯಲಿ

ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ಐದು 'ಗ್ಯಾರಂಟಿ' ಯೋಜನೆಗಳನ್ನು ಘೋಷಿಸಿತ್ತು. ಈ ಗ್ಯಾರಂಟಿಗಳು ಪಕ್ಷಕ್ಕೆ ಊರುಗೋಲಾಗಿ ಪರಿಣಮಿಸಿ, 136 ಸ್ಥಾನಗಳನ್ನು ದಕ್ಕಿಸಿಕೊಟ್ಟು, ಅಧಿಕಾರ ಹಿಡಿಯಲು ಕಾರಣವಾದವು. ಕಾಂಗ್ರೆಸ್ ಪಕ್ಷವೂ ಅಧಿಕಾರ ವಹಿಸಿಕೊಂಡ ನಂತರ ಕೊಟ್ಟ ಮಾತಿಗೆ ತಪ್ಪದೆ ಅವನ್ನು ಜಾರಿಮಾಡಿ ಜನರ ಮನ್ನಣೆಗೆ ಪಾತ್ರವಾಗಿದೆ. ಆದರೆ ಈ ಗ್ಯಾರಂಟಿಗಳು ವಿಧಾನಸಭಾ ಚುನಾವಣೆಗೆ ಸೀಮಿತ ಎನ್ನುವುದನ್ನು ಕಾಂಗ್ರೆಸ್‌ನ ಕೆಲವು ಮುಖಂಡರು ಮರೆತಂತಿದೆ. ಲೋಕಸಭಾ ಚುನಾವಣೆಯೇ ಬೇರೆ, ವಿಧಾನಸಭಾ ಚುನಾವಣೆಯೇ ಬೇರೆ. 2018ರ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಪಡೆದ ಕಾಂಗ್ರೆಸ್ ಮತ್ತು ಜನತಾದಳಕ್ಕೆ, 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಕೇವಲ ಒಂದೊಂದು ಸ್ಥಾನವನ್ನು ಪಡೆಯಲು ಸಾಧ್ಯವಾಗಿತ್ತು. ಹೀಗೆ ಮತದಾರರು ಎರಡೂ ಚುನಾವಣೆಗಳನ್ನು ಬೇರೆ ಬೇರೆ ರೀತಿಯಲ್ಲಿ ನೋಡುವಾಗ, ಕಾಂಗ್ರೆಸ್ ಪಕ್ಷವು ತಾನು ನೀಡಿದ್ದ ಗ್ಯಾರಂಟಿಗಳು ಲೋಕಸಭಾ ಚುನಾವಣೆಯಲ್ಲೂ ಅದ್ಭುತ ಗೆಲುವು ತರುತ್ತವೆ ಎಂದು ಭಾವಿಸಿದ್ದಾದರೂ ಹೇಗೆ? ಈಗ ಲೋಕಸಭಾ ಚುನಾವಣಾ ಫಲಿತಾಂಶದಲ್ಲಿ ಕಾಂಗ್ರೆಸ್‌ಗೆ ಎರಡಂಕಿ ಮುಟ್ಟಲೂ ಸಾಧ್ಯವಾಗಿಲ್ಲ; ಇದನ್ನು ಕಂಡ ಕಾಂಗ್ರೆಸ್‌ನ ಕೆಲವು ನಾಯಕರು 'ಕರ್ನಾಟಕದ ಮತದಾರರು ಗ್ಯಾರಂಟಿಯ ಫಲಾನುಭವಿಗಳಾಗಿದ್ದರೂ ಪಕ್ಷಕ್ಕೆ ಮತ ನೀಡದೆ ವಂಚಿಸಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಇದನ್ನೇ ನೆಪ ಮಾಡಿಕೊಂಡು ಗ್ಯಾರಂಟಿಗಳನ್ನು ಸ್ಥಗಿತಗೊಳಿಸುವ ಹುನ್ನಾರದ ಮುನ್ಸೂಚನೆಯೂ ಇಲ್ಲಿ ಕಾಣುತ್ತದೆ. ಒಂದೊಮ್ಮೆ ಇಂಥ ಕಾರ್ಯಕ್ಕೆ ಮುಂದಾದರೆ, ಮತದಾರರಿಂದ ಬಹುಶಃ ಉಪಕೃತರಾದ ಶಾಸಕರು ಮತದಾರರ ಅಸಮಾಧಾನವನ್ನು ಎದುರಿಸಲಾಗದೆ, ಅವರ ಪರವಾಗಿ ನಿಂತು ಪಕ್ಷವನ್ನು ತ್ಯಜಿಸುವುದರಲ್ಲಿ ಸಂದೇಹವಿಲ್ಲ. ಮಾತ್ರವಲ್ಲ, ಮುಂದೆ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ನೀಡುವ 'ಗ್ಯಾರಂಟಿ' ಯೋಜನೆಗಳ ಭರವಸೆಯನ್ನು ಮತದಾರರು ಸಾರಾಸಗಟಾಗಿ ನಿರಾಕರಿಸಿ ಪಕ್ಷದಿಂದ ದೂರವಾಗುತ್ತಾರೆ ಎಂಬುದನ್ನು ಅರಿಯಬೇಕಾದ್ದು ಅಗತ್ಯ. ಲೋಕಸಭಾ ಚುನಾವಣೆಯ ನಂತರ ಏನಾದರೊಂದು ಕಾರಣ ಹುಡುಕಿ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುತ್ತಾರೆ ಎಂಬ ವಿರೋಧ ಪಕ್ಷಗಳ ಲೇವಡಿಯು ಸತ್ಯವಾಗುವುದಕ್ಕೆ ಆಸ್ಪದ ಕೊಡದಂತೆ ಕಾಂಗ್ರೆಸ್ ಪಕ್ಷವು ಗ್ಯಾರಂಟಿಗಳನ್ನು ಈಗ ಇರುವಂತೆ ಮುಂದುವರಿಸುವ ರಾಜಕೀಯ ಜಾಣತನ ತೋರಬೇಕಾದ್ದು ಅಗತ್ಯ. ವರ್ಷಾಂತ್ಯದ ಸಂದರ್ಭದಲ್ಲಿ ಆಚರಿಸಿದ 'ಗ್ಯಾರಂಟಿ ನೀಡಿ ಕೊಟ್ಟ ಮಾತಿನಂತೆ ನಡೆದೆವು' ಎಂಬ ಸಂಭ್ರಮವನ್ನು, ಆ ಸಂದರ್ಭದಲ್ಲಿ ಆಡಿದ ಹೆಮ್ಮೆಯ ಮಾತನ್ನು ಇನ್ನು ನಾಲ್ಕು ವರ್ಷದ ನಂತರವೂ ಹೊಮ್ಮಿಸಿ ಕಾಂಗ್ರೆಸ್ ಪಕ್ಷವು ಮತ್ತೊಮ್ಮೆ ಅಧಿಕಾರ ಗದ್ದುಗೆಗೆ ಏರಲು ಪ್ರಯತ್ನಿಸಬೇಕಾದ್ದು ಅತ್ಯಗತ್ಯ.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:9, Issue:168

ಶ್ರೀಮಡಿವಾಳೇಶ್ವರ ಮಠ ಮತ್ತೊಮ್ಮೆ ವಿವಾದದಲ್ಲಿ

ಧಾರವಾಡ: ತಾಲೂಕಿನ ಗರಗ ಗ್ರಾಮದ ಶ್ರೀ ಮಡಿವಾಳೇಶ್ವರ ಮಠದ ಟ್ರಸ್ಟ್ ವಿರುದ್ಧ ಮಠದ ಉತ್ತರಾಧಿಕಾರಿ ಪ್ರಶಾಂತ ದೇವರು ಇದೀಗ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಜೂನ 1 ರಂದು ಗರಗ ಮಡಿವಾಳೇಶ್ವರ ಮಠದ ಹಾಲಿ ಉತ್ತರಾಧಿಕಾರಿ ಪ್ರಶಾಂತ ದೇವರು ಧಾರವಾಡದ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ಮೊರೆ ಹೋಗಿದ್ದರು. ತಾವು ಮಠದ ಉತ್ತರಾಧಿಕಾರಿ ಆಗಿದ್ದು, ತಮ್ಮನ್ನು ಉತ್ತರಾಧಿಕಾರಿ ಅಂತ ಪರಿಗಣಿಸಬೇಕು. ಮತ್ತು ಸಂಭೋಧಿಸಬೇಕು. ತಮ್ಮ ಕಾರ್ಯನಿರ್ವಹಣೆಗೆ ಯಾವುದೇ ರೀತಿಯ ಅಡಚಣೆ ಮಾಡದಂತೆ ಟ್ರಸ್ಟ್ ಪದಾಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಮನವಿ ಮಾಡಿದ್ದರು. ಈ ಮನವಿಯನ್ನು ಜೂನ್ 5 ರಂದು ವಿಚಾರಣೆ ನಡೆಸಿದ ನ್ಯಾಯಾಧೀಶರು, ಸ್ವಾಮೀಜಿಯವರ ಮನವಿಯನ್ನು ಪುರಸ್ಕರಿಸಿದೆ. ಟ್ರಸ್ಟ್ ನ ಅಶೋಕ ದೇಸಾಯಿ ಸೇರಿದಂತೆ 18 ಜನರು, ಪ್ರಶಾಂತ ದೇವರು ಅವರನ್ನೇ ಉತ್ತರಾಧಿಕಾರಿ ಎಂದೇ ಪರಿಗಣಿಸಬೇಕು. ಯಾವುದೇ ರೀತಿಯ ತಾರತಮ್ಯ ಮಾಡಬಾರದು ಎಂದು ಸೂಚಿಸಿದೆ. ಮುಂದಿನ ವಿಚಾರಣೆಯನ್ನು ಜೂನ್ 29 ಕ್ಕೆ ನ್ಯಾಯಾಲಯವು ಮುಂದೂಡಿದೆ. ಈ ಸಂಬಂಧ ಎಲ್ಲರಿಗೂ ಸಮನ್ಸ್ ಕೂಡ ನೀಡಲಾಗಿದೆ. ಈ ಬೆಳವಣಿಗೆಯಿಂದ ಮಡಿವಾಳೇಶ್ವರ ಮಠದ ಉತ್ತರಾಧಿಕಾರಿ ವಿಷಯ ಮತ್ತೊಂದು ವಿವಾದಕ್ಕೆ ನಾಂದಿ ಹಾಡಿದೆ. ಮಠದ ಉತ್ತರಾಧಿಕಾರಿ ಬದಲಾಯಿಸುವ ಪ್ರಯತ್ನ ನಡೆದಿತ್ತಾ ಎನ್ನುವ ಪ್ರಶ್ನೆ ಈಗ ಉದ್ಭವಿಸಿದೆ. ಮಠದ ಭಕ್ತರಲ್ಲಿ ಕಳವಳ ಮೂಡಿಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಸಚಿವ ಸಂಪುಟದಲ್ಲಿ ಕೇಂದ್ರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಪ್ರಲ್ಹಾದ ಜೋಶಿ ಹಾಗೂ ತುಮಕೂರು ಲೋಕಸಭಾ ಕ್ಷೇತ್ರದ ಸಂಸದರಾದ ವಿ. ಸೋಮಣ್ಣ ಅವರನ್ನು ಹುಬ್ಬಳ್ಳಿ ಕ್ಷೇತ್ರದ ಶಾಸಕರಾದ ಅರವಿಂದ ಬೆಲ್ಲದ, ಟೆಂಗಿನಕಾಯಿ ದೆಹಲಿಯಲ್ಲಿ ಭೇಟಿಯಾಗಿ ಅಭಿನಂದಿಸಿದರು.

ಹಿರಿಯ ಸಹಕಾರಿ ರಾಮಣ್ಣ ಕರುಮನೆ ನಿಧನ: ಸಂತಾಪ

ಯಲ್ಲಾಪುರ: ಆನಗೋಡ ಸಹಕಾರಿ ಸಂಘದ ಮಾಜಿ ಅಧ್ಯಕ್ಷರಾಗಿ, ವಿದ್ಯುತ್ ಗುತ್ತಿಗೆದಾರರಾಗಿ ಎಲ್ಲರ ಪ್ರೀತಿಗೆ ಭಾಜನರಾದ ರಾಮಣ್ಣ ಕರುಮನೆ ಇನ್ನಿಲ್ಲವಾಗಿದ್ದಾರೆ. ಅವರು ಶನಿವಾರ ನಿಧನರಾಗಿದ್ದು, ಇಬ್ಬರು ಪುತ್ರರು, ಪತ್ನಿ ಇದ್ದಾರೆ. ಸುಮಾರು ನಲವತ್ತು ವರ್ಷಕ್ಕೂ ಹೆಚ್ಚು ಕಾಲ ವಿದ್ಯುತ್‌ಗುತ್ತಿಗೆದಾರರಾಗಿ ತಾಲೂಕಿ ನಲ್ಲಷ್ಟೇ ಅಲ್ಲದೆ ಜಿಲ್ಲೆ ಹೊರಜಿಲ್ಲೆಗಳಲ್ಲೂ ಕೆಲಸಮಾಡಿ ಹೆಸರು ಮಾಡಿದ್ದರು. ಅನೇಕ ವರ್ಷಗಳ ಕಾಲ ಆನಗೋಡ ಸಹಕಾರಿ ಸಂಘದ ನಿರ್ದೇಶಕರಾಗಿ, ಅಧ್ಯಕ್ಷರಾಗಿ ಎರಡು ಬಾರಿ ಟಿಎಮ್‌ಎಸ್ ಯಲ್ಲಾಪುರ ಇದರ ನಿರ್ದೇಶಕರಾಗಿ ಗ್ರಾಹಕರ ಪ್ರೀತಿಗಳಿಸಿದ್ದರು. ಇವರು ಧಾರ್ಮಿಕ ಶೈಕ್ಷಣಿಕ ಕ್ಷೇತ್ರದಲ್ಲೂ ತನ್ನದೇ ಆದ ಕೊಡುಗೆ ನೀಡಿದ್ದಾರೆ. ಇವರ ಆತ್ಮಕ್ಕೆ ಶಾಂತಿ ಸಿಗಲೆಂದು ಸಂಕಲ್ಪ ಸೇವಾ ಸಂಸ್ಥೆ ಅಧ್ಯಕ್ಷ ಪ್ರಮೋದ ಹೆಗಡೆ, ಶ್ರೀಮಾತಾ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಜಿ.ಎನ್. ಹೆಗಡೆ ಹಿರೆಸರ, ಆನಗೋಡ ಸಹಕಾರಿ ಸಂಘದ ಅಧ್ಯಕ್ಷ ಎನ್.ಕೆ. ಭಟ್ಟ ಅಗ್ಗಾಸಿಕುಂಬ್ರಿ, ಗಣಪತಿ ಮಾನಿಗದ್ದೆ ಸೇರಿದಂತೆ ಅನೇಕಗಣ್ಯರು ಕಂಬನಿ ಮಿಡಿದು ಶ್ರದ್ಧಾಂಜಲಿ ಅರ್ಪಿಸಿದ್ದಾರೆ. ಸರಳ ಸಜ್ಜನಿಕೆಯ ವ್ಯಕ್ತಿತ್ವದ ಕರುಮನೆ ರಾಮಣ್ಣ ಅವರ ಅಗಲಿಕೆಯಿಂದ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಭಗವಂತ ಶ್ರೀಯುತರ ಆತ್ಮಕ್ಕೆ ಚಿರಶಾಂತಿ ನೀಡಿ ಕುಟುಂಬ ವರ್ಗದವರಿಗೆ ಅಗಲಿಕೆ ದುಃಖವನ್ನು ಭರಿಸುವ ಶಕ್ತಿ ನೀಡಲಿ ಎಂದು ಯಲ್ಲಾಪುರ ಕ್ಷೇತ್ರದ ಶಾಸಕರಾದ ಶಿವರಾಮ ಹೆಬ್ಬಾರ ಪ್ರಾರ್ಥಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ನಿಧನ

ಹುಬ್ಬಳ್ಳಿ: ನಿವೃತ್ತ ಪೊಲೀಸ್ ಅಧಿಕಾರಿಯಾಗಿದ್ದ ವೀರಭದ್ರಪ್ಪ ಬಸಪ್ಪ ತಳವಾರ (78) ತಮ್ಮ ಸ್ವ ಗೃಹದಲ್ಲಿ ಇಂದು ಬೆಳಗಿನ ಜಾವ ನಿಧನರಾಗಿದ್ದಾರೆ. ಅವಳಿನಗರ ಸೇರಿದಂತೆ ರಾಜ್ಯಾದ್ಯಂತ ಪೊಲೀಸ್ ಇಲಾಖೆಯಲ್ಲಿ ವಿವಿಧ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಅವರು, ಪೊಲೀಸ್ ವರಿಷ್ಠಾಧಿಕಾರಿಗಳಾಗಿ ಕರ್ತವ್ಯದಿಂದ ನಿವೃತ್ತಿ ಹೊಂದಿದ್ದರು. ಕಳೆದ ಹಲವು ವರ್ಷಗಳಿಂದ ಗೋಕುಲ ರಸ್ತೆಯ ಬಸವೇಶ್ವರ ನಗರದಲ್ಲಿನ ಲಕ್ಷ್ಮೀ ಲೇಔಟ್ ನಲ್ಲಿ ಕುಟುಂಬದೊಂದಿಗೆ ವಿಶ್ರಾಂತ ಜೀವ ನಡೆಸುತ್ತಿದ್ದರು. ಆದರೆ ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಇಂದು ಬೆಳಗಿನ ಜಾವ ಮನೆಯಲ್ಲಿಯೇ ಕೊನೆಯುಸಿರೆಳೆದಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿ ಕೋರಿ ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಸಂತಾಪ ಸೂಚಿಸಿದೆ.

ಬಡ ವಿದ್ಯಾರ್ಥಿಗಳಿಗೆ ಪಠ್ಯ ಪರಿಕರ ವಿತರಣೆ

ಧಾರವಾಡ: ಧಾರವಾಡದ ಮೆಹಬೂಬು ನಗರ ಮತ್ತು ಗುಲಗಂಜಿಕೊಪ್ಪ ಹಾಗೂ ಸೈದಾಪುರ್ ಧಾರವಾಡದ ಈ 3 ಏರಿಯಾದ ಬಡ ಮಕ್ಕಳ ಶಿಕ್ಷಣಕ್ಕೆ ಬೇಕಾಗಿರುವ ಎಲ್ಲ ತರಹದ ಸಾಮಗ್ರಿಗಳನ್ನು ವಿತರಣೆ ಮಾಡಲಾಯಿತು. ಅಂತಾರಾಷ್ಟ್ರೀಯ ಫೈಟರ್ ಗಿರೀಶ್ ಅವರ ಮುಖಾಂತರ ಹತ್ತು ಬಡತನದ ಕುಟುಂಬದ ವಿದ್ಯಾರ್ಥಿಗಳನ್ನು ಗುರುತಿಸಿ ಈ ಮಕ್ಕಳ ಶಿಕ್ಷಣಕ್ಕೆ ಬೇಕಾಗಿರುವ ಎಲ್ಲ ತರಹದ ಸಾಮಗ್ರಿಗಳನ್ನು ತಡಕೋಡ ಗ್ರಾಮ ಪಂಚಾಯತಿ ಉಪಾಧ್ಯಕ್ಷ ಈರಣ್ಣ ಬಾರಕೇರ ಹಸ್ತಾಂತರಿಸಿದರು. ಎಲ್ಲ ಮಕ್ಕಳಿಗೂ ಶಿಕ್ಷಣ ಸಿಗಬೇಕು ಅದೇ ನಮ್ಮ ಮುಖ್ಯ ಉದ್ದೇಶದಿಂದ ಪುಸ್ತಕ ಹಂಚಲಾಗಿದೆ ಎಂದು ಈರಣ್ಣಾ ಬಾರಕೇರ ಸಂತೋಷ ವ್ಯಕ್ತಪಡಿಸಿದರು.

ಕೈ ತಪ್ಪಿದ ಸಚಿವ ಸ್ಥಾನ: ಆಪ್ತರಿಗೆ ಬೇಸರ

ಗದಗ: ಹಾವೇರಿ ಲೋಕಸಭೆ ಕ್ಷೇತ್ರದಿಂದ ಭರ್ಜರಿ ಗೆಲುವು ಸಾಧಿಸಿ ಪ್ರಥಮ ಬಾರಿಗೆ ಸಂಸತ್ ಪ್ರವೇಶಿಸಿರುವ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮೋದಿ ಸಂಪುಟದಲ್ಲಿ ಸ್ಥಾನ ಸಿಗದಿರುವುದರಿಂದ ಕ್ಷೇತ್ರದ ಜನರಿಗೆ ನಿರಾಸೆ ಮೂಡಿದೆ. ಲಿಂಗಾಯತ ಕೋಟಾದಲ್ಲಿ ಬಸವರಾಜ ಬೊಮ್ಮಾಯಿ ಅವರು ಮೋದಿ ಸಂಪುಟದಲ್ಲಿ ಸಚಿವರಾಗುತ್ತಾರೆ ಎಂಬ ಸುದ್ದಿ ಬಿಜೆಪಿ ವಲಯದಿಂದಲೇ ಕೇಳಿಬಂದಿತ್ತು. ಭಾನುವಾರ ಬೆಳಗಿನವರೆಗೂ ಬೊಮ್ಮಾಯಿ ಅವರ ಹೆಸರು ಇತ್ತಾದರೂ ಮಧ್ಯಾಹ್ನ ನಂತರ ದಿಢೀರ್‌ನೆ ಬಸವರಾಜ ಬೊಮ್ಮಾಯಿ ಅವರ ಸ್ಥಾನದಲ್ಲಿ ತುಮಕೂರು ಸಂಸದ ವಿ.ಸೋಮಣ್ಣ ಅವರ ಹೆಸರು ಕಾಣಿಸಿಕೊಂಡಿತು. ಸೋಮಣ್ಣ ಅವರಿಗೆ ಅವಕಾಶ ನೀಡಲಾಗಿದೆ ಎಂಬ ಮಾಹಿತಿ ಲಭ್ಯವಾಗುತ್ತಿದ್ದಂತೆಯೇ ಬಸವರಾಜ ಬೊಮ್ಮಾಯಿ ಅವರು ಬೇಸರಗೊಂಡರು. ಇದನ್ನು ಮನಗಂಡು ಸಂಸದ ಪ್ರಲ್ಹಾದ ಜೋಶಿ ಅವರು ಬೊಮ್ಮಾಯಿ ಅವರ ಮನವೊಲಿಕೆ ಮುಂದಾದರಲ್ಲದೇ ಅದರಲ್ಲಿ ಯಶಸ್ವಿ ಸಹ ಆದರು. ಮೋದಿ ಸಂಪುಟದಲ್ಲಿ ಮಂತ್ರಿ ಆಗುವ ನಿರೀಕ್ಷೆಯೊಂದಿಗೆ ಕುಟುಂಬ ಸಮೇತ ದೆಹಲಿಗೆ ತೆರಳಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬರೀಗೈಲಿ ವಾಪಸ್ ಆಗಬೇಕಾಯಿತು. ಈ ಎಲ್ಲ ಬೆಳವಣಿಗೆಯಿಂದ ಕ್ಷೇತ್ರದಲ್ಲಿ ಸಹ ಬಿಜೆಪಿ ಕಾರ್ಯಕರ್ತರು, ಅವರ ಅಭಿಮಾನಿಗಳಿಗೆ ಬೇಸರ ತರಿಸಿದೆ ಎಂದು ಆಪ್ತರು ತಿಳಿಸಿದ್ದಾರೆ.

ಕೃಷಿ ಪದ್ಧತಿ ಉಳಿವಿಗೆ ಸಹಕರಿಸಿ

ಕಾಸರಗೋಡಿನಲ್ಲಿ ಪರಿಸರ ದಿನದಂದು ಸಂವಾದ | ವಿಶೇಷ ವನೀಕರಣಕ್ಕೆ ಚಾಲನೆ

ಶಿರಸಿ: ಇತ್ತೀಚೆಗೆ ಕೇರಳ ಕಾಸರಗೋಡಿನ ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರದ ಮುಖ್ಯ ಕಚೇರಿಯ ಸಭಾಂಗಣದಲ್ಲಿ ನಡೆದ ಜಾಗತಿಕ ಪರಿಸರ ದಿನ ಕಾರ್ಯಕ್ರಮದಲ್ಲಿ ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿಶೇಷ ವನೀಕರಣ ಯೋಜನೆಗೆ ಅಶೀಸರ ಚಾಲನೆ ನೀಡಿದರು. ಕೃಷಿ-ತೋಟಗಾರಿಕಾ ವೈವಿಧ್ಯ ಪಶ್ಚಿಮಘಟ್ಟ ಕರಾವಳಿಯ ಸಾಂಪ್ರದಾಯಿಕ ಕೃಷಿ ಪದ್ಧತಿಗಳ ಉಳಿವಿಗೆ ಕೃಷಿ ವಿಜ್ಞಾನಿಗಳು ಸಹಯೋಗ ನೀಡಬೇಕು ಎಂದು ಮನವಿ ಮಾಡಿದರು.

ಕಾಸರಗೋಡಿನ 2 ಕಿ.ಮೀ ಸಮುದ್ರ ತೀರ ಹಸಿರು ಕವಚ ಹೊಂದಲು, ರಕ್ಷಣೆ ಆಗಲು ಸಿಪಿಸಿ ಆರ್‌ಐ ಕಾರಣ ಇದೊಂದು ಶಾಂತ ಕಡಲಧಾಮ ಎಂದು ಅವರು ಬಣ್ಣಿಸಿದರು.

ಸಿಪಿಸಿ ಆರ್‌ಐ ನಿರ್ದೇಶಕ ಡಾ.ಬಾಲಚಂದ್ರ ಹೆಬ್ಬಾರ ಅಧ್ಯಕ್ಷತೆ ವಹಿಸಿದ್ದರು. ನಂತರ ನಡೆದ ತೋಟಗಾರಿಕೆ ವಿಜ್ಞಾನಿಗಳ ಜೊತೆ ಸಂವಾದ ಸಮಾಲೋಚನಾ ಸಭೆ ಹಲವು ಮಹತ್ವದ ಸಂಗತಿಗಳ ಪ್ರಸ್ತಾಪ, ಕಾರ್ಯಕ್ರಮ ಪ್ರಕಟಣೆಗೆ ಸಾಕ್ಷಿಯಾಯಿತು.

ಸಿ.ಪಿ.ಸಿ.ಆರ್.ಐ. ವಿಜ್ಞಾನಿಗಳಾದ ಡಾ. ಸುಬ್ರಹ್ಮಣ್ಯ, ಡಾ. ತಂಬನ್, ಸುಜೇತಾ, ರಮೇಶ, ಶಮೀರಾ, ಮುರಳಿ ಗೋಪಾಲ, ಜೆರಾಲ್ಡ, ಡಾ. ಸುಧೀರ್, ಅಲಕಾಗುಪ್ತಾ, ಡಾ. ರವಿ ಭಟ್, ಡಾ. ವಿನಾಯಕ ಮುಂತಾದ 24 ವಿಜ್ಞಾನಿಗಳು ತಮ್ಮ ಸಂಶೋಧನೆಗಳ ಬಗ್ಗೆ ಮಾಹಿತಿ ನೀಡಿದರು. ಅನಂತ ಹೆಗಡೆ ಅಶೀಸರ ಹಾಗೂ ಡಾ. ಪ್ರಕಾಶ್ ಮೇಸ್ತಾ ಅವರು ಮನವಿ ಮಾಡಿದರು. ಕರಾವಳಿ- ಮಲೆ ನಾಡಿನ ಪ್ರಚಲಿತ ಕೃಷಿ-ತೋಟಗಾರಿಕಾ ವೈವಿಧ್ಯ ಕಣ್ಮರೆ ಆಗುತ್ತಿರುವ ಅಶೀಸರ ಅವರು ಕಳವಳ ವ್ಯಕ್ತಪಡಿಸಿದರು. ಎಲೆಚುಕ್ಕೆ, ಹಳದಿ ರೋಗ, ಜೇನು, ಸಾವಯವ ಕೃಷಿ, ಪಾರಂಪರಿಕ ತಳಿಗಳ ಕಣ್ಮರೆ, ಅತಿಯಾದ ಕೀಟನಾಶಕ ಬಳಕೆ ಮುಂತಾದ ಪ್ರಚಲಿತ ವಿದ್ಯಮಾನಗಳ ಬಗ್ಗೆ ಜೀವ ವೈವಿಧ್ಯ ಮಂಡಳಿಯ ಹಿಂದಿನ ಅಧ್ಯಕ್ಷರೂ ಆಗಿರುವ ಅನಂತ ಅಶೀಸರ ಪ್ರಸ್ತಾಪಿಸಿದರು.

ಯಾಣ, ಕಳಚೆ ತೆಂಗು ತಳಿಗಳು ರಾಮ ಅಡಿಕೆ ವನ್ಯತಳಿ ಬಗ್ಗೆ ಅಭಿಪ್ರಾಯ ಕೇಳಿ ದರು. ಅಡಕೆ ಕ್ಯಾನ್ಸರ್ ಕಾರಕವಲ್ಲ ಆರೋಗ್ಯ ವರ್ಧಕ ಎಂಬ ಕುರಿತು ಕೇಂದ್ರ ಸರ್ಕಾರ ಬೆಂಬಲದ ಬೃಹತ್ ಸಮಗ್ರ ಅಧ್ಯಯನ ಸಂಶೋಧನೆ ನಡೆಸಲು ಸಿ.ಪಿ.ಸಿ. ಆರ್.ಐ. ಕಾರ್ಯ ಪ್ರಾರಂಭಿ ಸಿದೆ ಎಂಬ ಮಹತ್ವದ ಸಂಗತಿಯನ್ನು ವಿಜ್ಞಾನಿಗಳು ತಿಳಿಸಿದರು.

ಅಡಿಕೆ ಎಲೆ ಚುಕ್ಕೆ ರೋಗ, ನಿಯಂತ್ರಣ, ಪರಿಹಾರ ಉಪಾಯ ಕುರಿತು ಕೇಂದ್ರ-ರಾಜ್ಯ ಸರ್ಕಾರದ ಸಹಾಯದಿಂದ ಸಂಶೋಧನೆ ಯೋಜನೆಗೆ ಹಸಿರು ನಿಶಾನೆ ಸಿಕ್ಕಿದೆ. ಕಾರ್ಯ ಪ್ರಾರಂಭವಾಗಿದೆ ಎಂಬ ವಿಶೇಷ ಮಾಹಿತಿಯನ್ನು ಸಿ.ಪಿ.ಸಿ. ಆರ್.ಐ. ನಿರ್ದೇಶಕರು ತಿಳಿಸಿದರು.

ಸಾವಯವ ಪದ್ಧತಿಗಳ ಕುರಿತು ಅಭ್ಯಾಸಗಳನ್ನು ನಡೆಸಲಾಗಿದೆ. ಸಾಂಪ್ರದಾಯಕ ಕೃಷಿ ಪದ್ಧತಿಗಳು ಮಲೆನಾಡಿನಲ್ಲಿ ಉತ್ತಮ ಎಂದು ವಿಜ್ಞಾನಿಗಳು ಪುನರುಚ್ಚರಿಸಿದರು. ನದೀ ದಂಡೆಗಳಲ್ಲಿ, ಕರಾವಳಿಯಲ್ಲಿ ಉಪ್ಪು ನೀರಿನ ಹೆಚ್ಚುವಿಕೆ ತೆಂಗು, ಅಡಿಕೆ, ಮುಂತಾದ ತೋಟಗಾರಿಕಾ ಬೆಳೆಗಳಿಗೆ ಆಪತ್ತು ತರಲಿದೆ ಎಂದು ವಿಜ್ಞಾನಿಗಳು ಎಚ್ಚರಿಸಿದರು. ನಿಷೇಧಿತ ಕೀಟನಾಶಕಗಳು, ಕಳೆನಾಶಕಗಳು ಭೂಮಿಗೆ, ಕೃಷಿಗೆ ಮಾರಕ ಎಂದು ಸಿ.ಪಿ.ಸಿ. ಆರ್. ಐ. ವಿಜ್ಞಾನಿಗಳು ಸ್ಪಷ್ಟಪಡಿಸಿದರು. ರಾಜ್ಯ ಸರ್ಕಾರದ ತೋಟಗಾರಿಕಾ ಇಲಾಖೆಗಳು, ರೈತರ ಜೊತೆ ಮಲೆನಾಡು ಕರಾವಳಿಯಲ್ಲಿ ವಿಜ್ಞಾನಿಗಳ ಸಂವಹನ ಸಭೆಗಳು ನಡೆಯಬೇಕು ಎಂದು ಅಭಿಪ್ರಾಯ ಪಟ್ಟರು.

ರೈತರ ಜತೆ ಸಭೆ

ಮಲೆನಾಡಿನ ತೋಟಗಳಲ್ಲಿನ ರಾಮ ಅಡಿಕೆ ಉಪಯೋಗದ ಬಗ್ಗೆ ಸಿಪಿಸಿ ಆರ್‌ಐ ಗಮನ ನೀಡಲಿದೆ. ಯಾಣ, ಕಳಚೆ ತೆಂಗಿನ ತಳಿಗಳ ರಕ್ಷಣೆಗೆ ಸಿಪಿಸಿಆರ್‌ಐ ಮುಂದಾಗಲಿದೆ ಎಂದು ಸಿಪಿಸಿಆರ್‌ಐ ನಿರ್ದೇಶಕರು ಪ್ರಕಟಿಸಿದರು. ಸಾಗರ - ಶಿರಸಿಗಳಲ್ಲಿ ಸದ್ಯದಲ್ಲಿ ರೈತರ ಜೊತೆ ವಿಚಾರ ವಿನಿಮಯ ಸಭೆ ನಡೆಸುವದಾಗಿ ಸಿಪಿಸಿಆರ್‌ಐ ನಿರ್ದೇಶಕರು ತಿಳಿಸಿದರು.

ಸ್ವಯಂ ಉದ್ಯೋಗ ತರಬೇತಿ ಸಂಪನ್ನ

ಗದಗ: ಜೈನ್ ಇಂಟರ್‌ನ್ಯಾಷನಲ್ ಟ್ರೇಡ್ ಆರ್ಗನೈಜೇಶನ್ ಹುಬ್ಬಳ್ಳಿ, ಗದಗ, ಬಾಗಲಕೋಟ, ಶಿವಮೊಗ್ಗ, ಮಹಿಳಾ ಸಂಘಟನೆಯ ವತಿಯಿಂದ ಮಹಿಳೆಯರಿಗಾಗಿ ಸ್ವಯಂ ಉದ್ಯೋಗ ಮಾಡುವ ಕುರಿತು ಉಡಾನ್ ಟ್ರೇಡ್ ಫೇರ್ ಕಾರ್ಯಕ್ರಮವನ್ನು ಜೂನ್ 10 ರಂದು ಬೆಳಗ್ಗೆ 9 ಗಂಟೆಗೆ ನಗರದ ಹುಬ್ಬಳ್ಳಿ ರೋಡ ಮುಳಗುಂದ ನಾಕಾದಲ್ಲಿರುವ ಶ್ರೀವಿಠ್ಠಲರೂಢ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ.

ಈ ಕಾರ್ಯಕ್ರಮದ ಪೂರ್ವಭಾವಿ ಸಭೆ ಶ್ರೀ ವಿಠ್ಠಲರೂಢ ಸಮುದಾಯ ಭವನದಲ್ಲಿ ಜರುಗಿತು. ಈ ಪೂರ್ವಭಾವಿ ಸಭೆಯಲ್ಲಿ ಕಾರ್ಯದರ್ಶಿಗಳಾದ ಇಂದಿರಾ ಬಾಗಮಾರ ಅಮ ಮಾತನಾಡಿ, ಮಹಿಳೆಯರಿಗಾಗಿ ಗುಡಿ ಕೈಗಾರಿಕೆ ಉತ್ತೇಜನಕ್ಕಾಗಿ ಮಹಿಳೆಯರು ತಮ್ಮ ಸ್ವತಃ ತಯಾರಿಸಿದ ಎಲ್ಲಾ ತರಹದ ವಸ್ತುಗಳನ್ನು, ಆಹಾರ ಪದಾರ್ಥಗಳ ಅಂಗಡಿಗಳ ಪ್ರದರ್ಶನ ಏರ್ಪಡಿಸಲಾಗಿದೆ.

ಈ ಪ್ರದರ್ಶನದಲ್ಲಿ ಉದಾಹರಣೆಗೆ ಸೀರೆಗಳು, ಪಾಶ್ಚಿಮಾತ್ಯ ಕಲೆಕ್ಷನ್ ಮನೆಯ ಅಲಂಕಾರ ವಸ್ತುಗಳು, ಬೇಕರಿ ಆಹಾರಗಳು ಸೇರಿದಂತೆ ವಿವಿಧ ಅಂಗಡಿಗಳು ಅಂದು ಸಾರ್ವಜನಿಕರಿಗೆ ಜೈನ ಸಮಾಜದ ಮಹಿಳೆಯರ 35 ಅಂಗಡಿಗಳು ಪ್ರದರ್ಶನ ಗೊಳ್ಳುವವು. ಅದೇ ರೀತಿ ಟೂರ್‌ಸ್ ಆ್ಯಂಡ್ ಟ್ರೇವಲ್ಸ್ ಮಾಹಿತಿ ಕೇಂದ್ರವು ವಿವಿಧ ಪ್ರವಾಸಿ ಸ್ಥಾನಗಳ ಬಗ್ಗೆ ಮಾಹಿತಿ ಕೇಂದ್ರ ಸಹ ಲಭ್ಯವಿರುತ್ತದೆ ಎಂದು ಕಾರ್ಯದರ್ಶಿ ಇಂದಿರಾ ಬಾಗಮಾರ ತಿಳಿಸಿದರು.

ಗದಗ ಜಿಲ್ಲೆಯ ಸಾರ್ವಜನಿಕರು ಈ ಪ್ರದರ್ಶನದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಇಂದಿರಾ ಬಾಗಮಾರ ವಿನಂತಿಸಿದರು.

ಜಿಲ್ಲಾಧಿಕಾರಿ ವೈಶಾಲಿ ಎಂ. ಎಲ್ ಕಾರ್ಯಕ್ರಮ ಉದ್ಘಾಟಿಸುವರು. ಜೈನ ಸಮಾಜದ ಗಣ್ಯರು ಪಾಲ್ಗೊಳ್ಳುವರು.

ಈ ಕಾರ್ಯಕ್ರಮ ಹಾಗೂ ಸ್ಟಾಲ್‌ಗಳು ಜೂನ್ 10 ರಂದು ಬೆಳಗ್ಗೆ 9 ರಿಂದ ರಾತ್ರಿ 9-00 ಗಂಟೆಯವರಿಗೆ ಕಾರ್ಯನಿರ್ವಹಿಸುವವು ಎಂದು ತಿಳಿಸಿದರು.

ಈ ಪೂರ್ವಭಾವಿ ಸಭೆಯಲ್ಲಿ ಸ್ವಿಟಿ ಬನ್ಸಾಲಿ ಚೇರಮನ್, ಇಂದಿರಾ ಬಾಗಮರ ಕಾರ್ಯದರ್ಶಿ, ಬಂಟಿ ಪಾಲರೇಚಾ, ಸೋನಲ್ ಗಡಿಯಾ, ಸಪ್ನಾ ಬಾಗಮಾರ, ಸೀಮಾ ಕೊಠಾರಿ, ಅಂಕಿತಾ ಜೈನ, ಪಿಂಕಿ ಜೀರವಾಲೆ, ಸಾರಿಕಾ, ಕವಿತಾ ಗಡಿಯಾ, ನಿರ್ಮಲ ಬಾಫಣಾ, ಸಂಗೀತಾ, ಪ್ರೀತಿ ಓಸ್ವಾಲ್ ಉಪಸ್ಥಿತರಿದ್ದರು.

ಸಿಇಟಿ ಮತ್ತು ಕಾಮೆಡ್-ಕೆ ಪ್ರವೇಶ ಪ್ರಕ್ರಿಯೆ ಆರಂಭ

ಧಾರವಾಡ: ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಧವಳಗಿರಿ, ಧಾರವಾಡದಲ್ಲಿ ಸಿಇಟಿ ಮತ್ತು ಕಾಮೆಡ್-ಕೆ ಪ್ರವೇಶ ಪ್ರಕ್ರಿಯೆ ಆಯೋಜಿಸಲಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತು ಕಾಮೆಡ್-ಕೆ, ಇತ್ತೀಚೆಗೆ ಅಭ್ಯರ್ಥಿಗಳ ಸಿಇಟಿ ಮತ್ತು ಕಾಮೆಡ್-ಕೆ ಶ್ರೇಯಾಂಕವನ್ನು ಪ್ರಕಟಿಸಿದೆ.

ಹಾಗಾಗಿ ಆನ್‌ಲೈನ್ ಸೀಟು ಆಯ್ಕೆಗಾಗಿ ಲಾಗಿನ್ ಐಡಿ,ಪಾಸ್‌ವರ್ಡ್ ಪಡೆಯುವ ಪ್ರಕ್ರಿಯೆ, ಆನ್‌ಲೈನ್‌ನಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡುವುದು ಮತ್ತು ಅಗತ್ಯವಿರುವ ವಿವಿಧ ದಾಖಲೆಗಳ ವಿವರಗಳು ಇತ್ಯಾದಿಗಳ ಬಗ್ಗೆ ಅನೇಕ ಪ್ರಶ್ನೆಗಳು ವಿದ್ಯಾರ್ಥಿಗಳು ಮತ್ತು ಅವರ ಪೋಷಕರ ಮನಸ್ಸಿನಲ್ಲಿ ಬರುವುದು ಸಹಜ. ವಿದ್ಯಾರ್ಥಿಗಳು ಮತ್ತು ಪೋಷಕರು ಸರಿಯಾದ ಆಯ್ಕೆಗಳನ್ನು ಮಾಡಲು ಸೂಕ್ತವಾದ ಮಾರ್ಗದರ್ಶನವನ್ನು ಹೊಂದಿರುವುದು ಅತ್ಯಗತ್ಯ.

ಪ್ರಸಕ್ತ ಶೈಕ್ಷಣಿಕ ವರ್ಷವು ಪ್ರಾರಂಭವಾಗುತ್ತಿದ್ದಂತೆ, ವಿದ್ಯಾರ್ಥಿಗಳು ಮಾಡಬೇಕಾದ ಉನ್ನತ ಶಿಕ್ಷಣದ ಆಯ್ಕೆಗಳು ಮತ್ತು ಆನ್‌ಲೈನ್ ಪ್ರವೇಶ ಪ್ರಕ್ರಿಯೆಯ ಬಗ್ಗೆ ತಿಳಿಯಲು ಉತ್ಸುಕರಾಗಿರುತ್ತಾರೆ.

ಆದ್ದರಿಂದ ಸಾರ್ವಜನಿಕರ ಮಾಹಿತಿಗಾಗಿ ಎಸ್.ಡಿ.ಎಂ. ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ ಪ್ರತಿ ವರ್ಷದಂತೆ ಈ ವರ್ಷವೂ ಸಹ,ಸಿಇಟಿ, ಕಾಮೆಡ್-ಕೆ ಪ್ರವೇಶ ಪ್ರಕ್ರಿಯೆಯ ಮೇಲೆ ಸಂವಾದಾತ್ಮಕ ಕಾರ್ಯಕ್ರಮ ನಡೆಸುತ್ತಿದೆ.

ಸಿಇಟಿ ನೋಡಲ್ ಅಧಿಕಾರಿಗಳು ಮತ್ತು ಇತರ ವಿಷಯ ತಜ್ಞರು ಆಕಾಂಕ್ಷಿಗಳಿಗೆ ಸರಿಯಾದ ಮಾರ್ಗದರ್ಶನ ನೀಡುತ್ತಾರೆ ಮತ್ತು ಆನ್‌ಲೈನ್ ಸೀಟು ಆಯ್ಕೆ ಪ್ರಕ್ರಿಯೆಯನ್ನು ವಿವರಿಸುತ್ತಾರೆ. ಸಂಬಂಧಪಟ್ಟವರು ಇಲ್ಲಿ ಭಾಗವಹಿಸುವ ಮೂಲಕ ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದು. ವಿಳಾಸ ಹಾಗೂ ಸಮಯ ಹೀಗಿದೆ. ಸ್ಥಳ: ಸಭಾಂಗಣ, ಎಸ್.ಡಿ.ಎಂ. ಎಂಜಿನಿಯರಿಂಗ್ ಕಾಲೇಜು, ಕಲಘಟಗಿ ರಸ್ತೆ, ಧಾರವಾಡದಲ್ಲಿ ನಡೆಯಲಿದೆ ಎಂದು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಸಾಪದಿಂದ ಶಾಹೀನ ತಾಡಪತ್ರಿಗೆ ಸನ್ಮಾನ

ಮುಂಡಗೋಡ: ಸಿವಿಲ್ ಎಂಜಿನಿಯರಿಂಗ್ ಪರೀಕ್ಷೆಯಲ್ಲಿ ಹುಬ್ಬಳ್ಳಿ ವರೂರಿನ ಎ.ಜಿ.ಎಮ್ ಎಂಜಿನಿಯರಿಂಗ್ ಕಾಲೇಜ್‌ನ ವಿದ್ಯಾರ್ಥಿನಿ ಶಾಹೀನ ನಜೀರುದ್ದಿನ ತಾಡಪತ್ರಿ ಅವರ ಮನೆಗೆ ಶುಕ್ರವಾರ ರಾತ್ರಿ ಆಗಮಿಸಿದ ಕನ್ನಡ ಸಾಹಿತ್ಯ ಪರಿಷತ್ ಸನ್ಮಾನಿಸಿ ಗೌರವಿಸಿದೆ.

ಶಾಹೀನ ಶೇ.90 ರಷ್ಟು ಅಂಕಪಡೆದಿದ್ದು, ಅವರ ಸಾಧನೆಗೆ ಗೌರವಸಲ್ಲಿಸಲಾಗಿದೆ. ಅಧ್ಯಕ್ಷ ವಸಂತ ಕೋಣಸಾಲಿ, ಗೌರವ ಕಾರ್ಯದರ್ಶಿ ಎಸ್.ಡಿ.ಮುಡೆಣ್ಣವರ, ವಿನಾಯಕ ಶೇಟ್, ಗೌರವ ಕಾರ್ಯದರ್ಶಿ ನಾಗರಾಜ ಅರ್ಕಸಾಲಿ, ಎಸ್.ಬಿ. ಹೂಗಾರ, ಸಂಗಪ್ಪ ಕೊಳೂರ, ಶಿವಾನಂದ ವಾಲಿಶೆಟ್ಟರ, ಎಮ್.ಎಚ್.ಕಲಾಲ್ ,ಮಲ್ಲಮ್ಮ ನೀರಲಗಿ ಶಾಲು ಹೊದಿಸಿ ಗೌರವಿಸಿದರು. ಅಲ್ಪಸಂಖ್ಯಾತ ಯುವತಿ ಈ ಸಾಧನೆ ಮಾಡಿದ್ದು ನಿಜಕ್ಕೂ ವಿದ್ಯಾರ್ಥಿನಿಯ ಸಾಧನೆಯೇ ಆಗಿದೆ. ವಿದ್ಯಾರ್ಥಿನಿಗೆ ತಂದೆ-ತಾಯಿ ಸಹಕಾರ ನೀಡಿರುವುದರಿಂದ ಗುಣಮಟ್ಟದ ಅಂಕಪಡೆಯಲು ಸಾಧ್ಯವಾಗಿದೆ ಎಂದು ಅಧ್ಯಕ್ಷ ಕೋಣಸಾಲಿ ಹೇಳಿದರು.

ನಂತರ ಮಾತನಾಡಿದ ವಿನಾಯಕ ಶೇಟ್, ವಿದ್ಯಾರ್ಥಿನಿಯ ತಂದೆ ಅಕ್ಷರ ಜ್ಞಾನದ ಹಿಂದೆ ಬಿದ್ದವರು. ಸರಸ್ವತಿ ಆರಾಧಿಸುವರ ಮಕ್ಕಳು ಉತ್ತಮ ಭವಿಷ್ಯ ರೂಪಿಸಿಕೊಳ್ಳುತ್ತಾರೆ ಎಂದರು.

ಎಸ್.ಬಿ.ಹೂಗಾರ ಮಾತನಾಡಿ, ವರದಿಗಾರ ತಾಡಪತ್ರಿ ಹಣದ ಹಿಂದೆ ಬಿದ್ದವರಲ್ಲ. ಜನಪರ ಕಾರ್ಯಕ್ರಮಗಳ ವರದಿ ಮಾಡಿ ಜನ್ನಮನ್ನಣೆ ಗಳಿಸಿದ್ದಾರೆ, ಜನರನ್ನು ಗಳಿಸಿದ್ದಾರೆ ಎಂದರು.

ಎಸ್.ಡಿ, ಮುಡೆಣ್ಣವರ ಮಾತನಾಡಿ, ಇಂಜನಿಯರಿಂಗ್ ಸಿವಿಲ್(ಬಿ.ಇ) ಕೊನೆಯ ಪರೀಕ್ಷೆಯಲಿ ಶೇ.90 ರಷ್ಟು ಅಂಕಪಡೆದು ಕಾಲೇಜ್‌ಗೆ ಪ್ರಥಮ ಸ್ಥಾನ ಪಡೆದಿರುವುದು ನಮಗೆ ಹೆಮ್ಮೆ ತಂದಿದೆ. ಅಲ್ಪಸಂಖ್ಯಾತರಲ್ಲಿ ಹೆಣ್ಣು ಮಕ್ಕಳಿಗೆ ವಿದ್ಯೆ ನೀಡುವುದು ಕಡಿಮೆ. ಗಂಡು ಹೆಣ್ಣು ಭೇದ ಮರೆತು ಮಗಳಿಗೆ ಎಂಜಿನಿಯರಿಂಗ್ ವಿದ್ಯೆ ನೀಡಿರುವುದು ಪ್ರಶಂಸನೀಯ ಎಂದರು.

ವಿದ್ಯಾರ್ಥಿನಿ ಶಾಹೀನ ತಾಡಪತ್ರಿ ಮಾತನಾಡಿ, ತಾಯಿಯೇ ಮಕ್ಕಳಿಗೆ ಮೊದಲನೇ ಗುರು ಎನ್ನುತ್ತಾರೆ. ನನ್ನ ಪಾಲಿಗೆ ಇಬ್ಬರು ನನ್ನ ಮೊದಲನೇ ಗುರು ಎಂದು ಹೇಳುತ್ತೇನೆ. ತಂದೆಯವರ ಹಣಕಾಸಿನ ಕಷ್ಟದ ನಡುವೆಯೂ ನನಗೆ ವಿದ್ಯಾಭ್ಯಾಸ ನೀಡಿದ್ದಾರೆ. ಅವರು ನನ್ನ ಮೇಲೆ ಇಟ್ಟಿರುವ ಭರವಸೆಯನ್ನು ಹುಸಿ ಮಾಡಲಾರೆ. ನನ್ನ ತಂದೆ-ತಾಯಿಯ ಹೆಸರನ್ನು ಉತ್ತುಂಗಕ್ಕೆ ಒಯ್ಯುವೆ ಎಂದಳು.

ಕನ್ನಡ ಸಾಹಿತ್ಯ ಪರಿಷತ್ ಸದಸ್ಯರು ನಿನ್ನ ಮುಂದಿನ ಭವಿಷ್ಯ ಉತ್ತಮವಾಗಿರಲಿ ಶುಭ ಹಾರೈಸಿದರು.

ಮರಗಳಿಗೆ ಅಳವಡಿಸಿದ ರಕ್ಷಾಕವಚ ತೆರವುಗೊಳಿಸಿ

ಧಾರವಾಡ: ಮಹಾನಗರ ಪಾಲಿಕೆಗೆ ಒಳಪಟ್ಟ ಸ್ಥಳಗಳಲ್ಲಿ ಮರಗಳಿಗೆ ಅಳವಡಿಸಿದ್ದ ಕಬ್ಬಿಣದ ರಕ್ಷಾ ಕವಚಗಳನ್ನು ತೆರುವುಗೊಳಿಸಬೇಕು ಅಂತಹ ಕವಚಗಳಿಂದ ಇಂದು ಮರಗಳ ಬೆಳವಣಿಗೆಗೆ ಅಡ್ಡಿಯಾಗುತ್ತಿದೆ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಈಗಾಗಲೇ ಜಿಲ್ಲೆಯ ವಿವಿಧ ಸಂಘಟನೆಗಳಾದ ದಲಿತ ವಿದ್ಯಾರ್ಥಿ ಪರಿಷತ್, ವಿದ್ಯಾರ್ಥಿ ಬಂಧುತ್ವ ವೇದಿಕೆ ಮತ್ತು ಪರಿಸರ ಸ್ನೇಹಿ ಬಳಗದ ವತಿಯಿಂದ ದಿನಾಂಕ 05-02-2024 ರಂದು ಮತ್ತು ಪುನಃ ಮರುಮನವಿಯನ್ನು ಮತ್ತೆ ಸಲ್ಲಿಸಲಾಗಿದೆ. ಹು-ಧಾ ಮಹಾನಗರ ಪಾಲಿಕೆಯ ಆಯುಕ್ತರಿಗೂ ಹಾಗೂ ಮಹಾಪೌರರಿಗೂ ಮನವಿ ಸಲ್ಲಿಸಿದ್ದರೂ ಕೂಡ ಇನ್ನೂವರೆಗೆ ಯಾವ ಸೂಕ್ತ ಕ್ರಮವನ್ನು ಕೈಗೊಂಡಿರುವುದಿಲ್ಲವಾದ್ದರಿಂದ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ.

ಈ ವೇಳೆ ಡಿವಿಪಿ ಜಿಲ್ಲಾಧ್ಯಕ್ಷರಾದ ಹನುಮಂತ ದಾಸರ, ವಿಬಿವಿ ಜಿಲ್ಲಾಧ್ಯಕ್ಷರಾದ ಮಂಜುನಾಥ ಹಾಸಟ್ಟಿ, ಮಹಿಳಾ ಅಧ್ಯಕ್ಷೆಯಾದ ದುರ್ಗಾ ಎಚ್, ಪರಿಸರ ಸ್ನೇಹಿ ಬಳಗದ ಸದಸ್ಯರಾದ ಅರುಣ್ ಮೂಡಿ, ಬಸವರಾಜ ಅರಾಣಿ, ಸಾಧಿಕ್ ಹೋಟೆಗಾಳಿ, ಹುಸೇನ್ ಕುಂದಗೋಳ ಹಾಗೂ ಮಲ್ಲಿಕಾರ್ಜುನ್ ಭಾಗಿಯಾಗಿದ್ದರು.

ಭೂ ಒಡೆತನ ಸಮಿತಿ ರಚನೆಗೆ ಮನವಿ

ಗದಗ: ಡಾ. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿಯ ಭೂ ಒಡೆತನ ಯೋಜನೆಯ ಆಯ್ಕೆ ಸಮಿತಿ ರಚನೆ ಮಾಡಲು ಒತ್ತಾಯಿಸಿ ರಾಜ್ಯ ಚಲವಾದಿ ಮಹಾಸಭಾ ಜಿಲ್ಲಾ ಘಟಕದಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಡಾ. ಬಿ.ಆರ್. ಅಂಬೇಡ್ಕರ ಅಭಿವೃದ್ಧಿ ನಿಗಮದಲ್ಲಿ ರಾಜ್ಯದ ಪ.ಜಾತಿ ಪ. ಪಂಗಡದ ಜನರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿದ್ದು, ಈ ಯೋಜನೆಗಳಲ್ಲಿ ಭೂ ರಹಿತ ಕೃಷಿ ಕೂಲಿ ಕಾರ್ಮಿಕರಿಗಾಗಿ ಭೂ ಒಡೆತನ ಮತ್ತು ವಿಶಿಷ್ಟ ಯೋಜನೆಯೊಂದು ಚಾಲ್ತಿಯಲ್ಲಿದ್ದು, ಸದರ ಯೋಜನೆಯ ಉದ್ದೇಶ ಮತ್ತು ಗುರಿ ಉತ್ತಮವಿದ್ದು, ಆದರೆ ಈ ನಿಗಮಗಳಿಗೆ ಬರುವ ನಿರ್ದೇಶಕರು ಕಾಳಜಿ ತೋರದೆ ಈ ಯೋಜನೆಯ ಬಗ್ಗೆ ಅವರಿಗೆ ತಾತ್ಸಾರ ಮನೋಭಾವನೆ ಇದೆ ಎಂಬುದು ಪ್ರತಿಯೊಂದು ಜಿಲ್ಲೆಯಲ್ಲಿ ಎದ್ದು ಕಾಣುತ್ತಿದೆ.

ಈ ರೀತಿಯ ಜಾತಿವಾದಿ ಅಧಿಕಾರಿಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಸೂಕ್ತ ಕಾನೂನುಕ್ರಮ ಕೈಗೊಳ್ಳುವ ಅಗತ್ಯವಿದೆ. ಏಕೆಂದರೆ ಉದಾಹರಣೆ ನಮ್ಮ ಗದಗ ಜಿಲ್ಲೆಯಲ್ಲಿ ಈ ಯೋಜನೆಯ ಫಲಾನುಭವಿಗಳನ್ನು ಕಳೆದ ಎರಡು ವರ್ಷಗಳಿಂದ ಆಯ್ಕೆ ಸಮಿತಿ ರಚಿಸಿದೆ. ಯೋಜನೆಯಲ್ಲಿ ಅರ್ಜಿ ಸಲ್ಲಿಸಿದ ರೈತರಿಗೆ ಮತ್ತು ಕೃಷಿಕೂಲಿ ಕಾರ್ಮಿಕರಿಗೆ ಪರದೆಯ ಹಿಂದಿನಿಂದ ಮೋಸ ಮಾಡುತ್ತಿದ್ದಾರೆ. ಈ ರೀತಿಯ ಅಧಿಕಾರಿಗಳ ನಡೆಯನ್ನು ಮನಗಂಡು ಕರ್ನಾಟಕ ರಾಜ್ಯ ಚಲವಾದಿ ಮಹಾಸಭಾ ಗದಗ ಜಿಲ್ಲಾ ಘಟಕವು ತೀವ್ರವಾಗಿ ಖಂಡಿಸಿ ಆದಷ್ಟು ಬೇಗನೇ ಫಲಾನುಭವಿಗಳ ಆಯ್ಕೆ ಸಮಿತಿ ರಚಿಸಿ ಪಟ್ಟಿ ಸಿದ್ದಪಡಿಸಿ ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಕಳುಹಿಸಿ ಸುಮಾರು ವರ್ಷಗಳಿಂದ ಭೂಮಿ ಇಲ್ಲದ ಭೂರಹಿತರ ಕುಟುಂಬಕ್ಕೆ ಅರಿಕೆಯಾಗುವಲ್ಲಿ ಪ್ರಮುಖ ಪಾತ್ರವಹಿಸಿ ತಮ್ಮ ಅಧಿಕಾರದ ಪಾರದರ್ಶಕತೆಯನ್ನು ಜಿಲ್ಲೆಯ ಫಲಾನುಭವಿಗಳಿಗೆ ತೋರ್ಪಡಿಸುವ ಅಗತ್ಯತೆ ಮತ್ತು ಅನಿವಾರ್ಯತೆ ಇದೆ ಎಂದು ಕರ್ನಾಟಕ ರಾಜ್ಯ ಚಲವಾದಿ ಮಹಾಸಭಾ ಜಿಲ್ಲಾ ಘಟಕದ ವತಿಯಿಂದ ಮಾನ್ಯ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಡಿ.ಎಸ್.ಎಸ್. ಸಂಚಾಲಕ ಪ್ರಕಾಶ ಕಲ್ಲೂರ, ಕರ್ನಾಟಕ ರಾಜ್ಯ ಚಲವಾದಿ ಮಹಾಸಭಾದ ಅಧ್ಯಕ್ಷ ಎಲ್. ನಾರಾಯಣಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಈರಣ್ಣವರ, ರೋಣ ತಾಲೂಕ ಡಿ.ಎಸ್.ಎಸ್. ಸಂಚಾಲಕ ಬಸವರಾಜ ಗಂಡಗೋಳಿ, ಮಂಜುನಾಥ ಚಲವಾದಿ ಇದ್ದರು.

ಆನ್‌ಲೈನ್‌ನಲ್ಲಿ ನೋಂದಣಿಗೆ ಆ್ಯಪ್

ಧಾರವಾಡ: ಎಸ್.ಡಿ.ಎಂ.ಆಸ್ಪತ್ರೆಯಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಿ. ವೀರೇಂದ್ರ ಹೆಗ್ಗಡೆಯವರು ಇತ್ತೀಚಿಗೆ ಹೊರ ರೋಗಿಗಳ ಅನುಕೂಲಕ್ಕಾಗಿ ಆನ್‌ಲೈನ್‌ನಲ್ಲಿ ನೋಂದಣಿ ಮಾಡಲು ಮಾದರಿ ಅನ್ನು ಉದ್ಘಾಟಿಸಿದರು.

ಈ ಮಾದರಿಯಲ್ಲಿ ಹುಬ್ಬಳ್ಳಿ ಮತ್ತು ಧಾರವಾಡದ ಪಾಲಿಕ್ಲಿನಿಕ್‌ಗಳಲ್ಲಿ ವೈದ್ಯರ ಲಭ್ಯತೆಯ ಬಗ್ಗೆ ಮಾಹಿತಿ ಮತ್ತು ರೋಗಿಗಳು ತಮಗೆ ಅನುಕೂಲದ ಸಮಯವನ್ನು ನಿಗದಿಪಡಿಸಿಕೊಳ್ಳಬಹುದು. ಇದು ಶೀಘ್ರದಲ್ಲೇ ಗೂಗಲ್ ಪ್ಲೇ ಸ್ಟೋರ ಮತ್ತು ಆಪಲ್ ಸ್ಟೋರ್‌ಗಳಲ್ಲಿ ಲಭ್ಯವಿರುತ್ತದೆ.

ಎಸ್.ಡಿ.ಎಂ. ಪಾಲಿಕ್ಲಿನಿಕ್ ಧಾರವಾಡದಲ್ಲಿ ಜುಬಲಿ ಸರ್ಕಲ್ ಬಳಿಯ ವಿ.ಜೆ. ಹೌಸ್‌ನಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ಎಸ್.ಡಿ.ಎಂ. ಪಾಲಿಕ್ಲಿನಿಕ್ ವಿದ್ಯಾನಗರದ, ಗುರುದತ್ತ ಭವನದ ಹತ್ತಿರ ಕಾರ್ಯನಿರ್ವಹಿಸುತ್ತದೆ. ಉಪ ವೈದ್ಯಕೀಯ ಅಧೀಕ್ಷಕರಾದ ಡಾ. ಮಖ್ಯುಮ್ ಕಿಲ್ಲೆದಾರ ಅವರು ಪ್ರಾತ್ಯಕ್ಷಿಕೆಯೊಂದಿಗೆ ಆ್ಯಪ್ ಕುರಿತು ಕುಲಪತಿಗಳಿಗೆ ಮಾಹಿತಿ ನೀಡಿದರು.

ಎಸ್.ಡಿ.ಎಂ. ಆಸ್ಪತ್ರೆಯ ಯುರಾಲಜಿ ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಪೂಜ್ಯ ಡಾ. ವೀರೇಂದ್ರ ಹೆಗ್ಗಡೆ ಅವರು ಥುಲಿಯಮ್ ಲೇಸರ 60 ವ್ಯಾಟ್ ಯಂತ್ರ ಮತ್ತು ಫ್ಲೆಕ್ಸಿಬಲ್ ಯುರೆಟೆರೊಸ್ಕೋಪ್ ಅನ್ನು ಉದ್ಘಾಟಿಸಿದರು.

ಇದು ಪ್ರಸ್ತುತ ವಿಶ್ವದ ಆಧುನಿಕ ಲೇಸರ್ ತಂತ್ರಜ್ಞಾನವಾಗಿದ್ದು ಇದರ ಸಹಾಯದಿಂದ ಮೂತ್ರಪಿಂಡ ಕಲ್ಲುಗಳು, ಮೂತ್ರನಾಳದ ಕಲ್ಲುಗಳು, ಮೂತ್ರಪಿಂಡದ ಕ್ಯಾನ್ಸರ್, ವಿವಿಧ ಮೂತ್ರಶಾಸ್ತ್ರದ ಸಮಸ್ಯೆಗಳಿಗೆ ರಕ್ತಸ್ರಾವವಿಲ್ಲದೆ, ಕಡಿಮೆ ನೋವು, ಶಸ್ತ್ರ ಚಿಕಿತ್ಸೆಯ ನಂತರದ ಗಾಯಗಳಿಲ್ಲದೇ ಚಿಕಿತ್ಸೆ ನೀಡಬಹುದಾಗಿದ್ದು, ಶೀಘ್ರವಾಗಿ ಚೇತರಿಸಿಕೊಳ್ಳಲು ಇದು ಸಹಕಾರಿಯಾಗಿದೆ. ಅಷ್ಟೇಯಲ್ಲದೆ ಹೃದಯ ಸಂಬಂಧಿ ಕಾಯಿಲೆಗಳಿಗೂ ಈ ಯಂತ್ರವನ್ನು ಬಳಸಬಹುದು.

ಉಪ ಕುಲಪತಿಗಳಾದ ಡಾ. ನಿರಂಜನ್ ಕುಮಾರ, ಉಪಾಧ್ಯಕ್ಷರಾದ ಡಿ. ಸುರೇಂದ್ರ ಕುಮಾರ, ಕಾರ್ಯನಿರ್ವಾಹಕ ನಿದೇಶಕಿಯವರಾದ ಪದ್ಮಲತಾ ನಿರಂಜನ್, ಆಡಳಿತ ನಿರ್ದೇಶಕರಾದ ಸಾಕೇತ್ ಶೆಟ್ಟಿ, ಸಹ ಉಪ ಕುಲಪತಿಗಳಾದ ವಿ. ಜೀವಂಧರ ಕುಮಾರ, ಕುಲಸಚಿವರಾದ ಡಾ. ಚಿದೇಂದ್ರ ಶೆಟ್ಟರ, ಪ್ರಾಂಶುಪಾಲರಾದ ಡಾ. ರತ್ನಮಾಲಾ ದೇಸಾಯಿ, ವೈದ್ಯಕೀಯ ಅಧೀಕ್ಷಕರಾದ ಡಾ. ಕಿರಣ ಹೆಗ್ಡೆ, ಉಪಸ್ಥಿತರಿದ್ದರು. ಯುರಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀನಿವಾಸ ಕಲಭಾವಿ ಅವರು ಉಪಕರಣಗಳ ಕಾರ್ಯನಿರ್ವಹಿಸುವ ಕುರಿತು ಪ್ರಾತ್ಯಕ್ಷಿತೆ ನೀಡಿದರು.

ಸಮಾಚಾರ ಸಣ್ಣದಲ್ಲ

ತ.ನಾಡು ರಾಜ್ಯಾಧ್ಯಕ್ಷ ಮುಂದುವರಿಕೆ

ದೆಹಲಿ: ಬಿಜೆಪಿಯ ತಮಿಳುನಾಡು ರಾಜ್ಯಾಧ್ಯಕ್ಷ ಅಣ್ಣಾಮಲೈ ಅವರಿಗೆ ನರೇಂದ್ರ ಮೋದಿ ಅವರ ನೇತೃತ್ವದ 3ನೇ ಅವಧಿಯ ಸರಕಾರದಲ್ಲಿ ಸಚಿವ

ಸ್ಥಾನಕ್ಕೆ ಅವಕಾಶವಾಗಿಲ್ಲ. ಬದಲಾಗಿ ಪಕ್ಷದ ತಮಿಳುನಾಡು ರಾಜ್ಯ ಘಟಕ ಅಧ್ಯಕ್ಷರಾಗಿಯೇ ಹೆಚ್ಚಿನ ಅವಧಿ ತೊಡಗಿಸಿಕೊಂಡು ಪಕ್ಷ ಸಂಘಟನೆಗೆ ಸೂಚನೆ ನೀಡಲಾಗಿದೆ. 2026ರಲ್ಲಿ ತ.ನಾಡು ವಿಧಾನಸಭಾ ಚುನಾ ವಣೆ ನಡೆಯಲಿರುವ ಹಿನ್ನೆಲೆ ಅಣ್ಣಾಮಲೈ ಅವರಿಗೆ ಪಕ್ಷ ಸಂಘಟಿಸುವ ಹೊಣೆ ನೀಡಲಾಗಿದೆ. ಲೋಕಸಭಾ ಚುನಾವಣೆಯಲ್ಲಿ ತಮಿಳುನಾಡು ರಾಜ್ಯದಲ್ಲಿನ ಒಟ್ಟು 39 ಲೋಕಸಭಾ ಕ್ಷೇತ್ರಗಳ ಪೈಕಿ ಬಿಜೆಪಿ ನೇರವಾಗಿ 19 ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಎನ್‌ಡಿಎ ಮಿತ್ರಗಳಿಗೆ 4 ಕ್ಷೇತ್ರ ಬಿಟ್ಟುಕೊಟ್ಟಿತ್ತು. ಆದರೆ, ಒಂದು ಸ್ಥಾನವನ್ನೂ ಜಯಿಸಲು ಆಗಲಿಲ್ಲ. ಆದರೆ, ಬಿಜೆಪಿ ಗಣನೀಯವಾಗಿ ಮತ ಗಳಿಕೆ ಪ್ರಮಾಣ ಹೆಚ್ಚಿಸಿಕೊಂಡಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಎಐಡಿಎಂಕೆ ಜತೆ ಮೈತ್ರಿ ಮಾಡಿಕೊಂಡಿದ್ದ ಬಿಜೆಪಿ ಶೇ.3.6 ಮತ ಪಡೆದಿದ್ದರೆ ಈ ಬಾರಿ ಶೇ.10.72ರಷ್ಟು ಮತ ಪಡೆದು 3ನೇ ಸ್ಥಾನ ಪಡೆದಿದೆ.

ಬಿಜೆಡಿ ಪಾಂಡಿಯನ್ ರಾಜಕೀಯ ನಿವೃತ್ತಿ

ಭುವನೇಶ್ವರಿ: ಒಡಿಶಾದ ಮಾಜಿ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ಪರಮಾಪ್ತರಾಗಿ ಮಾಜಿ ಸರಕಾರಿ ಅಧಿಕಾರಿ ವಿ.ಕೆ.ಪಾಂಡಿಯನ್ ಸಕ್ರಿಯ

ರಾಜಕಾರಣದಿಂದ ನಿವೃತ್ತಿ ಘೋಷಿಸಿದ್ದಾರೆ. ಭಾನುವಾರ ವಿಡಿಯೊ ಸಂದೇಶ ಹಂಚಿಕೊಂಡಿರುವ ಪಾಂಡಿಯನ್ ನಿವೃತ್ತಿ ಘೋಷಣೆ ಮಾಡಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಸೋಲುಂಡರೆ ತಾವು ರಾಜಕೀಯದಿಂದ ನಿವೃತ್ತಿ ಪಡೆಯುವುದಾಗಿ ಪಾಂಡಿಯನ್ ಮೇ 10ರಂದೇ ಹೇಳಿದ್ದರು. ಐಎಎಸ್ ಅಧಿಕಾರಿಯಾಗಿದ್ದ ಪಾಂಡಿಯನ್ ಸ್ವಯಂ ನಿವೃತ್ತಿ ಪಡೆದು ಬಿಜು ಜನತಾ ದಳ(ಬಿಜೆಡಿ) ಪಕ್ಷ ಸೇರಿ ರಾಜಕೀಯ ಪ್ರವೇಶಿಸಿದ್ದರು. ಒಡಿಶಾ ವಿಧಾನಸಭಾ ಚುನಾವಣೆಯಲ್ಲಿ ಬಿಜೆಡಿ ಸೋತಿದ್ದರಿಂದ ಪಾಂಡಿಯನ್ ವಿರುದ್ಧ ತೀವ್ರ ಟೀಕೆಗಳು ವ್ಯಕ್ತವಾಗಿವೆ. ಈ ಬಗ್ಗೆ ಪ್ರತಿಕ್ರಿಯಿಸಿದ್ದ ಮಾಜಿ ಸಿಎಂ ನವೀನ್ ಪಟ್ನಾಯಕ್, ಪಾಂಡಿಯನ್ ಟೀಕೆ ಮಾಡುವುದು ಸರಿಯಲ್ಲ. ಅಲ್ಲದೇ ಪಾಂಡಿಯನ್ ತಮ್ಮ ರಾಜಕೀಯ ಉತ್ತರಾಧಿಕಾರಿಯೂ ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅದರ ಬೆನ್ನಲ್ಲೇ ಪಾಂಡಿಯನ್ ರಾಜಕಾರಣಕ್ಕೆ ವಿದಾಯ ಹೇಳಿದ್ದಾರೆ.

ಯುಪಿಎಸ್‌ಸಿ 312 ಹುದ್ದೆ; 13 ಕಡೆದಿನ

ದೆಹಲಿ: 'ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್' (ಯುಪಿಎಸ್‌ಸಿ) ಅರ್ಥಾತ್ ಕೇಂದ್ರ ಲೋಕಸೇವಾ ಆಯೋಗ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಅಸಿಸ್ಟೆಂಟ್ ಪ್ರೊಫೆಸರ್, ಟ್ರೈನಿ ಆಫೀಸರ್, ಇಂಜಿನಿಯರ್ ಮತ್ತು ಶಿಪ್ ಸರ್ವೇಯರ್ ಕಮ್ ಡೆಪ್ಯೂಟಿ ಡೈರೆಕ್ಟರ್ ಜನರಲ್ ಸೇರಿ 312 ಹುದ್ದೆಗಳಿಗೆ ಪದವಿ, ಪಿಜಿ ಡಿಪ್ಲೊಮಾ ಓದಿದವರು ಅರ್ಜಿ ಸಲ್ಲಿಸಬಹುದಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜೂ.13 ಕಡೆದಿನ. ಯುಪಿಎಸ್‌ಸಿಯ ಅಧಿಕೃತ ವೆಬ್‌ತಾಣದಲ್ಲಿ ಅರ್ಜಿ ಸಲ್ಲಿಸಬೇಕಿದೆ.

ಬಿಜೆಡಿ ಅಚ್ಯುತಾನಂದ ರಾಜಕೀಯ ನಿವೃತ್ತಿ

ಭುವನೇಶ್ವರ್: ಬಿಜು ಜನತಾ ದಳದ ಹಿರಿಯ ನಾಯಕ, ಕಂದಮಾಲ್ ಲೋಕಸಭಾ ಕ್ಷೇತ್ರದ ಮಾಜಿ ಸದಸ್ಯ ಅಚ್ಯುತಾನಂದ ಸಾಮಂತ ಅವರು ಲೋಕಸಭೆ

ಚುನಾವಣೆಯ ಸೋಲಿನ ನಂತರ ಬೇಸರಗೊಂಡಿದ್ದವರು ಭಾನುವಾರ ಸಕ್ರಿಯ ರಾಜಕೀಯಕ್ಕೆ ನಿವೃತ್ತಿ ಘೋಷಿಸಿದ್ದಾರೆ. ಬಿಜೆಡಿ ಮುಖ್ಯಸ್ಥ ನವೀನ್ ಪಟ್ನಾಯಕ್ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿದ ಸಾಮಂತ ರಾಜಕೀಯ ನಿವೃತ್ತಿ ಘೋಷಿಸುವ ಇಚ್ಛೆ ವ್ಯಕ್ತಪಡಿಸಿದರು. 32 ವರ್ಷಗಳಿಂದ ಮಾಡುತ್ತಿರುವ ಸಮಾಜ ಸೇವೆ ಮುಂದುವರಿಸುವೆ. ಸಮಾಜ ಸೇವೆಗೆ ನನ್ನ ಬದ್ಧತೆ ಕೊನೆ ಉಸಿರು ಇರುವವರೆಗೂ ಮುಂದುವರಿಯುತ್ತದೆ ಎಂದು ಹೇಳಿದ್ದಾರೆ. ಈಗಿನ ಲೋಕಸಭಾ ಚುನಾವಣೆಯಲ್ಲಿ ಕಂದಮಾಲ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸುಕಾಂತ ಪಾಣಿಗ್ರಾಹಿ ವಿರುದ್ಧ ಸಾಮಂತ 21,371 ಮತಗಳ ಅಂತರದಿಂದ ಸೋತರು.

ಮೋದಿ ಪ್ರಮಾಣ ಬಳಿಕ ಒಡಿಶಾ ಸಿಎಂ ಆಯ್ಕೆ

ಭುವನೇಶ್ವರ: ನರೇಂದ್ರ ಮೋದಿ ಅವರು 3ನೇ ಅವಧಿಗೆ ದೇಶದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಒಡಿಶಾ ರಾಜ್ಯದ ಬಿಜೆಪಿ ಶಾಸ

ಕಾಂಗ ಪಕ್ಷದ ನಾಯಕನ ಆಯ್ಕೆ ನಡೆಯಲಿದೆ ಎಂದು ಬಿಜೆಪಿಯ ರಾಜ್ಯಾಧ್ಯಕ್ಷ ಮನಮೋಹನ್ ಸಮಾಲ್ ಹೇಳಿದ್ದಾರೆ. ರಾಜ್ಯದ ಮುಂದಿನ ಮುಖ್ಯಮಂತ್ರಿಯ ಬಗ್ಗೆ ನನಗೆ ಯಾವುದೇ ಕಲ್ಪನೆ ಇಲ್ಲ. ರಾಜ್ಯದಲ್ಲಿ ಮೊದಲ ಬಿಜೆಪಿ ಮುಖ್ಯಮಂತ್ರಿ ಯಾರಾಗುವರು ಎಂಬುದನ್ನು ತಿಳಿಯಲು ಇನ್ನೂ ಎರಡು ದಿನ ಕಾಯಬೇಕಿದೆ ಎಂದು ಹೇಳಿದರು. 147 ಸದಸ್ಯ ಬಲದ ಒಡಿಶಾ ವಿಧಾನಸಭೆಯಲ್ಲಿ ಬಿಜೆಪಿ 78 ಸ್ಥಾನಗಳನ್ನು ಗೆಲ್ಲುವ ಮೂಲಕ ಸ್ಪಷ್ಟ ಬಹುಮತ ಪಡೆದುಕೊಂಡಿದೆ. ಆ ಮೂಲಕ 25 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದ ಬಿಜು ಜನತಾ ದಳದ ನವೀನ್ ಪಟ್ನಾಯಕ್ ಅವರ ಅಧಿಕಾರ ಕೊನೆಗೊಂಡಿದೆ.

ಹಮಾಸ್ ವಶದಿಂದ ಇಸ್ರೇಲ್ ಪ್ರಜೆ ರಕ್ಷಣೆ ಕಾರ್ಯಾಚರಣೆ ವೇಳೆ ದಾಳಿ

ಇಸ್ರೇಲ್‌ನ ವೈಮಾನಿಕ ದಾಳಿ: 274 ಪ್ಯಾಲೆಸ್ತೀನ್ ಪ್ರಜೆ ಸಾವು

ಗಾಜಾ: 2023ರ ಅಕ್ಟೋಬರ್ 7ರ ನಸುಕಿನಲ್ಲಿ ಸಂಗೀತ ಕೂಟದ ಖುಷಿಯಲ್ಲಿ ಮುಳುಗಿದ್ದ ಇಸ್ರೇಲ್ ಪ್ರಜೆಗಳು ಸೇರಿದಂತೆ ವಿವಿಧ ದೇಶಗಳ ಸಾವಿರಾರು ಜನರನ್ನು ಬರ್ಬರವಾಗಿ ಕೊಂದು, 125ಕ್ಕೂ ಅಧಿಕ ಇಸ್ರೇಲ್ ಮಹಿಳೆಯರು-ಮಕ್ಕಳನ್ನು ಒತ್ತೆಯಾಳಾಗಿ ಇಟ್ಟುಕೊಂಡ ಹಮಾಸ್ ಉಗ್ರ ಸಂಘಟನೆ ವಿರುದ್ಧ ಕಳೆದ ಅಕ್ಟೋಬರ್‌ನಲ್ಲಿ ಇಸ್ರೇಲ್ ಆರಂಭಿಸಿದ ಯುದ್ಧ ಸದ್ಯಕ್ಕೆ ಕೊನೆಗೊಳ್ಳುವಂತೆ ಕಾಣುತ್ತಿಲ್ಲ.

ಹಮಾಸ್ ಬಳಿ ಇರುವ ಒತ್ತೆಯಾಳುಗಳ ರಕ್ಷಣೆಗಾಗಿ ಸಮರ ಮುಂದುವರಿಸಿರುವ ಇಸ್ರೇಲ್ ಸೇನಾಪಡೆ, ಗಾಜಾದಲ್ಲಿ ಭಾನುವಾರ ನಡೆಸಿದ ವೈಮಾನಿಕ ದಾಳಿಯಲ್ಲಿ 274 ಪ್ಯಾಲೆಸ್ತೇನ್ ಪ್ರಜೆಗಳು ಸಾವಿಗೀಡಾಗಿದ್ದಾರೆ.

ಹಮಾಸ್ ಉಗ್ರರ ಬಳಿ ಒತ್ತೆಯಾಳುಗಳಾಗಿರುವ ತನ್ನ ಪ್ರಜೆಗಳನ್ನು ರಕ್ಷಿಸಲು ಕಾರ್ಯಾಚರಣೆ ನಡೆಸುತ್ತಿದ್ದೇವೆ. ಕೇಂದ್ರ ಗಾಜಾದಲ್ಲಿ ನಿರಾಶ್ರಿತ ಕೇಂದ್ರದಲ್ಲೆ ಒತ್ತೆಯಾಳುಗಳನ್ನು ಅಡಗಿಸಿ ಇಡಲಾಗಿದೆ. ಆ ಭಾಗದ ಮೇಲೆ ಭೂ ಮತ್ತು ವಾಯು ದಾಳಿ ನಡೆಸಲಾಗಿದೆ ಇಸ್ರೇಲ್ ಹೇಳಿದೆ.

ಭಾನುವಾರದ ರಕ್ಷಣಾ ಕಾರ್ಯಾಚರಣೆ ವೇಳೆ ನಾಲ್ವರು ಪ್ರಜೆಗಳನ್ನು ರಕ್ಷಿಸಲಾಗಿದೆ. 26 ವರ್ಷದ ನೋಹ್, 22 ವರ್ಷದ ಅಲ್ಮೊಗ್ ಮೀರ್‌ಜಾನ್, 27 ವರ್ಷದ ಆಂಡ್ರೆ ಕೊಜ್ಲೋವ್ ಮತ್ತು 41 ವರ್ಷದ ಶ್ಲೋಮಿಝಿವ್‌ರನ್ನು. ಇವರೆಲ್ಲಾ 246 ದಿನಗಳಿಂದ ಹಮಾಸ್ ಉಗ್ರರ ವಶದಲ್ಲಿದ್ದರು. ನಾಲ್ವರನ್ನು ವೈದ್ಯಕೀಯ ಪರೀಕ್ಷೆ ನಡೆಸಿ ಬಳಿಕ ಕುಟುಂಬದವರ ವಶಕ್ಕೆ ಕೊಡಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ. ಮಕ್ಕಳ ಮನೆ ಸೇರಿರುವುದು ಪೋಷಕರಲ್ಲಿ ಸಂತಸ ಮೂಡಿಸಿದೆ.

ಇದೇ ವೇಳೆ, ಇಸ್ರೇಲ್ ಅಧ್ಯಕ್ಷ ಬೆಂಜಮಿನ್ ನೆತನ್ಯಾಹು, ಹಮಾಸ್ ಒತ್ತೆಯಾಳುಗಳಾಗಿರುವ ಎಲ್ಲಾ ಇಸ್ರೇಲ್ ಪ್ರಜೆಗಳನ್ನು ರಕ್ಷಿಸಿ ಮನೆಗೆ ಕರೆತುವವರೆಗೂ ಯುದ್ಧ ನಿಲ್ಲಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದಾರೆ.

ಇಸ್ರೇಲ್-ಹಮಾಸ್ ಸಂಘರ್ಷ ಈವರೆಗೆ...

- 2023 ಅ.7 ಹಮಾಸ್ ಉಗ್ರರಿಂದ ಇಸ್ರೇಲ್‌ನ ದಕ್ಷಿಣ ಭಾಗದಲ್ಲಿ ನಡೆದಿದ್ದ ಸಂಗೀತ ಕಾರ್ಯಕ್ರಮದ ಮೇಲೆ ಮಾರಾಣಾಂತಿಕ ದಾಳಿ
- ಹಮಾಸ್ ದಾಳಿಯಿಂದ 764 ನಾಗರಿಕರು, 373 ಇಸ್ರೇಲ್ ಸೇನಾ ಯೋಧರ ಸಾವು: 251 ಇಸ್ರೇಲ್ ಪ್ರಜೆಗಳನ್ನು ಒತ್ತೆಯಾಳಾಗಿ ಕರೆದೊಯ್ದ ಉಗ್ರರು
- 2023ರ ಅ.7 ಹಮಾಸ್ ಉಗ್ರರ ವಿರುದ್ಧ ಇಸ್ರೇಲ್ ಪ್ರತಿದಾಳಿ, ಗಾಜಾ ಪಟ್ಟಿ ಮೇಲೆ ಆಕ್ರಮಣ: 8 ತಿಂಗಳ ಯುದ್ಧದಲ್ಲಿ ಒಟ್ಟು 38 ಸಾವಿರ ಜನರ ಸಾವು
- 2024 ಮೇ 21ರ ಲೆಕ್ಕದಲ್ಲೇ 35,562 ಪ್ಯಾಲೆಸ್ತೀನ್ ಪ್ರಜೆಗಳು ಹಾಗೂ 1478 ಇಸ್ರೇಲ್ ಪ್ರಜೆಗಳು, 105 ಪತ್ರಕರ್ತರು, 224 ರಕ್ಷಣಾ ಕಾರ್ಯಕರ್ತರು, 179 ವಿಶ್ವಸಂಸ್ಥೆ ಸಿಬ್ಬಂದಿ ಮರಣ
- 2023 ಅ.28ರಿಂದ ನ.23ರವರೆಗೆ ಕದನ ವಿರಾಮ
- 2023ರ ನ.24ರಿಂದ 2024 ಜ.11ವರೆಗೆ ಯೆಮೆನ್ ವಾಯು ದಾಳಿ . 2024 ಜ.12ರಿಂದ ಮೇ 6ರವರೆಗೂ ರಾಫಾ ಮೇಲೆ ಇಸ್ರೇಲ್ ವಾಯು ದಾಳಿ

109 ಶವ ಪತ್ತೆ

ಇಸ್ರೇಲ್ ವಾಯು ದಾಳಿ ನಿಲುಗಡೆಯಾದ ಬಳಿಕ ನಿರಾಶ್ರಿತರ ಕಟ್ಟಡದಲ್ಲಿದ್ದ 23 ಮಕ್ಕಳು ಮತ್ತು 11 ಮಹಿಳೆಯರು ಸೇರಿದಂತೆ 109 ಪ್ಯಾಲೆಸ್ತೀನ್‌ಯ ನ್ನರ ಶವಗಳನ್ನು ಅಲ್-ಅಕ್ಸಾ ಹುತಾ ತ್ಮರ ಆಸ್ಪತ್ರೆಗೆ ಕೊಂಡೊಯ್ಯಲಾಗಿದೆ. ಗಾಯಗೊಂಡಿರುವ 100ಕ್ಕೂ ಹೆಚ್ಚು ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವಕ್ತಾರ ಖಲೀಲ್ ದೆಫ್ರನ್ ಹೇಳಿದರು. ಇಸ್ರೇಲ್ ಭಾನು ವಾರ ನಡೆಸಿದ ದಾಳಿಯಲ್ಲಿ ಒಟ್ಟಾರೆ 274 ಮಂದಿ ಸಾವನ್ನಪ್ಪಿದ್ದಾರೆ ಎಂದು ತಿಳಿಸಿದ್ದಾರೆ.

ಪಕ್ಷದ ದೆಹಲಿ ಪ್ರಧಾನ ಕಚೇರಿಯಲ್ಲಿ ವಾರ್ ರೂಂ ರಚನೆ। ಪ್ರತಿ ಲೋಕಸಭಾ ಕ್ಷೇತ್ರದ ಬೂತ್‌ಗಳ ಮಾಹಿತಿ ವಿಶ್ಲೇಷಣೆ

ಬೂತ್ ಮಟ್ಟದ ತನಿಖೆ: ಕಾಂಗ್ರೆಸ್

ದೆಹಲಿ: ಇತ್ತೀಚೆಗೆ ಕೊನೆಗೊಂಡ ಲೋಕಸಭಾ ಚುನಾವಣೆಯಲ್ಲಿ ಉತ್ತಮ ಫಲಿತಾಂಶ ನಿರೀಕ್ಷೆ ಮಾಡಿದ್ದ ಕೆಲವು ರಾಜ್ಯಗಳ ಹಲವು ಕ್ಷೇತ್ರಗಳಲ್ಲಿ ಸೋಲುಂಟಾಗಿದೆ. ಅದಕ್ಕೆ ಕಾರಣವೇನು ಎಂಬುದನ್ನು ತಿಳಿಯಲು ಬೂತ್ ಮಟ್ಟದಲ್ಲಿಯೇ ಪರಿಶೀಲನೆ ನಡೆಸಲು ಕಾಂಗ್ರೆಸ್ ಮುಂದಾಗಿದೆ.



ಸೋಲಿಗೆ ಹೊಣೆ ಯಾರು? ಕಾರಣ ಏನು ಎಂಬುದನ್ನು ಕಂಡುಕೊಂಡಲ್ಲಿ ಸರಿಪಡಿಸಿಕೊಳ್ಳಲು ಅನುಕೂಲವಾಗಲಿದೆ ಎಂಬ ಕಾರಣಕ್ಕೆ ಈ ಕ್ರಮಕ್ಕೆ ಮುಂದಾಗಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಈ ಸಂಬಂಧ ಪಕ್ಷದ ಕೇಂದ್ರ ಕಚೇರಿಯಲ್ಲಿ ವಾರ್ ರೂಮ್ ಸ್ಥಾಪಿಸಲಾಗುವುದು. ದೇಶಾದ್ಯಂತದ ಬೂತ್‌ಮಟ್ಟದ ಮತದಾನದ ವಿವರಗಳನ್ನು ಕಲೆಹಾಕಿ ವಿಶ್ಲೇಷಣೆ ನಡೆಸಲಾಗುವುದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯ ದರ್ಶಿ ಕೆ.ಸಿ.ವೇಣುಗೋಪಾಲ್ ಭಾನುವಾರ ಹೇಳಿದ್ದಾರೆ.

ಕಾಂಗ್ರೆಸ್ ಸರಕಾರ ಇರುವ ಕರ್ನಾಟಕ, ಹಿಮಾಚಲ ಪ್ರದೇಶ, ತೆಲಂಗಾಣದಲ್ಲಿ ಹೆಚ್ಚಿನ ಸಂಖ್ಯೆಯ ಲೋಕಸಭಾ ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸವಿತ್ತು. ಆದರೆ, ನಿರೀಕ್ಷೆಯ ಮಟ್ಟದಲ್ಲಿ ಗೆಲುವು ದೊರೆಯಲಿಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ತಿಳಿದುಕೊಳ್ಳಲೇಬೇಕಿದೆ. ಆ ಮೂಲಕ ಹೊಣೆಗಾರಿಕೆ ವಹಿಸಬೇಕಿದೆ ಎಂದು ವೇಣುಗೋಪಾಲ್ ಹೇಳಿದರು. ದೆಹಲಿ, ಮಧ್ಯಪ್ರದೇಶ, ಉತ್ತರಾಖಂಡ ರಾಜ್ಯಗಳಲ್ಲಿಯೂ ಒಂದು ಕ್ಷೇತ್ರವನ್ನೂ ಕಾಂಗ್ರೆಸ್‌ಗೆ ಗೆಲ್ಲಲು ಸಾಧ್ಯವಾಗಿಲ್ಲ. ಇವುಗಳ ಪರೀಕ್ಷೆ ಕೈಗೊಂಡು ಕಾರಣ ತಿಳಿಯಬೇಕಿದೆ ಎಂದರು.

> ರಾಜ್ಯಗಳಲ್ಲಿ ಪಕ್ಷದ್ದೇ ಸರಕಾರಗಳು ಇದ್ದರೂ, ಗ್ಯಾರಂಟಿ ಪ್ರಯೋಜನಗಳನ್ನು ನೀಡಿದ್ದರೂ ಕೂಡಾ ಹೆಚ್ಚಿನ ಕ್ಷೇತ್ರಗಳನ್ನು ಏಕೆ ಗೆಲ್ಲಲು ಸಾಧ್ಯವಾಗಲಿಲ್ಲ ಎಂಬುದೇ ಪಕ್ಷದ ವರಿಷ್ಠರಿಗೆ ದೊಡ್ಡ ಪ್ರಶ್ನೆಯಾಗಿದೆ. ಇದಕ್ಕೆ ಬೇರು ಮಟ್ಟದಿಂದಲೇ ಕಾರಣ ಹುಡುಕಿ ಸರಿಪಡಿಸಬೇಕಿದೆ ಎಂಬುದೂ ಕೂಡಾ ವರಿಷ್ಠರ ಆಶಯವಾಗಿದೆ.
>
> -ಕೆ.ಸಿ.ವೇಣುಗೋಪಾಲ್
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

---

15 ಸಂಸದರು ಇಂಡಿ ಸಂಪರ್ಕ?

ಕೋಲ್ಕತ್ತ: ಬಿಜೆಪಿಯ ಐವರು ಸಂಸದರು, ಎನ್‌ಡಿಎ ಮೈತ್ರಿಕೂಟದ 10 ಸಂಸದರು ಪ್ರತಿಪಕ್ಷಗಳ ಒಕ್ಕೂಟ 'ಇಂಡಿಯ' ಜತೆ ಸಂಪರ್ಕದಲ್ಲಿದ್ದಾರೆ. ಯಾವುದೇ ಕ್ಷಣದಲ್ಲಿ ಟಿಎಂಸಿಗೆ ಬರಲು ಸಿದ್ಧರಿದ್ದಾರೆ. ಇನ್ನು ಕೆಲವರು ಕೇಂದ್ರ ಸಚಿವ ಸಂಪುಟದಲ್ಲಿ ಸ್ಥಾನ ಹಂಚಿಕೆ ಬಳಿಕ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ತೃಣಮೂಲ ಕಾಂಗ್ರೆಸ್ ಪಕ್ಷದ (ಟಿಎಂಸಿ) ಮೂಲಗಳು ಭಾನುವಾರ ತಿಳಿಸಿವೆ.

ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರಕಾರ ಅಲ್ಪಾಯುವಾಗಲಿದೆ. ಅಧಿಕಾರಕ್ಕೆ ಬಂದ 15 ದಿನ ಕ್ಕೆಲ್ಲಾ ಮೋದಿ ಸರಕಾರ ಪತನವಾಗಲಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ, ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಭವಿಷ್ಯ ನುಡಿದಿದ್ದಾರೆ. ಪಶ್ಚಿಮ ಬಂಗಾಳ ರಾಜ್ಯದಲ್ಲಿ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಗೆದ್ದಿರುವ 12 ಬಿಜೆಪಿ ಸಂಸದರ ಪೈಕಿ ಐವರು ಸಂಸದರು ಶೀಘ್ರದಲ್ಲೇ ಪಕ್ಷ ತೊರೆದು ಟಿಎಂಸಿಗೆ ಸೇರಲಿದ್ದಾರೆ. ಅಲ್ಲದೇ, ಲೋಕಸಭೆ ಚುನಾ ವಣೆಯಲ್ಲಿ ಸೋಲು ಕಂಡಿರುವ ಬಿಜೆಪಿ ಅಭ್ಯರ್ಥಿ ಗಳೂ ಟಿಎಂಸಿ ಸೇರಲು ಬಯಸಿದ್ದಾರೆ. ಸಂಸದರ ಪ್ರಮಾಣವಚನ ಸ್ವೀಕಾರಕ್ಕೂ ಮುನ್ನವೇ ಪಶ್ಚಿಮ ಬಂಗಾಳದಲ್ಲಿ ಮಹತ್ವದ ಬದಲಾವಣೆ ಆಗಲಿದೆ ಎಂಬುದು ಟಿಎಂಸಿ ಪ್ರತಿಪಾದನೆಯಾಗಿದೆ. ಸಂಸದರ ಪ್ರಮಾಣ ವಚನ ಜೂ.15ರಂದು ನಡೆಯುವ ಸಾಧ್ಯತೆ ಇದೆ.

₹85 ಲಕ್ಷ ದೋಚಿದ ನಕಲಿ ಸಿಬಿಐ

ವಿಶಾಖಪಟ್ಟಣಂ: ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಸಂಪರ್ಕಿಸಿದ ವಂಚಕರ ಬಲೆಗೆ ಬಿದ್ದ ಆಂಧ್ರಪ್ರದೇಶದ ಖಾಸಗಿ ಕಂಪನಿಯ ನಿವೃತ್ತ ಅಧಿಕಾರಿ ಒಂದೇ ಗಂಟೆನಲ್ಲಿ 85 ಲಕ್ಷ ರು. ಕಳೆದುಕೊಂಡಿದ್ದಾರೆ! ಜರ್ಮನಿ ದೇಶದ ಔಷಧ ಕಂಪನಿಯಲ್ಲಿ ಸ್ವಯಂ ನಿವೃತ್ತಿ ಪಡೆದಿದ್ದ 57 ವರ್ಷದ ಅಸೋಸಿಯೇಟ್ ಜನರಲ್ ಮ್ಯಾನೇಜರ್ ವಂಚನೆಗೆ ಒಳಗಾದವರು. ಅಧಿಕಾರಿ ನಿವೃತ್ತಿ ನಂತರ ಅವರ ಖಾತೆಗೆ ಜಮಾ ಆದ ನಿವೃತ್ತಿ ಮೊತ್ತ ಸೇರಿದಂತೆ ಅವರ ಖಾತೆಯ ವಿವರಗಳೆಲ್ಲವೂ ನಕಲಿ ಸಿಬಿಐ ಗ್ಯಾಂಗ್‌ಗೆ ತಿಳಿದಿದೆ. ವಿಶಾಖಪಟ್ಟಣಂನಲ್ಲಿರುವ ಬ್ಯಾಂಕ್ ಶಾಖೆಯ ಕೆಲವರು ಇದರಲ್ಲಿ ಭಾಗಿಯಾಗಿರುವ ಶಂಕೆ ಇದೆ ಎಂದು ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿರುವ ವಿಶಾಖಪಟ್ಟಣಂ ಕ್ರೈಂ ಬ್ರಾಂಚ್ ಅಧಿಕಾರಿಗಳು ತಿಳಿಸಿದ್ದಾರೆ. ರಾಣಾ ಗಾರ್ಮೆಂಟ್ಸ್ ಹೆಸರಿನ ಕಂಪೆನಿಗೆ ಎಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ಹಣ ವರ್ಗಾವಣೆ ಆಗಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಬಳಿಕ 'ರಾಣಾ ಗಾರ್ಮೆಂಟ್ಸ್'ನ ಎಚ್‌ಡಿಎಫ್‌ಸಿ ಬ್ಯಾಂಕ್ ಖಾತೆಯಿಂದ ದೇಶಾದ್ಯಂತದ 105 ಖಾತೆಗಳಿಗೆ 85 ಲಕ್ಷ ರು. ಹಂಚಿಕೆಯಾಗಿದೆ. ಈ ಕುರಿತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಉತ್ತಮ್ ನಗರ ಶಾಖೆ ವಿರುದ್ಧವೂ ವಿಶಾಖಪಟ್ಟಣಂ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಪ್ರಬಲ ಪ್ರತಿಪಕ್ಷ ಆರಿಸಿದ ಜನತೆ: ರಜನಿ

ಚೆನ್ನೈ: ಇತ್ತೀಚೆಗೆ ಮುಕ್ತಾಯ ಕಂಡ ಲೋಕಸಭೆ ಚುನಾವಣೆಯಲ್ಲಿ ದೇಶದ ಜನತೆ ಪ್ರಬಲ ಪ್ರತಿಪಕ್ಷ



ಇರಬೇಕು ಎಂಬುದನ್ನು ತೋರಿ ಸಿಕೊಟ್ಟಿದ್ದಾರೆ. ಹಾಗಾ ಗಿಯೇ ಪ್ರತಿಪಕ್ಷಗಳಿಗೂ ಅವಕಾಶ ಮಾಡಿಕೊಟ್ಟಿದ್ದಾರೆ. ಇದು ಆರೋಗ್ಯಕರ ಪ್ರಜಾಪ್ರಭುತ್ವಕ್ಕೆ ಕಾರಣವಾ ಗುತ್ತದೆ ಎಂದು ಭಾರತೀಯ ಚಿತ್ರರಂಗದ ಸೂಪರ್ ಸ್ಟಾರ್ ನಟ ರಜನಿಕಾಂತ್ ವಿಶ್ಲೇಷಿಸಿದ್ದಾರೆ.

'ಪ್ರಧಾನಿಯಾಗಿ 3ನೇ ಬಾರಿ ನರೇಂದ್ರ ಮೋದಿ ಅವರು ಪ್ರಮಾಣವಚನ ಸ್ವೀಕರಿಸುತ್ತಿರುವುದು ಅತ್ಯಂತ ಐತಿಹಾಸಿಕ ಕಾರ್ಯಕ್ರಮ. ಹ್ಯಾಟ್ರಿಕ್ ಸಾಧಿ ಸುತ್ತಿರುವ ಪ್ರಧಾನಿ ಮೋದಿ ಅವರನ್ನು ನಾನು ಅಭಿ ನಂದಿಸುತ್ತೇನೆ. ನಾನು ಪ್ರಮಾಣ ವಚನ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದೇನೆ' ಎಂದು ದೆಹಲಿಗೆ ತೆರಳುವ ವೇಳೆ ಚೆನ್ನೈನಲ್ಲಿ ಮಾಧ್ಯಮದವರಿಗೆ ರಜನಿಕಾಂತ್ ಪ್ರತಿಕ್ರಿಯೆ ನೀಡಿದ್ದಾರೆ. ದೆಹಲಿಗೆ ತೆರಳುವುದಕ್ಕೂ ಮುನ್ನ ಭಾನುವಾರ ಬೆಳಗ್ಗೆ ಚೆನ್ನೈ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜತೆ ಮಾತನಾಡಿದರು. ಆಂಧ್ರಪ್ರದೇಶ ಮುಖ್ಯಮಂತ್ರಿಯಾಗಿ ಚಂದ್ರಬಾಬು ನಾಯ್ಡು ಅವರು ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೂ ನನಗೆ ಆಹ್ವಾನ ಬಂದಿದೆ. ಅಲ್ಲಿಗೆ ಹೋಗುವ ಬಗ್ಗೆ ನಂತರ ನಿಮಗೆ ತಿಳಿಸುತ್ತೇನೆ ಎಂದು ರಜನಿಕಾಂತ್ ಹೇಳಿದರು.

ಕಂಗನಾಗೆ ಹೃತಿಕ್ ಬೆಂಬಲ

ಮುಂಬೈ: ಸಿಐಎಸ್‌ಎಫ್ ಮಹಿಳಾ ಕಾನ್‌ಸ್ಟೇಬಲ್ ಚಂಡೀಗಢ ವಿಮಾನ ನಿಲ್ದಾಣದಲ್ಲಿ ಬಾಲಿವುಡ್ ನಟಿ, ನೂತನ ಸಂಸದೆ ಕಂಗನಾ ಅವರ ಕೆನ್ನೆಗೆ ಬಾರಿಸಿದ ಪ್ರಕರಣದಲ್ಲಿ ಬಾಲಿವುಡ್ ನಟ ಹೃತಿಕ್ ರೋಷನ್, ತಡವಾಗಿಯಾದರೂ ಕಂಗನಾ ಬೆನ್ನಿಗೆ ನಿಂತಿದ್ದಾರೆ. ಹೃತಿಕ್ ರೋಷನ್-ಕಂಗನಾ ರಣಾವತ್ ಹಲವು ಸಿನಿಮಾಗಳಲ್ಲಿ ಜತೆಯಾಗಿ ನಟಿಸಿ, ಒಂದು ಕಾಲದಲ್ಲಿ ಪ್ರೇಮಿಗಳಾಗಿದ್ದವರು, ನಂತರದಲ್ಲಿ ವೈರಿಗಳಾಗಿ ಪರಸ್ಪರ ಕೆಸರೆರಾಚಾಟದಲ್ಲಿ ತೊಡಗಿದ್ದವರು. ಆದರೆ, ಈಗಿನ ಪರಿಸ್ಥಿತಿಯಲ್ಲಿ ಇಡೀ ಬಾಲಿವುಡ್ ಕಂಗನಾ ಪರ ನಿಲ್ಲದೇ ಇದ್ದಾಗ, ಹೃತಿಕ್ ರೋಷನ್ ಪ್ರತಿಕ್ರಿಯಿಸಿದ್ದಾರೆ. ಹೃತಿಕ್ ರೋಷನ್ ಮಾತ್ರವಲ್ಲದೇ ಅಲಿಯಾ ಭಟ್, ಸೋನಾಕ್ಷಿ ಸಿನ್ಹಾ, ಜೋಯಾ ಅಖ್ತರ್, ಸೋನಿ ರಜ್ದಾನ್, ಅರ್ಜುನ್ ಕಪೂರ್, ಪ್ರಜಕ್ತಾ ಕೋಲಿ ಸೇರಿದಂತೆ ಅನೇಕ ಬಾಲಿವುಡ್ ನಟ-ನಟಿಯರು ಕಂಗನಾ ಬೆಂಬಲಿಸಿ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿದ್ದಾರೆ.

---

1 ರನ್‌ವೇನಲ್ಲಿ 2 ವಿಮಾನ; ಕ್ಷಣದಲ್ಲಿ ತಪ್ಪಿದ ದುರಂತ

ಮುಂಬೈ: 1 ವಿಮಾನ ಭೂಸ್ಪರ್ಶ- 1 ಟೇಕಾಫ್

ಮುಂಬೈ: ಮುಂಬೈ ವಿಮಾನ ನಿಲ್ದಾಣದಲ್ಲಿ ನಿಯಂತ್ರಣ ಕೇಂದ್ರದವರ ನಿರ್ಲಕ್ಷ್ಯದ ಪರಿಣಾಮ ಎರಡು ವಿಮಾನಗಳು ಡಿಕ್ಕಿಯಾಗುವುದು ಸ್ವಲ್ಪದರಲ್ಲಿ

ತಪ್ಪಿದೆ. ಭಾನುವಾರ ಕೂದಲೆಳೆ ಅಂತರದಲ್ಲಿ ಭಾರಿ ಅನಾಹುತ ತಪ್ಪಿದೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಒಂದೇ ರನ್‌ವೇನಲ್ಲಿ ಒಂದು ವಿಮಾನದ ಟೇಕಾಫ್‌ಗೆ, ಅದರ ಬೆನ್ನಲ್ಲೇ ಮತ್ತೊಂದು ವಿಮಾನದ ಲ್ಯಾಂಡಿಂಗ್‌ಗೆ ಅವಕಾಶ ನೀಡಲಾಗಿದೆ. ಕೆಲವೇ ಕ್ಷಣಗಳ ಅಂತರದಲ್ಲಿ ಎರಡೂ ವಿಮಾನಗಳು ಡಿಕ್ಕಿಯಾಗುವುದು ತಪ್ಪಿದೆ.

ಏರ್ ಇಂಡಿಯದ ಜೆಟ್ ವಿಮಾನ ಟೇಕಾಫ್ ಆಗುತ್ತಿದ್ದ ರನ್ ವೇ ಮೇಲೆಯೇ ಇಂಡಿಗೋ ವಿಮಾನ ಲ್ಯಾಂಡಿಂಗ್ ಮಾಡಿದೆ. ಎರಡೂ ವಿಮಾನಗಳಲ್ಲಿ ನೂರಾರು ಪ್ರಯಾಣಿಕರಿದ್ದರು. ಕೆಲವೇ ಸೆಕೆಂಡ್ ಗಳ ಅಂತರವಿದ್ದ ಕಾರಣ ಉಭಯ ವಿಮಾನಗಳಲ್ಲಿನ ಪ್ರಯಾಣಿಕರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಈ ಸಂದರ್ಭದ ವಿಡಿಯೊ ವೈರಲ್ ಆಗಿದೆ. ಈ ಲೋಪವನ್ನು ಗಂಭೀರವಾಗಿ ಪರಿಗಣಿಸಿರುವ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ(ಡಿಜಿಸಿಎ) ಪ್ರಕರಣದ ಕುರಿತು ತನಿಖೆಗೆ ಆದೇಶಿಸಿದೆ. ಈ ವೇಳೆ ಕರ್ತವ್ಯದಲ್ಲಿದ್ದ ಏರ್ ಟ್ರಾಫಿಕ್ ಕಂಟ್ರೋಲ್‌ನ ಮುಖ್ಯ ಅಧಿಕಾರಿಯನ್ನು ಪದಚ್ಯುತಗೊಳಿಸಲಾಗಿದೆ.

ಆಸ್ಟ್ರೇಲಿಯದಿಂದ ಭಾರತಕ್ಕೆ ಬಂದ ಮಗುವಿಗೆ ಹಕ್ಕಿ ಜ್ವರ!

ಕೋಲ್ಕತ್ತ: ಆಸ್ಟ್ರೇಲಿಯದಿಂದ ಭಾರತಕ್ಕೆ ಶುಕ್ರವಾರ ಆಗಮಿಸಿರುವ ಎರಡೂವರೆ ವರ್ಷದ ಹೆಣ್ಣುಮಗುವಿನಲ್ಲಿ ಹಕ್ಕಿ ಜ್ವರ (ಎಚ್5ಎನ್1) ಕಾಣಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಆಸ್ಟ್ರೇಲಿಯದಲ್ಲಿ ತೀವ್ರ ನಿಗಾ ಘಟಕ ಚಿಕಿತ್ಸೆ ಅಗತ್ಯವಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಸಿದೆ.

ಏವಿಯನ್ ಇನ್‌ಫ್ಲುಯೆಂಜಾ ವೈರಸ್‌ನಿಂದ ಮಾನವನಲ್ಲಿ ಉಂಟಾದ ಮೊದಲ ಸೋಂಕು ಇದಾಗಿದೆ. ಸಾರ್ವಜನಿಕರಲ್ಲಿ ಆತಂಕ ಮನೆ ಮಾಡಿದೆ. ಪಕ್ಷಿಗಳಿಂದ ರೂಪುಗೊಳ್ಳುವ ವೈರಸ್ ಮಾನವರಿಗೆ ತರುವ ಅಪಾಯಗಳು ಕಡಿಮೆ. ಹಾಗಾಗಿ ಜನರು ಆತಂಕಕ್ಕೆ ಒಳಗಾಗಬೇಕಾಗಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಅಭಯ ನೀಡಿದೆ.

ಫೆ.12ರಿಂದ 29ರವರೆಗೆ ಕೋಲ್ಕತ್ತದಲ್ಲಿ ಮಗು ಪ್ರಯಾಣಿಸಿತ್ತು. ಈ ವೇಳೆ ಯಾವುದೇ ಆರೋಗ್ಯ ಸಮಸ್ಯೆ ಕಾಣಿಸಿರಲಿಲ್ಲ. ಮಾ.1ರಂದು ಆಸ್ಟ್ರೇಲಿಯಕ್ಕೆ ತೆರಳಿದ ಮರುದಿನವೇ ಅಲ್ಲಿನ ಆಗ್ನೇಯ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಯಿತು. ಮಗುವಿನ ಆರೋಗ್ಯ ಹದಗೆಡುತ್ತಿದ್ದ ಕಾರಣ ಮಾ.4ರಿಂದ ಒಂದು ವಾರ ಮೆಲ್ಬೋರ್ನ್ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿತ್ತು. 2 ವಾರಗಳ ಪೂರ್ಣ ಚಿಕಿತ್ಸೆ ಬಳಿಕ ಡಿಸ್ಚಾರ್ಜ್ ಮಾಡಲಾಗಿತ್ತು. ಈ ವೇಳೆ ಮಗುವಿಗೆ ಎಚ್5ಎನ್1 ಪರೀಕ್ಷೆ ನಡೆಸಲಾಗಿತ್ತು.

ಏಪ್ರಿಲ್‌ನಲ್ಲಿ ಮಗುವಿನ ಮಾದರಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಈಗ ಪರೀಕ್ಷಾ ವರದಿ ಪಾಸಿಟಿವ್ ಬಂದಿದೆ. ಈ ಹಿನ್ನೆಲೆಯಲ್ಲಿ ಆಸ್ಟ್ರೇಲಿಯ ಮತ್ತು ಭಾರತದಲ್ಲಿರುವ ಮಗುವಿನ ಕುಟುಂಬದವರಿಗೂ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ ಯಾರಿಗೂ ಸೋಂಕು ದೃಢಪಟ್ಟಿಲ್ಲ ಎಂದು ವೈದ್ಯರು ಹೇಳಿದ್ದಾರೆ.

'ನೀಟ್' ಆಕಾಂಕ್ಷಿಗಳಿಗೆ ರಾಹುಲ್ ಗಾಂಧಿ ಭರವಸೆ

ಸಂಸತ್ತಲ್ಲಿ ನಿಮ್ಮ ಧ್ವನಿಯಾಗುವೆ

ದೆಹಲಿ: 'ಸಂಸತ್ತಿನಲ್ಲಿ ನಿಮ್ಮ ಧ್ವನಿಯಾಗುವೆ' ಎಂದು ವೈದ್ಯಕೀಯ ಶಿಕ್ಷಣ ಪ್ರವೇಶದ 'ನೀಟ್' ಪರೀಕ್ಷಾ ವಿವಾದ ಸಂಬಂಧ ಗೊಂದಲಕ್ಕೆ ಸಿಲುಕಿರುವ ವಿದ್ಯಾರ್ಥಿಗಳಿಗೆ ಕಾಂಗ್ರೆಸ್‌ನ ವಿಜೇತ ಸಂಸದ

ಹಾಗೂ ನಿಯೋಜಿತ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಧೈರ್ಯ ತುಂಬಿದ್ದಾರೆ.

ನೀಟ್ ಅಂಡರ್ ಗ್ರ್ಯಾಜುಯೇಟ್ (ಯುಜಿ) ಶಿಕ್ಷಣದ ಪ್ರವೇಶ ಪರೀಕ್ಷೆಯಲ್ಲಿ ಫಲಿತಾಂಶದಲ್ಲಿ ಅಕ್ರಮದ ವಾಸನೆ ಇರುವುದರಿಂದ 2500ಕ್ಕೂ ಅಧಿಕ ವಿದ್ಯಾರ್ಥಿಗಳ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನಕ್ಕೆ ಸಮಿತಿ ರಚನೆಯಾಗಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಚಿಂತಿತರಾಗಿದ್ದಾರೆ.

ಮೋದಿ ಅವರು 3ನೇ ಅವಧಿಗೆ ಅಧಿಕಾರ ಸ್ವೀಕರಿಸುವ ಮುನ್ನವೇ 'ನೀಟ್' ಪರೀಕ್ಷೆಯಲ್ಲಿ ಅವ್ಯವಹಾರಗಳಾಗಿವೆ. ಅದು 24 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಹತಾಶೆಗೊಳಿಸಿದೆ ಎಂದು 'ಎಕ್ಸ್' ಸಂದೇಶದಲ್ಲಿ ಬರೆದಿರುವ ರಾಹುಲ್ ಗಾಂಧಿ, ನಿಯೋಜಿತ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.ಇದೇ ವೇಳೆ, ಸಂಸತ್ತಿನಲ್ಲಿ ನಿಮ್ಮ ಧ್ವನಿಯಾಗುತ್ತೇನೆ ಮತ್ತು ನಿಮ್ಮ ಭವಿಷ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪ್ರಮುಖವಾಗಿ ಚರ್ಚೆಗೆ ಒಳಪಡುವಂತೆ ಮಾಡುತ್ತೇನೆ ಎಂದು ರಾಹುಲ್ ನೀಟ್ ವಿದ್ಯಾರ್ಥಿಗಳಿಗೆ ಭರವಸೆ ನೀಡಿದ್ದಾರೆ.

ಶಿಕ್ಷಣ ಮಾಫಿಯಾ ಮತ್ತು ಸರಕಾರಿ ಯಂತ್ರ ಶಾಮೀಲಾಗಿ ನಡೆಸುತ್ತಿರುವ ಈ ಪ್ರಶ್ನೆಪತ್ರಿಕೆ ಸೋರಿಕೆ ಉದ್ಯಮವನ್ನು ಎದುರಿಸಲು ಕಾಂಗ್ರೆಸ್ ಸದೃಢ ಯೋಜನೆ ಹೊಂದಿತ್ತು. ಅದನ್ನು ತಡೆಯುವ ಸಲುವಾಗಿ ಕಾನೂನು ತರಲು, ಆ ಮೂಲಕ ವಿದ್ಯಾರ್ಥಿಗಳಿಗೆ ಪ್ರಶ್ನೆಪತ್ರಿಕೆ ಸೋರಿಕೆಯಿಂದ ಮುಕ್ತಿ ನೀಡಲು ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ವಾಗ್ದಾನ ಮಾಡಿದ್ದೆವು ಎಂದು ರಾಹುಲ್ ಹೇಳಿದ್ದಾರೆ. ದೇಶದ ಯುವಜನತೆ 'ಇಂಡಿಯ' ಒಕ್ಕೂಟದಲ್ಲಿ ನಂಬಿಕೆ ಇಟ್ಟಿದ್ದಾರೆ. ಅದು ಈಗಿನ ಚುನಾವಣೆಯಲ್ಲಿ ಸ್ಪಷ್ಟವಾಗಿದೆ. ಅವರ ಧ್ವನಿ ಅಡಗಿಸಲು ಕಾಂಗ್ರೆಸ್ ಅವಕಾಶ ನೀಡುವುದಿಲ್ಲ ಎಂದೂ ರಾಹುಲ್ ಸಂದೇಶದಲ್ಲಿ ಬರೆದಿದ್ದಾರೆ.

ಇಂಡೋನೇಷ್ಯಾದ 45 ವರ್ಷದ ಮಹಿಳೆ

ಕಾಣೆಯಾಗಿದ್ದ ಮಹಿಳೆ ಹೆಬ್ಬಾವು ಉದರದಲ್ಲಿ!

ಜಕಾರ್ತ: ಇಂಡೋನೇಷ್ಯಾದ ಮಕಾರ್ಸ್‌ನಲ್ಲಿ 3 ದಿನಗಳ ಹಿಂದೆ ನಾಪತ್ತೆಯಾಗಿದ್ದ 45 ಮಹಿಳೆ, 3 ಮಕ್ಕಳ ತಾಯಿ 17 ಅಡಿ ಉದ್ದದ ಬೃಹತ್ ಹೆಬ್ಬಾವಿನ ಹೊಟ್ಟೆಯೊಳಗೆ ಪತ್ತೆಯಾಗಿದ್ದಾಳೆ. 45 ವರ್ಷದ ಫರೀದಾ ಮೃತಳು. ಫರೀದಾ

ಮತ್ತು ಪತಿ ದಕ್ಷಿಣ ಸುಲವೆಸಿ ಪ್ರಾಂತ್ಯದ ಕಲೆಂಪಂಗ್ ಗ್ರಾಮದ ನಿವಾಸಿಗಳು. ನಾಲ್ಕು ಮಕ್ಕಳ ತಾಯಿ 45 ವರ್ಷದ ಫರೀದಾ ಗುರುವಾರ ರಾತ್ರಿ ನಾಪತ್ತೆಯಾಗಿದ್ದಳು. ರೆಟಿಕ್ಯುಲೇಟೆಡ್ ಪೈಥಾನ್(ಬೃಹತ್ ಹೆಬ್ಬಾವು) ಉದರದೊಳಗೆ ಆಕೆಯ ಶವವನ್ನು ಪತ್ತೆ ಮಾಡಿ ದ್ದಾರೆ. ಪತಿ ಗ್ರಾಮದಲ್ಲೆಲ್ಲಾ ಹುಡುಕಾಡಿದರೂ ಪತ್ನಿ ಫರೀದಾ ಪತ್ತೆಯಾಗಿರಲಿಲ್ಲ. ಗ್ರಾಮದ ಕಾಲುವೆಯಲ್ಲಿ ಭಾರಿ ಗಾತ್ರದ ಹೆಬ್ಬಾವು ಕಾಣಿಸಿತು. ಅದರ ಹೊಟ್ಟೆ ಮನುಷ್ಯಾಕಾರದಲ್ಲಿ ಊದಿಕೊಂಡಿತ್ತು. ಗಮನಿಸಿದ ಗ್ರಾಮಸ್ಥರು ಅನುಮಾನಗೊಂಡು ಫರೀದಾ ಪತಿ ಮತ್ತು ಅಧಿಕಾರಿಗಳಿಗೆ ಮಾಹಿತಿ ನೀಡಿದರು. ತಜ್ಞರೊಂದಿಗೆ ಕಾರ್ಯಾಚರಣೆ ನಡೆಸಿದಾಗ ಹಾವಿನ ಹೊಟ್ಟೆಯಲ್ಲಿ ಮನುಷ್ಯ ದೇಹ ಇರುವುದು ಖಚಿತವಾಯಿತು. ವನ್ಯಪ್ರಾಣಿ ಸಂರಕ್ಷಣಾ ಇಲಾಖೆ ಅನುಮತಿ ಪಡೆದು ಉರಗದ ಉದರವನ್ನು ಬಗೆಯಲಾ ಯಿತು. ಹೆಬ್ಬಾವಿನ ಹೊಟ್ಟೆಯಲ್ಲಿ ಬಟ್ಟೆ ಸಮೇತ ಫರೀದಾ ಮೃತದೇಹ ಪತ್ತೆಯಾಗಿದೆ.

ಅವರದೇ ಪ್ರೀತಿಯ ರಾಮೋಜಿ ಫಿಲಂ ಸಿಟಿಯ ಅಂಗಳದಲ್ಲೇ ಪಂಚಭೂತಗಳಲ್ಲಿ ಲೀನ। ಕುಟುಂಬದವರು, ಬಂಧು-ಮಿತ್ರರ ಹಾಜರಿಯಲ್ಲಿ ಪುತ್ರ ಕಿರಣ್‌ರಿಂದ ಚಿತೆಗೆ ಅಗ್ನಿಸ್ಪರ್ಶ

ಸರಕಾರಿ ಗೌರವಗಳೊಂದಿಗೆ ಆರ್‌ಆರ್‌ಗೆ ವಿದಾಯ

ಹೈದರಾಬಾದ್: ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಮಾಧ್ಯಮ ಲೋಕದ ದಿಗ್ಗಜ, ರಾಮೋಜಿ ಸಮೂಹ ಕಂಪನಿಗಳ ಅಧ್ಯಕ್ಷರಾಗಿದ್ದ ರಾಮೋಜಿರಾವ್(87) ಅವರ ಅಂತ್ಯ ಕ್ರಿಯೆ ಭಾನುವಾರ ಹೈದರಾಬಾದ್ ಹೊರವಲಯದಲ್ಲಿ ಅವರೇ ಕಟ್ಟಿ ಬೆಳೆಸಿದ ರಾಮೋಜಿ ಫಿಲಂ ಸಿಟಿಯ ಅಂಗಳದಲ್ಲಿ ಸಕಲ ವಿಧಿ ವಿಧಾನ ಹಾಗೂ ಸರಕಾರಿ ಗೌರವಗಳೊಂದಿಗೆ ಭಾವಪೂರ್ಣವಾಗಿ ನೆರವೇರಿತು. ಕುಟುಂಬ ಸದಸ್ಯರು, ಬಂಧು-ಮಿತ್ರರು, ಅಪಾರ ಸಂಖ್ಯೆಯ ಅಭಿಮಾನಿಗಳು ಕಂಬನಿ ಮಿಡಿಯುತ್ತಿರುವಾಗ ಅವರ ಪುತ್ರ ಕಿರಣ್ ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

ಆಂಧ್ರಪ್ರದೇಶ ರಾಜ್ಯ ಸರಕಾರ ಜೂ.9 ಮತ್ತು 10 ರಂದು ರಾಜ್ಯಾದ್ಯಂತ ಶೋಕಾಚರಣೆ ಘೋಷಿಸಿದೆ. ಈ ಸಂದರ್ಭ ಸರಕಾರಿ ಕಟ್ಟಡಗಳಲ್ಲಿನ ರಾಷ್ಟ್ರಧ್ವಜವನ್ನು ಅರ್ಧ ಮಟ್ಟಕ್ಕೆ ಹಾರಿಸಲಾಗುತ್ತದೆ. ಅಧಿಕೃತ ಮನರಂಜನಾ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆ ಎಂದು ಮಾಹಿತಿ ನೀಡಲಾಗಿದೆ.

ಹೆಗಲು ಕೊಟ್ಟ ನಾಯ್ಡು

ಆಂಧ್ರಪ್ರದೇಶದ ನಿಯೋಜಿತ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ರಾಮೋಜಿ ರಾವ್ ಅವರ ಅಂತ್ಯಕ್ರಿಯೆ ವೇಳೆ ಭಾಗವಹಿಸಿದ್ದರು. ಅಂತ್ಯಕ್ರಿಯೆ ಸ್ಥಳದ ಸಮೀಪ ರಾಮೋಜಿ ರಾವ್ ಅವರು ಪಾರ್ಥಿವ ಶರೀರಕ್ಕೆ ಹೆಗಲುಕೊಟ್ಟರು. ಆ ಮೂಲಕ ಬಹುಕಾಲದ ಬಾಂಧವ್ಯಕ್ಕೆ ಗೌರವ ಸಲ್ಲಿಸಿದರು.

ಗಣ್ಯರ ಸಂತಾಪ

ದೆಹಲಿ: ಮಾಧ್ಯಮ ಲೋಕದ ದಿಗ್ಗಜ ರಾಮೋಜಿ ಅವರ ನಿಧನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ ಹಲವು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ. ರಾಮೋಜಿ ರಾವ್ ಅವರ ಅಗಲುವಿಕೆಯಿಂದ ತೀವ್ರ ದುಃಖವಾಗಿದೆ. ಕಾಲಕ್ಕಿಂತಲೂ ಮುಂದೆ ಇದ್ದ ದಾರ್ಶನಿಕ ಅವರು. ರಾಮೋಜಿ ಫಿಲ್ಮ್ ಸಿಟಿ ಅವರ ತೇಜಸ್ಸಿಗೆ ಮತ್ತು ಸಿನಿಮಾ ಮೇಲಿನ ಉತ್ಸಾಹಕ್ಕೆ ಸಾಕ್ಷಿ. ಅವರ ಪರಂಪರೆ ನಮಗೆಲ್ಲರಿಗೂ ಸ್ಫೂರ್ತಿ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ತೆಲುಗು ಚಿತ್ರನಟ ಮಹೇಶ್ ಬಾಬು ತಿಳಿಸಿದ್ದಾರೆ. ಲೆಜೆಂಡ್ ರಾಮೋಜಿ ರಾವ್ ಅವರು ಇನ್ನಿಲ್ಲ ಎಂದು ತಿಳಿದು ತುಂಬಾ ದುಃಖವಾಗಿದೆ. ಹೊಸಬರಿಗೆ ಅವಕಾಶ ನೀಡುವ ಅವರ ನಂಬಿಕೆಗೆ ಧನ್ಯವಾದ. ಯಾರೂ ಮಾಡದ ಕೆಲಸವನ್ನು ಮಾಡಲು ಅವರು ಧೈರ್ಯ ಮಾಡಿದರು. ಅವರ ಪರಂಪರೆ ಶಾಶ್ವತ ಎಂದು ಭಾವಿಸುವೆ ಎಂದು ಬಾಲಿವುಡ್ ನಟ ರಿತೇಶ್ ದೇಶ್‌ಮುಖ್ ಹೇಳಿದ್ದಾರೆ.

ಭಾವನಾ ವೀರವ್ವ

ಪುಟ 11

ವಿಶ್ವವಾಣಿ ಆರಾಮ

@vishwavaninews

ಬೆಂಗಳೂರು ಸೋಮವಾರ 10|06|2024

ಅನುದಿನವೂ ವಿರಾಮಕ್ಕೆ ಒಂದು ನೆಪ

ಕೋಟಿಯಲ್ಲಿ ನವ ಪ್ರತಿಭೆಗಳ ದಂಡು

ಪುಟ 11

ಬಿ ಪಾಸಿಟಿವ್

ಬದುಕು ಬಂದಂತೆ ಸ್ವೀಕರಿಸು!

ಬದುಕಿನ ಪ್ರತಿ ಹಂತದಲ್ಲು ನೂರಾರು ತಿರುವು. ಕೆಲವೊಂದು ಊಹಿಸಿದ್ದು ಮತ್ತೆ ಕೆಲವೊಂದು ಕಲ್ಪನೆಗೂ ಮೀರಿದ್ದು. ಕೆಲವೊಂದು ಸಲ ಏನು ಆಗ್ಬೇಕು ಅಂದುಕೊಂಡು ಇನ್ನೇನು ಆಗಿರುತ್ತೇವೆ. ಎಲ್ಲ ಸರಿ ಇದೆ ಅಂದುಕೊಂಡಾಗಲೇ, ಯಾವುದು ಸರಿ ಇಲ್ಲ ಅನ್ನಿಸಲು ಶುರುವಾಗುವುದು. ಜೀವನದಲ್ಲಿ ಸಿಗೋದೆ ಇಲ್ಲ ಅನ್ಕೊಂಡಿದ್ದು ಸಿಕ್ಕಾಗ ಆಗೋ ಖುಷಿ, ಇನ್ನೇನು ಸಿಕ್ಕೆ ಬಿಡ್ತು ಅಂದಾಗ ಆಗೋ ಕಳವಳ, ಇಷ್ಟ ಪಟ್ಟಿದ್ದು ಕಣ್ಮುಂದೆ ಇದೆ ಆದ್ರೆ ಅನುಭವಿಸೋಕ್ಕೆ ಆಗದೆ ಇದ್ದಾಗ ಆಗೋ ನೋವು, ಅಬ್ಬಬ್ಬ ಇರೋದು ಒಂದು ಜೀವನ ಅದ್ರಲ್ಲಿ ಅದೆಷ್ಟು ವಿಚಿತ್ರ ಅನುಭವಗಳು, ಭಾವನೆಗಳು.

ಬದುಕು ಅನ್ನುವುದು ಖಾಲಿ ಹಾಳೆ ತರ. ಮನಸಿಗೆ ಅನ್ನಿಸಿದನ್ನು ಮಾಡು. ಇಷ್ಟಬಂದಂತೆ ಬದುಕು. ಏನೇ ಆದರೂ ಎದುರಿಸು, ಮುನ್ನುಗ್ಗು. ಜೀವನದಲ್ಲಿ ಇವತ್ತು ಇದ್ದವರು ನಾಳೆ ಇರಲ್ಲ ಎಂಬುದು ನಿಜ ಆಗಿರುವಾಗ, ಅಷ್ಟು ಕಷ್ಟ ಯಾಕೆ. ಯಾರಿಗೆ ಗೊತ್ತಿತ್ತು ತನ್ನ ಹೊಸ ಬೈಕ್ ಹಿಡಿದು ಕಾಲೇಜಿಂದ ಹೊರಟ ಗೆಳೆಯನನ್ನು ಮತ್ತೆ ನೋಡೋಕೆ ಆಗಲ್ಲ ಅಂತ! ವಿಚಿತ್ರ ಬದುಕಿದು. ವರ್ಷಕ್ಕೊಂದು ಸಲ ಸೂರ್ಯನೇ ಪಥ ಬದಲಾಯಿಸುವಾಗ ನಮ್ಮ ಜೀವನದ ಪಥ ಬದಲಾಗುವುದರಲ್ಲಿ ಆಶ್ಚರ್ಯವೇನಿದೆ. ಏನೇ ಆಗಲಿ, ಏನೇ ಹೋಗಲಿ. ಬದುಕು ಬದುಕಿನ ಹಾಗೆ ಸಾಗಲಿ. ನಾಲ್ಕು ದಿನದ ಜೀವನವನ್ನು ನಗು ನಗುತ್ತಾ ಜೀವಿಸುವುದು ಹೇಳುವಷ್ಟು ಸುಲಭವೆನಿಸದೆ ಇದ್ದರೂ, ಬದುಕಲು ಸಾಧ್ಯನೆ ಇಲ್ಲ ಎನ್ನುವಷ್ಟರ ಮಟ್ಟಿಗೆ ಕಷ್ಟವೇನಲ್ಲ. ಕಷ್ಟ ಸುಖ ಎರಡನ್ನು ಸಮನಾಗಿ ಸ್ವೀಕರಿಸುವ ಮನಸ್ಥಿತಿ ನಮ್ಮದಾಗಬೇಕು. ಏನೇ ಕೆಟ್ಟದಾದರೂ, ಎದುರಿಸಿ ಮುನ್ನುಗ್ಗಿ ಬದುಕು ಎಸೆಯುವ ಸವಾಲಿಗೆ ಉತ್ತರಿಸುವವರಂತಾಗಬೇಕು. ಒಳ್ಳೆದೋ, ಕೆಟ್ಟದೋ ಬದುಕು ಬಂದಂತೆ ಸ್ವೀಕರಿಸು!

● ಕೃತಿಕಾ ಸದಾಶಿವ

ಲವ್‌ಎವೆರಿ ಬಾಡಿ

ಪಿತ್ತಜನಕಾಂಗ ನಮ್ಮ ದೇಹದ ಎರಡನೆಯ ಅತೀ ದೊಡ್ಡ ಅಂಗವಾಗಿದೆ. ಇದು ಪ್ರಮುಖ ಕೆಲಸ ನಿರ್ವಹಿಸುವಂತಹ ದೊಡ್ಡ ರಾಸಾಯನಿಕ ಕಾರ್ಖಾನೆಯಿದ್ದಂತೆ. ಕೊಲೆಸ್ಟ್ರಾಲ್ ಹಾಗೂ ಕೊಬ್ಬುಗಳ ಚಯಾ

ಪಚಯ, ಸಂಭವನೀಯ ಹಾನಿಕಾರಕ ಅಂಶಗಳ ನಂಜು ನಿರ್ಮೂಲನೆ ಮಾಡುವುದು, ಸೇವಿಸಿದ ಔಷಧಗಳ ಸಂಸ್ಕರಣೆ ಹಾಗೂ ವಿಸರ್ಜನೆ ಮತ್ತು ವಿವಿಧ ಹಾರ್ಮೋನುಗಳನ್ನು ನಿರ್ಬಂಧಿಸುವಂತಹ ಚಟುವಟಿಕೆಗಳ ಜವಾಬ್ದಾರಿಯನ್ನು ಪಿತ್ತಜನಕಾಂಗ ನಿರ್ವಹಿಸುತ್ತದೆ. ಜೊತೆಗೆ ಇದು ಶಕ್ತಿಗಾಗಿ ಸಕ್ಕರೆ ಅಂಶವನ್ನು ಸಂಗ್ರಹಿಸಿಟ್ಟುಕೊಳ್ಳುತ್ತದೆ. ಕೆಂಪು ರಕ್ತ ಕಣಗಳ ಉತ್ಪಾದನೆಗಾಗಿ ಕಬ್ಬಿಣಾಂಶ ಹಾಗೂ ಕೆಲವು ಅಗತ್ಯ ವಿಟಮಿನ್‌ಗಳನ್ನೂ ಶೇಖರಿಸುತ್ತದೆ.

● ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, ಮೂರನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಸು ಸ್ವಾಸ್ಥ್ಯ
● ಸುದರ್ಶನ್ ಪ್ರಸಾದ್ ಕೊಪ್ಪ

ಒಂದಲ್ಲಾ, ಎರಡೆರಡು ಗರ್ಭಕೋಶ..!

ಸ್ತ್ರೀ ಪುರುಷಾದಿಯಾದ ಈ ಮನುಷ್ಯ ಲೋಕದಲ್ಲಿ ಗರ್ಭಕೋಶ ಎನ್ನುವುದು ಹೆಣ್ಣಿನ ಅಸ್ಮಿತೆಯನ್ನು ಪ್ರತಿನಿಧಿಸುವ ಪ್ರಮುಖ ಅಂಗ. ಎಲ್ಲರಿಗೂ ತಿಳಿದಿರುವಂತೆ ಹೆಣ್ಣಿಗಿರುವುದು ಒಂದೇ ಒಂದು ಗರ್ಭಕೋಶ. ಮಾನವ ಸಂತಾನದ ನಿಯಂತ್ರಿತ ಬೆಳವಣಿಗೆಗೆ ಅದುವೇ ಪೂರಕ. ಅಕಸ್ಮಾತ್ ಒಂದಿರುವುದು ಎರಡಾದರೆ! ಅದು ದೈಹಿಕ ಅಸಮತೋಲನ.

ಹೆಣ್ಣು ಭ್ರೂಣವೊಂದು ಬೆಳವಣಿಗೆ ಹೊಂದುವಾಗಲೇ ಅಂಡಾಶಯಗಳು ಮತ್ತು ಗರ್ಭಕೋಶದ ಬೆಳವಣಿಗೆ ಆರಂಭವಾಗುತ್ತದೆ. ಅಂಡಾಶಯಗಳಲ್ಲಿ ಅಂಡಾಣುಗಳ ಸಂಖ್ಯೆ ಎಷ್ಟಿರಬೇಕು ಎಂಬುದು ಸಹಾ ಆಗಲೇ ನಿರ್ಧಾರವಾಗುವುದು.. ಮೊದಲು ಅಂಡಾಶಯಗಳು ರೂಪುಗೊಂಡು, ನಂತರ ಪ್ರತೀ ಅಂಡಾಶಯದ ಸಮೀಪದಿಂದ ಮಧ್ಯಭಾಗದ ಕಡೆಗೆ ಒಂದೊಂದು ನಳಿಕೆಗಳು ಬೆಳೆಯಲಾರಂಭಿಸುತ್ತವೆ, ಅವುಗಳಿಗೆ ಮುಲ್ಲೆರಿಯನ್ ನಾಳಗಳು ಎಂದು ಹೆಸರು. ಈ ನಳಿಕೆಗಳು ಪರಸ್ಪರ ಕೂಡಿಕೊಂಡು ಬಲ್ಬ್ ಆಕಾರದಲ್ಲಿ ರೂಪುಗೊಳ್ಳುವುದೇ ಗರ್ಭಕೋಶ. ಬದಲಾಗದೇ ಉಳಿಯುವ ನಳಿಕೆಗಳ ಭಾಗವೇ ಡಿಂಬನಾಳ. ಕೂಡಿಕೊಂಡ ನಳಿಕೆಗಳ ತುದಿಯ ಭಾಗವೇ ಗರ್ಭಕಂಠ. ಈ ರಚನಾ ಪ್ರಕ್ರಿಯೆ ಪೂರ್ಣಗೊಳ್ಳುವುದು ಸರಿಸುಮಾರು ಇಪ್ಪತ್ತೆರಡನೇ ವಾರದ ಹೊತ್ತಿಗೆ. ಒಂದುವೇಳೆ ಈ ಕೂಡುವಿಕೆ ಸಮರ್ಪಕವಾಗಿ ನಡೆಯಲು ವಿಫಲವಾದಾಗ, ಪ್ರತಿ ನಳಿಕೆಯೂ ಒಂದೊಂದು ಬಲೂನಿನ ಆಕಾರದಲ್ಲಿ ರೂಪುಗೊಳ್ಳುತ್ತವೆ, ಅದೇ ಈ ಡಿಡೆಲ್ಫಿಸ್ ಯುಟಿರಸ್. ಜಗತ್ತಿನ ಸ್ತ್ರೀ ಜನಸಂಖ್ಯೆಯಲ್ಲಿ ಕೇವಲ 0.3% ಇರುವ ಅಪರೂಪದ ರಚನೆ ಇದಾಗಿದ್ದು ಕೆಲವರಲ್ಲಿ ಬಂಜೆತನ, ಋತುಚಕ್ರದ ವ್ಯತ್ಯಾಸ ಮುಂತಾದವುಗಳಿಗೆ ಕಾರಣವಾಗಬಲ್ಲದು.

ಈ ಡಿಡೆಲ್ಫಿಸ್‌ನಲ್ಲಿ ಎರಡು ರೀತಿಯ ರಚನೆಗಳಿದ್ದು ಎರಡು ಗರ್ಭಕೋಶ – ಎರಡು ಗರ್ಭಕಂಠ ಇರುವ ರಚನೆಯನ್ನು ಬಿಕೊಲಿಸ್ ಡಿಡೆಲ್ಫಿಸ್ ಅಂತಲೂ ಎರಡು ಗರ್ಭಕೋಶ – ಒಂದು ಗರ್ಭಕಂಠ ಇರುವ ರಚನೆಯನ್ನು ಯುನಿಕೊಲಿಸ್ ಡಿಡೆಲ್ಫಿಸ್ ಅಂತಲೂ ಕರೆಯುತ್ತಾರೆ. ಮುಲ್ಲೆರಿಯನ್ ನಾಳಗಳು ಭಾಗಶಃ ಸೇರಿದಾಗ ಎರಡು ಗರ್ಭಕೋಶಗಳಿಗೆ ಒಂದೇ ಗರ್ಭಕಂಠ ರಚನೆಯಾದರೆ, ಅವು ಸಂಪೂರ್ಣ ಬೇರೆ ಬೇರೆಯಾಗಿ ಬೆಳವಣಿಗೆ ಹೊಂದಿದಾಗ ಎರಡು ಗರ್ಭಕಂಠಗಳು ಹೊರಗೆ ತೆರೆದುಕೊಳ್ಳುತ್ತವೆ. ಇದಲ್ಲದೇ ಕೆಲವರಲ್ಲಿ ಎರಡು ಗರ್ಭಕೋಶ ಎರಡು ಗರ್ಭಕಂಠಗಳೊಂದಿಗೆ ತೆಳುವಾದ ಪೊರೆಯೊಂದು ಯೋನಿಯ ಉದ್ದಕ್ಕೂ ಬೆಳೆದು ಎರಡು ಯೋನಿಗಳಾಗಿ ರೂಪುಗೊಳ್ಳುವ ಸಾಧ್ಯತೆಯೂ ಇರುತ್ತದೆ.

ಡಿಡೆಲ್ಫಿಸ್ ಒಂದು ಜನ್ಮಜಾತ ಲಕ್ಷಣವಾಗಿದ್ದು ಇದಕ್ಕೆ ಯಾವುದೇ ನಿರ್ದಿಷ್ಟವಾದ ಕಾರಣವನ್ನು ಹೇಳಲಾಗುವುದಿಲ್ಲ. ಸಧ್ಯಕ್ಕೆ ಜೀನ್ ಗಳ ವ್ಯತ್ಯಾಸದಿಂದ ಈ ರೀತಿಯ ಬೆಳವಣಿಗೆ ಉಂಟಾಗುತ್ತದೆ ಎಂದಷ್ಟೇ ಹೇಳಬಹುದು. ಇದು ಸಹಾ ಗರ್ಭಕೋಶದ ಇತರ ಅಸಮತೋಲನಗಳಂತೆ ಬಾಲ್ಯಾವಸ್ಥೆಯಲ್ಲಿ ಕಂಡುಬರದ ಹಿನ್ನೆಲೆಯಲ್ಲಿ ಋತುಚಕ್ರ ಆರಂಭವಾದ ನಂತರ ಗುರುತಿಸಿ ಮುಂದಿನ ನಿರ್ಧಾರ ಮಾಡಬೇಕಾಗುತ್ತದೆ. ಋತುಮತಿಯಾಗುವ ಸಾಮರ್ಥ್ಯ ಹೊಂದಿದವರಲ್ಲಿ...

- **ಅನಿಯಮಿತ ಋತುಚಕ್ರ**
- **ಋತುಚಕ್ರದ ಅವಧಿಯಲ್ಲಿ ಹೊಟ್ಟೆನೋವು, ಅತಿಯಾದ ರಕ್ತಸ್ರಾವ**
- **ಋತುಚಕ್ರದ ಹೊರತಾಗಿ ಆಗಾಗ್ಗೆ ಕಾಣಿಸಿಕೊಳ್ಳುವ ರಕ್ತಸ್ರಾವ**
- **ಹೊಟ್ಟೆಯ ಸೆಳೆತ, ತಲೆನೋವು, ಕಾಲುನೋವು**
- **ಬಂಜೆತನ, ಗರ್ಭಪಾತ**
- **ಮೂತ್ರ ವಿಸರ್ಜನೆಗೆ ಅವಸರ ಅಥವಾ ಅಡಚಣೆ**
- **ಕ್ಲಿಷ್ಟಕರ ದೈಹಿಕ ಸಂಪರ್ಕ, ಮುಂತಾದ ಲಕ್ಷಣಗಳಿಂದಾಗಿ ಇದನ್ನು ಗುರುತಿಸಬಹುದು.**

ಕೆಲವೊಮ್ಮೆ ಲಕ್ಷಣಗಳೇ ಇಲ್ಲದೆ ಎಲ್ಲವೂ ಸಾಮಾನ್ಯವಾಗಿದ್ದು ವೈದ್ಯಕೀಯ ತಪಾಸಣೆಗೆ ಒಳಗಾದಾಗ ಮಾತ್ರವೇ ಡಿಡೆಲ್ಫಿಸ್ ಹೊಂದಿರುವುದು ತಿಳಿಯಬಹುದು. ಈ ರೀತಿಯ ದೈಹಿಕ ರಚನೆ ಹೊಂದಿದ್ದರೂ ಎಲ್ಲರಂತೆ ದಾಂಪತ್ಯ ಜೀವನ ನಡೆಸಿ ಆರೋಗ್ಯವಾಗಿ ಮಗು ಹೊಂದುವುದು ಸಾಧ್ಯ ಎಂಬುದು ಇದರ ವಿಶೇಷ. ಅಂದಮೇಲೆ ಇದಕ್ಕಾಗಿ ಅತಿಯಾದ ಯೋಚನೆ ಬೇಕಿಲ್ಲ, ಅಲ್ಲವೇ? ಕೆಲವರಲ್ಲಿ ಡಿಡೆಲ್ಫಿಸ್‌ನ ಲಕ್ಷಣಗಳ ಜತೆಜತೆಗೆ ಇತರ ತೊಂದರೆಗಳಾದ..

- **ಸಣ್ಣದಾಗಿರುವ ಮೂತ್ರಪಿಂಡಗಳು**
- **ಕಡಿಮೆ ಸಾಮರ್ಥ್ಯದ ಮೂತ್ರಕೋಶ**
- **ಬೆಳವಣಿಗೆ ಹೊಂದದೇ ಇರುವ ಅಂಡಾಶಯ**
- **ಮುಚ್ಚಿದ ಅಥವಾ ಅಸಮರ್ಥ ಡಿಂಬನಾಳ**
- **ಅಸ್ವಾಭಾವಿಕ ಗರ್ಭಕೋಶದ ಒಳಪದರ**
- **ಶಾಶ್ವತವಾಗಿ ಮುಚ್ಚಿದ ಗರ್ಭಕಂಠ**
- **ಶಾಶ್ವತವಾಗಿ ಬಾಯ್ತೆರೆದ ಗರ್ಭಕಂಠ**
- **ಗರ್ಭಕಂಠವೇ ಇಲ್ಲದಿರುವುದು**
- **ಯೋನಿ ಮುಚ್ಚಿಕೊಂಡಿರುವುದು**
- **ಯೋನಿಯಲ್ಲಿ ಮೂತ್ರ ಸೋರುವುದು**

ಇತ್ಯಾದಿ ಯಾವುದಾದರೂ ಒಂದಿಷ್ಟು ನ್ಯೂನ್ಯತೆಗಳು ಕಂಡುಬರುತ್ತವೆ.

ಒಂದು ವೇಳೆ ಯಾವುದೇ ಸ್ತ್ರೀಯರಲ್ಲಿ ಮೇಲೆ ಹೇಳಿದ ಲಕ್ಷಣಗಳು ಕಂಡುಬಂದರೆ ವೈದ್ಯರನ್ನು ಸಂಪರ್ಕಿಸಿ ಪರೀಕ್ಷಿಸಿಕೊಳ್ಳುವುದು ಉತ್ತಮ. ಗರ್ಭಕಂಠದ ಪರೀಕ್ಷೆ, ಪೆಲ್ವಿಕ್ ಭಾಗದ ಅಲ್ಟ್ರಾಸೌಂಡ್, ಎಂಆರ್‌ಐ ಸ್ಕ್ಯಾನಿಂಗ್, ಸೋನೋಹಿಸ್ಟರೋಗ್ರಾಮ್ ಅಥವಾ ಹಿಸ್ಟರೊಸಲ್ಪಿಂಗೋಗ್ರಫಿ ಮಾಡಿಸಿಕೊಳ್ಳುವುದರಿಂದ ಡಿಡೆಲ್ಫಿಸ್ ಮತ್ತು ಅದರ ಜತೆಗೆ ಬೆಸೆದುಕೊಂಡಿರುವ ತೊಂದರೆಗಳನ್ನು ಪತ್ತೆ ಹಚ್ಚಬಹುದು. ಯಾವುದೇ ಅತಿಯಾದ ದೈಹಿಕ ಸಮಸ್ಯೆಗಳು ಕಾಡದೇ ಇದ್ದಲ್ಲಿ ವೈದ್ಯರು ಡಿಡೆಲ್ಫಿಸ್‌ನ ಶಸ್ತ್ರಚಿಕಿತ್ಸೆ ಮಾಡುವ ಸಾಧ್ಯತೆ ಕಡಿಮೆ, ಏಕೆಂದರೆ ಎರಡು ಗರ್ಭಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ಜೋಡಿಸುವುದು ನಿಷ್ಪ್ರಯೋಜಕ. ಜೋಡಿಸುವಿಕೆಯಿಂದ ರೂಪುಗೊಂಡ ಗರ್ಭಕೋಶ ಗರ್ಭ ಧರಿಸಲು ಭಾಗಶಃ ಅಸಮರ್ಥ.

ಶಸ್ತ್ರಚಿಕಿತ್ಸೆಯ ನಂತರ ಅಥವಾ ಎರಡು ಗರ್ಭಕೋಶಗಳು ಇದ್ದಂತೆಯೇ ಗರ್ಭ ಧರಿಸುವ ಸ್ತ್ರೀಯರು ನಿರಂತರ ವೈದ್ಯರ ಸಂಪರ್ಕದಲ್ಲಿ ಇರುವುದು ಉತ್ತಮ. ಇವರಲ್ಲಿ ಎಕ್ಟೋಪಿಕ್ ಪ್ರೆಗ್ನೆನ್ಸಿ, ಗರ್ಭಪಾತ, ಅವಧಿಪೂರ್ವ ಜನನ, ಅಪೌಷ್ಟಿಕ ಶಿಶುವಿನ ಜನನ ಇತ್ಯಾದಿ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ಎಚ್ಚರಿಕೆ ಅಗತ್ಯ. ಪ್ರಸವದ ಸಂದರ್ಭದಲ್ಲಿ ಗರ್ಭಕಂಠ ಅಥವಾ ಯೋನಿ ಹಿಗ್ಗದೇ, ತೊಂದರೆ ಉಂಟಾಗುವ ಸಾಧ್ಯತೆಯೂ ಇದ್ದು ಸಿಸೇರಿಯನ್ ಹೆರಿಗೆಗೆ ಮೊದಲೇ ಸಿದ್ದತೆ ಮಾಡಿಕೊಂಡಿರುವುದು ಒಳ್ಳೆಯದು.

ಒಟ್ಟಿನಲ್ಲಿ ಹೇಳುವುದಾದರೆ ಡಿಡೆಲ್ಫಿಸ್ ಎನ್ನುವುದು ಗರ್ಭಕೋಶದಲ್ಲಿ ಉಂಟಾಗುವ ಅನೇಕ ರಚನಾತ್ಮಕ ಅಸಮತೋಲನಗಳಲ್ಲಿ ಒಂದಾಗಿದ್ದು ದೊಡ್ಡ ಖಾಯಿಲೆಯೇನಲ್ಲ. ಒಂದಿಷ್ಟು ಎಚ್ಚರಿಕೆ, ಕಾಳಜಿ ಇದ್ದಲ್ಲಿ ಈ ಲಕ್ಷಣವಿದ್ದರೂ ಆರೋಗ್ಯಕರ ತಾಯ್ತನ ಸಾಧ್ಯ.

ಪರಿಹಾರ ಏನು?

ಡಿಡೆಲ್ಫಿಸ್ ಹೊಂದಿರುವ ಮಹಿಳೆಯರು ಎಲ್ಲರಂತೆಯೇ ಆರೋಗ್ಯಕರವಾದ ಗರ್ಭವನ್ನು ಧರಿಸಬಹುದಾಗಿದ್ದು ಮೇಲೆ ಹೇಳಿದ ಲಕ್ಷಣಗಳಿಂದ ತೀವ್ರ ತೊಂದರೆ ಅನುಭವಿಸುತ್ತಿದ್ದಲ್ಲಿ ಅಥವಾ ಗರ್ಭ ಧರಿಸಲು ಸಾಧ್ಯವಾಗದೇ ಇದ್ದಲ್ಲಿ ಮಾತ್ರವೇ ಸೂಕ್ತ ಚಿಕಿತ್ಸೆ ನೀಡಬೇಕಾಗುತ್ತದೆ.

ಇರುವ ಎರಡು ಗರ್ಭಕೋಶಗಳ ಪೈಕಿ ಉತ್ತಮವಾದ ಒಂದರಲ್ಲಿ ವೈದ್ಯಕೀಯ ವಿಧಾನದಿಂದ ಗರ್ಭ ಧರಿಸುವಂತೆ ಮಾಡುವುದು ಅಥವಾ ಅಗತ್ಯವಿದ್ದಲ್ಲಿ ಶಸ್ತ್ರಚಿಕಿತ್ಸೆ ನಡೆಸಿ ನಂತರ ಗರ್ಭ ಧರಿಸಲು ಸೂಚಿಸುವುದು ವೈದ್ಯರು ತೆಗೆದುಕೊಳ್ಳಬಹುದಾದ ನಿರ್ಧಾರಗಳು. ಗರ್ಭಕಂಠ ಅಥವಾ ಯೋನಿ ಭಾಗಗಳಲ್ಲಿ ತೊಂದರೆ ಇದ್ದಲ್ಲಿ ಗರ್ಭ ಧರಿಸುವ ಮೊದಲು ಅದನ್ನು ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಬೇಕಾಗುತ್ತದೆ.

ಎರಡು ಗರ್ಭಕೋಶಗಳೊಂದಿಗೆ ತಾಯ್ತನ ಪೂರೈಸಿದ ನಂತರ ಮಹಿಳೆಯೇ ಬಯಸಿದಲ್ಲಿ ಹಿಸ್ಟೆರೆಕ್ಟಮಿ ಮುಖಾಂತರ ಗರ್ಭಕೋಶಗಳನ್ನು ತೆಗೆದು ಮೇಲಿನ ರೋಗಲಕ್ಷಣಗಳಿಗೆ ಶಾಶ್ವತ ಪರಿಹಾರವನ್ನು ನೀಡಲಾಗುತ್ತದೆ.

ದಿಟ್ಟ ಹೆಜ್ಜೆ
● ಸುರೇಂದ್ರ ಪೈ, ಭಟ್ಕಳ

ಫಾರೆಸ್ಟ್ ಮ್ಯಾನ್ ಆಫ್ ಇಂಡಿಯಾ

ಭಾರತದ ಫಾರೆಸ್ಟ್ ಮ್ಯಾನ್ ಎಂದೇ ಖ್ಯಾತಿ ಪಡೆದ ಒಬ್ಬ ಆದಿವಾಸಿ ಬುಡಕಟ್ಟು ಜನಾಂಗದ ಸಾಮಾನ್ಯ ವ್ಯಕ್ತಿಯ ಸ್ಫೂರ್ತಿದಾಯಕ ಕಥೆ ಇಲ್ಲಿದೆ. ಈತನ ವ್ಯಕ್ತಿತ್ವ ಹಾಗೂ ಕಾಡಿನ ಪಯಣ ಹಲವರಿಗೆ ದಾರಿ ದೀಪವೂ ಹೌದು.

ನಾವೆಲ್ಲಾ ಸೂಪರ್‌ಮ್ಯಾನ್ ಬ್ಯಾಟ್ಮ್ಯಾನ್, ಐರನ್ ಮ್ಯಾನ್, ಸ್ಪೈಡರ್ ಮ್ಯಾನ್ ಎಂಬ ಕಾಲ್ಪನಿಕ ಹೀರೋಗಳ ಬಗ್ಗೆ ಕೇಳಿರುತ್ತೇವೆ. ಭಾರತದ ಫಾರೆಸ್ಟ್ ಮ್ಯಾನ್ ಎಂಬ ಬಿರುದು ಪಡೆದ ನಿಜ ಜೀವನದ ಜಾದವ್ ಪಾಯೆಂಗ್ ನಿಮಗೆ ಗೊತ್ತೇ? ಅನಕ್ಷರಸ್ಥರಾಗಿದ್ದ ಇವರು, ಏಕಾಂಗಿಯಾಗಿ 550 ಹೆಕ್ಟೇರ್ ಮರುಭೂಮಿಯನ್ನು ಅರಣ್ಯವನ್ನಾಗಿದ್ದ ಛಲಗಾರ.

ಜಾದವ್ ಪಾಯಂಗ್, ಅಸ್ಸಾಂ ರಾಜ್ಯದ ಜೋರ್ಹಾತ ಜಿಲ್ಲೆಯಲ್ಲಿನ 'ಮೀಸಿಂಗ' ಎಂಬ ಆದಿವಾಸಿ ಬುಡಕಟ್ಟಿನಲ್ಲಿ 1959ರಲ್ಲಿ ಜನಿಸಿದರು. ಅರಣ್ಯದಲ್ಲಿ ಕೂಲಿ ಕೆಲಸ ಮಾಡುತ್ತಾ ಸಾಮಾನ್ಯರಂತೆ ತಮ್ಮಷ್ಟಕ್ಕೆ ತಾವು ಜೀವನ ಸಾಗಿಸುತ್ತಿದ್ದರು. 1965ರಲ್ಲಿ ಬ್ರಹ್ಮಪುತ್ರ ನದಿಯ ಪ್ರವಾಹದಿಂದಾಗಿ ಮಜುಲಿ ಪ್ರದೇಶದ ಸಾವಿರಾರು ಹೆಕ್ಟೇರ್ ಫಲವತ್ತಾದ ಭೂಮಿಯು ಮರುಭೂಮಿಯಾಗಿ ಮಾರ್ಪಾಡಾಗಿತ್ತು. ಆದರೆ 1979ರಲ್ಲಿ ನಡೆದ ಘಟನೆ ಅವರ ಜೀವನವನ್ನೇ ಬದಲಾಯಿಸಿ ಬಿಟ್ಟಿತು. ಇದು ಸಾಮಾನ್ಯ ವ್ಯಕ್ತಿಯನ್ನು ಅಸಾಮಾನ್ಯ ವ್ಯಕ್ತಿಯನ್ನಾಗಿಸಿತು. ಅಂದು ಜಾದವ್ ತಮ್ಮ ಮನೆಯ ಸುತ್ತ ಮರಳಿನ ನೆಲದ ಮೇಲೆ ಸತ್ತು ಬಿದ್ದಿರುವ ಅನೇಕ ಹಾವುಗಳನ್ನು ನೋಡಿದರು. ಉಷ್ಣತೆ ತಾಳಲಾರದೆ ಸತ್ತು ಹೋಗಿದ್ದ ಹಾವುಗಳನ್ನು ನೋಡಿ ದುಃಖಿಸಿದರು. ಈಗ ಹಾವಿನ ಪರಿಸ್ಥಿತಿ ಇದಾದರೆ ಮುಂದೊಂದು ದಿನ ಮನುಷ್ಯರಾದ ನಾವೂ ಶಾಖ ತಾಳಲಾರದೆ ಇದೇ ರೀತಿ ಸತ್ತು ಬೀಳಬಹುದು ಎನ್ನುವ ಆಲೋಚನೆ 16ರ ಹರೆಯ ಜಾದವ್‌ನ ಮನಸ್ಸಿನಲ್ಲಿ ಮೂಡಿತು. ಇದಕ್ಕೇನು ಪರಿಹಾರ ಎಂದು ಚಿಂತಿಸತೊಡಗಿದಾಗ ಊರ ಹಿರಿಯರು ಉಷ್ಣಾಂಶದಿಂದ ಪಾರಾಗಲು ಗಿಡ ನೆಡಬೇಕು ಎನ್ನುವ ಸಲಹೆ ನೀಡಿದರು. ಅದರಲ್ಲೂ ವೇಗವಾಗಿ ಬೆಳೆಯುವ ಬಿದಿರಿನ ಮರಗಳನ್ನು ನೆಡಲು ಸಲಹೆ ನೀಡಿದರು.

ಕಾಡಿನ ಮನುಷ್ಯನಿಗೆ ಸಂದ ಗೌರವ

ಜೆಎನ್‌ಯು ನ ಉಪಕುಲಪತಿ ಸುಧೀರ್ ಕುಮಾರ್ ಸೊಪೋರಿ 2012ರಲ್ಲಿ ಜಾಧವ್ ಅವರಿಗೆ 'ಫಾರೆಸ್ಟ್ ಮ್ಯಾನ್ ಆಫ್ ಇಂಡಿಯಾ' ಎಂಬ ಬಿರುದು ನೀಡಿ ಗೌರವಿಸಿದರು. ಅವರ ಸಾಧನೆ ಬಗ್ಗೆ 2012ರಲ್ಲಿ 'ದಿ ಮೊಲಾಯಿ ಫಾರೆಸ್ಟ್' ಎನ್ನುವ ಡಾಕ್ಯುಮೆಂಟ್ರಿ ತಯಾರಾಗಿದೆ. ಅಸ್ಸಾಂ ಸರಕಾರ ಜಾದವ್ ನಿರ್ಮಿಸಿದ 1360 ಎಕರೆ ಅರಣ್ಯಕ್ಕೆ 'ಮೊಲೈ ಅರಣ್ಯ' ಎಂದು ಹೆಸರಿಸಿ ಗೌರವ ನೀಡಿದೆ. ಜಾದವ್ ಅವರ ಸಾಮಾಜಿಕ ಕಾರ್ಯವನ್ನು ಗುರುತಿಸಿ ಕೇಂದ್ರ ಸರ್ಕಾರ 2015ರಲ್ಲಿ ಭಾರತದ ಅತ್ಯುನ್ನತ 'ಪದ್ಮಶ್ರೀ ಪ್ರಶಸ್ತಿ' ನೀಡಿತು. ಜತೆಗೆ ಅಸ್ಸಾಂ ಕೃಷಿ ವಿಶ್ವವಿದ್ಯಾಲಯ ಮತ್ತು ಕಾಜಿರಂಗ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಗಳನ್ನು ಪಡೆದಿದ್ದಾರೆ.

ಏಕಾಂಗಿ ಹೋರಾಟ

ಅದೃಷ್ಟವೆಂಬಂತೆ 1980ರಲ್ಲಿ, ಗೋಲಘಾಟ್ ಜಿಲ್ಲೆಯ ಸಾಮಾಜಿಕ ಅರಣ್ಯ ವಿಭಾಗದವರು 200 ಹೆಕ್ಟೇರ್‌ನಲ್ಲಿ ಮರ ನೆಡುವ ಯೋಜನೆಯನ್ನು ಪ್ರಾರಂಭಿಸಿದಾಗ ಇವರು ಕೂಲಿ ಕೆಲಸಗಾರನಾಗಿ ದುಡಿದರು. ಯೋಜನೆಯು ಪೂರ್ಣಗೊಂಡ ಬಳಿಕವು ಸಹ ಸಸ್ಯಗಳನ್ನು ನೋಡಿಕೊಳ್ಳಲು ಉಳಿದುಕೊಂಡು ದ್ವೀಪದ ಖಾಲಿ ಇರುವ ಮರುಭೂಮಿ ಸ್ಥಳಗಳಲ್ಲಿ ಏಕಾಂಗಿಯಾಗಿ ಬಿದಿರು ನೆಡಲು ಆರಂಭಿಸಿದರು. ಅಂದಿನಿಂದ ಮೂರು ದಶಕಗಳ ಕಾಲ ಜಾದವ್ ಬರೋಬ್ಬರಿ 1,360 ಎಕರೆ ಅರಣ್ಯ ಬೆಳೆಸಿದ್ದಾರೆ. ಅವರು ಬೆಳೆಸಿದ ಅರಣ್ಯದಲ್ಲಿ ಇಂದು ವಾಲ್ಕೋಲ್, ಅರ್ಜುನ್, ಎಜರ್, ಗೋಲ್ಡ್ ಮೊಹರ್, ಕೊರೊಯಿ, ಮೊಜ್ ಮತ್ತು ಹಿಮೋಲು ಮರಗಳಿವೆ. ಬಿದಿರು ಸುಮಾರು 300 ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿದೆ. ಜತೆಗೆ ಈ ಕಾಡು ಅನೇಕ ವನ್ಯ ಜೀವಿಗಳ ಆವಾಸ ಸ್ಥಾನವಾಗಿಯೂ ಬದಲಾಗಿದೆ. ಹುಲಿ, ಖಡ್ಗಮೃಗ, ಜಿಂಕೆ, ಹಂದಿ, ಮೊಲ ಸೇರಿದಂತೆ ವಿವಿಧ ಪ್ರಾಣಿ ಪಕ್ಷಿಗಳ ತವರೂರು ಎನಿಸಿಕೊಂಡಿದೆ. ಆನೆಗಳ ಗುಂಪುಗಳೂ ಕೂಡ ಆಗಾಗ ಈ ಕಾಡಿಗೆ ಭೇಟಿ ನೀಡುತ್ತವೆ. ಜಾದವ್ ಇಷ್ಟೆಲ್ಲ ಸಾಧನೆ ಮಾಡಿದ್ದರೂ ಹೊರ ಜಗತ್ತಿಗೆ ಪರಿಚಿತನಾಗಿರಲಿಲ್ಲ. ಎಲೆಮರೆಯ ಕಾಯಿಯಂತೆ ತಮ್ಮ ಪಾಡಿಗೆ ತಾವಿದ್ದರು. 2009ರಲ್ಲಿ ವೈಲ್ಡ್ ಲೈಫ್ ರಿಪೋರ್ಟರ್ ಜಾದವ್ ಸಾಧನೆ ಬಗ್ಗೆ ಲೇಖನ ಬರೆದಿದ್ದರು. ಇದು ವೈರಲ್ ಆಗಿ ಜಗತ್ತು ಜಾದವ್ ಅವರ ಮಹತ್ಕಾರ್ಯವನ್ನು ಗುರುತಿಸತೊಡಗಿತು.

ಮನುಕುಲದ ಭವಿಷ್ಯವನ್ನು ಬದಲಾಯಿಸಲು ಮತ್ತು ಪ್ರಪಂಚದ ಒಳಿತಿಗಾಗಿ ಏನನ್ನಾದರೂ ಮಾಡಲು ನಿರ್ಧರಿಸಿದ ಮನುಷ್ಯನಿಗೆ ಬಡತನ ಮತ್ತು ಅನಕ್ಷರತೆ ಅಡ್ಡಿಯಲ್ಲ ಎಂದು ಜಾದವ್ ಪಯೆಂಗ್ ಸಾಬೀತುಪಡಿಸಿದ್ದಾರೆ. 'ನನ್ನ ಕೊನೆಯ ಉಸಿರು ಇರುವವರೆಗೂ ನಾನು ಗಿಡ ನೆಡುತ್ತೇನೆ' ಎನ್ನುತ್ತಾರೆ ಫಾರೆಸ್ಟ್ ಮ್ಯಾನ್ ಮೊಲಾಯ್ ಪಯೆಂಗ್.

ಪದಬಂಧ



ಎಡದಿಂದ ಬಲಕ್ಕೆ

1. ಇದು ಬಾರಿಯ ಹುಡುಗತನದ್ದು (3)
3. ಕ್ಷೌರಿಕನಿಗೆ ಮತ್ತೊಂದು ಹೆಸರು (3)
5. ಕೃಷ್ಣನೂ ಆಗಬಲ್ಲ ದನಗಾಹಿ (3)
6. ತಿಳಿಗೇಡಿ ಇಲ್ಲಿ ಬಂದಿದ್ದಾನೆ (3)
7. ಕದ ತೆರೆದಾಗ ನೋಡಿದ ಸಮರ (3)
9. ಕತೆಯಲ್ಲ, ಪದ್ಯ (3)
13. ಅಡುಗೆಯಿಂದ ಆರಂಭವಾದ ಇಂದ್ರನಿಗೆ ಹೀಗೊಂದು ಹೆಸರು (5)
16. ಕೊನೆಗೆ ಅನುಸ್ವಾರ ಹೊಂದಿದ ತೂಕ (2)
17. ಅಧಿಕಪ್ರಸಂಗಿಯಲ್ಲ, ರಾಜ (3)
19. ಸೊಳ್ಳೆಗೆ ಇನ್ನೊಂದು ಹೆಸರು (3)
21. ತರುವಾಗ ಕಂಡ ತಾಯಿಮನೆ (3)
22. ಕಡಿವಾಣ (3)
23. ಮಾಡುವ ರೀತಿ (3)
24. ಕೇಳಲು ಕಠೋರವಾದ (3)

ಮೇಲಿನಿಂದ ಕೆಳಕ್ಕೆ:

1. ಲಾಂಗೂಲ ಹೊಂದಿದ ಹುಡುಗ (3)
2. ರೋಗ ಗುಣಪಡಿಸುವಿಕೆ (3)
3. ಗುಂಪಿನ ಮುಂದಾಳು (3)
4. ಕೆಲಸ ಮಾಡಲು ಇರುವ ಸಾಮರ್ಥ್ಯ (3)
5. ತಲೆಅಲ್ಲಾಡಿಸು ಎನ್ನುವುದನ್ನು ಧ್ವನಿಸುವ ಪದ (4)
8. ದಾಖಲೆ ಪತ್ರಗಳಲ್ಲಿ ಹಾಕಿದ ರುಜು (4)
10. ನಂಜು (2)
12. ಅಸಮಾನವಾದುದು ಎಂದರ್ಥ (4)
14. ಸರಕಿನೊಂದಿಗೆ ಬರುವ ಇನ್ನೊಂದು ಪದ (4)
15. ರೋಗಕ್ಕೆ ಪರ್ಯಾಯ ಪದ (2)
17. ಅಡಗಿಕೊಳ್ಳಲು ಸರಿಯಾದ ಕಾಡು (3)
18. ಕೆಳಕ್ಕೆ ಬೀಳುವಿಕೆ (3)
19. ಕರುಣೆ (3)
20. ಪೂಜೆಗೆ ನೀರು ತುಂಬಿಡುವ ಕೊಡ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ
1. ಔಷಧಿ 4. ಅಳಿಯ 6. ಮೀಸಲು 7. ಕುವರ 9. ಗುರಾಣಿ 11. ಕರವೀರ 13. ಪರಿಸರ 15. ತಕಲಿ 17. ಪದವಿ 19. ಲಾವಂಚ 20. ಹರಿವು 21. ತಿಜೋರಿ

ಮೇಲಿನಿಂದ ಕೆಳಕ್ಕೆ
1. ಔಪಚಾರಿಕ 2. ಧಿಮಾಕು 3. ಸಮೀರ 4. ಅಲುಗು 5. ಯಕ್ಷಿಣಿ 8. ವಠಾರ 10. ನಿರೂಪ 12. ರಕ್ಷಕ 13. ಪಯೋದ 14. ರಜತಗಿರಿ 15. ತರಹ 16. ಲಿಲಾವು 17. ಪಚನ 18. ವಿಕೃತಿ

ಸದ್ಭಾವನೆಯಿಂದ ಕೊಟ್ಟ ಕಾಣಿಕೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಈಶ್ವರ ಚಂದ್ರ ವಿದ್ಯಾಸಾಗರರು, ಭಾರತದ ಶ್ರೇಷ್ಠ ಸಮಾಜ ಸುಧಾರಕರಲ್ಲಿ ಒಬ್ಬರು. ಅವರು ಮಹಾಜ್ಞಾನಿಗಳು, ವಿನಯ ಸಂಪನ್ನರು ಕೂಡಾ ಆಗಿದ್ದರು. ಆದರೆ ಅವರು ತಮ್ಮ ಜ್ಞಾನದ ಪ್ರದರ್ಶನವನ್ನು ಎಂದೂ ಕೂಡ ಮಾಡದೇ, ಸಮಾಜ ಸುಧಾರಕರಾಗಿ ಖ್ಯಾತಿಯನ್ನು ಪಡೆದಂತ ಮಹಾನ್ ವ್ಯಕ್ತಿಗಳು.

ಆ ಸಮಯದಲ್ಲಿ, ಒಮ್ಮೆ ದೇಶದಲ್ಲಿ ಬಾರಿ ಬರಗಾಲ ಉಂಟಾಯಿತ್ತು. ಈಶ್ವರ ಚಂದ್ರರು ಒಂದು ದಿನ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದರು. ಆಗ ಒಬ್ಬ ಪುಟ್ಟ ಹುಡುಗ ಇವರ ಮುಂದೆ ಬಂದು, ಭಿಕ್ಷೆಗಾಗಿ ಕೈಚಾಚಿದ. ಆ ಹುಡುಗನ ದೈನ್ಯತೆಯ ಮುಖವನ್ನು ನೋಡಿ, ಈಶ್ವರ ಚಂದ್ರರ ಹೃದಯ ಕಲಕಿತು. ಆ ಹುಡುಗ ಕೇಳಿದ, ಸ್ವಾಮಿ ನನಗೊಂದು ಕಾಸು ನೀಡಿ, ಎರಡು ದಿನಗಳಿಂದ ಏನೂ ತಿಂದಿಲ್ಲ, ಹೊಟ್ಟೆ ಬಹಳವಾಗಿ ಹಸಿಯುತ್ತಿದೆ ಎಂದು ಹೇಳಿದ. ಅವನ ಮುಖ ವನ್ನು ನೋಡಿದರೇ, ಬಹಳವಾಗಿ ಹಸಿದಿರುವುದು ಗೊತ್ತಾಗುತ್ತಿತ್ತು. ಇವರು ಹೇಳಿದರು, ಮಗೂ, ನಾನು ಒಂದು ಕಾಸು ಕೊಡುವುದಿಲ್ಲ. ನಾಲ್ಕು ಕಾಸು ಕೊಡುತ್ತೇನೆ, ಅದನ್ನು ನೀನು ಹೇಗೆ ಬಳಸುತ್ತೀಯಾ? ಎಂದು ಕೇಳಿದರು. ಸುಮ್ಮನೆ ತಮಾಷೆ ಮಾಡಬೇಡಿ, ನಮ್ಮಂತ ಬಡವರಿಗೆ, ಯಾರು ನಾಲ್ಕು ಕಾಸು ಕೊಡುತ್ತಾರೆ, ಸ್ವಾಮಿ, ಎಂದ ಹುಡುಗ.ಆಗ ಈಶ್ವರ ಚಂದ್ರರು, ಇಲ್ಲಾ ನಾನು ತಮಾಷೆ ಮಾಡುತ್ತಿಲ್ಲ, ನಿಜ ವಾಗಿಯೂ ಹೇಳುತ್ತಿದ್ದೇನೆ, ಹೇಳು ಅದರಿಂದ ಏನು ಮಾಡುತ್ತೀ? ಎಂದರು. ಆಗ ಹುಡುಗ, ಎರಡು ಕಾಸಿನಿಂದ, ಏನಾದರೂ ತಿನ್ನಲು ತೆಗೆದುಕೊಳ್ಳುತ್ತೇನೆ, ಮತ್ತೆ ಇನ್ನೆರಡು ಕಾಸನ್ನು ನನ್ನ ಅಮ್ಮನಿಗೆ ಕೊಡುತ್ತೇನೆ ಎಂದ. ನಾನು ನಾಲ್ಕು ಕಾಸಿನ ಬದಲು, ಎರಡಾಣೆ ಕೊಟ್ಟರೆ ಏನು ಮಾಡುತ್ತೀ? ಎಂದರು ಈಶ್ವರ ಚಂದ್ರರು. ಈಗ ಹುಡುಗನಿಗೆ, ಸ್ವಲ್ಪ ಕೋಪ ಬಂದು ಇವರು ಬರೀ ಸುಳ್ಳು ಹೇಳುತ್ತಾರೆ, ಏನೂ ಕೊಡು ವುದಿಲ್ಲ ಎಂದು ಅವನು ಅಲ್ಲಿಂದ ಹೊರಟುಬಿಟ್ಟ. ಇವರಿಗೆಲ್ಲಾ ನಮ್ಮನ್ನು ಕಂಡರೆ, ಬರೀ ತಮಾಷೆ ಎನಿಸುತ್ತದೆ ಅಷ್ಟೇ ,ಎಂದು ಅವನಿಗನ್ನಿಸಿತು. ಆಗ ಈಶ್ವರ ಚಂದ್ರರು, ಅವನ ಭುಜ ಹಿಡಿದು ನಿಲ್ಲಿಸಿ, ನಿನ್ನನ್ನು ನಾನು ತಮಾಷೆ ಮಾಡುತ್ತಿಲ್ಲ ಈ ನಾಲ್ಕಾಣೆಯನ್ನು ತೆಗೆದುಕೋ, ಎಂದು ಜೇಬಿ ನಿಂದ ನಾಲ್ಕಾಣೆ ತೆಗೆದು, ಅದನ್ನು ಅವನ ಕೈಯಲ್ಲಿ ಇಡುತ್ತಾ, ಇದನ್ನು ಈಗ ಹೇಗೆ ಬಳಸುವೆ? ಎಂದರು. ಆಗ ಪುಟ್ಟ ಬಾಲಕನ ಮುಖ ಅರಳಿತು, ಸ್ವಾಮಿ, ಒಂದಾಣೆಯಿಂದ ಹೊಟ್ಟೆ ತುಂಬ ಊಟ ಮಾಡುವೆ, ಇನ್ನೊಂದಾಣೆಯನ್ನು ಅಮ್ಮನಿಗೆ ಕೊಡುವೆ, ಉಳಿದ ಎರಡು ಆಣೆಯಿಂದ , ಮಾವಿನ ಹಣ್ಣು ಕೊಂಡುಕೊಂಡು, ವ್ಯಾಪಾರ ಮಾಡಿ, ಸ್ವಲ್ಪ ಹಣ ಗಳಿಸುತ್ತೇನೆ. ನಿಧಾನವಾಗಿ ವ್ಯಾಪಾರವನ್ನು ಬೆಳೆಸಿಕೊಂಡು ಬದುಕುತ್ತೇನೆ, ಎಂದ ಹುಡುಗ.

ಈಶ್ವರ ಚಂದ್ರರು ಆ ಬಾಲಕನ ಕೈಯಿಂದ ನಾಲ್ಕಾಣೆಯನ್ನು ವಾಪಸ್ಸು ತೆಗೆದುಕೊಂಡು, ಅದರ ಬದಲಾಗಿ, ಒಂದು ರೂಪಾಯಿ ನಾಣ್ಯವನ್ನು ಅವನ ಕೈಯಲ್ಲಿಟ್ಟು, ದೇವರು ನಿನಗೆ ಒಳ್ಳೆಯದನ್ನು ಮಾಡಲಿ, ಮಗೂ, ಎಂದು ಹಾರೈಸುತ್ತಾ ಅಲ್ಲಿಂದ ನೆಡೆದರು.

ಸ್ವಲ್ಪ ವರ್ಷಗಳಾದ ಮೇಲೆ, ಈಶ್ವರ ಚಂದ್ರರು ಒಂದು ರಸ್ತೆಯಲ್ಲಿ ಹೋಗುತ್ತಿರುವಾಗ ,ಒಬ್ಬ ಯುವಕ ಬಂದು ಇವರ ಕಾಲು ಮುಟ್ಟಿ, ನಮಸ್ಕರಿಸಿದ. ಯಾರಪ್ಪ ನೀನು ಎಂದು ಕೇಳಿದರು. ಆಗ ಈ ಯುವಕ, ಸ್ವಾಮಿ, ಇದು ನಿಮ್ಮ ಅಂಗಡಿ, ಇದಕ್ಕೆ ನೀವೇ ಬಂಡವಾಳ ಕೊಟ್ಟಿದ್ದು, ಎಂದು ಅವರು ಕೊಟ್ಟ ಒಂದು ರೂಪಾಯಿ ನಾಣ್ಯವನ್ನು ನೆನಪಿಸಿದ. ಆ ಬಾಲಕನ ದೊಡ್ಡ ಅಂಗಡಿಯನ್ನು ನೋಡಿ ಅವರಿಗೆ ಬಹಳ ಸಂತೋಷವಾಯಿತು. ಯುವಕನನ್ನು ತಬ್ಬಿಕೊಂಡು, ಹಾರೈಸಿದರು.

ನಾವು ಸಹಾಯ ಮಾಡುವಾಗ ಒಳ್ಳೆಯ ಮನಸ್ಸಿನಿಂದ ಸತ್ಪಾತ್ರರಿಗೆ ಮಾಡಿದರೆ ಅದರಿಂದ ಖಂಡಿತ ಅವರಿಗೆ ಜೀವನದಲ್ಲಿ ಒಳ್ಳೆಯದಾಗುತ್ತದೆ. ನಮ್ಮ ಸಹಾಯ ಮತ್ತೊಬ್ಬರಿಗೆ ಸ್ವತಂತ್ರ ಮನೋಭಾವವನ್ನು ಹುಟ್ಟುಹಾಕಬೇಕು ಹೊರತು ಅವರನ್ನು ಸೋಮಾರಿಗಳಾಗಿಸಬಾರದು. ಸಹಾಯ ಮಾಡುವ ಮುಂಚೆ ಅವರಿಗೆ ಎಷ್ಟು ಅಗತ್ಯ ಎನ್ನುವುದನ್ನು ಖಾತ್ರಿಪಡಿಸಿಕೊಳ್ಳುವುದು ಒಳ್ಳೆಯದು.